
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


22 ಏಪ್ರಿಲ್ 2015 ಪುಟ 20 ರೂ. 15/-

ಇಂಗ್ಲಿಷ್ ಕನ್ನಡ ಎರಡು ಮಿಥ್‌ಗಳು



ಸಂಪುಟ ಸಂಕಟ

...ಡ್ಡಾಕ್ಕೆ ಕೆಡತವಲು ...ರಾಮತ್ತು





ರಾಯಚೂರು

ಬೌನ್ಸರ್ ದಾಳಿಗೆ ಮೆತ್ತಗಾದ ಎಸ್‌ಪಿ ನಾಗರಾಜ್



ಮಂಡ್ಯ


ಗೆಳತಿಗೆ ಗತಿ ಕಾಣಿಸಿದ ಸಲಿಂಗಿ



125ನೇ ಪ್ರಬಂಧ-ಕತೆ

ಇಂಗ್ಲಿಷ್ ಮತ್ತು ಕನ್ನಡ

ಪೋಷಕರಲ್ಲಿರುವ ಮಿಥ್ ಮತ್ತು ಚಳವಳಿಗಾರರಲ್ಲಿರುವ ಮಿಥ್



ಏಪ್ರಿಲ್ 4 ಮತ್ತು 5ರಂದು ಧಾರವಾಡದಲ್ಲಿ ಮಾತೃಭಾಷಾ ಮಾಧ್ಯಮದ ಕುರಿತಂತೆ ಒಂದು ಮಹತ್ವದ ಕಾರ್ಯಕ್ರಮ ನಡೆಯಿತು. ಕರ್ನಾಟಕ ಏಕೀಕರಣ ಚಳವಳಿ ಮತ್ತು ಗೋಕಾಕ್ ಚಳವಳಿಯ ಆರಂಭದ ಕೇಂದ್ರ ಬಿಂದುವಾಗಿದ್ದ ಧಾರವಾಡ ಮತ್ತು ವಿದ್ಯಾವರ್ಧಕ ಸಂಘದಲ್ಲೇ ಈ ಕಾರ್ಯಕ್ರಮ ನಡೆದದ್ದೊಂದು ವಿಶೇಷ. ಕರ್ನಾಟಕ ಮಾತ್ರವಲ್ಲದೇ ಮಧ್ಯಪ್ರದೇಶ, ತಮಿಳುನಾಡು, ಪಂಜಾಬ್ ಮತ್ತು ಮಹಾರಾಷ್ಟ್ರದಿಂದಲೂ ಕೆಲವು ಮುಖ್ಯ ವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ದೇಶದ ಸರ್ವೋಚ್ಚ ನ್ಯಾಯಾಲಯವು ನಾಡಿನ ಜನಭಾಷೆಗಳಿಗೆ ಕಂಟಕಪ್ರಾಯವಾದ ತೀರ್ಪನ್ನು ನೀಡಿರುವುದರ ಹಿನ್ನೆಲೆಯಲ್ಲಿ ಈ ವಿಚಾರಗೋಷ್ಠಿ ನಡೆಯಿತು.

ಮಾತೃಭಾಷೆಯಲ್ಲಿ ಕಲಿಯುವುದು ಆಯಾ ಭಾಷೆಗಳನ್ನು ಉಳಿಸಲು ಮಾತ್ರವಲ್ಲ, ಮಾತೃಭಾಷೆಯಲ್ಲಿಯೇ ಕಲಿಯುವುದು ವೈಜ್ಞಾನಿಕವಾದದ್ದು ಎಂಬುದನ್ನು ಅಲ್ಲಿ ಪ್ರಬಲವಾಗಿ ಪ್ರತಿಪಾದಿಸಲಾಯಿತು. ಪ್ರಪಂಚದ ದೇಶಗಳನ್ನು ಒಂದು ಸುತ್ತು ಹಾಯ್ದು ಬಂದರೆ, ಅಭಿವೃದ್ಧಿ ಹೊಂದಿರುವ ಬಹುತೇಕ ದೇಶಗಳು ಮಾತೃಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಹೊಂದಿವೆ ಎಂಬುದನ್ನು ಸಾಕಷ್ಟು ಉದಾಹರಣೆಗಳ ಮೂಲಕ ಪಂಜಾಬ್ ವಿಶ್ವವಿದ್ಯಾಲಯದ ಭಾಷಾತಜ್ಞ ಪ್ರೊ.ಜೋಗಾಸಿಂಗ್ ವಿವರಿಸಿದರು. ಪ್ರೊ.ಅನಿಲ್ ಸದ್ಗೋಪಾಲ್ ಅವರು ಶಿಕ್ಷಣ ನೀತಿ ಹಾಗೂ ಭಾಷೆಯ ಕುರಿತ ಇನ್ನೂ ಹಲವು ಆಯಾಮಗಳನ್ನು ತೆರೆದಿಟ್ಟರು.

ವಿವಿಧ ಧಾರೆಗಳ ಚಿಂತಕರು ಮತ್ತು ಚಳವಳಿಗಾರರನ್ನು ಒಂದೆಡೆ ಕಲೆಹಾಕಿ, ಭಾಷಾ ಮಾಧ್ಯಮ ಕುರಿತಂತೆ ಚಿಂತನ-ಮಂಥನ ನಡೆಸಿದ ಇಂತಹ ಇನ್ನೊಂದು ಕಾರ್ಯಕ್ರಮ ಈಚಿನ ವರ್ಷಗಳಲ್ಲಿ ನಡೆದಿಲ್ಲ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಅಂತಹದೊಂದು ಪ್ರಯತ್ನ ನಡೆಸಿತ್ತಾದರೂ, ಅದು ಚಳವಳಿ ರೂಪಿಸುವ ಉದ್ದೇಶದಿಂದ ನಡೆದದ್ದಲ್ಲ. ಇಂತಹದೊಂದು ಬಹುಮುಖ್ಯ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಲು ಕಾರಣರಾದವರೆಲ್ಲರೂ ಅಭಿನಂದನೆಗೆ ಅರ್ಹರು. ಮುಂದಿನ ದಿನಗಳಲ್ಲಿ ಈ ಪ್ರಯತ್ನವು ಇನ್ನೂ ವಿಶಾಲವಾದ ಐಕ್ಯ ಪ್ರಯತ್ನವಾಗಿ ಕರ್ನಾಟಕ ಮತ್ತು ಇಡೀ ದೇಶದಲ್ಲಿ ಒಂದು ಸಂಚಲನಕ್ಕೆ ಕಾರಣವಾಗುವುದರಲ್ಲಿ ಸಂಶಯವಿಲ್ಲ.

ಈ ಕಾರ್ಯಕ್ರಮದಲ್ಲಿ ಪದೇ ಪದೇ ಪ್ರಸ್ತಾಪವಾದ ಒಂದು ಸಂಗತಿಯೆಂದರೆ, 'ಇಂಗ್ಲಿಷ್‌ನ ಮಿಥ್'ನ ಕುರಿತಾಗಿ. ಅದನ್ನು ಪ್ರಸ್ತಾಪಿಸಿದ ಹಲವರ ಅಭಿಪ್ರಾಯದ ಪ್ರಕಾರ 'ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯಬೇಕೆಂಬ ಮೋಹ ಇಂದು ಹೆಚ್ಚಾಗಿದೆ', 'ಇಂಗ್ಲಿಷಿನಲ್ಲಿ ಕಲಿಯದಿದ್ದರೆ ಬದುಕೇ ಇಲ್ಲ ಎಂಬ ತಪ್ಪು ಅಭಿಪ್ರಾಯ ಹಲವರಲ್ಲಿದೆ', 'ಇಂಗ್ಲಿಷ್ ಕಲಿತರೆ ಉದ್ಯೋಗ ಸಿಗುತ್ತದೆ ಎಂಬ ತಪ್ಪು ಕಲ್ಪನೆ ಪೋಷಕರದ್ದು', 'ಇಂಗ್ಲಿಷ್ ಮಾತ್ರ ಜ್ಞಾನದ ಬೆಳಕಿಂಡಿ ಎಂಬುದು ಸುಳ್ಳು' ಇತ್ಯಾದಿ ಅಭಿಪ್ರಾಯಗಳು ವ್ಯಕ್ತವಾದವು. ಇವು ಈ ಕಾರ್ಯಕ್ರಮದಲ್ಲಿ ಬಂದ ಅಭಿಪ್ರಾಯಗಳು ಮಾತ್ರವಲ್ಲ, ಕನ್ನಡ ಚಳವಳಿಗಾರರು-ಕನ್ನಡ ಮಾಧ್ಯಮ ಪ್ರತಿಪಾದಕರಲ್ಲಿ ಹಲವರು ಹೊಂದಿರುವ ಅಭಿಪ್ರಾಯಗಳು ಇವಾಗಿವೆ. ಅವರೆಲ್ಲರ ಪ್ರಕಾರ 'ಇಂಗ್ಲಿಷಿನ ಮಿಥ್' ಪೋಷಕರಲ್ಲಿರುವುದೇ ಇಂದಿನ ದೊಡ್ಡ ಸಮಸ್ಯೆಯಾಗಿದೆ.


ಕಾರ್ಯಕ್ರಮದಲ್ಲಿ ಮಾತನಾಡಿದ ಸಮಾನ ಶಿಕ್ಷಣಕ್ಕಾಗಿ ಜನಾಂದೋಲನದ ಮಲ್ಲಿಗೆಯವರು ಇದಕ್ಕೆ ವ್ಯತಿರಿಕ್ತವಾದ ಒಂದು ಮಾತ[...] ಹೇಳಿದರು. 'ಮಾತೃಭಾಷಾ ಮಾಧ್ಯಮದ ಚಳ[...] ಬೆಳೆಯ[...] ಹೋಗಲು ಇದು - ಚಳವಳಿಗಾರರಲ್ಲಿರುವ ಈ ಮಿಥ್ - ಕಾರಣವಾಗಬಹುದು' ಎಂದು. ಧಾರವಾಡದ ಸಮಾವೇಶದ ಆಶಯವನ್ನು ಜನಾಂದೋಲನವನ್ನಾಗಿಸಬಯಸುವ ಹಲವರ ಅಭಿಪ್ರಾಯವೂ ಅದೇ ಆಗಿದೆ. ಇದನ್ನು ನಾವೆಲ್ಲರೂ ಮತ್ತೆ ಮತ್ತೆ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರಬೇಕಿದೆ. ಮಾತೃಭಾಷಾ ಮಾಧ್ಯಮವನ್ನು ಮತ್ತು ಇಂಗ್ಲಿಷ್ ಕಲಿಕೆಯನ್ನು ಪರಸ್ಪರ ಎದುರು ನಿಲ್ಲಿಸಿ ಅನಗತ್ಯವಾದ ಜಗಳಕ್ಕೆ ಇಳಿಸಿರುವುದರಲ್ಲೇ ಸಮಸ್ಯೆಯಿದೆ. ಮಾತೃಭಾಷಾ ಮಾಧ್ಯಮವು ಇಂಗ್ಲಿಷ್ ಕಲಿಕೆಗೆ ಪೂರಕವಾದ ಅಂಶವಾಗಿದೆ. ಈ ಇಡೀ ವಾದವನ್ನು ಸ್ವಲ್ಪ ವಿಸ್ತರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ವಾಸ್ತವವೇನು? ಇಂಗ್ಲಿಷ್ ಇಂದಿನ ಮಾರುಕಟ್ಟೆಯಲ್ಲಿ ಒಂದು ಅಗತ್ಯವಾಗಿದೆ. ಇಂಗ್ಲಿಷ್ ಕಲಿಯಬೇಕೆನ್ನುವುದು ಕೇವಲ ಮೋಹದ ಸಂಗತಿಯಲ್ಲ, ಅನಿವಾರ್ಯವಾದ ಸಂಗತಿಯಾಗಿದೆ. ಇಂಗ್ಲಿಷ್ ಕಲಿತರೆ ಉದ್ಯೋಗ ಸಿಕ್ಕಿಬಿಡುತ್ತದೆ ಎಂಬುದು ಸುಳ್ಳಿರಬಹುದಾದರೂ, ಇಂಗ್ಲಿಷ್ ಕಲಿಯದಿದ್ದರೆ ಹಲವು ರೀತಿಯ ಉದ್ಯೋಗಗಳು ಸಿಗುವುದಿಲ್ಲ ಎಂಬುದು ನಿಜ. ಇಂಗ್ಲಿಷ್ ಮಾತ್ರ ಜ್ಞಾನದ ಬೆಳಕಿಂಡಿ ಅಲ್ಲದಿರಬಹುದು, ಬಹಳಷ್ಟು ಜ್ಞಾನ ಇಂಗ್ಲಿಷ್‌ನಲ್ಲಿ ಮಾತ್ರ ಸಿಗುತ್ತದೆ. ಈ ವಾಸ್ತವವನ್ನು ಎಲ್ಲರೂ ಒಪ್ಪಿಕೊಳ್ಳುವ ಅಗತ್ಯವಿದೆ. ಇದು ಹೀಗೇ ಆಗಬೇಕಿರಲಿಲ್ಲ; ಈ ದೇಶವನ್ನು ಆಳುವ ಜನರು ವಸಾಹತುಶಾಹಿ ಗುಲಾಮೀ ಮನಸ್ಥಿತಿಯಿಂದ ಹೊರಬಂದು, 1947ರ ನಂತರದಿಂದ ದೇಶಭಾಷೆಗಳಲ್ಲಿ ಎಲ್ಲಾ ಜ್ಞಾನವೂ ದಕ್ಕುವಂತೆ ಹಾಗೂ ಉನ್ನತ ಶಿಕ್ಷಣವೂ ದೇಶಭಾಷೆಗಳಲ್ಲೇ ಲಭ್ಯವಾಗುವಂತೆ ಮಾಡಬೇಕಿತ್ತು. ಆಗ ವಿದೇಶಕ್ಕೆ ಹೋಗಬೇಕೆಂದು ಬಯಸುವವರು ಮತ್ತು ವಿದೇಶೀ ಭಾಷೆಗಳಿಂದ ಅನುವಾದ ಮಾಡಬೇಕಾಗುವವರು ಮಾತ್ರ ವಿದೇಶೀ ಭಾಷೆಗಳನ್ನು ಕಲಿಯಬೇಕಾಗುತ್ತಿತ್ತು. ಗಮನಿಸಿ, ಇಂಗ್ಲಿಷನ್ನು ಮಾತ್ರವಲ್ಲ, ಏಕೆಂದರೆ ಜಗತ್ತಿನಾದ್ಯಂತ ಇಂಗ್ಲಿಷ್ ಮಾತ್ರವಿಲ್ಲ ಮತ್ತು ಇಂಗ್ಲಿಷ್ ಜಗತ್ತಿನೆಲ್ಲೆಡೆ ಸಂಪರ್ಕ ಭಾಷೆಯಾಗೇನೂ ಇಲ್ಲ. ಆದರೆ 1947ರ ನಂತರ ಹಾಗಾಗಲಿಲ್ಲ. ಈ ದೇಶದೊಳಗೆ ಇಂಗ್ಲಿಷಿನ ಯಾಜಮಾನ್ಯ ಮುಂದುವರೆಯಿತು. ಹಾಗಾಗಿ ಇಂಗ್ಲಿಷ್ ಮಾರುಕಟ್ಟೆಯ ಭಾಷೆಯಾಗಿದೆ ಮತ್ತು ದಿನೇದಿನೇ ಅದರ ವ್ಯಾಪಕತೆ ಹೆಚ್ಚಾಗುತ್ತಿದೆ.

ಅಂದರೆ ಪೋಷಕರ ಮೋಹ, ಪೋಷಕರಲ್ಲಿನ ಮಿಥ್, ಇಂಗ್ಲಿಷಿನ ಮಿಥ್ ಇತ್ಯಾದಿ ಪದಗಳ ಬಳಕೆ ಮಾಡುವ ಮುನ್ನ ನಾವು ಯೋಚಿಸಬೇಕು. ಈ ರೀತಿ ದೂರುವುದರಿಂದ ಪೋಷಕರನ್ನು ನಾವು 'ಕನ್ನಡ ಉಳಿಸುವ ಚಳವಳಿ'ಗೆ ಕರೆತರಲಾಗುವುದಿಲ್ಲ. ನಾವು ಸೋಲುವ ಹೋರಾಟವನ್ನು ಮಾಡಬಾರದು. ನಮ್ಮ ಚಳವಳಿಯ ತಳಹದಿ ಅವಾಸ್ತವಿಕ ಸಂಗತಿಯ ಮೇಲೆ ನಿಂತಿರಬಾರದು. ಹಾಗೆ ನೋಡಿದರೆ, ಮಾತೃಭಾಷಾ ಮಾಧ್ಯಮದ ವಿಷಯವು ಅತ್ಯಂತ ವೈಜ್ಞಾನಿಕವಾದುದು, ಈ ನಾಡಿನ ಶೋಷಿತ ಸಮುದಾಯಗಳ ದೃಷ್ಟಿಯಿಂದಲೇ ಅತ್ಯಂತ ಮಹತ್ವದ್ದಾಗಿರುವಂಥದು, ಅದು ಮಾತ್ರವೇ ಶೋಷಿತ ಸಮುದಾಯಗಳಿಗೂ ವಿಮೋಚನೆಯನ್ನು ತಂದುಕೊಡಬಲ್ಲದು. ಇದನ್ನು ಮನವರಿಕೆಯಾಗಿ ಹೇಳಲು - ವಾಸ್ತವದ ನೆಲೆಗಟ್ಟಿನಲ್ಲಿ - ನಮಗೆ ಸಾಧ್ಯವಾಗಬೇಕು. ಜೊತೆಗೆ ಅದು ಸಾಧ್ಯವಾಗುವಂತಹ ವಾತಾವರಣವನ್ನು ನಿರ್ಮಿಸುವ ನಿಟ್ಟಿನಲ್ಲಿ ನಿರ್ಣಾಯಕವಾದ ಹೆಜ್ಜೆಗಳನ್ನಿಡಬೇಕು.

ಮೇಲಿನ ಪ್ಯಾರಾದಲ್ಲಿ ಪರಸ್ಪರ ವಿರುದ್ಧಾರ್ಥವನ್ನು ಹೊರಡಿಸುವ ವಾಕ್ಯಗಳಿವೆಯೇ? ಇಲ್ಲ. ಇಂಗ್ಲಿಷ್ ಕಲಿಯಬೇಕೆಂಬ ಬಯಕೆ ಕೇವಲ ಮಿಥ್ ಅಲ್ಲ; ಆದೇ ಸಂದರ್ಭದಲ್ಲಿ ಇಂಗ್ಲಿಷ್ ಕಲಿಯಬೇಕೆಂದರೂ ಮಾತೃಭಾಷಾ ಮಾಧ್ಯಮವೇ ಬೇಕು. ಹೌದು. ಯಾರಿಗೆ ಮನೆಯಲ್ಲಿ ಇಂಗ್ಲಿಷಿನ ಪರಿಸರವಿರುತ್ತದೆಯೋ, ಅಂತಹವರು ಇಂಗ್ಲಿಷ್ ಮಾಧ್ಯಮದಲ್ಲಿ ಓದಿ ಕಲಿಯಲು ಸಾಧ್ಯವಿರುತ್ತದೆ. ಆದರೆ ಯಾರಿಗೆ ಮನೆಯಲ್ಲಿ ಇಂಗ್ಲಿಷಿನ ಪರಿಸರವಿರುವುದಿಲ್ಲವೋ, ಅವರು ಇಂಗ್ಲಿಷ್ ಮಾಧ್ಯಮದಲ್ಲಿ ಓದಿ ಅತ್ಯುತ್ತಮವಾಗಿ ಕಲಿಯುವುದು ಸಾಧ್ಯವಿಲ್ಲ. ಇವಕ್ಕೆ ಅಪವಾದಗಳಿರಬಹುದು; ಆದರೆ ಸಾಮಾನ್ಯ ಸಂದರ್ಭಗಳಲ್ಲಿ 'ಇಡೀ ಸಮುದಾಯಕ್ಕೆ ಅನ್ವಯಿಸಿ ನೋಡುವುದಾದರೆ' ಈ ಮಾತು ನಿಜ. ಇದನ್ನು ವಿಶ್ವಸಂಸ್ಥೆ, ಯೂನಿಸೆಫ್‌ಗಳು ಹಾಗೂ ಭಾರತದ ಎನ್‌ಸಿಇಆರ್‌ಟಿಗಳು ನೇಮಿಸಿದ್ದ ತಜ್ಞ ಸಮಿತಿಗಳು ನೀಡಿರುವ ವರದಿಗಳೂ ದೃಢಪಡಿಸಿವೆ. ಯಾವುದೇ ವಿದೇಶೀ ಭಾಷೆ ಕಲಿಯಬೇಕೆಂದರೆ, ಅದಕ್ಕೂ ಮಾತೃಭಾಷೆಯ ಮೂಲಕ ಕಲಿಯುವುದೇ ಅತ್ಯುತ್ತಮ ಮಾರ್ಗ ಎಂಬುದು ತಜ್ಞರುಗಳ ಸ್ಪಷ್ಟ ಅಭಿಪ್ರಾಯವಾಗಿದೆ.

ಇಂಗ್ಲಿಷ್ ಇಂದಿನ ಮಾರುಕಟ್ಟೆಯಲ್ಲಿ ಒಂದು ಅಗತ್ಯವಾಗಿದೆ. ಇಂಗ್ಲಿಷ್ ಕಲಿಯಬೇಕೆನ್ನುವುದು ಕೇವಲ ಮೋಹದ ಸಂಗತಿಯಲ್ಲ, ಅನಿವಾರ್ಯವಾದ ಸಂಗತಿಯಾಗಿದೆ. ಇಂಗ್ಲಿಷ್ ಕಲಿತರೆ ಉದ್ಯೋಗ ಸಿಕ್ಕಿಬಿಡುತ್ತದೆ ಎಂಬುದು ಸುಳ್ಳಿರಬಹುದಾದರೂ, ಇಂಗ್ಲಿಷ್ ಕಲಿಯದಿದ್ದರೆ ಹಲವು ರೀತಿಯ ಉದ್ಯೋಗಗಳು ಸಿಗುವುದಿಲ್ಲ ಎಂಬುದು ನಿಜ. ಇಂಗ್ಲಿಷ್ ಮಾತ್ರ ಜ್ಞಾನದ ಬೆಳಕಿಂಡಿ ಅಲ್ಲದಿರಬಹುದು, ಬಹಳಷ್ಟು ಜ್ಞಾನ ಇಂಗ್ಲಿಷ್‌ನಲ್ಲಿ ಮಾತ್ರ ಸಿಗುತ್ತದೆ.



ಒಬ್ಬ ವ್ಯಕ್ತಿ ಇಂಗ್ಲಿಷಿನಲ್ಲಿ ಪಾಸಾಗದಿದ್ದರೂ, ಕನ್ನಡವನ್ನು ಚೆನ್ನಾಗಿ ಕಲಿತು, ಕನ್ನಡದ ಮುಖಾಂತರ ವಿಜ್ಞಾನ ಕಲಿತು ಅತ್ಯುತ್ತಮ ವೈದ್ಯಳಾಗುವ ಸಾಧ್ಯತೆ ಇದ್ದರೆ, ಇಂಗ್ಲಿಷ್ ಏಕೆ ಬೇಕು? 100ಕ್ಕೆ 5 ಜನ ತಾವು ಈ ದೇಶದಲ್ಲಿ ಉಳಿಯುವುದಿಲ್ಲ, ತಮಗೆ ಏನಿದ್ದರೂ ವಿದೇಶೀ ನೀರೇ ಒಗ್ಗುತ್ತದೆ ಎಂದು ಭಾವಿಸುವುದಾದಲ್ಲಿ ಅವರು ಆ ನಂತರ ಇಂಗ್ಲಿಷನ್ನೋ, ಚೀನಿಯನ್ನೋ, ಫ್ರೆಂಚನ್ನೋ, ಸ್ಪಾನಿಷ್‌ನ್ನೋ (ಏಕೆಂದರೆ ಜಗತ್ತಿನೆಲ್ಲೆಡೆ ಇಂಗ್ಲಿಷ್ ಇಲ್ಲ) ಕಲಿತು ವಿದೇಶಕ್ಕೆ ಹಾರಲು ಕಷ್ಟವೇನಲ್ಲ. ಅವರಿಗಾಗಿ ಶೇ.95ರಷ್ಟು ದೇಶೀ ಮಕ್ಕಳ ಭವಿಷ್ಯವನ್ನು ಏಕೆ ಹಾಳು ಮಾಡಬೇಕು? ಈ ನಾಡಿನ ಜನರು ಮಾತನಾಡುವ ಭಾಷೆಯಲ್ಲೇ ವೈದ್ಯಕೀಯವನ್ನು ಕಲಿತರೆ ಒಳ್ಳೆಯದೋ ಅಥವಾ ಪುರೋಹಿತ ಸಂಸ್ಕೃತದಲ್ಲಿ ಮಂತ್ರ ಕಲಿತಂತೆ ಜನರಿಗೆ ಅರ್ಥವಾಗದ ಭಾಷೆಯಲ್ಲಿ ಕಲಿಯುವುದು ಒಳ್ಳೆಯದೋ?

ಹಾಗಿದ್ದ ಮೇಲೆ ಇಂಗ್ಲಿಷ್ ಒಳಗೊಂಡಂತೆ ಯಾವುದೇ ವಿದೇಶೀ ಭಾಷೆ ಕಲಿಯಬೇಕೆಂದು ಬಯಸುವವರು ಮೊದಲು ಮಾತೃಭಾಷೆಯಲ್ಲಿಯೇ ಕಲಿಯುವುದು ವೈಜ್ಞಾನಿಕ ಎಂದಾಯಿತು. ಇದಕ್ಕೆ ಇಂತಹ ತಜ್ಞರ ವರದಿಗಾಗಿಯೇ ಕಾಯಬೇಕಿಲ್ಲ, ಇವತ್ತು ಈ ದೇಶದ ಅತ್ಯುತ್ತಮ ಇಂಗ್ಲಿಷ್ ಪ್ರೊಫೆಸರ್‌ಗಳು, ಹಿರಿಯ ವಿಜ್ಞಾನಿಗಳು, ಹಿರಿಯ ಇಂಜಿನಿಯರ್‌ಗಳು, ಹಿರಿಯ ವೈದ್ಯರುಗಳು ಎಲ್ಲರೂ - ಯಾರಿಗೆಲ್ಲ ತಮ್ಮ ಅತ್ಯುನ್ನತ ಶಿಕ್ಷಣವನ್ನು ಕಲಿಯಲು ಇಂಗ್ಲಿಷಿನ ಅಗತ್ಯವಿತ್ತೋ ಅವರೆಲ್ಲರೂ - ಮಾತೃಭಾಷೆಯಲ್ಲಿಯೇ ಅಥವಾ ಪರಿಸರದ ಭಾಷೆಯಲ್ಲಿಯೇ ಕಲಿತವರು ತಾನೇ? ಅದು 25 ವರ್ಷದ ಕೆಳಗೆ ಸಾಧ್ಯವಿತ್ತಾದರೆ ಇಂದೇಕೆ ಸಾಧ್ಯವಿಲ್ಲ? ಈ ದೇಶದಲ್ಲಿ ಮೊದಲನೇ ಪೀಳಿಗೆ ಅತ್ಯುತ್ತಮವಾಗಿ ಇಂಗ್ಲಿಷ್ ಕಲಿತ ನಂತರ, ಅವರ ಮನೆಯಲ್ಲಿ ಒಂದು ಇಂಗ್ಲಿಷ್ ಪರಿಸರ ಏರ್ಪಟ್ಟು, ನಂತರದ ಪೀಳಿಗೆಯವರು ಸುಲಭವಾಗಿ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯಲು ಸಾಧ್ಯವಾಗಿರುವುದೂ ಇದೆ. ಅವರು ಹೆಚ್ಚೆಚ್ಚು ಅವಕಾಶಗಳನ್ನು ಪಡೆದುಕೊಳ್ಳುತ್ತಿರುವುದು ವಾಸ್ತವ. ಈ ಅವಕಾಶಗಳೆನ್ನುವುದು ಬಹಳ ಸೀಮಿತವಾದ ಶೇ.3ರಷ್ಟು ಉದ್ಯೋಗಗಳು. ಎಲ್ಲರೂ ಇಂಗ್ಲಿಷ್ ಕಲಿತರೆ ಮತ್ತೆ ಸ್ಪರ್ಧೆ ಚೆನ್ನಾಗಿ ಇಂಗ್ಲಿಷ್ ಕಲಿತವರು ಮತ್ತು ಅಷ್ಟು ಚೆನ್ನಾಗಿ ಇಂಗ್ಲಿಷ್ ಕಲಿಯದವರ ಮಧ್ಯೆ, ಅತ್ಯುತ್ತಮವಾದ ಶೈಕ್ಷಣಿಕ ಅವಕಾಶಗಳನ್ನು ಪಡೆದುಕೊಂಡವರು ಮತ್ತು ಪಡೆಯದವರ ಮಧ್ಯೆ ಇರುತ್ತದೆ. ಅಂದರೆ, ಸಮಾನ ಶಿಕ್ಷಣ ನೀತಿಯಿಲ್ಲದೇ ಪರಿಹಾರ ಕಾಣದ ಸಮಸ್ಯೆ ಇದಾಗಿದೆ.

ಶೋಷಿತ ಸಮುದಾಯಗಳಲ್ಲಿ ಇಂಗ್ಲಿಷ್ ಮಾಧ್ಯಮದ ಮುಖಾಂತರವೇ ಇಂಗ್ಲಿಷನ್ನು ಅತ್ಯುತ್ತಮವಾಗಿ ಕಲಿಸಬೇಕೆನ್ನುವ ತಹತಹ ಇದೆ. ಇದನ್ನು ಮಿಥ್ ಎನ್ನಬಹುದು. ಮನೆಯಲ್ಲಿ ಇಂಗ್ಲಿಷ್ ಪರಿಸರವಿರದಿದ್ದಾಗ, ಇಂಗ್ಲಿಷ್ ಮಾಧ್ಯಮಕ್ಕೆ ದೂಡಲ್ಪಡುವ ಮಗು ಇಂಗ್ಲಿಷ್ ಕಲಿಯುವ ಸಾಧ್ಯತೆಗಿಂತ ಯಾವ ವಿಷಯಗಳನ್ನೂ ಸರಿಯಾಗಿ ಕಲಿಯದೇ ಹೋಗುವ ಸಾಧ್ಯತೆಯೇ ಹೆಚ್ಚು. ಹಾಗಾಗಿ ಮಾತೃಭಾಷಾ ಮಾಧ್ಯಮದಲ್ಲಿ, ವೈಜ್ಞಾನಿಕ ವಿಧಾನದಲ್ಲಿ, ಅತ್ಯುತ್ತಮವಾಗಿ (ಅಂದರೆ ಇಂದಿನ ರೀತಿಯ ಸಾಂಕೇತಿಕ ಕಲಿಕೆಯಲ್ಲ) ಇಂಗ್ಲಿಷನ್ನು ಕಲಿಸುವ ಏರ್ಪಾಡಿನಲ್ಲಿ ವ
ಇದಕ್ಕೆ ಪರಿಹಾರವಿದೆ.

ನಾವು ಯಾವುದೇ ಭಾಷೆ ಕಲಿಯಲು ವಿರೋಧಿ
ಎಂದು ಕನ್ನಡ ಚಳವಳಿಗಾರರು ಹೇಳುತ್ತಾರೆ. ಇದು ಕೇ
ನಾಮಮಾತ್ರದ ಹೇಳಿಕೆಯೇ? ಇಂಗ್ಲಿಷನ್ನು ಹೆಚ್ಚು ಹೆ
ಕಲಿಸುವ ಪ್ರಯತ್ನಗಳು ನಡೆಯುತ್ತಿದ್ದರೆ, ಒಂದು ಅಭ
ಇಂತಹವರನ್ನು ಕಾಡತೊಡಗುತ್ತದೆ. ಅಯ್ಯೋ ಇದ
ನಮ್ಮ ಭಾಷೆ ಹೋಗಿಬಿಡುತ್ತದೆ ಎಂದು. ಹೌದು, ಒ
ವೇಳೆ ಇಂದು ನಡೆಯುತ್ತಿರುವ ವಿದ್ಯಮಾನ ಇನ್ನೂ ನ
ವರ್ಷ ನಡೆದು, ನಿಧಾನಕ್ಕೆ ಕನ್ನಡದ ಅಗತ್ಯ ಎಲ್ಲಿ
ಇರದೇ ಹೋಗಿಬಿಟ್ಟರೆ ನಮ್ಮ ಭಾಷೆ ಹೋ
ಬಿಡಬಹುದು. ಅದು ಕನ್ನಡವೆಂಬ ಭಾಷೆಯ ಮಾತ್ರ
ಸಂಸ್ಕೃತಿ, ಜನಾಂಗ ಹಾಗೂ ಪರಂಪರೆಯ ನಾಶಕ್ಕೆ

ಆದರೆ ಈ ಭಾಷೆಯನ್ನು ನಾವು ಕೇವಲ ಅಭಿಮಾನದಿ
ಉಳಿಸಿಕೊಳ್ಳಲು ಸಾಧ್ಯವಿಲ್ಲ ಮತ್ತು ಇಂಗ್ಲಿ
ಒಳಗೊಂಡಂತೆ ಇನ್ನಾವುದೇ ವಿದೇಶೀ ಭಾಷೆಯ
ಕಲಿಯುವುದರಿಂದ ಇತರರನ್ನು ತಡೆದು ಇದನ್ನು ಸಾಧಿ
ಸಾಧ್ಯವಿಲ್ಲ.

ಕನಿಷ್ಠ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಎ
ಇನ್ನೊಂದು 'ಮಿಥ್'. ಶಿಕ್ಷಣ ಹಕ್ಕು ಕಾಯ್ದೆ 200
ಒಂದರಿಂದ 8ನೇ ತರಗತಿಯವರೆಗಿನ ವ್ಯಾಪ್ತಿಯ
ಹೊಂದಿದೆ. ಈ ಕಾಯ್ದೆಗೆ ತಿದ್ದುಪಡಿ ತರುವ ಮೂ
ಮಾತೃಭಾಷಾ ಮಾಧ್ಯಮವನ್ನು ಜಾರಿಗೆ ತರುತ್ತೇವೆ
ಹೇಳುತ್ತಿರುವ ರಾಜ್ಯ ಸರ್ಕಾರವು 5ನೇ ತರಗತಿಯ
ಮಾತ್ರ ಮಾತೃಭಾಷಾ ಮಾಧ್ಯಮ ಎಂದು ಹೇಳುತ್ತಿರು
ವಿಚಿತ್ರವಾಗಿದೆ. ಅದೇನೇ ಇರಲಿ, ಐದಾದರೂ
ಎಂಟಾದರೂ, ಅಲ್ಲಿಂದ ಮುಂದಕ್ಕೆ ಹೇಗೆ ಎಂಬ
ಏಳುತ್ತದೆ. ಯಾವುದು ಉನ್ನತ ಶಿಕ್ಷಣದಲ್ಲಿ ಕಲಿ
ಭಾಷೆಯಾಗಿರುವುದಿಲ್ಲವೋ, ಅದರ ಪ್ರಾಮುಖ್ಯತೆ
ಪೋಷಕರ ಕಣ್ಣಲ್ಲಿ ಕಡಿಮೆಯಾಗುವುದು ಸಹಜವಲ್ಲ
ಕರ್ನಾಟಕದ ಜನಸಂಖ್ಯೆಯ ಶೇ.20 ಸಹ ಇರದ
ಜಗತ್ತಿನ ಹಲವಾರು ದೇಶಗಳು ತ
ಮಾತೃಭಾಷೆಯಲ್ಲಿಯೇ ವೈದ್ಯಕೀಯ, ಇಂಜಿನಿಯರಿ
ಒಳಗೊಂಡಂತೆ ಎಲ್ಲಾ ಕೋರ್ಸುಗಳನ್ನು ಕಲಿಸುತ್ತವೆ
'ಅಭಿವೃದ್ಧಿ'ಯನ್ನೂ ಕಂಡಿವೆ. ಹಾಗಾದರೆ ಕನ್ನಡಕ್ಕೆ
ಇಂತಹ ಹಲವು ಜನಭಾಷೆಗಳಿಗೆ ಇದು ಏಕೆ ಸಾಧ್ಯ

'ಶಾಸ್ತ್ರೀಯ ಭಾಷೆಗಾಗಿ ಹೋರಾಟ' ನಡೆಸಿದವ
ಆದ್ಯತೆ ಇದಾಗಿರಬೇಕಿತ್ತು, ಸಾವಿರಾರು ವರ್ಷಗಳ ಇತಿ
ಹೊಂದಿರುವ ಭಾಷೆಯಲ್ಲಿ ಪಾರಿಭಾಷಿಕ ಪದಗ
ಸೂಕ್ತವಾಗಿ ಹೊಂದಿಸಿಕೊಡುವುದಕ್ಕೆ 'ಶಾಸ್ತ್ರೀಯ ಕನ
ನೀಡುತ್ತಿರುವ ಹಣದ ಬಳಕೆಯಾಗಬೇಕೆ
ಕೂಗೆಬ್ಬಿಸಬೇಕಿತ್ತು, (ಭಾಷಾತಜ್ಞ ಪ್ರೊ.ಜೋಗಾಸಿಂಗರ
ಈ ಪದಗಳನ್ನು ಹೊಂದಿಸುವುದು ಕಷ್ಟದ ಕೆಲ
ಅಲ್ಲ) ಒಬ್ಬ ವ್ಯಕ್ತಿ ಇಂಗ್ಲಿಷಿನಲ್ಲಿ ಪಾಸಾಗದಿದ್ದರೂ, ಕನ್ನಡ
ಚೆನ್ನಾಗಿ ಕಲಿತು, ಕನ್ನಡದ ಮುಖಾಂತರ ವಿಜ್ಞಾನ ಕ
ಅತ್ಯುತ್ತಮ ವೈದ್ಯಳಾಗುವ ಸಾಧ್ಯತೆ ಇದ್ದರೆ, ಇಂಗ್ಲಿಷ್
ಬೇಕು? 100ಕ್ಕೆ 5 ಜನ ತಾವು ಈ ದೇಶ
ಉಳಿಯುವುದಿಲ್ಲ, ತಮಗೆ ಏನಿದ್ದರೂ ವಿದೇಶೀ
ಒಗ್ಗುತ್ತದೆ ಎಂದು ಭಾವಿಸುವುದಾದಲ್ಲಿ ಅವರು ಆ ನ
ಇಂಗ್ಲಿಷನ್ನೋ, ಚೀನಿಯನ್ನೋ, ಫ್ರೆಂಚನ್ನೋ, ಸ್ಪಾನಿಷ್
(ಏಕೆಂದರೆ ಜಗತ್ತಿನೆಲ್ಲೆಡೆ ಇಂಗ್ಲಿಷ್ ಇಲ್ಲ) ಕಲಿತು ವಿದ
ಹಾರಲು ಕಷ್ಟವೇನಲ್ಲ, ಅವರಿಗಾಗಿ ಶೇ.95ರಷ್ಟು ದ
ಮಕ್ಕಳ ಭವಿಷ್ಯವನ್ನು ಏಕೆ ಹಾಳು ಮಾಡಬೇಕು?
ನಾಡಿನ ಜನರು ಮಾತನಾಡುವ ಭಾಷೆಯ
ವೈದ್ಯಕೀಯವನ್ನು ಕಲಿತರೆ ಒಳ್ಳೆಯದೋ ಅ
ಪುರೋಹಿತ ಸಂಸ್ಕೃತದಲ್ಲಿ ಮಂತ್ರ ಕಲಿತಂತೆ ಜ
ಅರ್ಥವಾಗದ ಭಾಷೆಯಲ್ಲಿ ಕಲಿಯುವುದು ಒಳ್ಳೆಯದ

ಮಾತೃಭಾಷಾ ಮಾಧ್ಯಮದ ಹೋರಾಟದ ದೃಷ್ಟಿ
ಈ ಎರಡು ಅಂಶಗಳು (1. ಇಂಗ್ಲಿಷ್ ಕ
ವಿರೋಧವಿರಬಾರದು- ಮಾತೃಭಾಷಾ ಮಾಧ್ಯ
ಮುಖಾಂತರವೇ ಅತ್ಯುತ್ತಮ ಇಂಗ್ಲಿಷ್/ವಿದೇಶೀ ಭಾ
ಕಲಿಕೆ ಸಾಧ್ಯ ಎಂಬುದನ್ನು ಅರಿಯಬೇಕು ಹ
ಸಾಬೀತುಪಡಿಸಬೇಕು. 2. ಉನ್ನತ ಶಿಕ್ಷಣವೂ
ಭಾಷೆಗಳಲ್ಲಿ ಸಾಧ್ಯವಾಗುವ ಕಡೆಗೆ ಹಂತಹಂತ
ಚಲಿಸಬೇಕು) ಬಹಳ ಮುಖ್ಯವಾಗಿವೆ. ಈ ಕ
ಆರೋಗ್ಯಪೂರ್ಣ ಚರ್ಚೆ ನಡೆದಷ್ಟೂ ಒಳ್ಳೆಯದಾಗ

ಅಮ್ಮ ಇಂದಿರಾಗೆ 'ಸರೋಜಾದೇವಿ ಸಾಹಿತ್ಯ ಪ್ರಶಸ್ತಿ'

ನನ್ನ ಅಮ್ಮ ಇಂದಿರಾ ಅವರಿಗೆ ಈಗ 72 ವರ್ಷ ವಯಸ್ಸು. ಅವರು ತಮ್ಮ ಜೀವನದಲ್ಲಿ ಬರೆದಿರುವುದು ಒಂದೇ ಪುಸ್ತಕ. ಆ ಪುಸ್ತಕಕ್ಕೆ ಈಗ 'ಡಾ.ಬಿ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ' ಲಭಿಸಿದೆ.

ಲಂಕೇಶರ ಜೊತೆಗಿನ 40 ವರ್ಷಗಳ ದಾಂಪತ್ಯ ಜೀವನ ಕುರಿತ 'ಹುಳಿಮಾವು ಮತ್ತು ನಾನು' ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುವ ಮುನ್ನ ಇದೇ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿದ್ದರಿಂದ ಅದರ ಬಗ್ಗೆ ನಾನು ನಮ್ಮ ಓದುಗರಿಗೆ ಮತ್ತೊಮ್ಮೆ ಹೇಳುವ ಅವಶ್ಯಕತೆ ಇಲ್ಲ.

ಆದರೆ ಆ ಪುಸ್ತಕದ ಹಿನ್ನೆಲೆ ಬಗ್ಗೆ ಒಂದೆರಡು ಮಾತುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಅದಕ್ಕೆ ಮೂಲ ಕಾರಣವಾಗಿದ್ದು ಆಗ 'ಮಯೂರ' ಪತ್ರಿಕೆಯ ಸಂಪಾದಕರಾಗಿದ್ದ ಜಿ.ಪಿ.ಬಸವರಾಜು ಅವರು. ಒಮ್ಮೆ ಬಸವರಾಜು ಅಪ್ಪನ ಬಗ್ಗೆ ಒಂದು ವಿಶೇಷ ಸಂಚಿಕೆಯನ್ನು ಹೊರತಂದರು. ಆ ಸಂಚಿಕೆಗಾಗಿ ಅಪ್ಪನ ಬಗ್ಗೆ ನಾನು ಮತ್ತು ಅಮ್ಮ ಇಬ್ಬರೂ ಲೇಖನಗಳನ್ನು ಬರೆಯಬೇಕು ಎಂದು ಕೇಳಿದರು. ಆರಂಭದಲ್ಲಿ ಅಮ್ಮ "ಅಯ್ಯೋ ನಾನೇನು ಬರೆಯಲಿ" ಎಂದು ಹಿಂಜರಿದರು. ಯಾಕೆಂದರೆ ಅಲ್ಲಿಯತನಕ ಅಮ್ಮ ಬರೆದದ್ದು ತನ್ನ ಆಪ್ತ ಕುಟುಂಬದವರಿಗೆ ಪತ್ರಗಳನ್ನು ಮತ್ತು ತನ್ನ ಯಶಸ್ವೀ ಸೀರೆ ಅಂಗಡಿಯ ಲೆಕ್ಕಗಳನ್ನು ಮಾತ್ರ!

ನಾನೂ ಒತ್ತಾಯ ಮಾಡಿದ್ದರಿಂದ ಅಮ್ಮ 'ಸ್ಕೂಟರ್ ದಿನಗಳು' ಎಂಬ ಲೇಖನವನ್ನು ಬರೆದರು. ಅದನ್ನು ನಾನು ಸ್ವಲ್ಪ ತಿದ್ದಿ ತೀಡಿ ಬಸವರಾಜು ಅವರಿಗೆ ಕಳುಹಿಸಿದ್ದೆ. ಆ ಲೇಖನ ಅಪ್ಪ ಮತ್ತು ಅಮ್ಮ ತಮ್ಮ ದಾಂಪತ್ಯ ಜೀವನದ ಆರಂಭದ ದಿನಗಳಲ್ಲಿ ಸ್ಕೂಟರ್ ಖರೀದಿಸಲು ಮಾಡಿದ ಸಾಹಸ, ಆ ಸ್ಕೂಟರ್ ಮೇಲೆ ತಿರುಗಾಡಿದ್ದು ಇತ್ಯಾದಿಗಳನ್ನು ಕುರಿತದ್ದಾಗಿತ್ತು. ಅದನ್ನು ತುಂಬಾ ಜನ ಮೆಚ್ಚಿದರು. ಆಗಲೇ ತಮ್ಮ ತಂಡಕ್ಕೆ ಅನ್ನಿಸಿದ್ದು "ಲಂಕೇಶ್ ಅವರನ್ನು ಕುರಿತಂತೆ ಅವರನ್ನು ಬಲ್ಲವರು, ಬಲ್ಲದವರು ಬರೆಯುತ್ತಿರುವಾಗ ಅವರೊಂದಿಗೆ 40 ವರ್ಷಗಳ ಕಾಲ ಜೀವನ ಸಾಗಿಸಿದ ಇಂದಿರಾ ಅವರು ಬರೆದರೆ ಲಂಕೇಶರ ವ್ಯಕ್ತಿತ್ವದ ಇನ್ನೊಂದು ಮಗ್ಗಲೂ ಹೊರಬರುತ್ತೆ" ಎಂದು.

ಆದರೆ ಅಮ್ಮನಲ್ಲೂ ಒಬ್ಬ ಬರಹಗಾರ್ತಿ ಇದ್ದಾರೆ ಎಂಬುದು ನಮಗ್ಯಾರಿಗೂ ಗೊತ್ತೇ ಇರಲಿಲ್ಲ. ಆ ಕಾರಣಕ್ಕೆ ಆರಂಭದಲ್ಲಿ ಅಮ್ಮ ತನ್ನ ಕತೆಯನ್ನು ಹೇಳಲಿ; ಯಾರಾದರೊಬ್ಬರು ಅದನ್ನು ನಿರೂಪಿಸಲಿ ಎಂದುಕೊಂಡೆವು. ಆದರೆ ಯಾರು ನಿರೂಪಿಸಬೇಕು? ನನಗಂತೂ ಪುರುಸೊತ್ತು ಇರಲಿಲ್ಲ. ಆಗತಾನೇ ಕಡಿದಾಳು ಶಾಮಣ್ಣನವರ ಆತ್ಮಕತೆ 'ಕಾಡುತೊರೆಯ ಜಾಡು' ಪುಸ್ತಕವನ್ನು ಚೆನ್ನಾಗಿ ನಿರೂಪಿಸಿದ್ದ ಕೆ.ಅಕ್ಷತಾರನ್ನು ಕೇಳೋಣವೆಂದರೆ ಅವರು ವಾಸಿಸುವುದು ಶಿವಮೊಗ್ಗೆಯಲ್ಲಿ. ನಮ್ಮ ತಂಡಕ್ಕೆ ಹೊಳೆದ ಇತರರೂ ಒಂದೋ ಬ್ಯುಸಿ ಆಗಿದ್ದರು ಅಥವಾ ದೂರದೂರುಗಳ ನಿವಾಸಿಗಳಾಗಿದ್ದರು. ಇಂತಹ ಕೆಲವಾರು ಕಾರಣಗಳಿಗೆ ಈ ಯೋಜನೆ ಮೂರು ನಾಲ್ಕು ವರ್ಷ ಮುಂದೂಡಲ್ಪಡುತ್ತಾ ಹೋಯಿತು.


ಕೊನೆಗೊಂದು ದಿನ ನಾನು "ಅಮ್ಮ, ಸಮಯ ಸಿಕ್ಕಾಗಲೆಲ್ಲ ನೀನು ನಿನ್ನ ನೆನಪುಗಳನ್ನು ಟಿಪ್ಪಣಿ ಮಾಡುತ್ತಾ ಹೋಗು, ಆಮೇಲೆ ನೋಡಿಕೊಳ್ಳೋಣ" ಅಂದೆ. ಅಮ್ಮ ಅದಕ್ಕೆ ಸ್ಪಂದಿಸಿ ಬರೆಯಲಾರಂಭಿಸಿದರು. ಹಲವು ದಿನಗಳ ನಂತರ ನನ್ನ ಕೈಗೆ ಹತ್ತಾರು ಹಾಳೆಗಳನ್ನು ಕೊಟ್ಟ ಅಮ್ಮ "ಹೇಗಿದೆ ನೋಡು" ಅಂದರು.

ಅದು ತುಂಬಾ ಚೆನ್ನಾಗಿತ್ತು!

ಅಮ್ಮನೇ ಇಷ್ಟು ಚೆನ್ನಾಗಿ ಬರೆಯುವುದರಿಂದ ಯಾಕಾದರೋ ನಿರೂಪಕರಿಗಾಗಿ ನಾವು ಇಷ್ಟು ದಿನ ತಡಕಾಡಿದೆವು ಅನ್ನಿಸಿತು. ಮುಂದಿನ ವಾರದಿಂದಲೇ ಅದನ್ನು ಪ್ರಕಟಿಸಲು ನಿರ್ಧರಿಸಿದೆವು. ಆದರೆ ಅದಕ್ಕೆ ಏನೆಂದು ಹೆಸರಿಡುವುದು? ಅಷ್ಟು ಹೊತ್ತಿಗಾಗಲೇ ರಾಜೇಶ್ವರಿಯವರ 'ನನ್ನ ತೇಜಸ್ವಿ' ಪ್ರಕಟಗೊಂಡಿದ್ದರಿಂದ ಬೇರೆ ರೀತಿಯ ಟೈಟಲ್ ಬೇಕೆನಿಸಿತು. 'ಲಂಕೇಶ್ ಮತ್ತು ನಾನು' ತುಂಬಾ ಸಿಂಪಲ್ ಅನ್ನಿಸಿತು. ಸುಮ್ಮನೇ ಯೋಚಿಸಿದೆ. ಅಪ್ಪ ತಮ್ಮ ಆತ್ಮಕಥನಕ್ಕೆ 'ಹುಳಿಮಾವಿನ ಮರ' ಎಂಬ ಟೈಟಲ್ ಇಟ್ಟದ್ದರಿಂದ 'ಹುಳಿಮಾವು ಮತ್ತು ನಾನು' ಎಂದರೆ ಚೆನ್ನಾಗಿರುತ್ತೆ ಎಂದು ನಿರ್ಧರಿಸಿದೆ. ಅಮ್ಮನಿಗೂ ಅದು ಇಷ್ಟವಾಯಿತು.

ಸಂಪಾದಕಿಯಾಗಿ ನನ್ನ ಅನುಭವದಲ್ಲಿ ನಾನು ಕಂಡಿರುವ ಅತಿ ಶಿಸ್ತಿನ ಲೇಖಕಿ ಇಂದಿರಾ! ಡೆಡ್‌ಲೈನ್‌ಗೆ ಇನ್ನೂ ಹಲವು ದಿನಗಳಿದ್ದರೂ ಮುಂಚಿತವಾಗಿಯೇ ಬರೆದು ಕೊಡುತ್ತಿದ್ದರು. ಅಕಸ್ಮಾತ್ ಒಂದು ವಾರ ಬೇರೆ ಊರಿಗೆ ಹೋಗುವುದಿದ್ದರೆ, ಆ ವಾರದ ಬರಹವನ್ನೂ ಮುಂಚಿತವಾಗಿಯೇ ಸಿದ್ಧ ಮಾಡಿ ಹೊರಡುತ್ತಿದ್ದರು!

ಅಮ್ಮನ ಬರಹ ಬಹಳ ಬೇಗನೆ ಜನಪ್ರಿಯವಾಯಿತು. ಅದೆಷ್ಟೋ ಜನ ಪತ್ರಿಕೆಯಲ್ಲಿ ಮೊದಲು ಓದುತ್ತಿದ್ದದ್ದೇ ಅವರ 'ಕಾಲಂ' ಅನ್ನು! ಅದು ಅಂತ್ಯಗೊಂಡ ನಂತರ ಅಪ್ಪನ 78ನೇ ಹುಟ್ಟುಹಬ್ಬದ ದಿನ ಅದನ್ನು ಅಪ್ಪ ಮತ್ತು ಅಮ್ಮನ ಊರಾದ ಶಿವಮೊಗ್ಗದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದೆವು. ಅಮ್ಮನದು ಎಂತಹ ಸಂಕೋಚದ




ವ್ಯಕ್ತಿತ್ವವೆಂದರೆ "ನಾನು ಪುಸ್ತಕ ಬಿಡುಗಡೆಗೆ ಶಿವಮೊಗ್ಗೆಗೆ ಬರಬೇಕಾ?" ಎಂದು ಕೇಳಿದರು! "ಸುಮ್ಮನೆ ಬಾ" ಎಂದಿದ್ದಕ್ಕೆ ಇಶಾಳನ್ನು ಕಟ್ಟಿಕೊಂಡು ಬಂದರು.

ಆ ಪುಸ್ತಕವನ್ನು ಓದಿದ ಎಲ್ಲಾ ವಿಮರ್ಶಕರೂ ಅದನ್ನು ತುಂಬಾ ಮೆಚ್ಚಿದರು. ಅಷ್ಟೇ ಅಲ್ಲ, ಇತರೆ ಪುಸ್ತಕಪ್ರಿಯರೂ ಅದನ್ನು ಮೆಚ್ಚಿ ಪತ್ರಗಳನ್ನು ಬರೆದರು. ಅದರಲ್ಲೂ ನಮ್ಮ ತಂಡದ ಶಿವಮೊಗ್ಗೆ ಮಿತ್ರ 'ಆರ್.ಕೆ.ಫ್ಯಾಶನ್ಸ್'ನ ಮಾಲೀಕ ಕುಮಾರ್ ಈ ಪುಸ್ತಕದ ಬಗ್ಗೆ ಒಂದು ಸಭೆಯಲ್ಲಿ ಮಾತನಾಡುತ್ತಾ "ಎಲ್ಲಾ ಮಹಿಳೆಯರೂ ಇದನ್ನು ಓದಲೇಬೇಕು" ಎಂದರಲ್ಲದೆ, ಅಮ್ಮನಿಗೆ ನಾಲ್ಕೈದು ಪುಟಗಳ ಪತ್ರವನ್ನೇ ಬರೆದರು.

ಸವಿತಾ ನಾಗಭೂಷಣ ಅವರು 'ಹೊಸ ಮನುಷ್ಯ' ಪತ್ರಿಕೆಯಲ್ಲಿ ಈ ಪುಸ್ತಕವನ್ನು ವಿಮರ್ಶಿಸುತ್ತಾ "ಇಂದಿರಾ ಅವರ ಬರವಣಿಗೆ ಸಾಮಾನ್ಯ ಜನರನ್ನೂ ತಟ್ಟುವುದು ಅವರ ಸರಳ, ಪ್ರಾಮಾಣಿಕ ಮತ್ತು ಬಡಿವಾರವಿಲ್ಲದ ಶೈಲಿಯಿಂದಾಗಿ" ಎಂದು ಶ್ಲಾಘಿಸಿದರು. ಅವರು ಆ ವಿಮರ್ಶೆಯಲ್ಲಿ ಬರೆದ ಸಾಲುಗಳು ಈ ಪುಸ್ತಕದ ಜೀವಾಳವನ್ನು ಹಿಡಿದಿಟ್ಟಿದ್ದರಿಂದ ಅದರ ಹಲವು ಸಾಲುಗಳನ್ನು ಇಲ್ಲಿ ಕೊಡುತ್ತಿದ್ದೇನೆ.

"ಇದು ಹುಳಿಮಾವಿನ ಘಮಕ್ಕೆ ಮಾರುಹೋಗಿ ಅದನ್ನು ಪಡೆದೂ ಪಡೆದಿಲ್ಲದವಳಾಗಿ; ಇತ್ತ ಸವಿಯಲಾಗದೆ, ಅತ್ತ



ಎಸೆಯಲಾಗದೆ ಕೊನೆತನಕ ಉಪ್ಪಿನ ಜಾಡಿಯಲ್ಲಿ ಹಾಕಿಟ್ಟು ಜತನದಿಂದ ಕಾಪಾಡಿಕೊಂಡ ಜಾಣ ಹೆಣ್ಣೊಬ್ಬಳ ಕುತೂಹಲಕಾರಿ ಕಥಾನಕವಾಗಿದೆ.

ಈ ಕಥಾನಕವನ್ನು ಎರಡು ರೀತಿಯಲ್ಲಿ ಓದಬಹುದು. ಇಂದಿರಾ ಅವರನ್ನೇ ಈ ಕಥಾನಕದ ಕೇಂದ್ರವಾಗಿಟ್ಟುಕೊಂಡು ಓದಿದರೆ ಹಳ್ಳಿಯ ಹುಡುಗಿಯೊಬ್ಬಳು ತನ್ನ ಮನೆ ಮಂದಿಯ ಹಿತೋಪದೇಶಗಳನ್ನು ಕಡೆಗಣಿಸಿ ಒರಟು ಸ್ವಭಾವದ ವಿದ್ಯಾವಂತ ಹುಡುಗನೊಬ್ಬನನ್ನು ಅವನ ಮನೆಮಂದಿ ಆಕೆಯನ್ನು ಇಷ್ಟಪಡದಿದ್ದರೂ ವರಿಸಿ ಬಾಳಿನೊಂದಿಗೆ ಬಡಿದಾಡಿ ಆ ಬದುಕಿನಿಂದಲೇ ಪಾಠ ಕಲಿತು, ದಾಂಪತ್ಯ ಹಳಿ ತಪ್ಪಿದಾಗ ಗೋಳಾಡುತ್ತಾ ಕೂರದೆ ದೃಢವಾಗಿ ನಿಂತು ತನ್ನ ದಾರಿ ಅರಸಿಕೊಂಡು ಯಶಸ್ವಿ ಉದ್ಯಮಿಯಾಗಿ ಅರಳಿ ಕುಟುಂಬ ಕಟ್ಟಿಕೊಳ್ಳುವ ಯಶೋಗಾಥೆ ಎನಿಸುವುದು.

ಲಂಕೇಶರನ್ನೇ ಈ ಕಥಾನಕದ ಕೇಂದ್ರವನ್ನಾಗಿ ಇಟ್ಟುಕೊಂಡು ಓದಿದರೆ, ಇಡೀ ತನ್ನ ಜೀವನವನ್ನೇ ಬರವಣಿಗೆಗೆ ತೆತ್ತುಕೊಂಡ ಪ್ರತಿಭಾವಂತ ಅರೆಹುಚ್ಚನೊಬ್ಬ ಸಾರ್ವಜನಿಕ ಜೀವನದಲ್ಲಿ ಯಶಸ್ವಿಯಾದರೂ, ಒಳ್ಳೆ ಸಂಸಾರಸ್ಥನಾಗದೆ ಹೆಂಡತಿ, ಮಕ್ಕಳ ಪ್ರೀತಿ, ಪರಿತಾಪಗಳೆರಡಕ್ಕೂ ಈಡಾಗುತ್ತಾ ಸಾಂಪ್ರದಾಯಿಕ ಕುಟುಂಬದ ಎಲ್ಲೆಗಳನ್ನು ಮೀರಿ ಸ್ವಚ್ಛಂದವಾಗಿ ಬದುಕಿದ ಕತೆಯಾಗಿ ತೋರುವುದು." (ಮೇ 2013ರ ಸಂಚಿಕೆ, ಪುಟ 18)

ಅಪ್ಪನ ಬಗ್ಗೆ ಅಮ್ಮ ಪುಸ್ತಕವೊಂದನ್ನು ಬರೆದಿರುವ ವಿಚಾರ ಯು.ಆರ್.ಅನಂತಮೂರ್ತಿಯವರ ಕಿವಿಗೂ ಬಿತ್ತು. ಅವರು ನನ್ನ ಗೆಳತಿ ಡಾ.ಎಂ.ಎಸ್.ಆಶಾದೇವಿ ಹತ್ತಿರ "ಲಂಕೇಶ್ ಬಗ್ಗೆ ಅವರ ಹೆಂಡತಿ ಪುಸ್ತಕ ಬರೆದಿದ್ದಾರಂತಲ್ಲಾ? ಅದನ್ನು ನಾನು ಓದಬೇಕು" ಎಂದರು. ಆಗ 'ದೇಶಕಾಲ'ದ ವಿಶೇಷಾಂಕದ ಬಗ್ಗೆ ವಿಮರ್ಶೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದರಿಂದ ಕೋಪಗೊಂಡಿದ್ದ ಅನಂತಮೂರ್ತಿ ನನ್ನೊಂದಿಗೆ ಮಾತನಾಡುವುದನ್ನು ನಿಲ್ಲಿಸಿದ್ದರು. ಆದರೂ ಅವರಿಗೊಂದು ಪ್ರತಿಯನ್ನು ತಲುಪಿಸಿದೆ. ಅದನ್ನು ಓದಿ ಮುಗಿಸಿದ ಕೂಡಲೇ 'ದೇಶ', 'ಕಾಲ' ಎಲ್ಲವನ್ನೂ ಮರೆತ ಅನಂತಮೂರ್ತಿಯವರು ನನಗೆ ಫೋನ್ ಮಾಡಿ "ನಿನ್ನಮ್ಮ ತುಂಬಾ ಚೆನ್ನಾಗಿ ಬರೆದಿದ್ದಾಳೆ ಕಣೆ. ಅವಳ ಜೊತೆ ಮಾತನಾಡಬೇಕು. ನಂಬರ್ ಕಳಿಸು" ಎಂದರು.


ಅನಂತಮೂರ್ತಿಯವರನ್ನು ಅಮ್ಮ ಭೇಟಿಯಾಗಿ, ಮಾತನಾಡಿಸಿ ದಶಕಗಳೇ ಆಗಿದ್ದರಿಂದ ಇದ್ದಕ್ಕಿದ್ದಂತೆ "ನಾನು ಅನಂತಮೂರ್ತಿ" ಎಂಬ ಕರೆ ಬಂದರೆ ಅಮ್ಮ "ಯಾವ ಅನಂತಮೂರ್ತಿ?" ಎಂದು ಕೇಳುವ ಅಪಾಯವಿತ್ತು! ಆದ್ದರಿಂದ ಅಮ್ಮನಿಗೆ ಫೋನ್ ಮಾಡಿ "ಅನಂತಮೂರ್ತಿಯವರು ನಿನಗೆ ಫೋನ್ ಮಾಡುತ್ತಾರಂತೆ" ಎಂದು 'ಎಚ್ಚರಿಕೆ' ನೀಡಿದ್ದೆ. ಅನಂತಮೂರ್ತಿಯವರು "ನೀನು ಲಂಕೇಶನನ್ನ ಮತ್ತೆ ನನಗೆ ಕೊಟ್ಟಿದ್ದೀಯಾ" ಎಂದು ಅಮ್ಮನಿಗೆ ಹೇಳಿದರು. ಅವರ ಪತ್ನಿ ಎಸ್ತರ್ ಕೂಡ "ಹಳ್ಳಿ ಹೆಂಗಸೊಬ್ಬಳು ನಿಮ್ಮ ಅತ್ತೆ ಸತ್ತಾಗ ರಾಗವಾಗಿ ಬೈಯುತ್ತಾ ಕಣ್ಣೀರಿಡುವ ಪ್ರಸಂಗ ಓದಿ ನಕ್ಕೂ ನಕ್ಕೂ ಸಾಕಾಯಿತು" ಎಂದರು.

ಅಮ್ಮನಿಗೋ ಅಚ್ಚರಿ. ಕಾಲ್ ಮುಗಿದ ನಂತರ ಅಮ್ಮನ ಕಣ್ಣಲ್ಲಿ ನೀರು. "ಅನಂತಮೂರ್ತಿಯವರು ಅಷ್ಟೊಂದು ಪುಸ್ತಕಗಳನ್ನು ಬರೆದಿದ್ದಾರೆ, ಪ್ರಶಸ್ತಿಗಳನ್ನು ಪಡೆದಿದ್ದಾರೆ. ನಾನಾದರೋ ಬರೆದಿರುವುದು ಒಂದು ಪುಸ್ತಕವನ್ನು ಮಾತ್ರ. ಅಂಥವರೇ ನನ್ನ ಪುಸ್ತಕವನ್ನು ಮೆಚ್ಚಿ ಫೋನ್ ಮಾಡುತ್ತಾರೆಂದರೆ..." ಎಂದು ಅಮ್ಮ ಭಾವುಕರಾದರು. ತಂಗಿ ಬೇಬಿ ಅಮ್ಮನನ್ನು ಸಮಾಧಾನಿಸಲು "ಇನ್ನೂ ಇರು, ನಿನ್ನ ಪುಸ್ತಕಕ್ಕೆ ಜ್ಞಾನಪೀಠ ಪ್ರಶಸ್ತಿ ಬರುತ್ತೆ" ಎಂದು ತಮಾಷೆ ಮಾಡಿದಳು! ಅಮ್ಮ ಕಣ್ಣೀರು ಒರೆಸಿಕೊಳ್ಳುತ್ತಾ ನಗಲಾರಂಭಿಸಿದರು.

ಈಗ ಈ 'ಹುಳಿಮಾವು ಮತ್ತು ನಾನು' ಪುಸ್ತಕಕ್ಕೆ ಚತುರ್ಭಾಷಾ ನಟಿ ಬಿ.ಸರೋಜಾದೇವಿ ಅವರು ತಮ್ಮ ದಿವಂಗತ ಪುತ್ರಿ ಬಿ.ಭುವನೇಶ್ವರಿ ನೆನಪಿನಾರ್ಥ ಸ್ಥಾಪಿಸಿರುವ ಪ್ರಶಸ್ತಿ ಘೋಷಣೆಯಾಗಿದೆ. ಸಿನಿಮಾ ಮತ್ತು ಕಲೆಗೆ ಅಪಾರ ಕೊಡುಗೆಯನ್ನು ನೀಡಿರುವ ಸರೋಜಾದೇವಿ ಅವರಿಗೆ ಸಾಹಿತ್ಯದಲ್ಲೂ ಆಸಕ್ತಿ ಇರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ದತ್ತಿ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ಪ್ರತಿವರ್ಷ ಸಾಹಿತ್ಯಕ್ಕೆ ಸೇವೆ ಸಲ್ಲಿಸಿರುವ ಒಬ್ಬ ಮಹಿಳೆಗೆ ಆ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈ ಬಾರಿಯ ಸರದಿ ನನ್ನ ಅಮ್ಮನದ್ದು. ಇದು ನಮ್ಮ ಕುಟುಂಬದವರಿಗೆ, ಮಿತ್ರರಿಗೆ ಮತ್ತು ತಂಡದವರಿಗೆ ಸಂತೋಷದ ವಿಚಾರವಾಗಿದೆ.

ಅಮ್ಮ ನಮ್ಮನ್ನು ಬೆಳೆಸಿದ, ಪೋಷಿಸಿದ, ಪ್ರೋತ್ಸಾಹಿಸಿದ ರೀತಿಯ ಬಗ್ಗೆ ಹೇಳುವುದು ಅವಶ್ಯಕ. ನಾವು ಮೂವರು ಚಿಕ್ಕವರಾಗಿದ್ದಾಗ ಅಮ್ಮನಿಂದ ಪಡೆದ ಪ್ರೀತಿ ಮತ್ತು ಏಟು - ಎರಡಕ್ಕೂ ಮಿತಿಯೇ ಇಲ್ಲ ಎನ್ನಬಹುದು. ನಮಗೆ ಚಿಕ್ಕ ಸಮಸ್ಯೆಯಾದರೂ ಅಮ್ಮ ಆತಂಕಗೊಳ್ಳುತಿದ್ದರು. ಅದೇ ಮಾರ್ಕ್ಸ್‌ಕಾರ್ಡ್‌ನಲ್ಲಿ ಕಡಿಮೆ ಅಂಕ ಬಿತ್ತೆಂದರೆ ಗೂಸಾ ಸಿಗುತ್ತಿತ್ತು. (ಅಪ್ಪ ಎಂದೂ ನಮ್ಮ ಮೇಲೆ ಕೈ ಮಾಡಿದವರಲ್ಲ) ಹೋಮ್‌ವರ್ಕ್ ಮುಗಿಸಿದ ನಂತರವೇ ಆಟ, ಕತೆ ಪುಸ್ತಕ, ಇತ್ಯಾದಿ. ಅಮ್ಮ ಕೂಡ ತಮ್ಮ ಮನೆ ಕೆಲಸಗಳನ್ನೆಲ್ಲ ಮುಗಿಸಿದ ನಂತರ ಯಾವುದಾದರೊಂದು ಪುಸ್ತಕ ಓದುತ್ತಾ ಕೂರುತ್ತಿದ್ದರು. ಈಗಲೂ ನಮ್ಮ ಮನೆಯಲ್ಲಿ ಮಧ್ಯಾಹ್ನದ ಊಟದ ಹೊತ್ತು ಹಲವರ ಕೈಯಲ್ಲಿ ಪುಸ್ತಕಗಳಿರುತ್ತವೆ.

ಈಗಲೂ ಶಿಸ್ತಿನ ಸಿಪಾಯಿಯಂತಿರುವ ಅಮ್ಮ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನಮ್ಮಲ್ಲೂ ಅದನ್ನು ಬೆಳೆಸಲು ಯತ್ನಿಸಿದರು. (ಬೇಬಿ ಮಾತ್ರ ಅದನ್ನು ಮೈಗೂಡಿಸಿಕೊಂಡಳು, ನಾನು ಮತ್ತು ಶಿಸ್ತು ತುಂಬಾ ದೂರದೂರ!) ತಟ್ಟೆಯಲ್ಲಿರುವ ಪ್ರತಿ ಅಗಳನ್ನೂ ವೇಸ್ಟ್ ಮಾಡದೆ ತಿನ್ನುವಂತೆ ಅಮ್ಮ ಫೋರ್ಸ್ ಮಾಡುತ್ತಿದ್ದರು (ಅದನ್ನು ಅಜಿತು ಎಂದೂ ಕಲಿಯಲಿಲ್ಲ!). ನಮ್ಮೆಲ್ಲರಿಗೆ ಪ್ರಾಮಾಣಿಕವಾಗಿ, ಕಷ್ಟಪಟ್ಟು ಕೆಲಸ ಮಾಡುವುದನ್ನು ಹೇಳಿಕೊಟ್ಟಿದ್ದು ಅಪ್ಪ ಮತ್ತು ಅಮ್ಮ ಇಬ್ಬರೂ.

ಎಲ್ಲಕ್ಕಿಂತ ಹೆಚ್ಚಾಗಿ ನನಗೆ ಮತ್ತು ಕವಿತಾಗೆ ಮಹಿಳಾವಾದದಲ್ಲಿ ಮೊದಲ ಪಾಠ ಹೇಳಿಕೊಟ್ಟಿದ್ದು ಅಮ್ಮ. ಅಮ್ಮನಿಗೆ ಮಹಿಳಾವಾದದ ಬೆಳವಣಿಗೆ, ಸಿದ್ಧಾಂತ, ಮುಂಚೂಣಿ ನಾಯಕಿಯರು, ಇತ್ಯಾದಿಗಳು ಗೊತ್ತಿಲ್ಲ. ಆದರೆ ತನ್ನ ಸ್ವಂತ ಜೀವನಾನುಭವದಿಂದ ಮಹಿಳೆ ವಿದ್ಯೆ ಮತ್ತು ಆರ್ಥಿಕ ಸ್ವಾತಂತ್ರ್ಯ ಇಲ್ಲ ಎಂಬ ಕಾರಣಗಳಿಗೆ ಪುರುಷನನ್ನು ಅವಲಂಬಿಸಬಾರದು, ಅವಮಾನವನ್ನು ಸಹಿಸಬಾರದು ಎಂಬುದು ಅವರು ಕಲಿತ ಪಾಠ. ಪುರುಷನಿಂದ ಪ್ರೀತಿ ಮತ್ತು ವಿಶ್ವಾಸ ಸಿಕ್ಕದ್ದಲ್ಲಿ ಮಾತ್ರ ಮಹಿಳೆ ಸಂತೋಷದಿಂದ, ನೆಮ್ಮದಿಯಿಂದ ಬದುಕ ಬೇಕೆಂಬುದು ಅಮ್ಮನ ನಿಲುವು. ಆ ಕಾರಣಕ್ಕೇ ಅಮ್ಮ ನಮ್ಮಿಬ್ಬರಿಗೂ "ಚೆನ್ನಾಗಿ ಓದಿ ನಿಮ್ಮ ಕಾಲುಗಳ ಮೇಲೆ ನಿಲ್ಲಬೇಕು" ಎಂದೇ ಬಹಳಷ್ಟು ಸಲ ಪ್ರೀತಿಯಿಂದ ಹೇಳುತ್ತಿದ್ದರು, ಕೆಲವೊಮ್ಮೆ ಕೋಪದಿಂದ ಕಟ್ಟಾಜ್ಞೆ ಮಾಡುತ್ತಿದ್ದರು. ಒಮ್ಮೆ ನಾನು ನನ್ನ ಬಾಯ್ ಫ್ರೆಂಡ್ ಜೊತೆ ಎಲ್ಲೋ ಹೋಗಿದ್ದಾಗ ಸಿಕ್ಕಿಹಾಕಿಕೊಂಡು ಕಪಾಳಮೋಕ್ಷಕ್ಕೆ ಗುರಿಯಾಗಿದ್ದೆ ಮಾತ್ರವಲ್ಲ, ಒಂದೆರಡು ದಿನ ಗೃಹಬಂಧನದಲ್ಲೂ ಇದ್ದೆ!!

ಬೇರೆ ಮನೆಗಳಲ್ಲಿ ಹೆಣ್ಣು ಮಕ್ಕಳಿಗೆ 18-20 ವರ್ಷ ವಯಸ್ಸಾಗುತ್ತಿದ್ದಂತೆ 'ಹುಡುಗನ' ತಲಾಷ್ ಶುರುವಾಗುತ್ತದೆ. ಆದರೆ ನಾವಿಬ್ಬರೂ ಓದು ಮುಗಿಸಿ ಕೆಲಸ ಹಿಡಿದು ಕೈಯಲ್ಲಿ ಒಂದಿಷ್ಟು ಸಂಪಾದನೆ ಪಡೆಯಲು ಶುರು ಮಾಡಿದ ನಂತರವೇ ಅಮ್ಮ ಮದುವೆ ಬಗ್ಗೆ ಪ್ರಸ್ತಾಪಿಸಿದ್ದು.

ಬದುಕೆಂಬ ದೊಡ್ಡ ಪರೀಕ್ಷೆಯಲ್ಲಿ ಅಮ್ಮ ಸೆಣೆಸಿದ್ದು ಗೆದ್ದಿದ್ದು ಎಲ್ಲವೂ ರೋಚಕ. ಒಂದೆಡೆ ಓದಿನಲ್ಲಿ ಅಮ್ಮ ಪಿಯುಸಿ ದಾಟಲಿಲ್ಲ, ಇನ್ನೊಂದೆಡೆ ಎಲ್ಲಾದರೂ ಕೆಲಸಕ್ಕೆ ಸೇರಲು ಯಾವುದೇ ಕಲೆ ಗೊತ್ತಿಲ್ಲ, ತರಬೇತಿ ಇಲ್ಲ, ಮೂವರು ಚಿಕ್ಕಮಕ್ಕಳ ಜವಾಬ್ದಾರಿ ಹೊತ್ತಿದ್ದರು. ಗಂಡ ಯಾವಳೋ ಬೆನ್ನಹಿಂದೆ ಬಿದ್ದಿದ್ದರಿಂದ ಅಮ್ಮ ತಾಳಿಸರ ಕಿತ್ತು ಬಿಸಾಡಿದ್ದರು. ಸ್ವತಂತ್ರವಾಗಿ, ಸ್ವಾವಲಂಬಿಯಾಗಿ, ನೆಮ್ಮದಿಯಿಂದ ಬದುಕಲು ಏನು ಮಾಡಬೇಕು? ಎಲ್ಲಿಗೆ ಹೋಗಬೇಕು? ಇಂತಹ ಪ್ರಶ್ನೆಗಳು ಅಮ್ಮನಿಗೆ ಎದುರಾದಾಗ ಅವರ ವಯಸ್ಸು 33.


ಆಗ ಮನೆಯಲ್ಲೇ ಸೀರೆ ವ್ಯಾಪಾರ ಶುರುಮಾಡಿದ್ದು, ಅದನ್ನು ದೊಡ್ಡ ಅಂಗಡಿಯಾಗಿ ಬೆಳೆಸಿದ್ದು, ಸ್ಕೂಟರ್ ಮಾರಿ ಕಾರು ಕೊಂಡದ್ದು, ಸುಂದರವಾದ ಮನೆ ಕಟ್ಟಿಸಿದ್ದು (ಅದನ್ನೀಗ ನನಗೆ ಕೊಟ್ಟಿದ್ದಾರೆ), ಐದು ಎಕರೆ ಹೊಲವನ್ನು ತೋಟವಾಗಿಸಿದ್ದು, ಚಿನ್ನಾಭರಣ ಕೊಂಡದ್ದು, ದೇಶ ವಿದೇಶ ಸುತ್ತಿದ್ದು, ನಾಲ್ಕು ಬೇರೆ ಫ್ಲಾಟುಗಳನ್ನು ಕಟ್ಟಿಸಿ ನಿವೃತ್ತ ಜೀವನಕ್ಕೆ ಆರ್ಥಿಕ ಬುನಾದಿಯನ್ನು ಹಾಕಿಕೊಂಡಿದ್ದು ಈಗಲೂ ಸ್ವತಂತ್ರವಾಗಿ, ಸ್ವಾವಲಂಬಿಯಾಗಿ, ಸ್ವಾಭಿಮಾನದಿಂದ ಬದುಕುತ್ತಿರುವ ಇಂದಿರಾ ಎಂಬ ನನ್ನ ಅಮ್ಮ ಈಗ ತಮ್ಮ 72ನೇ ವಯಸ್ಸಿನಲ್ಲಿ 'ಸಾಹಿತ್ಯ ಪ್ರಶಸ್ತಿ' ಪಡೆದಿದ್ದಾರೆ. ಅಂತಿಂತಹ ಹೆಣ್ಣಲ್ಲ ಈ ಇಂದಿರಾ. ಈಕೆ ಒಂದು ಯಶೋಗಾಥೆ! ಎಲ್ಲಾ ಹೆಣ್ಣುಮಕ್ಕಳಿಗೂ ಮಾದರಿ ಮಹಿಳೆ!!

ಕುಸುಕೂರು ಸೋಮಸುಂದರ್ ಇಂದಿರಾ ಲಂಕೇಶ್ ಅವರಿಗೆ ಪ್ರೀತಿಯ ಅಭಿನಂದನೆಗಳು.

ನೀನು ಮತ್ತು ಅಪ್ಪ ನಮ್ಮನ್ನು ಹೆತ್ತದ್ದಕ್ಕೆ, ಬೆಳೆಸಿದ್ದಕ್ಕೆ, ರೂಪಿಸಿದ್ದಕ್ಕೆ ಧನ್ಯವಾದಗಳು. ಲವ್ ಯೂ ಸೋ ಮಚ್.

(ಪ್ರಶಸ್ತಿ ಪ್ರದಾನ ಸಮಾರಂಭದ ವಿವರಗಳು ಪುಟ 5ರಲ್ಲಿದೆ. ದಯವಿಟ್ಟು ಎಲ್ಲರೂ ಬನ್ನಿ)

ರಾಯಚೂರು: ಬೌನ್ಸರ್ ದಾಳಿಗೆ ಮೆತ್ತಗಾದ ಎಸ್‌ಪಿ ನಾಗರಾಜ್


ಎಂ.ಎನ್. ನಾಗರಾಜ್

ರಾಯಚೂರಿನ ದಕ್ಷ ಮತ್ತು ದಿಟ್ಟ ಜಿಲ್ಲಾಧಿಕಾರಿ ಎಸ್. ಸಸಿಕಾಂತ್ ಸೆಂಥಿಲ್ ಅವರು ದಿನವೊಂದಕ್ಕೆ ಎರಡು ಕೋಟಿ ಜೂಜು ವ್ಯವಹಾರ ನಡೆಸುತ್ತಿದ್ದ ಡಿವಿಆರ್ ರಿಕ್ರಿಯೇಷನ್ ಕ್ಲಬ್ ಎಂಬ ಹೈಪ್ರೊಫೈಲ್ ಅಡ್ಡೆಯ ಮೇಲೆ ಪೊಲೀಸರಿಗೆ ತಿಳಿಸದೇ ನಡೆಸಿದ ದಿಟ್ಟ ದಾಳಿಗೆ ಇಡೀ ಜಿಲ್ಲೆಯ ಪೊಲೀಸ್ ಇಲಾಖೆ ತತ್ತರಿಸಿ ಹೋಗಿದೆ. ಈಗಾಗಲೇ, ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಸಣಮನಿ ಹಾಗೂ ಗ್ರಾಮೀಣ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ಕೆ. ಬಸವರಾಜ್ ಸಸ್ಪೆಂಡ್ ಆಗಿದ್ದಾರೆ. ಜೊತೆಗೆ ದಿನಕ್ಕೊಂದು ಲಕ್ಷ ರೂಪಾಯಿಯಂತೆ ದಕ್ಷಿಣೆ ಪಡೆದು ಆ ಜೂಜು ಅಡ್ಡೆಯ ಅಕ್ರಮಗಳಿಗೆ ಬೆಂಗಾವಲಾಗಿ ನಿಂತಿದ್ದ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಎಂ.ಎನ್.ನಾಗರಾಜ್ ಸಸ್ಪೆಂಡಾಗಿ ಮನೆ ಸೇರುವುದಕ್ಕೆ ಕ್ಷಣಗಣನೆ ಮಾಡುತ್ತಿದ್ದಾನೆ. ಬಿಸಿ ರಕ್ತದ ಯುವ ಜಿಲ್ಲಾಧಿಕಾರಿ ಮಾಡಿದ ಒಂದೇ ಒಂದು ಬೌನ್ಸರ್ ಬೌಲಿಂಗ್‌ಗೆ ಎರಡು ವಿಕೆಟ್ ಉರುಳಿ ಮೂರನೆಯದು ಅಲುಗಾಡುತ್ತಿದೆ ಎಂದರೆ ಅದೆಂತಹ ಆಕ್ರಮಣಕಾರಿ ಬೌಲಿಂಗ್ ಇರಬಹುದು- ಯೋಚಿಸಿ.

ಜಿಲ್ಲಾಧಿಕಾರಿಯ ದಾಳಿ ಮತ್ತು ಅದರ ಬಗ್ಗೆ ರಾಯಚೂರಿನ ಮಾಧ್ಯಮಗಳು, ಅದರಲ್ಲೂ ವಿಶೇಷವಾಗಿ ನಮ್ಮ ಪತ್ರಿಕೆ ಮಾಡಿದ ಸವಿವರವಾದ ಮತ್ತು ವಸ್ತುನಿಷ್ಠವಾದ ವರದಿಗಳಿಂದ ಹೊಟ್ಟೆಬಾಕ ಎಸ್ಪಿ ನಾಗರಾಜ್ ಅದೆಷ್ಟು ಮೆತ್ತಗಾಗಿ ಹೋಗಿದ್ದಾನೆಂದರೆ ಅವನ ಮಾತು, ನಡವಳಿಕೆ, ಹಾವಭಾವ, ವರ್ತನೆ ಎಲ್ಲವೂ ಅಹೋರಾತ್ರಿ ಬದಲಾಗಿಬಿಟ್ಟಿವೆ.

ಸಾಧನೆಗಳಿಗೆ ಮಾರ್ಗದರ್ಶಕ, ಅಕ್ರಮಗಳಿಗೆ?

ಎಂ.ಎನ್. ನಾಗರಾಜ್ ರಾಯಚೂರಿಗೆ ಪೊಲೀಸ್ ವರಿಷ್ಠಾಧಿಕಾರಿಯಾಗಿ ಯಾವಾಗ ಬಂದನೋ ಅಂದಿನಿಂದ ಇಡೀ ಜಿಲ್ಲೆಯಾದ್ಯಂತ ಅಕ್ರಮ ಚಟುವಟಿಕೆಗಳಿಗೆ ಕಡಿವಾಣವೇ ಇಲ್ಲದಂತಾಗಿಹೋಗಿದೆ. ಅದು ಅಕ್ರಮ ಮರಳು ಗಣಿಗಾರಿಕೆ ಇರಲಿ, ಮಟ್ಕಾ ದಂಧೆಯಿರಲಿ, ಡಿವಿಆರ್ ರಿಕ್ರಿಯೇಷನ್ ಕ್ಲಬ್‌ಗಳಂತಹ ಹೈಪ್ರೊಫೈಲ್ ಇಸ್ಪೀಟ್ ಜೂಜಾಟವೇ ಇರಲಿ, ಕಪ್ಪ ಕಾಣಿಕೆಗಳನ್ನು ಪಡೆದು ಅಕ್ರಮಗಳಿಗೆ ಬೆಂಗಾವಲಾಗಿ ನಿಂತುಬಿಡುತ್ತಾನೆ ಈ ಎಸ್ಪಿ.

ತನಿಖೆಯಿಲ್ಲದೇ ರೀಇನ್‌ಸ್ಟೇಟ್!

ರಾಯಚೂರು ಗ್ರಾಮೀಣ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಕೆ. ಬಸವರಾಜ ಮತ್ತು ಹಿಂದಿನ ಸಬ್‌ಇನ್ಸ್‌ಪೆಕ್ಟರ್ ಸಣಮನಿಯವರನ್ನು ಸದ್ಯದಲ್ಲೇ ರೀಇನ್‌ಸ್ಟೇಟ್ ಮಾಡಿ ಸೇವೆಗೆ ಸೇರಿಸಿಕೊಳ್ಳಲಾಗುತ್ತದೆ ಎಂಬ ಸುದ್ದಿಯೊಂದು ಹೊರಬಿದ್ದಿದೆ. ಆದರೆ, ಯಾವುದೇ ಸರ್ಕಾರಿ ನೌಕರರನ್ನು ಸಸ್ಪೆಂಡ್ ಮಾಡಿದ ಮೇಲೆ ಅವರನ್ನು ಮತ್ತೆ ಸೇವೆಗೆ ರೀಇನ್‌ಸ್ಟೇಟ್ ಮಾಡುವುದಕ್ಕೆ ಕೆಲವಾರು ನಿಯಮಗಳಿವೆ. ಸಸ್ಪೆಂಡ್ ಮಾಡಿರುವುದೇ ಅವರು ಕರ್ತವ್ಯಲೋಪ ಮಾಡಿದ್ದಾರೆ, ಅಪರಾಧ ಎಸಗಿದ್ದಾರೆ, ಅಶಿಸ್ತು ಪ್ರದರ್ಶಿಸಿದ್ದಾರೆ ಎಂಬಿತ್ಯಾದಿ ಗುರುತರವಾದ ಆರೋಪಗಳ ಕಾರಣಕ್ಕೆ. ಹಾಗಿರುವಾಗ, ಸಸ್ಪೆಂಡ್ ಆದ ತಕ್ಷಣ ಆರೋಪಿ ನೌಕರರ ಮೇಲೆ ಮೊದಲು ತನಿಖೆ ನಡೆಯಬೇಕು, ಆಮೇಲೆ ಚಾರ್ಜ್‌ಶೀಟ್ ಹಾಕಬೇಕು, ಆರೋಪದಲ್ಲಿ ಹುರುಳಿಲ್ಲ ಎಂಬುದು ತನಿಖೆಯಿಂದ ದೃಢಪಟ್ಟರಷ್ಟೇ ಸಸ್ಪೆಂಡ್ ಆದವರನ್ನು ವಾಪಾಸ್ಸು ಕೆಲಸಕ್ಕೆ ಸೇರಿಸಿಕೊಳ್ಳಬೇಕು. ಈ ಯಾವ ಪ್ರಕ್ರಿಯೆಯನ್ನೂ ಅನುಸರಿಸದೇ ಸಸ್ಪೆಂಡ್ ಆದವರನ್ನು ಮೂರೇ ದಿನದಲ್ಲಿ, ಒಂದೇ ವಾರದಲ್ಲಿ ಅಥವಾ ಒಂದೇ ತಿಂಗಳಲ್ಲಿ ಮತ್ತೆ ಸೇವೆಗೆ ಸೇರಿಸಿಕೊಂಡರೆ ಅದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗುತ್ತದೆ.

ಈ ಹಿಂದೆ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಬೆಬಿ ವಾಲೀಕಾರ್ ವ್ಯಕ್ತಿಯೊಬ್ಬನಿಗೆ ತನ್ನ ಠಾಣೆಯಲ್ಲಿ ದನಕ್ಕೆ ಬಡಿಯುವಂತೆ ಹೊಡೆಯುತ್ತಿದ್ದ ವೀಡಿಯೋ ಕ್ಲಿಪ್ಪಿಂಗ್ ದೃಶ್ಯ ಮಾಧ್ಯಮ ಮತ್ತು ಸೋಶಿಯಲ್ ಮೀಡಿಯಾಗಳಲ್ಲೆಲ್ಲಾ ಹರಿದಾಡಿ, ಮಾನವ ಹಕ್ಕು ಆಯೋಗ ತಲುಪಿ ಕೊನೆಗೆ ಈಶಾನ್ಯ ವಲಯ ಐಜಿಪಿ ಆ ಸಬ್‌ಇನ್ಸ್‌ಪೆಕ್ಟರ್ ಅವರನ್ನು ಅಮಾನತ್ತುಗೊಳಿಸಿದ್ದರು. ಹಾಗೆಯೇ, ಒಂದು ವಾರದೊಳಗೆ ಮತ್ತೆ ಸೇವೆಗೆ ಸೇರಿಸಿಕೊಂಡರು. ಪೊಲೀಸ್ ಇಲಾಖೆ ಅದೆಂಥ ನಿಯಮಗಳನ್ನು ಪಾಲಿಸುತ್ತಿದೆಯೋ ಆ ಭಗವಂತನೇ ಬಲ್ಲ.


ಎಸ್ಪಿ ನಾಗರಾಜನ ಕಟ್ಟಾಜ್ಞೆಯಂತೆ ದೊಡ್ಡ ದೊಡ್ಡ ತಿಮಿಂಗಲಗಳನ್ನು ಅಕ್ರಮ ಚಟುವಟಿಕೆಗಳನ್ನು ಮಾಡುವುದಕ್ಕೆ, ಮರಳಿನಂತಹ ಅತ್ಯಮೂಲ್ಯ ನೈಸರ್ಗಿಕ ಸಂಪತ್ತನ್ನು ಲೂಟಿ ಹೊಡೆಯುವುದಕ್ಕೆ ಬಿಡುವ ರಾಯಚೂರು ಪೊಲೀಸರು ಆಗಾಗ "ಕಪ್ಪ ಪುಟ್ಟ" ಸಣ್ಣಪುಟ್ಟ "ಸಾಧನೆ" ಮಾಡುತ್ತಾರೆ. ರಸ್ತೆ ಬದಿಯಲ್ಲಿ ಪಿಕ್‌ಪಾಕೇಟ್ ಮಾಡುವ ಕಳ್ಳರನ್ನು, ಮೋಟರ್‌ಬೈಕ್ ಕಳುವು ಮಾಡುವವರನ್ನು, ಸಿ.ಎಚ್.ಪೌಡರ್ ಬೆರೆಸಿ ಸೇಂದಿ ಮಾಡಿ ಮಾರುವವರನ್ನು ಹಿಡಿಯುವುದು ಇತ್ಯಾದಿ. ಜಿಲ್ಲೆಯ ಯಾವ ಮೂಲೆಯಲ್ಲಿಯೇ ಆದರೂ ಪೊಲೀಸರು ಇಂತಹ "ಸಾಧನೆಗಳನ್ನು" ಮಾಡಿದಾಗಲೆಲ್ಲಾ ಎಸ್ಪಿ ಸಾಹೇಬರು. ಆ ಪೊಲೀಸರನ್ನು ಮತ್ತು ಅವರು ಹಿಡಿದ ಕಳ್ಳರನ್ನು ಜಿಲ್ಲಾ ಕೇಂದ್ರದಲ್ಲಿರುವ ತನ್ನ ಆಫೀಸಿಗೆ ಕರೆಸಿಕೊಂಡು ಪತ್ರಿಕಾಗೋಷ್ಠಿ ನಡೆಸುತ್ತಾರೆ. ಅಲ್ಲಿ ಅವರು ಮಾತು ಶುರು ಮಾಡುವುದೇ "ನನ್ನ ಮಾರ್ಗದರ್ಶನದಲ್ಲಿ, ಸರ್ಕಲ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಗಳು ಈ ಸಾಧನೆ ಮಾಡಿದ್ದಾರೆ" ಎಂಬ ಆತ್ಮರತಿಯ ಉದ್ಘೋಷಣೆಯ ಮೂಲಕ.

ಇರಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಅವರ ಮಾರ್ಗದರ್ಶನ ಇದ್ದೀತು. ಸಾಧನೆಗಳನ್ನು ಕೆಳ ಹಂತದ ಅಧಿಕಾರಿಗಳು ಮಾಡಿದರೆ ಅದರ ಕ್ರೆಡಿಟ್ಟಿನ ಒಂದು ಭಾಗ ಅವರಿಗೂ ಹೋಗಲಿ. ಆದರೆ, ಕೆಳ ಹಂತದ ಪೊಲೀಸರು ಏನಾದರೂ ಗುರುತರವಾದ ಪ್ರಮಾದ ಎಸಗಿದ್ದರೆ ಅದಕ್ಕೂ ಇದೇ ತರ್ಕ ಅನ್ವಯವಾಗಬೇಕಲ್ಲವೆ? ಕೆಳ ಹಂತದ ಅಧಿಕಾರಿಗಳು ಮಾಡಿದ ಅಕ್ರಮಗಳ ಹೊಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ತಾನೂ ತನ್ನ ಪಾಲನ್ನು ಹೊರಬೇಕಲ್ಲವೆ?

ಒಲ್ಲೆ ಅಂತಾರೆ ಎಸ್ಪಿ ಸಾಹೇಬರು. ಮೊನ್ನೆ ಡಿವಿಆರ್ ರಿಕ್ರಿಯೇಷನ್ ಕ್ಲಬ್ ಎಂಬ ಜೂಜು ಅಡ್ಡೆಯ ಮೇಲೆ ಜಿಲ್ಲಾಧಿಕಾರಿ ನೇತೃತ್ವದ ಅಧಿಕಾರಿಗಳ ದಂಡು ದಾಳಿಯಿಟ್ಟು ಇಡೀ ಪೊಲೀಸ್ ಇಲಾಖೆ, ಅದರಲ್ಲೂ ವಿಶೇಷವಾಗಿ ಎಸ್ಪಿ ನಾಗರಾಜ್, ಜೂಜುಕೋರರೊಂದಿಗೆ ಹೇಗೆ ಶಾಮೀಲಾಗಿದ್ದಾರೆ ಎಂಬುದನ್ನು ಬಹಿರಂಗೊಳಿಸಿ ಪೊಲೀಸ್ ಇಲಾಖೆಯ ಮಾನಮರ್ಯಾದೆಗಳನ್ನು ಬೀದಿಯಲ್ಲಿ ಹರಾಜು ಹಾಕಿದಾಗ ಅದರ ಹೊಣೆಯನ್ನು ಎಸ್ಪಿ ನಾಗರಾಜ್ ಹೊತ್ತುಕೊಳ್ಳಲಿಲ್ಲ, ಬದಲಿಗೆ ತನ್ನ ವೈಫಲ್ಯಗಳನ್ನು ರಾಯಚೂರು ಗ್ರಾಮೀಣ ವೃತ್ತದ ಸರ್ಕಲ್ 'ಇನ್ಸ್‌ಪೆಕ್ಟರ್ ಕೆ. ಬಸವರಾಜನ ತಲೆಗೆ ಕಟ್ಟಿ ಅವನನ್ನು ದಾಳಿ ನಡೆದ ದಿನವೇ ಸಸ್ಪೆಂಡ್ ಮಾಡಿದರು. ಅದಾಗಿ ಎರಡು ದಿನದಲ್ಲೇ ಈ ಹಿಂದೆ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕಾರ್ಯನಿರ್ವಹಿಸಿ ಮೊನ್ನೆ ಒಂದು ತಿಂಗಳ ಹಿಂದೆ ಹಟ್ಟಿ ಠಾಣೆಗೆ ವರ್ಗಾವಣೆಯಾಗಿ ಹೋದ ಸಣಮನಿಯನ್ನು ಸಸ್ಪೆಂಡ್ ಮಾಡಿದರು. ಸಾಧನೆಗಳಿಗೆಲ್ಲಾ ನಾನೇ ಮಾರ್ಗದರ್ಶಕ, ವೈಫಲ್ಯಗಳಿಗೆಲ್ಲಾ ಅವರೇ ಹೊಣೆ ಎಂಬ ಎಸ್ಪಿ ನಾಗರಾಜನ ಧೋರಣೆ ಅಸಲಿಗೆ ರಾಯಚೂರು ಪೊಲೀಸರಲ್ಲಿ ತೀವ್ರ ಅಸಮಾಧಾನ ಮೂಡಿಸಿದ್ದು ಮಾತ್ರವಲ್ಲ, ಮುಂದೊಂದು ದಿನ ಅವನು ತಮ್ಮನ್ನೂ ಹೀಗೆಯೇ ಬಲಿಪಶು ಮಾಡುತ್ತಾನೆ ಎಂಬ ಆತಂಕವನ್ನೂ ಮೂಡಿಸಿದೆ. ಹೀಗಾಗಿ, ಆತ ಆದಷ್ಟು ಬೇಗ ವರ್ಗವಾಗಿ ಹೋಗಲಿ ಎಂದು ಅವರೆಲ್ಲಾ ಬಯಸುತ್ತಿದ್ದಾರೆ.

ಕಾನ್ಸ್‌ಟೇಬಲ್‌ಗಳೇ ಎಸ್ಪಿ ವಿರುದ್ಧ ತಿರುಗಿಬಿದ್ದರು!

ಸರ್ಕಲ್ ಇನ್ಸ್‌ಪೆಕ್ಟರ್ ಬಸವರಾಜ, ಸಬ್‌ಇನ್ಸ್‌ಪೆಕ್ಟರ್ ಸಣಮನಿಯವರನ್ನು ಸಸ್ಪೆಂಡ್ ಮಾಡಿದ್ದು ಸಾಕಾಗಲಿಲ್ಲ ಎಂಬಂತೆ ಮೂವರು ಕಾನ್ಸ್‌ಟೇಬಲ್‌ಗಳನ್ನೂ ಸಸ್ಪೆಂಡ್ ಮಾಡುವ ಹುನ್ನಾರದಲ್ಲಿ ಎಸ್ಪಿ ನಾಗರಾಜ ಇದ್ದ. ಆ ಮೂವರಲ್ಲಿ ಒಬ್ಬರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಆ ಮೂವರೂ ಕಾನ್ಸ್‌ಟೇಬಲ್‌ಗಳನ್ನು ತನ್ನ ಛೇಂಬರಿಗೆ ಕರೆಸಿ "ಸ್ವಲ್ಪ ದಿನದ ಮಟ್ಟಿಗೆ ಸಸ್ಪೆಂಡ್ ಮಾಡ್ತೀನಿ. ಸ್ವಲ್ಪ ತಣ್ಣಗಾದ ಮೇಲೆ ರೀಇನ್‌ಸ್ಟೇಟ್ ಮಾಡ್ತೀನಿ" ಅಂತ ಹೇಳಿದ್ದಾನೆ. ಎಸ್ಪಿ ಮಾತಿನಿಂದ ದಿಗಿಲುಗೊಂಡ ಆ ಮೂವರೂ ಸ್ವಲ್ಪ ದಿಟ್ಟತನ ತೋರಿ "ನಮ್ಮನ್ಯಾಕೆ ಸಸ್ಪೆಂಡ್ ಮಾಡ್ತೀರಿ? ನಾವೇನು ತಪ್ಪು ಮಾಡಿದ್ದೇವೆ?" ಅಂತ ಸ್ವಲ್ಪ ಏರುದನಿಯಲ್ಲೇ ಪ್ರಶ್ನಿಸಿದ್ದಾರೆ. ನಿವೃತ್ತಿಯ ಅಂಚಿನಲ್ಲಿರುವ ಕಾನ್ಸ್‌ಟೇಬಲ್ ಅಂತೂ "ನೀವು ಸಸ್ಪೆಂಡ್ ಮಾಡುವುದಾದರೆ ನಾನು ವಿಆರ್‌ಎಸ್ ತೆಗೆದುಕೊಂಡುಬಿಡುತ್ತೇನೆ" ಎಂದೂ ಸ್ಪಷ್ಟವಾಗಿ ಹೇಳಿದ್ದಾರೆ. ಎಸ್ಪಿ ನಾಗರಾಜ ಈ ಎದುರುತ್ತರವನ್ನು ನಿರೀಕ್ಷಿಸಿಯೇ ಇರಲಿಲ್ಲ. ಸಾಮಾನ್ಯವಾಗಿ ಕೆಳಹಂತದ ಅಧಿಕಾರಿಗಳು ಮೇಲಧಿಕಾರಿಗಳಿಗೆ ವಿಧೇಯರಾಗಿರುವ ಗುಲಾಮಿ ವ್ಯವಸ್ಥೆ ಪೊಲೀಸ್ ಇಲಾಖೆಯಲ್ಲಿದೆ. ಹೀಗಿರುವಾಗ ಯಃಕಶ್ಚಿತ್ ಕಾನ್ಸ್‌ಟೇಬಲ್‌ಗಳು ಎಸ್ಪಿಗೆ ತಿರುಗಿಬೀಳುತ್ತಾರೆಂದರೆ ಎಸ್ಪಿಯ ವರ್ಚಸ್ಸು ಅದೆಷ್ಟರಮಟ್ಟಿಗೆ ಕುಸಿದಿರಬಹುದು, ಎಸ್ಪಿ ವಿರುದ್ಧ ಪೊಲೀಸ್ ಇಲಾಖೆಯ ಕೆಳ ಅಧಿಕಾರಿಗಳಲ್ಲಿ ಅದೆಂತ ಸಿಟ್ಟಿರಬಹುದು? ತುಸು ಕೋಪಗೊಂಡಂತೆ ಕಂಡ ಎಸ್ಪಿ ನಾಗರಾಜ "ನೀವು ನಿಮ್ಮ ಡ್ಯೂಟಿ ಸರಿಯಾಗಿ ಮಾಡಿಲ್ಲ, ಡಿವಿಆರ್ ಕ್ಲಬ್‌ನಲ್ಲಿ ಅಕ್ರಮಗಳು ನಡೆಯುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ನಿಮ್ಮನ್ನು ಕರ್ತವ್ಯಲೋಪದ ಆರೋಪದ ಮೇಲೆ ಸಸ್ಪೆಂಡ್ ಮಾಡ್ತೀವಿ" ಅಂತ ಗದರಿಸಿದ್ದಾನೆ. ಅದಕ್ಕೂ ಜಗ್ಗದ ಕಾನ್ಸ್‌ಟೇಬಲ್‌ಗಳು "ನಾವು ಆ ಅಕ್ರಮಗಳನ್ನು ತಡೆಯೋಕೆ ನೀವೇ ಬಿಟ್ಟಿಲ್ಲ, ಆ ಕ್ಲಬ್ ಕಡೆ ತಲೆ ಹಾಕಬೇಡಿ, ಹೈಕೋರ್ಟ್ ಆರ್ಡರ್ ಇದೆ ಅಂತ ನಮ್ಮನ್ನೇ ದಿಕ್ಕುತಪ್ಪಿಸಿ ಆ ಕಡೆ ನಾವು ಹೆಜ್ಜೆ ಹಾಕದಂತೆ ಮಾಡಿದ್ದು ನೀವೆ. ಮೇಲಧಿಕಾರಿಗಳ ಆಜ್ಞೆಗಳನ್ನು ನಾವು ನಿಷ್ಠೆಯಿಂದ ಪಾಲಿಸಿದ್ದೇವಷ್ಟೆ. ಈಗ ನಿಮ್ಮ ತಪ್ಪನ್ನು ಮುಚ್ಚಿಟ್ಟು ಬಚಾವಾಗುವುದಕ್ಕೆ ನಮ್ಮನ್ನು ಬಲಿ ಕೊಟ್ಟರೆ ಹೇಗೆ?" ಎಂದು ಖಾರವಾಗಿಯೇ ಪ್ರಶ್ನಿಸಿದ್ದಾರೆ. ಇವರನ್ನು ಸಸ್ಪೆಂಡ್ ಮಾಡಿದರೆ ಇಲಾಖೆಯಲ್ಲಿ ಆಂತರಿಕ ಬಂಡಾಯ ಉದ್ಭವಿಸಬಹುದು, ಅದು ತನ್ನ ತಲೆದಂಡಕ್ಕೆ ಕಾರಣವಾಗಬಹುದು ಎಂದು ಹೆದರಿದ ನಾಗರಾಜ್ ಸದ್ಯ ಕಾನ್ಸ್‌ಟೇಬಲ್‌ಗಳನ್ನು ಸಸ್ಪೆಂಡ್ ಮಾಡುವ ಕೆಲಸಕ್ಕೆ ಹೋಗಿಲ್ಲ, ಇದು ನಾಗರಾಜನಿಗಾದ ಅತಿದೊಡ್ಡ ಹಿನ್ನಡೆ!


ಎಸ್. ಸಸಿಕಾಂತ್

ಬಸವರಾಜನ ಹೆಂಡತಿಯೂ ತಿರುಗಿಬಿದ್ದಳು!

ಡಿವಿಆರ್ ಕ್ಲಬ್ ದಾಳಿ ಪ್ರಕರಣದಲ್ಲಿ ಬಲಿಪಶುವಾದ ಸರ್ಕಲ್ ಇನ್ಸ್‌ಪೆಕ್ಟರ್ ಕೆ. ಬಸವರಾಜ ಸ್ವಲ್ಪ ಮುಂಗೋಪಿ. ಬೇಗ ಸಿಟ್ಟಾಗುತ್ತಾನೆ, ದಿಢೀರನೇ ಉದ್ವೇಗಕ್ಕೊಳಗಾಗುತ್ತಾನೆ.

ಸಿದ್ಧು ಇಂತಹ ತಪ್ಪು ಮಾಡದಿರಲಿ

ಎರಡು ದಿನಗಳ ಹಿಂದಷ್ಟೇ ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ಇನ್ನೆರಡು ದಿನದಲ್ಲಿ ವರ್ಗಾವಣೆಯಾಗುತ್ತಾರೆ ಎಂಬ ಗಾಳಿ ಸುದ್ದಿಯೊಂದು ಹಬ್ಬಿತ್ತು, ಡಿವಿಆರ್ ರಿಕ್ರಿಯೇಷನ್ ಕ್ಲಬ್ ಎಂಬ ಜೂಜು ಅಡ್ಡೆಯ ಮೇಲೆ ಧೈರ್ಯವಾಗಿ ದಾಳಿ ಮಾಡಿದ ಜಿಲ್ಲಾಧಿಕಾರಿಯ ಶ್ಲಾಘನೀಯ ಕೆಲಸ ಜನಮಾನಸದಲ್ಲಿ ಇನ್ನೂ ಹಸಿಯಾಗಿರುವಾಗಲೇ, ಇಂತಹದ್ದೊಂದು ಸುದ್ದಿ ಹಬ್ಬಿದ್ದು ನಿಜಕ್ಕೂ ಜನರನ್ನು ಆತಂಕಿತರನ್ನಾಗಿ ಮಾಡಿತ್ತು, ಮಾರನೆಯ ದಿನವೇ ಇಡೀ ರಾಯಚೂರನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಬೇಕೆಂದೂ ಕೆಲವು ಸಂಘಟನೆಗಳು, ವಕೀಲರು ಮತ್ತು ವಿದ್ಯಾರ್ಥಿಗಳು ಸಿದ್ಧತೆ ಮಾಡಿಕೊಳ್ಳಲಾರಂಭಿಸಿದ್ದರು. ಅಂತೂಇಂತೂ ಕೊನೆಗೆ ಅದೊಂದು ಗಾಳಿ ಸುದ್ದಿ ಎಂಬುದು ಜನರಿಗೆ ಮನವರಿಕೆಯಾಗಿ ಪ್ರತಿಭಟನೆಯ ಯೋಜನೆಗಳನ್ನು ಕೈಬಿಟ್ಟರು.


ನೇರವಾಗಿ ಜಿಲ್ಲಾಧಿಕಾರಿಯವರನ್ನೇ ಈ ಕುರಿತು ಪ್ರಶ್ನಿಸಿದಾಗ ತಮಗೆ ಅಂತಹ ಮಾಹಿತಿ ಏನೂ ಇಲ್ಲ ಎಂದರಲ್ಲದೇ ತನ್ನನ್ನು ವರ್ಗಾವಣೆ ಮಾಡುವ ಸಂಪೂರ್ಣ ಪರಮಾಧಿಕಾರ ಸರ್ಕಾರಕ್ಕಿದೆ, ನನ್ನನ್ನು ಎಲ್ಲಿಗೆ ವರ್ಗಾವಣೆ ಮಾಡಿದರೂ, ಯಾವ ಕೆಲಸ ಕೊಟ್ಟರೂ ದೇಶಕ್ಕಾಗಿ, ಜನರಿಗಾಗಿ ಪ್ರಾಮಾಣಿಕವಾಗಿ ದುಡಿಯುತ್ತೇನೆ ಎಂದರು.

ಜಿಲ್ಲಾಧಿಕಾರಿಯ ವರ್ಗಾವಣೆಯ ಸುದ್ದಿ ಕೇವಲ ಗಾಳಿ ಸುದ್ದಿಯಾಗಿರಲಾರದು ಎಂಬ ಅನುಮಾನ ಬಂದಿದ್ದರಿಂದ ಈ ಕುರಿತು ಉನ್ನತಮಟ್ಟದಲ್ಲಿ ಒಂದಿಷ್ಟು ಕೆದಕಿದಾಗ ನಮ್ಮ ಅನುಮಾನ ನಿಜವಾಯಿತು. ಜಿಲ್ಲಾಧಿಕಾರಿಯನ್ನು ವರ್ಗಾವಣೆ ಮಾಡುವ ಗಂಭೀರ ಪ್ರಯತ್ನಗಳನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮಾಡುತ್ತಿರುವುದು ನಿಜ. ಆದರೆ, ಈ ವರ್ಗಾವಣೆ ಪ್ರಯತ್ನಕ್ಕೂ, ಡಿವಿಆರ್ ಕ್ಲಬ್ ಮೇಲಿನ ಜಿಲ್ಲಾಧಿಕಾರಿಯ ದಾಳಿಗೂ ಯಾವುದೇ ಸಂಬಂಧ ಇಲ್ಲ, ಜಿಲ್ಲಾಧಿಕಾರಿಯಿಂದ ಒಂದೇ ಹೊಡೆತಕ್ಕೆ ಮೆತ್ತಗಾದ ಎಸ್ಪಿ ನಾಗರಾಜ ಕೂಡ ಜಿಲ್ಲಾಧಿಕಾರಿಯನ್ನು ಎತ್ತಂಗಡಿ ಮಾಡಿಸುವಷ್ಟು ಪ್ರಭಾವಶಾಲಿಯೇನಲ್ಲ.

ಹಾಗಿದ್ದರೆ ಜಿಲ್ಲಾಧಿಕಾರಿಯನ್ನು ಎತ್ತಂಗಡಿ ಮಾಡಿಸುವುದಕ್ಕೆ ಪ್ರಯತ್ನಿಸುತ್ತಿರುವ ಆ ಪಟ್ಟಭದ್ರ ಹಿತಾಸಕ್ತಿಗಳು ಯಾವು? ನಿಸ್ಸಂದೇಹವಾಗಿ ಮರಳು ಮಾಫಿಯ! ಎಸ್ಪಿ ನಾಗರಾಜ ಮತ್ತವನ ಪೊಲೀಸ್ ಇಲಾಖೆಯ ಬೆಂಗಾವಲಿನಲ್ಲಿ ದೇವದುರ್ಗ, ಮಾನವಿ ಮತ್ತು ರಾಯಚೂರು ತಾಲೂಕುಗಳಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಒಡಲನ್ನು ಅಕ್ರಮವಾಗಿ ಬಗೆದು ಮರಳು ಸಾಗಿಸುತ್ತಿದ್ದ ಲೂಟಿಕೋರರನ್ನು ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ಮತ್ತು ಸಹಾಯಕ ಆಯುಕ್ತ ಎಂ.ಪಿ. ಮಾರುತಿ ಸೇರಿಕೊಂಡು ಹೆಡೆಮುರಿಕಟ್ಟುತ್ತಿದ್ದಾರೆ. ಅಕ್ರಮ ಮರಳು ಗಣಿಗಾರಿಕೆಯು ಬಹುತೇಕ ಬಂದ್ ಆಗಿದ್ದರಿಂದ ಮಾಫಿಯಾಕ್ಕೆ ಬಹಳ ದೊಡ್ಡ ಆರ್ಥಿಕ ಹೊಡೆತ ಬಿದ್ದಿದೆ. ಹಾಗಾಗಿ, ಜಿಲ್ಲಾಧಿಕಾರಿಯನ್ನು ಎತ್ತಂಗಡಿ ಮಾಡುವುದಕ್ಕೆ ಗಂಭೀರ ಪ್ರಯತ್ನಗಳು ನಡೆದಿವೆ.


ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂತಹ ಚಾರಿತ್ರಿಕ ಪ್ರಮಾದ ಮಾಡಲಾರರು ಎಂಬ ಭರವಸೆ ನಾಡಿನ ಜನರಿಗಿದೆ. ಡಿ.ಕೆ. ರವಿಯ ಸಾವಿನ ಪ್ರಕರಣದಲ್ಲಿ ಸಿದ್ದರಾಮಯ್ಯ ಮತ್ತು ಸರ್ಕಾರ ತನ್ನದಲ್ಲದ ತಪ್ಪಿಗೆ ಬೆಲೆ ತೆತ್ತಿದೆ. ಈಗ ಡಿ.ಕೆ. ರವಿಯ ಬ್ಯಾಚ್‌ಮೇಟ್ ಮತ್ತು ಅವರ ಒಳ್ಳೆಯ ಸ್ನೇಹಿತ ಕೂಡ ಆಗಿರುವ ಹಾಗೂ ಅಷ್ಟೇ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿರುವ ಸಸಿಕಾಂತ್ ಸೆಂಥಿಲ್ ಅವರನ್ನು ವರ್ಗಾವಣೆ ಮಾಡಿದರೆ "ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳನ್ನು ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ" ಎಂಬ ಕಳಂಕ ಸರ್ಕಾರಕ್ಕೆ ಅಂಟುತ್ತದೆ. ಇಂತಹ ಒಂದು ಸಣ್ಣ ಅವಕಾಶಕ್ಕಾಗಿ ಕಾಯುತ್ತಿರುವ ವಿರೋಧ ಪಕ್ಷಗಳಿಗೆ ಸಿದ್ದಿ ಸರ್ಕಾರವನ್ನು ಉರುಳಿಸುವುದಕ್ಕೆ ಅದೇ ಒಂದು ಅಸ್ತ್ರವೂ ಆಗುತ್ತದೆ. ಅಂತಹ ಚಾರಿತ್ರಿಕ ತಪ್ಪನ್ನು ಸಿದ್ದು ಮಾಡದಿರಲಿ ಎಂದು ಆಶಿಸೋಣ.

ಸೀದಾ ಬೇರಿಗೆ ಕೈ!


ಮಾರುತಿ

ಡಿವಿಆರ್ ಜೂಜು ಅಡ್ಡೆಯ ಮೇಲೆ ದಾಳಿ ಮಾಡಿದ ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ಮತ್ತು ಸಹಾಯಕ ಆಯುಕ್ತ ಎಂ.ಪಿ. ಮಾರುತಿ ಮುಂದಿನ ತನಿಖೆ, ಕ್ರಮಗಳನ್ನೆಲ್ಲಾ ಪೊಲೀಸ್ ಇಲಾಖೆಗೆ ಬಿಟ್ಟುಬಿಟ್ಟಿದ್ದಾರೆ. ಆದರೆ, ಬೇರೆ ಮಾರ್ಗದಲ್ಲಿ ಕ್ಲಬ್ಬಿನ ಬೇರಿಗೆ ಕೈಹಾಕಿ ಅಲುಗಾಡಿಸುತ್ತಿದ್ದಾರೆ. ಕ್ಲಬ್ಬು ಇದ್ದ ಜಾಗ ಯಾರದು, ಅದನ್ನು ಯಾವಾಗ ನಾನ್ ಅಗ್ರಿಕಲ್ಚರ್ ಬಳಕೆಗೆ ಪರಿವರ್ತಿಸಿಕೊಳ್ಳಲಾಯ್ತು, ಪರಿವರ್ತನೆಯ ಸಮಯದಲ್ಲಿ ಹಾಕಲಾದ ಷರತ್ತುಗಳನ್ನು ಪಾಲಿಸಲಾಗಿದೆಯೇ, ಸಂಬಂಧಪಟ್ಟ ಗ್ರಾಮ ಪಂಚಾಯತಿಯಿಂದ ಕ್ಲಬ್ಬು ನಡೆಸುವುದಕ್ಕೆ ಅನುಮತಿ ಪಡೆಯಲಾಗಿದೆಯೇ, ತೆರಿಗೆ ಕಟ್ಟಲಾಗಿದೆಯೇ – ಹೀಗೆ ಸುಮಾರು ಅರವತ್ತು ಪ್ರಶ್ನೆಗಳನ್ನು ಹಾಕಿ ಕ್ಲಬ್ಬಿನವರಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಈ ಪ್ರಶ್ನೆಗಳನ್ನು ನೋಡಿಯೇ ಆ ಗ್ಯಾಂಬ್ಲರ್‌ಗಳೆಲ್ಲಾ ತಲೆ ತಿರುಗಿ ಬೀಳಬೇಕು. ಹಾಗಿವೆ ಅವು. ಅವುಗಳಿಗೆ ಸಮರ್ಪಕ ಉತ್ತರ ಸಿಗದಿದ್ದರೆ ಮತ್ತೊಂದಿಷ್ಟು ಕೇಸು ಜಡಿಯುವುದಕ್ಕೆ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದಾರೆ!

ಬಿ.ವಿ.ನಾಯಕ್‌ಗೊಂದು ಕಿವಿಮಾತು!


ಬಿ.ವಿ. ನಾಯಕ್


ರಾಯಚೂರಿನ ಲೋಕಸಭಾ ಸದಸ್ಯ ಬಿ.ವಿ. ನಾಯಕ್‌ಗೆ ನೆನಪಿದೆಯೋ ಇಲ್ಲವೋ ಗೊತ್ತಿಲ್ಲ, ಅವರು ಕಳೆದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದಾಗ ನಮ್ಮ ಈ "ಪತ್ರಿಕೆ" ಅವರ ಬೆಂಬಲಕ್ಕೆ ನಿಂತಿತ್ತು, ಅದಕ್ಕೆ ಕಾರಣ ಕೇಂದ್ರದಲ್ಲಿ ನರಹಂತಕ ಮೋದಿಗೆ ಒಂದು ಬಿಜೆಪಿ ಸಂಸದ ಕಡಿಮೆಯಾಗಲಿ ಎಂಬುದು ಒಂದಾದರೆ ಉಢಾಳತನ ಮತ್ತು ಊಳಿಗಮಾನ್ಯ ದರ್ಪಗಳ ಮೂರ್ತರೂಪದಂತಿದ ಬಿಜೆಪಿಯ ಕ್ಯಾಂಡಿಡೇಟ್ ಶಿವನಗೌಡ ನಾಯಕ ಗೆದ್ದರೆ ರಾಯಚೂರಿನ ನಾಗರಿಕರ, ಸರ್ಕಾರಿ ಅಧಿಕಾರಿಗಳ ಮೇಲಿನ ದೌರ್ಜನ್ಯ ಶೋಷಣೆಗಳು ಇನ್ನೂ ಹೆಚ್ಚಾಗುತ್ತವೆ ಎಂಬ ಆತಂಕ ಇನ್ನೊಂದು ಕಾರಣವಾಗಿತ್ತು. ನರೇಂದ್ರ ಮೋದಿಯ ಅಲೆಯಲ್ಲೂ ಬಿ.ವಿ. ನಾಯಕ್ ತಮ್ಮ ಸಂಬಂಧಿಯೂ ಆದ ಬಿಜೆಪಿಯ ಶಿವನಗೌಡನ ವಿರುದ್ಧ ಕೂದಲೆಳೆಯ ಅಂತರದಲ್ಲಿ ಗೆದ್ದದ್ದು ಈಗ ಇತಿಹಾಸ.

ಆದರೆ, ಸಂಸದನಾದ ಮೇಲೆ ತನ್ನದೇ ಜಾತಿಯ ಎಂ.ಎನ್.ನಾಗರಾಜನಂಥ ಭ್ರಷ್ಟಾತಿಭ್ರಷ್ಟ ಐಪಿಎಸ್ ಅಧಿಕಾರಿಯನ್ನು ರಾಯಚೂರು ಪೊಲೀಸ್ ವರಿಷ್ಠಾಧಿಕಾರಿಯಾಗಿ ತನಗೆ ಓಟು ಹಾಕಿದ ರಾಯಚೂರು ಜನರ ಮೇಲೆ ಕೂರಿಸುತ್ತಾರೆಂದು ಗೊತ್ತಿದ್ದರೆ ಪ್ರಾಯಶಃ ಪತ್ರಿಕೆಯೂ ಅವರ ಬೆಂಬಲಕ್ಕೆ ನಿಲ್ಲುತ್ತಿರಲಿಲ್ಲ, ಜನರೂ ಅವರಿಗೆ ಓಟು ಹಾಕುತ್ತಿರಲಿಲ್ಲ. ಎಂ.ಎನ್. ನಾಗರಾಜರನ್ನು ರಾಯಚೂರು ಎಸ್ಪಿಯಾಗಿ ಕರೆತಂದದ್ದು ಬಿ.ವಿ. ನಾಯಕರೇ ಎಂಬ ಸತ್ಯದ ಬಗ್ಗೆ ಯಾರಿಗೂ ಅನುಮಾನಗಳಿಲ್ಲ.

ನಾಗರಾಜ ಇಲ್ಲಿ ಎಸ್ಪಿಯಾದಷ್ಟು ದಿನವೂ ಆತ ಮಾಡುವ ಅದ್ವಾಡಿ ಮತ್ತು ಅಕ್ರಮ ಕೆಲಸಗಳು ಬಿ.ವಿ. ನಾಯಕರನ್ನು ಬದ್ನಾಮ್ ಮಾಡುತ್ತಲೇ ಇರುತ್ತವೆ. ನಾಗರಾಜ ಮಾಡಿದ ಪಾಪದ ಒಂದು ಪಾಲು ಬಿ.ವಿ. ನಾಯಕರಿಗೂ ತಟ್ಟುತ್ತಲೇ ಇರುತ್ತದೆ. ಆಗ ಮುಂದಿನ ಚುನಾವಣೆಯಲ್ಲಿ ಬಿ.ವಿ. ನಾಯಕರನ್ನು ಸೋಲಿಸುವುದಕ್ಕೆ ಮೋದಿಯ ಅಲೆಯ ಅವಶ್ಯಕತೆ ಇರುವುದಿಲ್ಲ, ಬದಲಿಗೆ, ಎಂ.ಎನ್. ನಾಗರಾಜ ಮಾಡಿದ ಅಕ್ರಮಗಳ ಪಾಪದ ಕೊಡವೇ ಸಾಕಾಗುತ್ತದೆ.

ಈಗಲೂ ಕಾಲ ಮಿಂಚಿಲ್ಲ, ಬಿ.ವಿ. ನಾಯಕ್ ಈ ಸತ್ಯವನ್ನು ಅರ್ಥಮಾಡಿಕೊಂಡು, ಸ್ವಜಾತಿಪ್ರೇಮವನ್ನು ಬದಿಗಿಟ್ಟು ನಾಗರಾಜನೆಂಬ ಕ್ರಿಮಿಯನ್ನು ಆದಷ್ಟು ಬೇಗ ಜಿಲ್ಲೆಯಿಂದ ಹೊರಗಟ್ಟುವುದೇ ಲೇಸು.

ಶಿವರಾಜ್ ಪಾಟೀಲ್‌ಗೆ 50 ಲಕ್ಷ ಆಫರ್!


ಶಿವರಾಜ್ ಪಾಟೀಲ್

ಡಿವಿಆರ್ ರಿಕ್ರಿಯೇಷನ್ ಕ್ಲಬ್ ಮೇಲಿನ ದಾಳಿಯ ಹಿಂದೆ ರಾಯಚೂರಿನ ಎಮ್ಮೆಲ್ಲೆ ಡಾ. ಶಿವರಾಜ್ ಪಾಟೀಲ್ ನೆರವೂ ಬಹಳಷ್ಟಿದೆ ಎಂಬ ಅಂಶ ಸ್ವಲ್ಪ ತಡವಾಗಿ ಬೆಳಕಿಗೆ ಬಂದಿದೆ. ಅಸಲಿಗೆ ಡಿವಿಆರ್ ಗ್ಯಾಂಬ್ಲಿಂಗ್ ಅಡ್ಡೆಯನ್ನು ಮುಚ್ಚಿಸುವುದಕ್ಕೆ ಎಮ್ಮೆಲ್ಲೆ ಬಹಳ ದಿನಗಳಿಂದ ಪ್ರಯತ್ನಿಸುತ್ತಿದ್ದರು. ಜಿಲ್ಲೆಯ ಹಿರಿಯ ರಾಜಕಾರಣಿ ಬೋಸರಾಜು ಕೂಡ ಡಿವಿಆರ್ ಕ್ಲಬ್ ಮುಚ್ಚುವುದನ್ನೇ ಬಯಸಿದ್ದರು. ಅದಕ್ಕೆ ಅವರದ್ದೇ ಆದ ಬೇರೆ ಬೇರೆ ಕಾರಣಗಳಿವೆ.

ಎಮ್ಮೆಲ್ಲೆ ಶಿವರಾಜ್ ಪಾಟೀಲ್ ಆ ಜೂಜು ಅಡ್ಡೆಯ ಮೇಲೆ ದಾಳಿ ಮಾಡಿ ಮುಚ್ಚರಿ ಅಂತ ಎಸ್ಪಿ ನಾಗರಾಜನಿಗೆ ಕನಿಷ್ಠ ಇಪ್ಪತ್ತು ಬಾರಿಯಾದರೂ ಹೇಳಿದ್ದರು. ದಿನಕ್ಕೊಂದು ಲಕ್ಷದಂತೆ ದುಡ್ಡಿನ ಮೊಟ್ಟೆಯನ್ನಿಡುತ್ತಿದ್ದ ಡಿವಿಆರ್ ಕೋಳಿಯನ್ನು ನಾಗರಾಜನಾದರೂ ಹೇಗೆ ಮುಚ್ಚಿಯಾನು? ಎಮ್ಮೆಲ್ಲೆಯ ಒತ್ತಾಯ ಮುಂದುವರಿಯುತ್ತಿದ್ದಂತೆ ಎಸ್ಪಿ ನಾಗರಾಜ ಡಿವಿಆರ್ ಕ್ಲಬ್ಬಿನ ಇನ್‌ಚಾರ್ಜ್ ಗ್ಯಾಂಬ್ಲರ್ ತಿಮ್ಮಾರೆಡ್ಡಿಗೌಡನನ್ನು ಕರೆಸಿ ಹೇಗಾದರೂ ಮಾಡಿ ಎಮ್ಮೆಲ್ಲೆ ಶಿವರಾಜ ಪಾಟೀಲನ ಬಾಯಿ ಮುಚ್ಚಿಸುವಂತೆ ಸಲಹೆ ಕೊಟ್ಟಿದ್ದ. ಅದಕ್ಕನುಗುಣವಾಗಿ ತಿಮ್ಮಾರೆಡ್ಡಿಗೌಡ ಶಿವರಾಜ್ ಪಾಟೀಲ್‌ಗೆ ಬರೋಬ್ಬರಿ 50 ಲಕ್ಷ ರೂಪಾಯಿ ಆಫರ್ ಕೊಟ್ಟಿದ್ದ, ಆದರೆ ಎಮ್ಮೆಲ್ಲೆ ಶಿವರಾಜ್ ಪಾಟೀಲ್, "ನನಗೆ ನಿಮ್ಮ ದುಡ್ಡು ಬೇಡ, ಆ ಜೂಜು ಅಡ್ಡೆ ಬಂದ್ ಆಗಬೇಕಷ್ಟೆ" ಎಂದು ಮುಖಕ್ಕೆ ಹೊಡೆದಂತೆ ಹೇಳಿದ್ದರು.

ನಂತರ ತಿಮ್ಮಾರೆಡ್ಡಿಗೌಡ ಕಳ್ಳದಾರಿ ಹಿಡಿದಿದ್ದಾನೆ. ಸೀದಾ ಜೆಡಿಎಸ್ ಕೌನ್ಸಿಲರ್ ಪವನ್ ಬಳಿ ಹೋಗಿ ಡೀಲ್ ಕುದುರಿಸಿದ್ದಾನೆ. ಪವನ್ ಎಷ್ಟು ದುಡ್ಡು ತಿಂದ ಎಂಬುದು ಗೊತ್ತಿಲ್ಲ. ಆದರೆ, ತಮ್ಮದೇ ಪಕ್ಷದ ಎಮ್ಮೆಲ್ಲೆ ಶಿವರಾಜ್ ಪಾಟೀಲ್ ಬಾಯಿ ಮುಚ್ಚಿಸುವ ಭರವಸೆ ಕೊಟ್ಟಿದ್ದಾನೆ. ಇಷ್ಟಾಗಿದ್ದೇ ತಡ ತಿಮ್ಮಾರೆಡ್ಡಿಗೌಡ ಕಂಡಕಂಡಲ್ಲಿ "ಎಮ್ಮೆಲ್ಲೆ ಶಿವರಾಜ್ ಪಾಟೀಲ್‌ಗೆ 50 ಲಕ್ಷ ಮುಟ್ಟಿದೆ, ಅದೊಂದು ಅಡೆತಡೆ ನಿವಾರಣೆಯಾಯಿತು," ಅಂತ ಹೇಳಿಕೊಂಡು ತಿರುಗಾಡಿದ್ದಾನೆ. ಅದು ಬಾಯಿಂದ ಬಾಯಿಗೆ ಹರಡಿ ಕೊನೆಗೆ ಶಿವರಾಜ್ ಪಾಟೀಲ್ ಕಿವಿಗೂ ಬಿದ್ದಿದೆ.

ತಿನ್ನಲಿಲ್ಲ, ಬಿಡಲಿಲ್ಲ ತನ್ನ ಇಮೇಜಿಗೆ ಕಳಂಕ ಬೀಳುತ್ತಿದೆಯಲ್ಲಾ ಎಂದುಕೊಂಡ ಎಮ್ಮೆಲ್ಲೆ ಸೀದಾ ಜಿಲ್ಲಾಧಿಕಾರಿಯ ಬಳಿ ಹೋಗಿ ಡಿವಿಆರ್ ಕ್ಲಬ್ಬಿನಲ್ಲಿ ನಡೆಯುವ ಅಕ್ರಮಗಳನ್ನೆಲ್ಲ ವಿವರಿಸಿದ್ದಾರೆ. ಅದಕ್ಕೆ ಜಿಲ್ಲಾಧಿಕಾರಿಯವರು "ಕ್ಲಬ್ಬಿನ ವಿರುದ್ಧ ಒಂದೆರಡು ಕಂಪ್ಲೇಂಟ್ ಕೊಡಿಸಿ, ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ" ಅಂದಿದ್ದಾರೆ. ಅದೇ ಪ್ರಕಾರ ಒಂದು ಕಂಪ್ಲೇಂಟ್ ದಲಿತ ಸಂಘರ್ಷ ಸಮಿತಿಯಿಂದ, ಇನ್ನೊಂದು ಕಂಪ್ಲೇಂಟ್ ಕರ್ನಾಟಕ ರಕ್ಷಣಾ ವೇದಿಕೆಯಿಂದ ಕೊಡಿಸಿದ್ದಾರೆ. ಕ್ಲಬ್ ಯರಮರಸ್‌ನಲ್ಲಿರುವುದರಿಂದ ಅಲ್ಲಿಯ ಸ್ಥಳೀಯ ನಿವಾಸಿಯೊಬ್ಬರಿಂದಲೂ ಒಂದು ಕಂಪ್ಲೇಂಟ್ ಕೊಡಿಸಿ ಅಂತ ಜಿಲ್ಲಾಧಿಕಾರಿ ಇನ್ನೊಂದು ಸಲಹೆ ಕೊಟ್ಟಿದ್ದಾರೆ. ಆ ಪ್ರಕಾರ ಶಿವರಾಜ್ ಪಾಟೀಲ್ ಅವರು ಯರಮರಸ್ ನಿವಾಸಿಯಾದ ಶಂಷಾ ಆಲಂ ಎಂಬ ಕೌನ್ಸಿಲರಿಂದ ಇನ್ನೊಂದು ಕಂಪ್ಲೇಂಟ್ ಕೊಡಿಸಿದ್ದಾರೆ. ಅಷ್ಟೇ. ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ಮತ್ತು ಸಹಾಯಕ ಆಯುಕ್ತ ಎಂ.ಪಿ. ಮಾರುತಿ ಮಹೂರ್ತ ಫಿಕ್ಸ್ ಮಾಡಿ ದಾಳಿಯಿಟ್ಟಿದ್ದಾರೆ.

...ಸಿಟ್ಟಿನ ಕೈಗೆ ಬುದ್ಧಿಕೊಟ್ಟು ಕೆಲವು ಅಚಾತುರ್ಯಗಳನ್ನೂ ಮಾಡುತ್ತಾನೆ. ಆತನ ಶಾರ್ಟ್ ಟೆಂಪರ್ ಪೊಲೀಸ್ ಇಲಾಖೆಯಲ್ಲಿ ಎಲ್ಲರಿಗೂ ಗೊತ್ತಿರುವ ವಿಷಯ. ಡಿವಿಆರ್ ಕ್ಲಬ್‌ನ ಅಕ್ರಮಗಳ ಹೊಣೆಯನ್ನು ತನ್ನೊಬ್ಬನ ತಲೆಗೆ ಕಟ್ಟಿ ಎಸ್ಪಿ ನಾಗರಾಜ್ ಮಾತ್ರ ಸೇಫಾಗಿದ್ದು ಆತನಿಗೆ ತಡೆದುಕೊಳ್ಳಲಾಗಿಲ್ಲ, ನಡುನೀರಲ್ಲಿ ಕೈಬಿಟ್ಟ ಎಸ್ಪಿ ನಾಗರಾಜನ ಮೇಲಿನ ಸಿಟ್ಟು, ಆಕ್ರೋಶ, ಮೋಸಹೋದ ಭಾವ, ಉದ್ವೇಗ ಎಲ್ಲವೂ ಅವನಲ್ಲಿ ಒಟ್ಟಿಗೆ ಕಟ್ಟೆಯೊಡೆದಿದ್ದವು. ಸಸ್ಪೆಂಡಾದ ಸುದ್ದಿ ಕಿವಿಗೆ ಬಿದ್ದಿದ್ದೇ ತಡ ತನ್ನ ಸರ್ವೀಸ್ ರಿವಾಲ್ವಾರನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡು ಹೆಂಡತಿಗೂ ಹೇಳದೆ ಮನೆಯಿಂದ ಹೊರಬಿದ್ದ. ಎಲ್ಲಿಗೆ ಹೋದ, ಏಕೆ ಹೋದ ಯಾರಿಗೂ ಏನೂ ಗೊತ್ತಿಲ್ಲ. ಆತನ ಮುಂಗೋಪ ಮತ್ತು ಉದ್ವೇಗದ ಸ್ವಭಾವಗಳನ್ನು ಅರಿತಿದ್ದ ಆತನ ಹೆಂಡತಿ ಮತ್ತು ಸ್ನೇಹಿತರಿಗೆ ಆತ ರಿವಾಲ್ವಾರ್‌ನೊಂದಿಗೆ ಹೋಗಿದ್ದು ಇನ್ನಷ್ಟು ಆತಂಕ ಮೂಡಿಸಿತ್ತು, ಹೆಂಡತಿಯ ಫೋನೂ ಎತ್ತಲಿಲ್ಲ, ಸ್ನೇಹಿತರ ಫೋನೂ ತೆಗೆಯಲಿಲ್ಲ, ಸಹೋದ್ಯೋಗಿಗಳ ಕರೆಯನ್ನೂ ಸ್ವೀಕರಿಸಲಿಲ್ಲ. ಆತಂಕಿತಳಾದ ಅವನ ಹೆಂಡತಿ ನೇರವಾಗಿ ಎಸ್ಪಿ ನಾಗರಾಜನಿಗೆ ಕಾಲ್ ಮಾಡಿ ವಿಷಯ ತಿಳಿಸಿದ್ದಾಳೆ. ಮಾತ್ರವಲ್ಲ, ತನ್ನದಲ್ಲದ ತಪ್ಪಿಗೆ ಗಂಡ ಬಲಿಯಾಗಿದ್ದು ಆಕೆಯ ಪಿತ್ತವನ್ನೂ ನೆತ್ತಿಗೇರಿಸಿದ್ದರಿಂದ ಎಸ್ಪಿ ನಾಗರಾಜ್‌ಗೂ ನೇರವಾಗಿ ವಾರ್ನ್ ಮಾಡಿದ್ದಾಳೆ. "ಡಿವಿಆರ್ ಕ್ಲಬ್‌ನಿಂದ ಯಾರ್‍ಯಾರು ದುಡ್ಡು ತಿಂದಿದ್ದಾರೆ, ಯಾರ್‍ಯಾರಿಗೆ ಎಷ್ಟೆಷ್ಟು ಹಣ ಪ್ರತೀ ತಿಂಗಳು ಸಂದಾಯವಾಗುತ್ತಿತ್ತು, ಆ ಅಕ್ರಮಗಳಿಗೆ ಕಡಿವಾಣ ಹಾಕದಂತೆ ಕೆಳಹಂತದ ಪೊಲೀಸರನ್ನು ತಡೆದಿದ್ದಾರು ಎಂಬುದನ್ನೆಲ್ಲಾ ನನ್ನ ಗಂಡ ನನಗೆ ಹೇಳಿದ್ದಾರೆ. ಅದನ್ನೆಲ್ಲಾ ನಾನು ಬಹಿರಂಗ ಮಾಡ್ತೇನೆ. ಅವರೀಗ ರಿವಾಲ್ವಾರ್ ಎತ್ತಿಕೊಂಡು ಹೋಗಿದ್ದಾರೆ. ಅವರಿಗೆ ಏನಾದ್ರೂ ಹೆಚ್ಚೂ ಕಡಿಮೆ ಆದ್ರೆ ಅದಕ್ಕೆ ನೀವೇ ಹೊಣೆ" ಎಂದು ಹೇಳಿ ಫೋನ್ ಇಟ್ಟಿದ್ದಾಳೆ.

ಆಗಲೇ ಕರೆಂಟ್ ಹೊಡೆಸಿಕೊಂಡವನಂತೆ ಕುಳಿತಿದ್ದ ಎಸ್ಪಿ ಸಾಹೇಬರು ನಿಜಕ್ಕೂ ಬೆದರಿಬಿಟ್ಟರು. ದಕ್ಷ ಐಎಎಸ್ ಅಧಿಕಾರಿ ಡಿ.ಕೆ. ರವಿಯ ಸಾವಿನಿಂದ ಇಡೀ ರಾಜ್ಯವೇ ತತ್ತರಿಸಿದ್ದು ಇನ್ನೂ ಹಸಿಯಿರುವಾಗಲೇ ಬಸವರಾಜನೂ ಏನಾದರೂ ಅನಾಹುತ ಮಾಡಿಕೊಂಡರೆ ತನ್ನ ಕತೆ ಮುಗೀತು ಅಂದುಕೊಂಡ ನಾಗರಾಜ್ ಕೂಡಲೇ ಬಸವರಾಜನಿಗೆ ಪದೇ ಪದೇ ಫೋನ್ ಮಾಡಿದರೆ ಆತ ಫೋನೇ ಎತ್ತಲಿಲ್ಲ, ಗಲಿಬಿಲಿಗೊಂಡ ಎಸ್ಪಿ ನಾಗರಾಜ್ ಈಶಾನ್ಯ ವಲಯದ ಐಜಿಪಿ ಸುನೀಲ್ ಅಗರವಾಲ್‌ಗೆ ಫೋನ್ ಹಾಕಿ ವಿಷಯ ತಿಳಿಸಿದ್ದಾರೆ. ಅವರೂ ತಕ್ಷಣವೇ ಬಸವರಾಜನಿಗೆ ಫೋನ್ ಮಾಡ್ತಿದರೆ ಅವರ ಫೋನನ್ನೂ ಆತ ತೆಗೆದಿಲ್ಲ, ಅದೆಷ್ಟು ಫೋನ್ ಮಾಡಿದರೂ ಆ ಕಡೆಯಿಂದ ಉತ್ತರ ಬರದಿದ್ದಾಗ ಬೆದರಿಹೋದ ಅಗರ್‌ವಾಲ್ ಸಾಹೇಬರು ಬೆಂಗಳೂರಿನಲ್ಲಿರುವ ಪೊಲೀಸ್ ಮಹಾನಿರ್ದೇಶಕರಿಗೆ ವಿಷಯ ಮುಟ್ಟಿಸಿ ಬಸವರಾಜನ ಫೋನ್ ನಂಬರ್ ಕೊಟ್ಟಿದ್ದಾರೆ. ಡಿಜಿಪಿಯ ಫೋನನ್ನು ಬಸವರಾಜ್ ಎತ್ತಿ ಇಡೀ ಡಿವಿಆರ್ ಕ್ಲಬ್ ಕರ್ಮಕಾಂಡವನ್ನೆಲ್ಲಾ ಆ ಅಧಿಕಾರಿಗೆ ವಿವರಿಸಿದ್ದಾರೆ. ಅದಕ್ಕೆ ಪ್ರತಿಯಾಗಿ ಡಿಜಿಪಿ "ಈಗ ನೀನು ನೇರವಾಗಿ ಗುಲ್ಬರ್ಗಾದಲ್ಲಿರುವ ಐಜಿಪಿ ಸುನೀಲ್ ಅಗರ್‌ವಾಲ್ ಆಫೀಸಿಗೆ ಹೋಗು. ಅಲ್ಲಿ ನಿಮ್ಮ ಹೆಂಡತಿ ಕಾಯುತ್ತಿದ್ದಾರೆ. ಶೀಘ್ರದಲ್ಲೇ ನಿಮ್ಮ ಸಸ್ಪೆಂಡ್ ಆರ್ಡರ್ ಹಿಂಪಡೆದು ನಿಮ್ಮನ್ನು ಅದೇ ವೃತ್ತಕ್ಕೆ ರೀಇನ್‌ಸ್ಟೇಟ್ ಮಾಡುತ್ತೇವೆ" ಎಂಬ ಖಚಿತ ಭರವಸೆ ಕೊಟ್ಟ ಮೇಲಷ್ಟೇ ಬಸವರಾಜ ಗುಲ್ಬರ್ಗಾದ ಐಜಿಪಿ ಆಫೀಸಿಗೆ ಹೋಗಿ ಹೆಂಡತಿಯನ್ನು ಭೇಟಿಯಾಗಿದ್ದಾರೆ! ಆಗ ಮಾತ್ರವೇ ಎಸ್ಪಿ ನಾಗರಾಜನಿಗೆ ಹೋದ ಜೀವ ಮರಳಿ ಬಂದದ್ದು!!

ಅಂದಹಾಗೆ, ಗೃಹಸಚಿವ ಕೆ.ಜೆ.ಜಾರ್ಜ್ ಅವರ ಮಗನ ಮದುವೆ ಆಫ್ರಿಕಾದ ಅದ್ಯಾವುದೋ ಚರ್ಚ್‌ನಲ್ಲಿ ನಡೆಯುತ್ತಿದೆಯಂತೆ. ಅಲ್ಲಿಗೆ ಗೃಹಮಂತ್ರಿ ಹೋಗಿದ್ದಾರೆ. ಅವರು ಮರಳಿದ ಮೇಲೆ ಎಂ.ಎನ್.ನಾಗರಾಜ್‌ಗೆ ಒಂದು ಗತಿ ಕಾಣಿಸಲಾಗುತ್ತದೆ ಎಂದು ಗೃಹ ಇಲಾಖೆಯ ಉನ್ನತ ಮೂಲಗಳು ಅಭಿಪ್ರಾಯಪಟ್ಟಿವೆ.

ಎಸ್ಪಿ ನಾಗರಾಜ್ ಬಳ್ಳಾರಿ, ಚಿತ್ರದುರ್ಗ ಮತ್ತು ಈಗ ರಾಯಚೂರಿನಲ್ಲಿ ಮಾಡಿದ, ಮಾಡುತ್ತಿರುವ ಬಾನಗಡಿಗಳನ್ನು ಬಿಚ್ಚುತ್ತಾ ಹೋದರೆ ಅಕ್ರಮ ಮರಳು ಗಣಿಗಾರಿಕೆಗೆ ಬೆಂಗಾವಲಾಗಿ ನಿಂತಿದ್ದು, ಬಳ್ಳಾರಿಯಲ್ಲಿ ಗಣಿಧಣಿಗಳ ಅಕ್ರಮಗಳಿಗೆ ಬೆಂಗಾವಲಾಗಿ ನಿಂತಿದ್ದು, ಕುರಿ ಫಾರ್ಮ ಮಾಡಿಕೊಂಡಿದ್ದು, ಎಲ್‌ಐಸಿ ಏಜಂಟಗಿರಿ ಮಾಡುತ್ತಿರುವುದು ಮುಂತಾದ ನಾಗಪುರಾಣಗಳು ಒಂದೊಂದಾಗಿ ಹೊರಬರುತ್ತವೆ. ಅವನ್ನೆಲ್ಲಾ ಬರೆಯುವುದಕ್ಕೆ ಇಲ್ಲೀಗ ಜಾಗ ಇಲ್ಲ ಉಳಿದದ್ದನ್ನು ಮುಂದೆ ನೋಡೋಣ.

■ ವರದಿಗಾರ

ಮೋದಿಯ ಅಳ್ವಿಕೆಯೂ, ಸಮಸ್ಯೆಗಳ ನಿವಾರಣೆಯ ಶೈಲಿಯೂ!

ವಿದ್ಯುತ್ ಉಳಿಸಲು ಹುಣ್ಣಿಮೆಯ ರಾತ್ರಿ ಬೀದಿ ದೀಪಗಳನ್ನು ಆಫ್ ಮಾಡಿ!

ಮಳೆಗಾಲದಲ್ಲಿ ನೀರನ್ನು ಉಳಿಸಲು ಸ್ನಾನ ಮಾಡದೆ ಹೊರಗೆ ನಿಲ್ಲಿ!

ಸೌನಾಗೆ ಹೋಗದೆ ಬೆವರು ಹರಿಸಲು ಬಿಸಿಲಿನಲ್ಲಿ ವಾಕ್ ಮಾಡಿ!

ಈಜುಕೊಳವನ್ನು ತುಂಬಿಸುವ ಬದಲು ಗಂಗಾನದಿಯಲ್ಲಿ ಕಸ ಮತ್ತು ಹೆಣಗಳ ನಡುವೆ ಈಜಿ.

ದೇಶವನ್ನು ಸ್ವಚ್ಛವಾಗಿಡಲು ನಿಮ್ಮ ಕುಟುಂಬದ ಸದಸ್ಯರಿಗೆ ಉದ್ದನೆ ಕೋಲಿರುವ ಪೊರಕೆಗಳನ್ನು ಖರೀದಿಸಿರಿ!

ವಿದೇಶಗಳಿಗೆ ಪ್ರವಾಸ ಕೈಗೊಂಡು ಹಣ ಪೋಲು ಮಾಡುವ ಬದಲು ಪ್ರಧಾನಿ ವಿದೇಶಗಳಿಗೆ ಕೊಡುವ ಭೇಟಿಗಳನ್ನು ಟಿವಿ ಪರದೆಯ ಮೇಲೆ ಆನಂದಿಸಿ!


ಅಗ್ಗದ ಮನರಂಜನೆ ಪಡೆಯಲು ಧಾರ್ಮಿಕ ಅಲ್ಪಸಂಖ್ಯಾತರನ್ನು ಮತ್ತು ಎಲ್‌ಜಿಬಿಟಿ ಸಮುದಾಯದವರನ್ನು ನಿಂದಿಸಿ ಬೆದರಿಕೆ ಹಾಕಿ!

ರಾಷ್ಟ್ರೀಯವಾದವನ್ನು ಆನಂದಿಸಲು ಅರ್ನಬ್ ಗೋಸ್ವಾಮಿ ಪಾಕಿಸ್ತಾನಿಗಳನ್ನು ಬೈಯುವುದನ್ನು ನೋಡಿ ಅಥವಾ ಪ್ರಧಾನಿ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ಕೊಟ್ಟ ಭಾಷಣವನ್ನು ವೀಕ್ಷಿಸಿ!

ದುಬಾರಿ ಫ್ಯಾಷನ್ ಶೋ ನೋಡುವ ಬದಲು ದಿನಕ್ಕೆ ಐದು ಬಾರಿ ತನ್ನ ಉಡುಪುಗಳನ್ನು ಬದಲಾಯಿಸುವ ಮೋದಿಯ ಫ್ಯಾಷನ್ ಶೋಅನ್ನು ಪುಕ್ಕಟೆಯಾಗಿ ಆನಂದಿಸಿ!

ಬಡತನದಿಂದ ಸುಖದ ಸುಪ್ಪತ್ತಿಗೆ ಏರಿದ ಕತೆಗಳನ್ನು ಓದುವ ಬದಲು ಗೌತಮ್ ಅದಾನಿ ಅದೆಷ್ಟು ಸುಲಭವಾಗಿ ಬೋರಿವಲಿ ಎಂಬ ಸ್ಲಮ್ ಪ್ರದೇಶದಿಂದ ದೇಶದ ಶ್ರೀಮಂತರ ಪಟ್ಟಿಗೆ ಏರಿದ ಎಂಬ ಕತೆಯನ್ನು ಓದಿ!

ಸ್ನೇಹಿತರು ಬಾಡೂಟ ಕೊಡಿಸು ಎಂದು ದುಂಬಾಲು ಬಿದ್ದಾಗ ಅವರಿಗೆ ಇಡ್ಲಿ-ವಡೆ ಕೊಡಿಸಿ ಸಸ್ಯಾಹಾರ ಆರೋಗ್ಯಕ್ಕೆ ಹಾನಿಕಾರಕ ಎಂದು ಉಪದೇಶ ನೀಡಿ!



ನಿಮ್ಮ ಬಡ ಸಂಬಂಧಿಕರ ಆರೋಗ್ಯ ಕೆಟ್ಟಾಗ ಅವರಿಗೆ ನೆರವಾಗಲು ಹಣವನ್ನಲ್ಲ, ಗೋಮೂತ್ರವನ್ನು ಕೊಡಿ!

ನಿಮ್ಮ ಹೊಲದಲ್ಲಿರುವ ಬೆಳೆಗಳ ಮೇಲೆ ಕೀಟಗಳು ದಾಳಿ ಮಾಡಿದರೆ ಬೆಳೆಗಳಿಗೂ ಗೋಮೂತ್ರವನ್ನು ಸಿಂಪಡಿಸಿ!

ರೈತರು ತಮ್ಮ ಕಷ್ಟಗಳ ಬಗ್ಗೆ ಹೇಳಿಕೊಂಡರೆ, ಅವರು ಗೋಮಾತೆಯನ್ನು ಸಾಕಿ, ದಿನನಿತ್ಯ ಅದನ್ನು ಪೂಜಿಸಿದರೆ ಕಾಮಧೇನುವೇ ಒಲಿದು ನಿಮ್ಮ ಎಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆಂದು ಹೇಳಿ!

ಗೋವನ್ನು ಪೂಜಿಸಿದರೂ, ಗೋಮೂತ್ರವನ್ನು ಕುಡಿದರೂ ತಮ್ಮ ಕಷ್ಟಗಳು ಬಗೆಹರಿಯುತ್ತಿಲ್ಲ ಎಂದು ಬಡ ರೈತರು ದೂರಿತ್ತರೆ, ಅವರ ಭೂಮಿಯನ್ನೇ ಕಸಿದುಕೊಂಡು ಅವರನ್ನು ಸಮಸ್ಯಾಮುಕ್ತರನ್ನಾಗಿ ಮಾಡಿ!

ಮಗಳು ಹುಟ್ಟಿದರೆ ಸಸಿಯೊಂದನ್ನು ನೆಟ್ಟು ಆಕೆಯ ಮದುವೆಗೆ ಬೇಕಾದ ಆರ್ಥಿಕ ವೆಚ್ಚಕ್ಕೆ ಈಗಲೇ ಬಂಡವಾಳ ಹೂಡಿ!

ಮಗ ಹುಟ್ಟಿದರೆ ಆತನಿಗೊಂದು ಟೀ ಅಂಗಡಿ ಹಾಕಿ ಕೊಟ್ಟು ಆತ "ಮಿತ್ರೊ.." ಎಂದು ಭಾಷಣ ಬಿಗಿಯಲು ಆರಂಭಿಸುವ ದಿನಕ್ಕಾಗಿ ಕಾಯಿರಿ!

ಪ್ಲಾಸ್ಟಿಕ್ ಸರ್ಜನ್ ಆಗಬೇಕೆಂಬುದು ನಿಮ್ಮ ಕನಸಾಗಿದ್ದರೆ ಆನೆಯ ಸೊಂಡಿಲು ಕತ್ತರಿಸಿ ಅದನ್ನು ನಿಮ್ಮ ರೋಗಿಯ ಮುಖಕ್ಕೆ ಜೋಡಿಸಿ!

ನಿಮ್ಮ ಮೊಬೈಲ್ ಚಾರ್ಜ್ ಮಾಡಲು ಅದನ್ನು ಮಿಂಚಿನ ಹೊಡೆತಕ್ಕೆ ತಾಗಿಸಿ!

ಮೋದಿ ಕೊಟ್ಟಿದ್ದ 15 ಲಕ್ಷ ರೂಪಾಯಿಗಳ ಭರವಸೆಯನ್ನು ಈಡೇರಿಸಿಕೊಳ್ಳಲು ಕಾಮನಬಿಲ್ಲು ಅಂತ್ಯಗೊಳ್ಳುವ ಜಾಗದಲ್ಲಿ ಅಗೆಯಿರಿ!

ಕೊನೆಯದಾಗಿ, 'ಅಚ್ಛೆ ದಿನ್' ಬರಲು ಮೋದಿಯ ಅಧಿಕಾರದ ಅಂತ್ಯಕ್ಕಾಗಿ ಕಾಯಿರಿ!!!!

■ ಬ್ರಿಜೇಶ್ ಕಲ್ಲಪ್ಪ


ಕೊನಗವಳ್ಳಿಯಲ್ಲಿ ಲಂಕೇಶ್ ನೆನಪು

ಲಂಕೇಶರ ಹುಟ್ಟೂರಾದ ಕೊನಗವಳ್ಳಿಯಲ್ಲಿ ಅವರ 80ನೇ ಜನ್ಮದಿನಾಚರಣೆಯನ್ನು ಊರಿನ ಯುವಕರು ಇತ್ತೀಚಿಗೆ ತುಂಬ ಸಂಭ್ರಮದಿಂದ ಆಚರಿಸಿದರು. ಲಂಕೇಶ್ ತೀರಿಕೊಂಡು 15 ವರ್ಷಗಳಾದ ನಂತರ ಕೊನಗವಳ್ಳಿಯ ಹೊಸ ತಲೆಮಾರಿನ ಹುಡುಗರಿಗೆ ತಮ್ಮೂರಿನಲ್ಲಿ ಹುಟ್ಟಿದ್ದ ಲಂಕೇಶ್ ಎಂಬ ವಿಸ್ಮಯದ ಬಗ್ಗೆ ಜ್ಞಾನೋದಯವಾಗಿದ್ದು ಎದ್ದು ಕಾಣುತ್ತಿತ್ತು. ಎಲ್ಲಾ ಯುವಕರು ಲಂಕೇಶರ ಚಿತ್ರವಿರುವ ಟಿ ಶರ್ಟ್ ತೊಟ್ಟು, ಊರಿಗೆ ಬಂದ ಅತಿಥಿಗಳನ್ನು ಬರಮಾಡಿಕೊಳ್ಳುವುದರಿಂದ ಹಿಡಿದು, ಲಂಕೇಶರ ಭಾವಚಿತ್ರ ಮೆರವಣಿಗೆ, ಡೊಳ್ಳು ಕುಣಿತ, ಊಟದ ಸಂಭ್ರಮ, ಎಲ್ಲದರಲ್ಲೂ ತಲ್ಲೀನರಾಗಿದ್ದರು. ಮುಂದೆ ಲಂಕೇಶ್ ನೆನಪಿಗಾಗಿ ಏನಾದರೂ ಮಾಡಬೇಕೆಂಬ ಅದಮ್ಯ ಉತ್ಸಾಹದಿಂದ ಕುಣಿದರು. ಆದರೆ ವಯಸ್ಸಾದವರೇ ಯಾಕೋ ಲಂಕೇಶರನ್ನು ತಮ್ಮ ಜಾತಿ ಗುಂಪಿಗೆ ಬಗಿಯುವ ಹರಸಾಹಸ ಮಾಡಿದರು.

ಲಂಕೇಶರ ಕಾರ್ಯಕ್ರಮ ಎಂದಕೂಡಲೇ ಎಲ್ಲಿದ್ದರೂ ಹಾಜರಾಗುವ ಶಾಮಣ್ಣನವರು ಬರಲಾರದ ಸ್ಥಿತಿಯಲ್ಲಿದ್ದರೂ ಕಾರ್ಯಕ್ರಮದ ಸಮಯಕ್ಕೆ ಸರಿಯಾಗಿ ಹಾಜರಾಗಿ, ಎಂದಿನಂತೆ ಊರಿನ ನವನಾರು ಸಂದುಗಳನ್ನು ಕ್ಯಾಮರಾದಲ್ಲಿ ಕ್ಲಿಕ್ಕಿಸತೊಡಗಿದರು. ಕರಿಯವ್ವನ ಗುಡಿ ಫೋಟೋ ತೆಗೆಯಲು ಹೋದಾಗ ಇಬ್ಬರು ವಯಸ್ಸಾದ ದಂಪತಿಗಳು ಕರಿಯವ್ವನಿಂದ ಹೂ ಕೇಳುತ್ತಿದ್ದರು. ಗಂಡ ತನ್ನ ಕಷ್ಟ ಸುಖವನ್ನು ಕನಿಕರದ ದನಿಯಲ್ಲಿ ಗೋಗರೆಯುತ್ತಿದ್ದರೆ, ಹೆಂಡತಿ ಜೋರು ಮಾಡುತ್ತಿದ್ದಳು.

"ನಾವು ಮಾಡೋವ್ನೊಟು ಮಾಡಿದ್ದಿವಿ. ಯಾವ ಹರಕೆನೂ ಉಳಿಸಿಗೊಂಡಿಲ್ಲ. ಅದ್ಯಾಕಂಗೆ ಸತಾಯಿಸ್ತಾಯಿದ್ದಿ. ಆಯ್ತದೆ ಅಂದ್ರೆ ಬಲಗಡೆ, ಇಲ್ಲ ಅಂದ್ರೆ ಯಡಗಡೆ ಕೊಡು. ಅನುಮಾನ ಯಾಕೆ ಅಂತಿನಿ? ಏನೇ ಕಷ್ಟ ಬಂದ್ರು ಪೂಜೆ ಮಾಡಿಕೊಂಡು ಯಡೆ ಮಾಡಿಕೊಂಡು ಬಂದನಲ್ಲಾ ಅದ್ಕೆ ಅಂಗೆ ಆಟ ಆಡುಸ್ತಾಯಿದ್ದಿಯೇನೊ? ನನಿಗೂ ಗೊತ್ತದೆ ನಿನಿಗೇನು ಮಾಡಬೇಕು ಅಂತ" ಎನ್ನುತ್ತಿರುವಾಗ, ಒಂದು ಹೂ ಮುಡಿಯಿಂದ ಬಿದ್ದು ಸೊಂಟದ ಭಾಗದಲ್ಲಿ ಸಿಕ್ಕಿಕೊಂಡಿತು. ಸಿಟ್ಟಾದ ಆ ಯಮ್ಮ "ಸ್ವಂಟಗಂಟ ಹೂ ಕೊಡ್ತಿಯಲ್ಲಾ ಪೂರಾ ಕೊಡಕ್ಕೇನಾಗ್ಯದೆ ನಿಂಗೆ? ನನ್ನ ಸ್ವಂಟ ಬಗಿಯಾಗ್ಯದೆ. ಅದ್ಕೆಯ ಏನೇ ಕಷ್ಟ ಬಂದ್ರು ಬುಟ್ಟಿದ್ದನೆ ನಿನ್ನ" ಎಂದಳು. ಗಂಡ ಒಳ್ಳೆಯ ಮಾತಲ್ಲಿ ಪೂಸಿ ಹೊಡೆಯುತ್ತಿದ್ದ. ಹೂಗಳು ಮೊಗ್ಗಲು ಇನ್ನು ಸಮಯವಿದ್ದುದರಿಂದ, ಅವರ ಒತ್ತಾಯ ಸಿಟ್ಟಿನ ಹಂತ ತಲುಪಿತ್ತು.

ಅಷ್ಟರಲ್ಲಿ ಶಾಮಣ್ಣನವರು "ಸಿದ್ದರಾಮಯ್ಯ ಮೂಢನಂಬಿಕೆ ವಿರೋಧಿ ಕಾನೂನು ತಂದ್ರೆ ಇವುರು ಸುಮ್ಮನಿರತರ" ಎಂದರು. ನೇರವಾಗಿ ಕರಿಯವ್ವನ ಜೊತೆಯಲ್ಲೇ ಮಾತನಾಡುತ್ತಿದ್ದ ಅವರು ನಮ್ಮತ್ತ ತಿರುಗಿಯೂ ನೋಡಲಿಲ್ಲ. ಅಷ್ಟರಲ್ಲಿ ಮೆರವಣಿಗೆ ಆರಂಭವಾಯಿತು. ಶಾಮಣ್ಣ ಹೊರಟರು. ಹೋಗುತ್ತ ಲಂಕೇಶರ ಮನೆಯ ಫೋಟೋ ತೆಗೆದುಕೊಂಡರು. ಅವರವ್ವನ ಫೋಟೋವನ್ನೂ ವಿಶೇಷವಾಗಿ ಕ್ಲಿಕ್ಕಿಸಿಕೊಂಡರು. ಮುಟ್ಟಿ ನೋಡಿದಾಗ ಅದಕ್ಕೆ ಗಾಜಿರಲಿಲ್ಲ, ಹಣೆ ಕಾಣದಷ್ಟು ಕುಂಕುಮ ಮೆತ್ತಿದ್ದರು. "ಕನ್ನಡ ಸಾಹಿತ್ಯದಲ್ಲಿ ಶಾಶ್ವತವಾಗುಳಿಯುವಂತಹ ಅವ್ವ ಕವನಕ್ಕೆ ಕಾರಣೀಭೂತಳಾದ ದೇವೀರಮ್ಮನ ಒಳ್ಳೆ ಫೋಟೋ ಮಾಡಿಸಿ. ಇಲ್ಲ ಅಂದರೆ ನಾನೇ ಮಾಡಿಸಿ ತಂದುಕೊಡುತ್ತೇನೆ"



ಎಂದು ಶಾಮಣ್ಣ ಹೇಳಿದಾಗ "ಇಲ್ಲ, ಈವತ್ತೆ ಆ ಕೆಲಸ ಮಾಡುತ್ತೇವೆ" ಎಂಬ ಮಾತು ಆ ಮನೆಯ ಸೊಸೆಯಿಂದ ಬಂತು.

ಅಲ್ಲಿಂದ ಹೊರಟುಬರುವಷ್ಟರಲ್ಲಿ ಆಯನೂರ್ ಮಂಜುನಾಥ್, ಶಾರದ ಪೂರ್‍ಯಾ ನಾಯ್ಕ ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯರೆಲ್ಲಾ ಬಂದಿದ್ದರು. ಆಯನೂರ್ ಮಂಜುನಾಥ್ ಲಂಕೇಶರ ಬಗ್ಗೆ ವಸ್ತುನಿಷ್ಠವಾಗಿ ಮಾತನಾಡಿದರು. ಏಕೆಂದರೆ ಅವರು ಲಂಕೇಶ್ ಗುರುತಿಸಿ ಪತ್ರಿಕೆಯ 20 ನೇ ವರ್ಷದ ಸಮಾರಂಭಕ್ಕೆ ಕರೆಸಿದ ಬಿಜೆಪಿಯ ಏಕೈಕ ರಾಜಕಾರಣಿಯಾಗಿದ್ದರು. ಅಲ್ಲದೆ ಒಮ್ಮೆ ಅವರು ಸದನದಲ್ಲಿ ಮಾತನಾಡಿದ ವಿಷಯ ತರಿಸಿಕೊಂಡ ಲಂಕೇಶ್ ಟಿಪ್ಪಣಿ ಬರೆದಿದ್ದರು. ಆ ನಂತರ ಈಶ್ವರಪ್ಪ, ಎಡೂರಪ್ಪ ಎಚ್ಚೆತ್ತುಕೊಂಡು ಮತ್ತೆ ಮಂಜುನಾಥ್ ಸದನದಲ್ಲಿ ಮಾತನಾಡದಂತೆ ಜಾಗರೂಕತೆ ವಹಿಸಿದ್ದು ಈಗ ಇತಿಹಾಸ.

ಶಾಮಣ್ಣನವರ ಮಾತಿಗೆ ಉತ್ತರ ಕೊಟ್ಟ ಆರ್.ಕೆ. ಸಿದ್ದರಾಮಣ್ಣ ಮೋದಿಯ ಭೂಕಂಟಕದ ವಿಷಯಕ್ಕೆ ಜೋತುಬಿದ್ದು ಲಂಕೇಶರನ್ನೇ ಮರೆತು, ಕಡೆಗೆ ಅವರ ಪ್ರತಿಮೆಗೆ ಹಣ ಕೊಡುವುದಾಗಿ ಹೇಳಿಹೋದರು. ಲಂಕೇಶ್ ಪ್ರತಿಮೆಗೆ ಬಿಜೆಪಿಯವರಿಂದ ಹಣ ಕೇಳುವವರಿಗೆ, ಲಂಕೇಶರು ಈವರೆಗೂ ಅರ್ಥವಾಗದಿರುವುದೊಂದು ದುರಂತ. ನಾನೇ ಒಮ್ಮೆ ಅವರ ತಂದೆಯನ್ನು ಧಫನ್ ಮಾಡಿದ ಜಾಗಕ್ಕೆ "ಗೋರಿ ಕಟ್ಟಿಸಿ" ಎಂದಾಗ ಲಂಕೇಶರು "ಅಂಗೆಲ್ಲ ಮಾಡಬಾರ್ದು ಕಣಯ್ಯ" ಎಂದಿದ್ದರು. ಆದರೀಗ ಕೊನಗವಳ್ಳಿಯ ಹೊರಗಿನ ಜನ, ಅದರಲ್ಲೂ ನೊಣಬರು, ಲಂಕೇಶ್ ನಮ್ಮವನೆಂಬ ಒಂದೇ ಕಾರಣಕ್ಕೆ ಪ್ರತಿಮೆ ಮಾಡಿದರೆ ಮುಂದೊಮ್ಮೆ ಅದು ರಾವಣನ ಗುಡಿಯಾದರೂ ಆಚ್ಚರಿಯಿಲ್ಲ. ಪ್ರತಿಮೆ ಬದಲು ಲಂಕೇಶರ ನೆನಪಿಗೆ ನೂರಾರು ಮಾರ್ಗಗಳಿವೆ. ಆ ಮಾರ್ಗಗಳು ನೊಣಬರಲ್ಲದ ವಿದ್ವಾಂಸರು, ಪ್ರಾಮಾಣಿಕರು ಮತ್ತು ಲಂಕೇಶರನ್ನು ತುಂಬಾ ಓದಿಕೊಂಡವರಿಂದ ದೊರಕುತ್ತವೆ.

ಸುಮಾರು ಒಂದೂವರೆ ಗಂಟೆ ಕೊರೆದ ನೊಣಬರ ಮುಖಂಡರಾದ ಶಂಕರಪ್ಪನವರು, "ಲಂಕೇಶರು ನಮ್ಮ ಜನಾಂಗ ಮಹಾ ಪುರುಷ, ಅವರಿಗೆ ನೊಣಬರೆಂದರೆ ತುಂಬಾ ಇಷ್ಟ. ನಮ್ಮ ಜನಾಂಗ ಮುಂದೆ ಬರಬೇಕೆಂಬ ಅದಮ್ಯ ಆಸೆಯಿತ್ತು, ಸ್ವತಃ ನನ್ನ ತಮ್ಮ ಎಮ್ಮೆಲ್ಲೆ ಆಗಬೇಕಾದರೆ ವಿರೇಂದ್ರ ಪಾಟೀಲರಿಗೆ ಹೇಳಿ ಟಿಕೆಟ್ ಕೊಡಿಸಿದರು. ಈ ಗುಟ್ಟನ್ನು ಇವತ್ತು ಹೇಳ್ತಾಯಿದ್ದಿನಿ. ನೊಣಬ ಜನಾಂಗದ ಶ್ರೀಮಂತರು ಎರಡೆರಡು ಸಾವಿರ ಕೊಟ್ಟರೆ ಅವರ ಪ್ರತಿಮೆ ರೆಡಿಯಾಗುತ್ತೆ. ಸರ್ಕಾರದ ಎಂಜಲಿಗೆ ನಾವು ಕೈಯೊಡ್ಡಬಾರದು. ಒಕ್ಕಲಿಗರೆಲ್ಲಾ ಸೇರಿ ತೇಜಸ್ವಿ, ಕುವೆಂಪುಗೆ ಯಂಗೆ ಸ್ಮಾರಕ ಮಾಡ್ಯವುರೆ ಅಂಗೆ ನಾವು ಮಾಡನ" ಎಂದರು.


ಆಗ ನಾನು "ಶಂಕರಪ್ಪನವರೆ, ನಿಮ್ಮ ಸುಳ್ಳಿಗೆ ನಾನು ಉತ್ತರ ಕೊಡುತ್ತೇನೆ" ಎಂದೆ. "ಆಗ್ಲಿ ಕೊಡಪ್ಪ" ಎಂದರು. ನನ್ನ ಸರದಿ ಬಂದಾಗ "ಇವುರೆಲ್ಲ ಈ ಥರ ಮಾತಾಡೋದಾದ್ರೆ ಶಾಮಣ್ಣ, ನಾನು, ಖಲೀಮ, ಉಮೇಶ ಇಲ್ಲಿ ಬರೋ ಅಗತ್ಯ ಇಲ್ಲ, ಲಂಕೇಶರು ಎಲ್ಲಾ ಜಾತಿಯ ಒಳ್ಳೆಯವರನ್ನ ಪ್ರೀತಿಸಿದ್ರು. ಬರಿಯಕ್ಕೆ ಅವ್ಕಾಶ ಮಾಡಿಕೊಟ್ರು. ಮೂರು ಜನ ಒಂದೇ ಜಾತಿಯವರು ಮಾತಾಡ್ತಯಿದ್ರೆ ಬೈದುಬಿಡೋರು. ಅವರಿರೊವರೆಗೂ ಜಾತಿವಾದಿ ಜನಗಳು ಬಾಲ ಬಿಚ್ಚಲಿಲ್ಲ, ಆ ತುದಿಲಿ ಬ್ರಾಹ್ಮಣನಿಂದ ಹಿಡಿದು ಈ ತುದಿ ಎಡಗೈನ ಜನರವರೆಗೂ ಪತ್ರಿಕೆಲಿ ಬರಿಯೊದಿಕ್ಕೆ ಅವಕಾಶ ಮಾಡಿಕೊಟ್ಟಿದ್ರು. ದಲಿತರ ಅಸ್ಪೃಶ್ಯತೆ ಬಗ್ಗೆ, ಮುಸ್ಲಿಮರ ಅಭದ್ರತೆ ಬಗ್ಗೆ, ಮಹಿಳೆಯರ ಸಬಲೀಕರಣದ ಬಗ್ಗೆ ಅವರ ಒಟ್ಟು ಬದುಕು ಬರಹದ ಧ್ಯೇಯವಾಗಿತ್ತು, ಅಂತ ಲಂಕೇಶರನ್ನು ನೀವು ನೊಣಬ ಜಾತಿಗೆ ಸೀಮಿತಗೊಳಿಸಿದ ಕೂಡಲೇ ಅವರು ಇಲ್ಲಿರಲ್ಲ, ಇದೇ ಶಂಕರಪ್ಪನವರು 'ನನ್ನ ತಮ್ಮನಿಗೆ ಎಮ್ಮೆಲ್ಲೆ ಟಿಕೆಟ್ ಕೊಡಿಸಿ' ಅಂತ ಎಷ್ಟು ಕೇಳಿಕೊಂಡ್ರೂ ಲಂಕೇಶರು ಆ ಬಗ್ಗೆ ತಲೆನೆ ಕೆಡಿಸಿಕೊಳ್ಳಲ್ಲ, ಕಡಿಗೆ ನಾವೆ ಯಂಗೊ ತಗೊಂಡೊ ಅಂತ ಅವರ ತಮ್ಮ ಬರದಿರೊ ಪತ್ರ ಲಂಕೇಶ್ ಪತ್ರಿಕೆ ಆಫೀಸಲ್ಲಿ ಈಗಲೂ ಇದೆ. ಹೋಗಿ ನೋಡಬವುದು" ಎಂದು ಹೇಳುತ್ತಾ ಸಭೆಯಲ್ಲಿ ಶಂಕರಪ್ಪನನ್ನು ಹುಡುಕಿದೆ. ಅವರಾಗಲೇ ಪರಾರಿಯಾಗಿದ್ದರು. ಶಂಕರಪ್ಪನಾಗಲಿ, ಕತ್ರಿಗೆ ಚನ್ನಪ್ಪನಾಗಲಿ ಲಂಕೇಶ್ ಬದುಕಿದ್ದ ಬಗ್ಗೆ ಸುಳ್ಳು ಹೇಳಬಾರದು. ಎಲ್ಲ ಜಾತ್ಯತೀತ ಮನಸ್ಸುಗಳು ಸೇರಿ ಒಂದು ಟ್ರಸ್ಟ್ ಮಾಡಿಕೊಂಡು, ಕೊನಗವಳ್ಳಿಯಲ್ಲಿ ಅವರ ನೆನಪಿನ ಗ್ರಂಥಾಲಯ, ಸಮುದಾಯ ಭವನ ಮತ್ತು ಅವರು ಬದುಕನ್ನು ಕಟ್ಟಿಕೊಳ್ಳಲು ಏನೇನು ಸಲಹೆ ಕೊಟ್ಟು ಸ್ವತಃ ತಾವೂ ಕೂಡ ಪ್ರಯೋಗ ಮಾಡಿದ್ದರೊ ಅವನ್ನು ಕೊನಗವಳ್ಳಿಯಲ್ಲೂ ಮಾಡಬಹುದು.

ಶಿವಮೊಗ್ಗದ ಕಾಂತೇಶ್ ಕದರ ಮಂಡಲಗಿ ಲಂಕೇಶರ ಗುಣಮುಖ, ಸಂಕ್ರಾಂತಿ ನಾಟಕಗಳನ್ನು ಬಹು ಹಿಂದಿನಿಂದಲೂ ಆಡಿಕೊಂಡು ಬಂದಿದ್ದಾರೆ. ಆ ದಿನ ಕೊನಗವಳ್ಳಿಯಲ್ಲೂ ಸಂಕ್ರಾಂತಿ ಆಡಿದರು. ಮಧ್ಯಾಹ್ನ ನಡೆದ ಗೋಷ್ಠಿಯಲ್ಲಿ ಶಾಹಿರಿ ಕವಿ ಇಟಗಿ ಈರಣ್ಣ, ಕುಂಸಿ ಉಮೇಶ, ಕಲೀಮುಲ್ಲ ಎಲ್ಲರೂ ಸಾಮಾನ್ಯರಿಗೂ ಕೂಡ ಲಂಕೇಶ್ ಸಾಹಿತ್ಯದ ದರ್ಶನ ಮಾಡಿದರು.

ಯಾರೋ ಒಬ್ಬ ರೈತ ಬಂದು "ಪಿ. ಲಂಕೇಶ್ ಎಂದರೆ ಪ್ರೀತಿಯ ಲಂಕೇಶ್ ಅಂತ" ಹೇಳಿಹೋದದ್ದು ಮನಸ್ಸಿನಲ್ಲಿ ಉಳಿಯಿತು.

■ಬಿ. ಚಂದ್ರೇಗೌಡ

ಮಂಜುನಾಥ್ ಕೊಲೆ ಮಾಡಿದವರು ಮುಸ್ಲಿಮರಲ್ಲ!



ಎಸ್ಪಿ ರವಿ ಡಿ. ಚೆನ್ನಣ್ಣ

ಶಿವಮೊಗ್ಗದಲ್ಲಿ ಕಳೆದ ಫೆಬ್ರವರಿ 20 ರಂದು ನಡೆದ ಕೋಮುಗಲಭೆಯ ಸಂದರ್ಭದಲ್ಲಿ ಕೊಲೆಯಾಗಿದ್ದ ಮಂಜುನಾಥನ ಸಾವಿಗೂ, ಕೋಮು ಗಲಭೆಗೂ ಯಾವುದೇ ಸಂಬಂಧವಿಲ್ಲ ಎಂಬುದನ್ನು ಪೊಲೀಸರು ಸಾಬೀತು ಮಾಡಿದ್ದಾರೆ. ಡಿವೈಎಸ್‌ಪಿ ಡಾ. ರಾಮು ಎಲ್. ಅರಸಿದ್ದಿ ನೇತೃತ್ವದಲ್ಲಿ ನಡೆದ ತನಿಖೆಯ ಸತ್ಯಾಂಶಗಳು ಬಹಿರಂಗಗೊಂಡಂತೆ ಪೊಲೀಸರೇ ಬೆಚ್ಚಿ ಬಿದ್ದಿದ್ದಾರೆ.

ಕೊಲೆಯಾದ ಮಂಜುನಾಥನಿಗೂ ಮತ್ತು ಆತನ ಅಕ್ಕ ದಾಕ್ಷಾಯಿಣಮ್ಮನಿಗೂ ನಿವೇಶನದ ವಿಷಯವಾಗಿ ಜಗಳಗಳಾಗುತ್ತಿದ್ದವು. ಎರಡು ನಿವೇಶನದ ಪೈಕಿ ಒಂದನ್ನು ಮಾರಿಕೊಂಡಿದ್ದ ಮಂಜುನಾಥ ಮತ್ತೊಂದು ಸೈಟನ್ನು ಲಪಟಾಯಿಸುವ ವಿಷಯವಾಗಿ ಜಗಳ ನಡೆಯುತ್ತಲೇ ಇದ್ದವು. ಈ ಸಮಯದಲ್ಲಿ ತಾಳ್ಮೆ ಕಳೆದುಕೊಳ್ಳುತ್ತಿದ್ದ ಮಂಜುನಾಥ, ಅಶ್ಲೀಲ ಭಾಷೆಯಿಂದ ಅಕ್ಕನ ಮೇಲೆ ಹಲ್ಲೆ ಮಾಡಿದ್ದೂ ಇದೆ. ತುಸು ವಿಕ್ಷಿಪ್ತ ಮನಸ್ಸಿನ ಮಂಜುನಾಥ ಹೆಂಗಸರು ಬಟ್ಟೆ ಬದಲಿಸುವಾಗ ಕದ್ದು ನೋಡುವುದಲ್ಲದೆ ದಾಕ್ಷಾಯಿಣಿಯ ಮಗನಾದ ಅರುಣಕುಮಾರನ ಹೆಂಡತಿಯನ್ನು ಕೆಟ್ಟ ದೃಷ್ಟಿಯಲ್ಲಿ ನೋಡಿ ಕಿಚಾಯಿಸುತ್ತಿದ್ದ. ಆಕೆ ಸ್ನಾನ ಮಾಡುವಾಗ ಕದ್ದು ನೋಡುತ್ತಿದ್ದ ದೂರು ಇದೆ. ಈತನ ಹೆಂಡತಿ ಕೂಡ ಇವನೊಡನೆ ಬಾಳ್ವೆ ನಡೆಸಲು ಸಾಕಾಗಿ ಹೋಗಿದ್ದಳು.

ಇಂತಹ ಕುಟುಂಬದ ಸಮಸ್ಯೆಗೊಂದು ಕೊನೆಗಾಣಿಸಲು ಎಲ್ಲರೂ ತಯಾರಿ ನಡೆಸುತ್ತಿದ್ದರು. ಆದ್ದರಿಂದ ಪಂಚಾಯ್ತಿ ಮಾಡಿ ಸಮಸ್ಯೆ ಬಗೆಹರಿಸಿಕೊಳ್ಳುವ ಸಲುವಾಗಿ ಕರೆದರು. ದಾಕ್ಷಾಯಿಣಮ್ಮನ ಮಗ ಅರುಣಕುಮಾರ, ಮಗಳು ನೇತ್ರಾವತಿ, ಅರುಣಕುಮಾರನ ಪತ್ನಿ ಶ್ವೇತ, ಇವರಲ್ಲದೆ ಮಂಜುನಾಥನ ಚಿಕ್ಕಮನ ಮಗ ಅರುಣ ಮತ್ತು ಸಚಿನ್ ಎಲ್ಲ ಸೇರಿ ಮಂಜುನಾಥನನ್ನು ಮುಗಿಸಲು ಹಾಕಿದ ಸ್ಕೆಚ್ಚಿನ ಸಂದರ್ಭದಲ್ಲಿ ಕೋಮು ಗಲಭೆ ಹತ್ತಿಕೊಂಡು ಒಂದು ದಿನವಾಗಿತ್ತು. ಇದೇ ಸೂಕ್ತ ಸಮಯವೆಂದು ಮಂಜುನಾಥನನ್ನು ಮೊಳೆಯಿದ್ದ ರಿಪೀಸ್ ಪಟ್ಟಿಯಿಂದ ಹೊಡೆದು ಸಾಯುವವರೆಗೂ ಎಲ್ಲರೂ ಒದ್ದರು. ಆತ ಸುಮ್ಮನಾದ ನಂತರ ಕೋಮು ಗಲಭೆಯಿಂದಲೇ ಸತ್ತನೆಂಬುದಕ್ಕೆ ಸರಿಯಾದ ಸಾಕ್ಷಿಯೊದಗಿಸಲು ಚೂರಿಯಿಂದ ಇರಿದರು.

ಕೊಲೆಯ ಸಾಕ್ಷಿಗಳು ಸಿಗಬಾರದೆಂದು ಮನೆಯನ್ನು ಸ್ವಚ್ಛಗೊಳಿಸಿ, ರಕ್ತಸಿಕ್ತ ಬಟ್ಟೆಯನ್ನು ಸುಟ್ಟು ಹಾಕಿದರು. ನಂತರ ಶವವನ್ನು ಬೈಕ್‌ನಲ್ಲಿ ತೆಗೆದುಕೊಂಡು ಹೋಗಿ ಮುಸ್ಲಿಮರ ಸಂಖ್ಯೆ ಜಾಸ್ತಿಯಿರುವ ಪದ್ಮ ಟಾಕೀಸಿನ ಹಿಂಭಾಗದ ಮೈದಾನದಲ್ಲಿ ಎಸೆದು ಬಂದರು.


ಮರುದಿನ ಬೆಳಗ್ಗೆ ಮಂಜುನಾಥನ ಶವ ಪತ್ತೆಯಾದಾಗ ಕೊಲೆ ಮಾಡಿದವರ ರೋದನ ಮುಗಿಲು ಮುಟ್ಟತೊಡಗಿತು. ತಮ್ಮನನ್ನು ಕಳೆದುಕೊಂಡ ಅಕ್ಕ ಮತ್ತು ಸೋದರ ಮಾವನನ್ನು ಕಳೆದುಕೊಂಡ ನೇತ್ರಾವತಿ ಪೊಲೀಸರ ಜನ್ಮವನ್ನು ಜಾಲಾಡತೊಡಗಿದ್ದರು. ಸತ್ತವನ ಅಕ್ಕನ ಮಗಳಾದ ನೇತ್ರಾವತಿಯಂತೂ ಪೊಲೀಸರ ಮೇಲೆಯೇ ಹಲ್ಲೆಗೆ ಹೋಗಿದ್ದಳು.

ಆಕೆಯ ರೋದನ ತಟ್ಟಿದ ಕೂಡಲೇ ಓಡಿಬಂದ ಶೋಭಾ ಕರಂದ್ಲಾಜೆ, ಸರ್ಕಾರವನ್ನು ಬೈದು ಬಹುಬೇಗ 5 ಲಕ್ಷ ರೂ. ಪರಿಹಾರ ನಿಧಿ ಸಿಗುವಂತೆ ಮಾಡಿದ್ದಳು. ಇನ್ನು ಈಶ್ವರಪ್ಪನಂತೂ ಈ ಸರ್ಕಾರದಿಂದ ಹಿಂದೂಗಳ ಜೀವಕ್ಕೆ ಯಾವ ಭದ್ರತೆಯೂ ಇಲ್ಲ ಎಂದು ಆರ್ಭಟಿಸಿದ್ದರು.

ಕೋಮು ಗಲಭೆಗೂ ಈ ಹತ್ಯೆಗೂ ಸಂಬಂಧವಿಲ್ಲ ಎಂದು ಪೊಲೀಸರು ಎಷ್ಟೇ ವಿವರ ಕೊಟ್ಟರೂ ಮತೀಯ ನಾಯಕರು ಕೇಳುವ ಸ್ಥಿತಿಯಲ್ಲಿರಲಿಲ್ಲ. ಪೂರ್ವಗ್ರಹಕ್ಕೆ ಎಲ್ಲರೂ ಬದ್ಧರಾಗಿದ್ದರು.

ಸಾಮಾನ್ಯವಾಗಿ ಕೋಮು ಗಲಭೆಯಲ್ಲಿ ಬೇಟೆ ರೂಪದ ಹತ್ಯೆ ನಡೆದಿರುತ್ತದೆಯೇ ಹೊರತು ಎಲ್ಲಿಂದಲೋ ತಂದು ಹಾಕಿರುವುದಿಲ್ಲ ಎಂದು ಸಂಶಯಗೊಂಡ ಪೊಲೀಸರು ಕೊಂದವರ ಪ್ರತಿಭಟನೆ, ದುಃಖ ಎಲ್ಲವೂ ಕಡಿಮೆಯಾದ ನಂತರ ಒಬ್ಬೊಬ್ಬರನ್ನೇ ಕರೆಸಿ ವಿಚಾರಿಸಿ ಕಳುಹಿಸಿದರು. ಈಗಾಗಲೇ ಸರ್ಕಾರದಿಂದ ಐದು ಲಕ್ಷ ಪಡೆದಿದ್ದ ಕೊಲೆಗಾರರು ಪೊಲೀಸರು ಕೇಳಿದರೆ ಏನು ಹೇಳಬೇಕೆಂದು ಎಲ್ಲರೂ ತಯಾರಿ ನಡೆಸಿಕೊಂಡಿದ್ದರು. ಹಾಗಾಗಿ ಮೊದಲನೇ ರೌಂಡಿಗೆ ಇದರ ಹಣೆಬರಹ ಇಷ್ಟೆ, ಇನ್ನೇನು ಭಯವಿಲ್ಲ, ಸದರಿ ಕೊಲೆ ಕೋಮು ಗಲಭೆಯೊಳಕ್ಕೆ ಸೇರಿ ಹೋಯಿತೆಂದು ನೆಮ್ಮದಿಯಾಗಿರತೊಡಗಿದರು.

ಆದರೆ ಹೊಸದಾಗಿ ಬಂದ ಡಿವೈಎಸ್‌ಪಿ ಡಾ. ರಾಮು ಎಲ್. ಅರಸಿದ್ದಿಯವರ ನೇತೃತ್ವದಲ್ಲಿ ಪ್ರಾರಂಭಗೊಂಡ ತನಿಖೆಯಿಂದ ಅಪರಾಧಿಗಳು ತಪ್ಪಿಸಿಕೊಳ್ಳಲಾಗದ ಸ್ಥಿತಿಗೆ ಬಂದರು. ಕೊಲೆಗಡುಕರ ಬುದ್ಧಿವಂತಿಕೆಗೆ ಬೆಚ್ಚಿಬಿದ್ದ ಪೊಲೀಸರ ಪ್ರಕಾರ ಇವರ‍್ಯಾರು ಮೊಬೈಲ್‌ನಲ್ಲಿ ಮಾತನಾಡದೆ ಎಚ್ಚರ ವಹಿಸಿದ್ದರು. ಕೊಲೆ ಸಂದರ್ಭದಲ್ಲಿ ಹೊರಗಡೆ ಪರಿಸ್ಥಿತಿಯನ್ನು ವಾಚ್ ಮಾಡಿದರು. ಸಾಮಾನ್ಯರಂತೆ ಕಾಣುವ ಈ ಮುಗ್ಧರಲ್ಲೇ ಇಂತಹ ಚಾಕಚಕ್ಯತೆ ವ್ಯಕ್ತವಾಗಿರಬೇಕಾದರೆ, ಮುಂದೆ ಕೊಲೆ ಕೇಸನ್ನು ಪತ್ತೆಹಚ್ಚಲು ಪೊಲೀಸರು ವಿಶೇಷ ಪ್ರತಿಭೆಯನ್ನು ಬಳಸಬೇಕಾಗಿದೆ ಎಂಬುದನ್ನು ಈ ಕೊಲೆಯಿಂದ ಕಂಡುಕೊಂಡಿದ್ದಾರೆ.



ಡಿವೈಎಸ್‌ಪಿ ಡಾ. ರಾಮು ಎಲ್. ಅರಸಿದ್ದಿ


ಮತೀಯ ಗಲಭೆಯಿಂದ ತತ್ತರಿಸಿದ ಶಿವಮೊಗ್ಗ ತಣ್ಣಗಿದ್ದರೂ ಪೊಲೀಸರು ಇನ್ನೂ ಕೂಡ ರಾತ್ರಿಗಸ್ತು ಹೊಡೆಯುವುದನ್ನು ನಿಲ್ಲಿಸಿಲ್ಲ. ಹೊಸದಾಗಿ ಬಂದ ಎಸ್ಪಿ ರವಿ ಡಿ. ಚೆನ್ನಣ್ಣನವರು ಸಹ ಗಸ್ತು ಹೊಡೆಯುತ್ತ ಈಗಾಗಲೇ ವೇಶ್ಯಾವಾಟಿಕೆ, ಮರಳು ಮಾಫಿಯಾ ಮತ್ತು ಪುಡಿ ರೌಡಿಗಳಿಗೆ ಸಿಂಹಸ್ವಪ್ನವಾಗಿದ್ದಾರೆ.



ಆದರೆ ಇದೆಲ್ಲಕ್ಕಿಂತ ಮೆಚ್ಚಿನ ಸಂಗತಿ ಎಂದರೆ, ಹತ್ಯೆಯೊಂದನ್ನು ಕೋಮು ಗಲಭೆಯೊಳಕ್ಕೆ ಸೇರಿಸುವ ಹುನ್ನಾರವನ್ನು ಪತ್ತೆಹಚ್ಚಿದ್ದು, ಇದು ಹಿಂದೂ ಮತೀಯ ವಾದಿಗಳಿಗೆ ಬೇಕಿಲ್ಲದ ಸಂಗತಿಯಾಗಿತ್ತು ಎಂಬುದೊಂದು ವಿಪರ್ಯಾಸ!

■ವರದಿಗಾರ

ಯಡ್ಡಿಯನ್ನು ಖೆಡ್ಡಾಕ್ಕೆ ಕೆಡವಲು ಕರಾಮತ್ತು!!




ದಿಲ್ಲಿಯಲ್ಲಿ ಕೇಸರಿ ಪಡೆ ಆದಿಪತ್ಯ ಸ್ಥಾಪಿಸಿ ವರ್ಷ ಒಂದು ಕಳೆಯುತ್ತ ಬಂದರೂ ಇಲ್ಲಿಯ (ರಾಜ್ಯದ) ತುಕಡಿಯಲ್ಲೇನೂ ಹೇಳುವಂಥ ಉಮೇದಿಯಿಲ್ಲ. ಸ್ಥಳೀಯ ಮುಂಚೂಣಿ ಮಾಂಡಲೀಕರು ತಾವೆಂಬ ಗೆಟಪ್ಪಿನಲ್ಲಿ ಅಂಡಲೆವ ಪುಢಾರಿಗಳೂ ಏನೋ ಕಳಕೊಂಡ ಕೊರಗಲ್ಲಿರುವಂತೆ ಕಾಣಿಸುತ್ತಾರೆ. ರಾಷ್ಟ್ರೀಯ ಕಾರ್ಯಕಾರಿಣಿ ಸರ್ಕಸ್ ಭರ್ಜರಿಯಾಗಿ ಮುಗಿಸಿದರೂ ರಾಜ್ಯ ನಾಯಕ ಮಣಿಗಳ ಮುಸುಡಿಯಲ್ಲಿ ಕಳೆಯೇನೂ ಇಲ್ಲ. ಕೇಂದ್ರದಲ್ಲಿ ಮಂತ್ರಿಯಾಗಿರುವವರೇ ಶ್ರೀಮಂತ ವಿಧವೆಯಂತಾಗಿರುವಾಗ ಖಾಲಿ ಜೋಳಿಗೆಯ ರಾಜ್ಯಾಧಿಪತಿಗಳಿಗೆ ಅದೆಲ್ಲಿಂದ ಬಂದೀತು ಜೋಶ್?!

ಅರ್ಕಾವತಿ ರೀಡೂ ಪ್ರಕರಣ ಎತ್ತಿಕೊಂಡು ಮಿಂಚಲು ಹವಣಿಸಿದ ಚೆಡ್ಡಿ ಗ್ಯಾಂಗಿಗೆ ಪೂರ್ವಾಶ್ರಮದ ಪಾಪವೇ ತಿರುಗುಬಾಣವಾಗಿ ಅಪ್ಪಳಿಸಬೇಕಾ? ತೀರ್ಥಹಳ್ಳಿ ಹುಡುಗಿಯ ಆತ್ಮಹತ್ಯೆ ನೆಪ ಮಾಡಿಕೊಂಡು ಕೋಮು ಕಿಚ್ಚೆಬ್ಬಿಸಿದರೂ ಆಗಿದ್ದು ಮಾತ್ರ ಶೂನ್ಯ ಸಂಪಾದನೆ; ಐಎಎಸ್ ರವಿಯ ವಿರಹವೇದನೆಯ ದೇಹತ್ಯಾಗ ಗೊಂದಲದಲ್ಲಿ ಚಲಾವಣೆ ಪಡೆಯಲು ಪ್ರಯತ್ನಿಸಿದರೂ ಅದ್ಯಾಕೋ ನಿರೀಕ್ಷಿತ ಮೈಲೇಜು ಕಮಲ್ಲ ಪಾಳೆಯಕ್ಕೆ ಕೊಡಲೇ ಇಲ್ಲ.

ಒಟ್ಟಿನಲ್ಲಿ ಕರ್ನಾಟಕದ ಬಿಜೆಪಿ ಭೂಪರು ಎಲ್ಲ ಇದ್ದೂ ಏನೂ ಇಲ್ಲದ ಪಾಪರ್ ಸ್ಥಿತಿಯಲ್ಲಿದ್ದಾರೆ! ಇಂಥ ಗತಿಗೇಡಿ ಘಟಾನುಘಟಿಗಳೀಗ ರಾಜ್ಯ ಘಟಕದ ದೊರೆಯಾಗುವ ಹಗಲುಗನಸು ಕಾಣುತ್ತಿದ್ದಾರೆ. ಒಳಗೊಳಗೇ ಒಳಸುಳಿ ಬಿಚ್ಚಿಕೊಂಡಿದೆ. ರಾಜ್ಯ ಬಿಜೆಪಿ 'ರಾಜ'ನಾಗುವುದೆಂದರೆ 2018ರ ಅಸೆಂಬ್ಲಿ ಎಲೆಕ್ಷನ್ ಬಳಿಕ ಮುಖ್ಯಮಂತ್ರಿ ಗದ್ದುಗೆ ಏರೋದೆಂದೇ ಇವರೆಲ್ಲರ ದೂ(ದು)ರಾಲೋಚನೆ! ಹೀಗಾಗಿ ಹಾಲಿ ಅಧ್ಯಕ್ಷ ಪ್ರಹ್ಲಾದ ಜೋಶಿ ಎಂಬ ಬ್ರಾಹ್ಮಣೋತ್ತಮನ ಅವಧಿ ಮುಗಿಯಲು ಇನ್ನೂ ವರ್ಷ ಬಾಕಿಯಿರುವಾಗಲೇ ಹೊಸ ಪೀಠಾಧಿಪತಿಗಿರಿಗಾಗಿ ಬಿರುಸಿನ ಪೈಪೋಟಿ ಶುರುವಾಗಿ ಹೋಗಿದೆ!!


ಕೇಂದ್ರ ಮಂತ್ರಿ ಅನಂತಕುಮಾರ್ ಶಾಸ್ತ್ರಿಯ ಚೇಲ ಹುಬ್ಬಳ್ಳಿಯ ಪ್ರಹ್ಲಾದ ಜೋಶಿ ಅಧ್ಯಕ್ಷಗಿರಿ ಅವಧಿ ಮುಗಿಯುವುದು 2016ರ ಮಾರ್ಚ್‌ನಲ್ಲಿ. ಹಳೆ ಅಧ್ಯಕ್ಷನ ಅಧಿಕಾರ ನಾಲ್ಕೈದು ತಿಂಗಳಿರುವಾಗ ಹೊಸ ಅಧ್ಯಕ್ಷನ ಆಯ್ಕೆಗೆ ರಾಜಕೀಯ ಪಕ್ಷದಲ್ಲಿ ಗುದುಮುರಿಗೆ ಆರಂಭವಾಗುವುದು ಮಾಮೂಲಿ ಪ್ರಕ್ರಿಯೆ. ಆದರೆ ಬಿಜೆಪಿಯಲ್ಲೀಗಲೇ ಲಾಬಿ-ಲಿಗಾಡಿ ಭಾವಿ ಅಧ್ಯಕ್ಷನಿಗಾಗಿ ನಡೆಯುತ್ತಿದೆ. ಈ ಅವಸರಕ್ಕೆ ಮೂಲ ಕಾರಣಪುರುಷ ಬಿಜೆಪಿಯಲ್ಲಿ ಇದ್ದೂ ಇಲ್ಲದಂತಾಗಿರುವ ಮಹತ್ವಾಕಾಂಕ್ಷಿ [illegible] ರಾಜಕಾರಣಿ ಯಡ್ಡಿ ಮಹಾತ್ಮ. ಯಡ್ಡಿ ತಾನೇ ಅಧ್ಯಕ್ಷನಾಗಲು ನಡೆಸಿದ ರಹಸ್ಯ ಕಾರ್ಯತಂತ್ರದ ಗುಟ್ಟು ರಟ್ಟಾಗುತ್ತಿದ್ದಂತೆಯೇ ಆತನ ವಿರೋಧಿಗಳು ಒಂದೆಡೆ ಸೆಟೆದು ನಿಂತುಬಿಟ್ಟರು; ಇನ್ನೊಂದೆಡೆ ರಾಜ್ಯಾಧ್ಯಕ್ಷ ಪದವಿ ಆಕಾಂಕ್ಷಿಗಳು ತಂತಮ್ಮ ಗಾಡ್‌ಫಾದರ್‌ಗಳ ಹಿಡಿದುಕೊಂಡು ಹಾರಾಡತೊಡಗಿದರು.

ಸದ್ಯಕ್ಕಿದು ಸಣ್ಣ ಸಂಘರ್ಷ ಹುಟ್ಟು ಹಾಕಿದೆ. ಮುಂದೆ ಕದನ ಕುತೂಹಲವೇ ನಡೆಯುವ ಸಕಲ ಸೂಚನೆ ಗೋಚರಿಸಲಾರಂಭಿಸಿದೆ. ಯಡ್ಡಿ ಸಿಎಂ ಆಗಿದ್ದಾಗ ಮಾಡಬಾರದ ಕರ್ಮಕಾಂಡವೆಲ್ಲ ಮಾಡಿ ಹಿತಶತ್ರುಗಳಿಂದ ಒದೆಸಿಕೊಂಡು ಬಿಜೆಪಿಯಿಂದ ಹೊರಬಂದಿದ್ದು, ಗತಿಯಿಲ್ಲದೆ ಮತ್ತದೇ ಬಿಜೆಪಿಯ ಹಳೆಗಂಡನ ಪಾದಕ್ಕೆ ಶರಣಾಗಿದ್ದು ಇತಿಹಾಸ. ಆದರೆ ಹಾಗೆ ಹೋಗಿ ಹೀಗೆ ಬಂದ ಯಡ್ಡಿಗೆ ಬಿಜೆಪಿಯಲ್ಲಿ ಈಗ ಯಾವುದೇ ಸ್ಥಾನಮಾನ ಇಲ್ಲ. ಕೇಂದ್ರ ಕೃಷಿ ಮಂತ್ರಿಯಾಗುವ ಕನಸು ಕಾಣುತ್ತ ಹೊಸ ಸೂಟು ಹೊಲಿಸಿದ್ದ ಯಡ್ಡಿಗೆ ಮೋದಿ ಮೂಲೆ ತೋರಿಸಿ ಕೂರಿಸಿಬಿಟ್ಟರು. ಎಂಪಿಗಿರಿ ಎಂಬ ಪುನರ್ವಸತಿ ಕೇಂದ್ರಕ್ಕೆ ಸೀಮಿತವಾಗಿ ಹೋದ ಯಡ್ಡಿ ಒಂಚೂರು ಕೊಸರಾಡಿದಾಗ ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷತೆಯ ಬಿಸ್ಕೇಟು ಎಸೆಯಲಾಯ್ತು.




ಬಿಜೆಪಿ ಸೇರಿ ಥೇಟ್ ತಿರುಬೋಕಿಯಂತಾದ ಯಡ್ಡಿ ಸುಮ್ಮನೆ ಕೂರುವ ಪೈಕಿಯಲ್ಲ. ರಾಷ್ಟ್ರೀಯ ಉಪಾಧ್ಯಕ್ಷನಾದರೂ ಯಾವುದೇ ಜವಾಬ್ದಾರಿ ವಹಿಸಿಕೊಳ್ಳದೇ ರಾಜ್ಯ ಅಧ್ಯಕ್ಷತೆಗಾಗಿ ಸಮಯ ಸಾಧಿಸ ಹತ್ತಿದರು. ಯಡ್ಡಿ ಪಕ್ಕಾ ಫುಲ್‌ಟೈಮ್ ರಾಜಕಾರಣಿ ತಾನೆ? ಒಮ್ಮೆ ಹೇಗಾದರೂ ಮಾಡಿ ರಾಜ್ಯ ಘಟಕದ ಅಧ್ಯಕ್ಷನಾದರೆ ಸಿಎಂ ಗಿರಿಗೆ ಕ್ಲೇಮು ಹಾಕುವುದು ಸುಲಭವಾಗುತ್ತದೆಂಬುದು ಆತನ ಲೆಕ್ಕಾಚಾರ. ಸಿಎಂ ಕುರ್ಚಿಯಿಂದ ಅವಮಾನಕರವಾಗಿ ಉಚ್ಚಾಟಿತನಾಗಿದ್ದ ನೋವಿನ್ನೂ ಆತನನ್ನು ಕಾಡುತ್ತಿದೆ. ಹಗಲಿರುಳೂ ಆ ಸಿಎಂ ಪೀಠವೇ ಕನಸು-ಮನಸ್ಸಿನಲ್ಲೂ ಕೈಬೀಸಿ ಕರೆದಂತಾಗುತ್ತಿದೆ. ಆದರೆ ಹಿಂದಿದ್ದ ಇಮೇಜು ಆತನಿಗೆ ಇಂದಿಲ್ಲ. ಸ್ವ-ಜಾತಿ ಲಿಂಗಾಯತ ಲಾಬಿಯ ಮೆರಿಟ್ ಬಿಟ್ಟರೆ ಯಡ್ಡಿಗೆ ಮತ್ತಾವ ಬಲವೂ ಇಲ್ಲದಾಗಿದೆ. ಪ್ರಬಲ ಲಿಂಗಾಯತ ಜಾತಿ ಅಸ್ತ್ರ ಹಿಡಿದು ಹೈಕಮಾಂಡ್ ಬೆದರಿಸುತ್ತಿರುವ ಆತ ರಾಜ್ಯಾಧ್ಯಕ್ಷತೆಗಾಗಿ ಹಿಕಮತ್ತು ನಡೆಸಿದ್ದಾರೆ. ತುಂಬ ನಾಜೂಕಾಗಿ ಯಡ್ಡಿ ಕಾರ್ಯಾಚರಣೆಗೆ ಇಳಿದಿದ್ದಾರೆ. ಆತ ರಾಜ್ಯ ಬಿಜೆಪಿ ಘಟಕದ ನೇತಾಗಿರಿಗೆ ಬೇಡಿಕೆ ಇಟ್ಟಿರುವುದು ಕುತೂಹಲಕರವಾಗಿದೆ. "ನಂಗೆ ಮುಖ್ಯಮಂತ್ರಿ ಸ್ಥಾನದ ಆಸೆಯಿಲ್ಲ.... ಪಕ್ಷ ಗೆದ್ರೆ ಆ ಪೀಠ ಯಾರಿಗೆ ಬೇಕೋ ಅವರಿಗೆ ಕೊಡಿ.... ನಂಗೆ ರಾಜ್ಯ ಅಧ್ಯಕ್ಷತೆ ಸಾಕು.... ಪಕ್ಷ ಕಟ್ಟಿ ಬೆಳೆಸಿ ಅಧಿಕಾರಕ್ಕೆ ತರ್ತೇನೆ.... ಒಳಜಗಳದಿಂದ ಹೀನಾಯವಾಗಿ ಅಧಿಕಾರ ಕಳೆದುಕೊಂಡ ನಮ್ಮ ಪಕ್ಷಕ್ಕೆ ಗತವೈಭವ ನೀಡಬೇಕೆಂಬುದು ಒಂದೇ ನನ್ನ ಗುರಿ..." ಎಂದೆಲ್ಲ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಮಾಮನ ಮುಂದೆ ಯಡ್ಡಿ ಅಲವತ್ತುಕೊಂಡಿದ್ದಾರೆ, ಪಾಪ! ಯಡ್ಡಿ ಮಹಾತ್ಮನ ಈ ಸಂಚುಗಾರಿಕೆ ಹೇಗಿದೆಯೆಂದರೆ, ಇಲಿ ಎದುರು ಬೆಕ್ಕು ವೈರಾಗ್ಯ ಪ್ರದರ್ಶಿಸಿದಂತಿದೆ ಎಂದಾತನ ಎದುರಾಳಿ ಬಣ ಬಿದ್ದು ಬಿದ್ದು ನಗುತ್ತಿದೆ.


ಯಡ್ಡಿಗೆ ಗೊತ್ತು, ಅಷ್ಟು ಸುಲಭಕ್ಕೆ ತನಗೆ ರಾಜ್ಯಾಧ್ಯಕ್ಷತೆ ಒಪ್ಪಿಸಲು ಅನಂತಕುಮಾರ್, ಈಶ್ವರಪ್ಪ, ಸದಾನಂದಗೌಡ, ಆರ್. ಅಶೋಕ್, ಗೋವಿಂದ ಕಾರಜೋಳ, ಅರವಿಂದ ಲಿಂಬಾವಳಿ, ಸಿ.ಟಿ. ರವಿ... ಮುಂತಾದ ಕಡು ಶತ್ರುಗಳು ತಯಾರಿಲ್ಲ ಎಂಬುದು. ಹೀಗಾಗಿ ಆತ ಮತ್ತೊಂದು ದಾಳ ಹೈಕಮಾಂಡ್ ಎದುರು ಉರುಳಿಸಿದ್ದಾರೆ. ಲಿಂಗಾಯತರಲ್ಲಿ ತನ್ನನ್ನು ಬಿಟ್ಟರೆ ಇನ್ಯಾರಿಗೂ ಸ್ಟೇಟ್ ಪ್ರೆಸಿಡೆಂಟಾಗುವ ಯೋಗ್ಯತೆಯಿಲ್ಲ, ಇತರ ಜಾತಿಯಲ್ಲಾದರೆ ಆ ಅರ್ಹತೆಯಿರೋದು ತನ್ನ ಕಷ್ಟ-ಸುಖದ ನಿಕ್ಕ ಪರಮಾಪ್ತೆ ಶೋಭಾ ಕರಂದ್ಲಾಜೆ ಒಬ್ಬಳಿಗೆ ಮಾತ್ರ ಎಂಬುದು ಯಡ್ಡಿಯ ಬಲವಾದ ವಾದ!! ಯಡ್ಡಿಯ ವೀಕ್‌ನೆಸ್ಸೇ ಅಂಥದ್ದು. ಬಿಜೆಪಿಯಲ್ಲಿ ತಾನು-ತನ್ನವಳು ಶೋಭಾ ಇಬ್ಬರೇ ರಾಜ-ರಾಣಿ. ಉಳಿದೋರೆಲ್ಲ ತಮ್ಮ ಕಾಲಾಳುಗಳೆಂಬ ಧೋರಣೆಯಿಂದಾಗಿಯೇ ಹಿಂದೆ ಯಡ್ಡಿ ಬಿಜೆಪಿಯಲ್ಲಿ ಬಂಡಾಯ ಭುಗಿಲೇಳಲು ಕಾರಣರಾಗಿದ್ದರು. ಈಗಲೂ ಅದೇ ನೀತಿ ಆತ ಮುಂದುವರಿಸಿದ್ದಾರೆ.





ಹಾಗೊಮ್ಮೆ ತನಗೆ ರಾಜ್ಯ ಯಜಮಾನಿಕೆ ನೀಡಲು ಸಾಧ್ಯವಾಗದಿದ್ದರೆ, ತನ್ನ ಮುದ್ದಿನ ಕೂಗುಮಾರಿ ಶೋಭಾಳಿಗೆ ಆ ಪಟ್ಟ ಕಟ್ಟಲು ಆತ ಹೈಕಮಾಂಡ್‌ಗೆ ದುಂಬಾಲು ಬಿದ್ದಿದ್ದಾರೆ. ಯಡ್ಡಿ ಎಂದರೇನೇ ಉರಿದುಬೀಳುವ ಬಿಜೆಪಿಯೊಳಗಿನ ದೊಡ್ಡದೊಂದು ಗ್ಯಾಂಗ್ ಈ ಅಧಿಕಪ್ರಸಂಗಿ ಶೋಭಾಳ ಕ್ಯಾಪ್ಟನ್‌ಶಿಪ್ಪಿಗೆ ಒಪ್ಪಿಗೆ ನೀಡೋದಾದ್ರೂ ಹ್ಯಾಂಗೆ? ಯಡ್ಡಿಯ ಈ ಐಡಿಯಾ ಕಂಡು-ಕೇಳಿಯೇ ಈ ಬಣ ಸಿಡಿದೆದ್ದಿದೆ. ಲಿಂಗಾಯತ ಲಾಬಿಯ ಮೌತ್‌ಪೀಸ್ ಪ್ರಭಾಕರ ಕೋರೆಯಂಥ ವ್ಯಾಪಾರಿ ಬುದ್ಧಿಯ ಬಾಲಬಡುಕರು ಬಿಟ್ಟರೆ ಉಳಿದವರೆಲ್ಲರೂ ಒಂದಾಗಿ ಯಡ್ಡಿಯ ಬುರ್ನಾಸ್ ಬೇಡಿಕೆ ವಿರುದ್ಧ ತಿರುಗಿ ಬಿದ್ದಿದ್ದಾರೆ. ಯಡ್ಡಿಯ ಈ ಮಸಲತ್ತಿಗೆ ಮಣಿದರೆ ರಾಜ್ಯದಲ್ಲಿ ಬಿಜೆಪಿ ಶಾಶ್ವತವಾಗಿ ಮುಳುಗಿದಂತೆಯೇ ಎಂಬ ಅಪಾಯದ ಅರಿವು ಈ ತಂಡ ಮೂಡಿಸುತ್ತಿದೆ. ಈಗ ಬಿಜೆಪಿಯೊಳಗಿನ ಬಡಿದಾಟ ಹೇಗಿದೆಯೆಂದರೆ, ಯಡ್ಡಿ-ಶೋಭಾರ ಲಿಂಗಾಯತ ತಂಡಕ್ಕೆ ಎದುರು ನಿಂತು ಇತರೆಲ್ಲ ಸಮುದಾಯದ ನಾಯಕಾಗ್ರೇಸರು ತೊಡೆ ತಟ್ಟುತ್ತಿದ್ದಾರೆ!


ಯಡ್ಡಿಯನ್ನು ಈಗಿರುವ ಸ್ಥಿತಿಯಲ್ಲೇ ಇಟ್ಟು ಅಪ್ರಸ್ತುತನಾಗಿಸುವ ಸಂಘಟಿತ ತಂತ್ರಗಾರಿಕೆಗೆ ಸಮಾನಾಂತರವಾಗಿ ಅಧ್ಯಕ್ಷ ಪೀಠಾಕಾಂಕ್ಷಿಗಳು ವಶೀಲಿಬಾಜಿ ನಡೆಸಿದ್ದಾರೆ. ಜಾತಿವಾರು ತರ್ಕಗಳು ಮಂಡಿತವಾಗುತ್ತಿದೆ. ಬ್ರಾಹ್ಮಣ ಸಮುದಾಯದ ಪ್ರಹ್ಲಾದ ಜೋಶಿ ಈಗ ಅಧ್ಯಕ್ಷರಾಗಿದ್ದಾರೆ. ಮತ್ತದೇ ಕೋಮಿಗೆ ಅವಕಾಶ ಬೇಡ. ಲಿಂಗಾಯತ ಕೋಮಿನ ಜಗದೀಶ ಶೆಟ್ಟರ್ ಮತ್ತು ಈಶ್ವರಪ್ಪ ವಿಧಾನ ಮಂಡಲದ ವಿರೋಧ ಪಕ್ಷದ ನಾಯಕರಾಗಿರುವುದರಿಂದ ಈ ಜಾತಿಯವರಿಗೂ ಚಾನ್ಸ್ ಕೊಡುವುದು ಸರಿಯಲ್ಲ. ಒಕ್ಕಲಿಗರ ಅಥವಾ ದಲಿತರಿಗೆ ಈ ಬಾರಿ ಪಟ್ಟ ಕಟ್ಟಿದರೆ ಪಾರ್ಟಿಗೆ ಪ್ಲಸ್ ಆಗುತ್ತದೆ ಎಂಬ ಕೂಗೆದ್ದಿದೆ.













ಒಕ್ಕಲಿಗರ ಆರ್. ಅಶೋಕ್ ಮತ್ತು ಕೇಂದ್ರ ಕಾನೂನು ಮಂತ್ರಿ ಸದಾನಂದ ಗೌಡ ತಂತಮ್ಮ ಬುಟ್ಟಿಯೊಳಗೆ ಹಾವು ಬಿಟ್ಟು ಅದರ ತಾಕತ್ತು ನೋಡುತ್ತಿದ್ದಾರೆ. ಅತ್ತ ದಲಿತ ವರ್ಗದ ಅರವಿಂದ ಲಿಂಬಾವಳಿ ಮತ್ತು ಗೋವಿಂದ ಕಾರಜೋಳ ಬಿಜೆಪಿಯ ಗರ್ಭಗುಡಿ ಸಂಸ್ಕೃತಿಯಲ್ಲಿ ತಮಗೆ ಕಿಮ್ಮತ್ತಿಲ್ಲ ಎಂದು ಖಾತ್ರಿಯಾಗಿದ್ದರೂ ಅದಲು-ಬದಲು ಕಂಚೀ ಕದಲು ಆಟದಲ್ಲಿ ಅದೃಷ್ಟ ಖುಲಾಯಿಸಬಹುದೆಂದು ಕಾದಿದ್ದಾರೆ. ಕೇಂದ್ರದಲ್ಲಿ ರೈಲು ತಪ್ಪಿಸಿಕೊಂಡು ಕಾನೂನು ಖಾತೆಗೆ ಎಸೆಯಲ್ಪಟ್ಟ ಸದಾನಂದ ಗೌಡ, ಆಡ್ವಾಣಿ ಶಿಷ್ಯನೆಂಬ ಕಾರಣಕ್ಕೆ ರಸಗೊಬ್ಬರದಂಥ 'ರಸ'ವಿಲ್ಲದ ಹಗುರ ಖಾತೆಗೆ ಸೀಮಿತ ಮಾಡಲಾಗಿರುವ ಅನಂತಕುಮಾರ್ ಶಾಸ್ತ್ರಿಗಳಿಗೆ ಮೋದಿಯ ಹೆಡ್‌ಮಾಸ್ತರಿಕೆಗೆ ತುತ್ತಾಗಿ ಹೈರಾಣಾಗೋದಕ್ಕಿಂತ ರಾಜ್ಯಾಧ್ಯಕ್ಷತೆಯೇ ಗೌರವಾನ್ವಿತ ಎನಿಸುತ್ತಿದೆ. ಹೀಗಾಗಿ ಇವರಿಬ್ಬರ ಲಾಬಿಗೆ ಬಿರುಸು ಬರುತ್ತಿದೆ. ಒಕ್ಕಲಿಗರಲ್ಲಿ ತಾನೇ ಸರ್ವಸಮ್ಮತ-ಧೀರೋದಾತ್ತ-ಯೋಗ್ಯ ಕ್ಯಾಂಡಿಡೇಟ್ ಎಂಬುದು ಅಶೋಕ್ ಅನಿಸಿಕೆ. ಎಂಪಿ ಟಿಕೆಟ್ ತಪ್ಪಿಸಿ ತನಗೆ ಮಾಡಿರುವ ಅನ್ಯಾಯ ಈಗಲಾದರೂ ಸರಿಪಡಿಸಿ ಎಂಬೋದು ಅಶೋಕ್ ಅಳಲು.

ಬಾಯಿಬಡುಕ ಸಿ.ಟಿ. ರವಿ ಒಕ್ಕಲಿಗರಲ್ಲಷ್ಟೇ ಅಲ್ಲ, ಸಂಘ ಪರಿವಾರದ ಕಣ್ಮಣಿಗಳಲ್ಲಿ ತಾನೇ ರಾಜ್ಯ ಯಜಮಾನಿಕೆಗೆ ಸಕಲ ಗುಣವಿರುವ ಸಂಪನ್ನ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಒಬ್ಬೊಬ್ಬರದು ಒಂದೊಂದು ನಮೂನೆಯ ತಿಣುಕಾಟ. ಯಡ್ಡಿ ಬೆಂಗಳೂರಿನ ರಾಷ್ಟ್ರೀಯ ಕಾರ್ಯಕಾರಣಿ ಹೊತ್ತಲ್ಲೇ ತನ್ನ ಆಜ್ಞಾನುಧಾರಿ ಪರಿಚಾರಕ ಪ್ರಭಾಕರ ಕೋರೆಯಿಂದ ರಾಜ್ಯಾಧ್ಯಕ್ಷತೆ ಬದಲಾವಣೆಯ ಮಾತಾಡಿಸಿದ್ದಾರೆ. ಇದಕ್ಕೆ ತಕ್ಷಣ ಸದ್ಯಕ್ಕೆ ಅಧ್ಯಕ್ಷತೆ ಖಾಲಿಯಿಲ್ಲ ಎಂಬ ಮಾರುತ್ತರವೂ ಬಂದಿದೆ. ಈ ಹೊಗೆ ಬಿಜೆಪಿಗೆ ಬೀಳಲಿರುವ ಬೆಂಕಿಯ ಸೂಚನೆ!!

■ ಶುದ್ಧೋಧನ

ಮಂಡ್ಯ: ಗೆಳತಿಗೆ ಗತಿ ಕಾಣಿಸಿದ ಸಲಿಂಗಿ

ಪ್ರೀತಿಸಿದ ಹುಡುಗಿ ತನಗೆ ಸಿಗಲಿಲ್ಲಾ ಅಂತಾ ಪಾಗಲ್ ಹುಡುಗರು ಆ ಹುಡುಗಿಯನ್ನೇ ಕೊಲೆ ಮಾಡಿದ ಅನೇಕ ಘಟನೆಗಳನ್ನು ನೋಡಿದ್ದೇವೆ, ಕೇಳಿದ್ದೇವೆ... ಆದರೆ ಮೋಹಿಸಿದ ಗೆಳತಿ ಸಿಗಲಿಲ್ಲವೆಂದು ಮತ್ತೊಬ್ಬ ಹುಡುಗಿ ಆಕೆಯನ್ನು ಬರ್ಬರವಾಗಿ ಕೊಂದು ಹಾಕಿದ ವಿಚಿತ್ರ ಘಟನೆ ನೋಡಿರಲಿಲ್ಲ, ಕೇಳಿರಲಿಲ್ಲ. ಆದರೀಗ ಮಂಡ್ಯ ನಗರದ ಹಾಲಹಳ್ಳಿ ಬಡಾವಣೆ ಅಂತಹದ್ದೊಂದು ಪ್ರಕರಣಕ್ಕೆ ಸಾಕ್ಷಿಯಾಗಿದೆ. ಮೇಲ್ನೋಟಕ್ಕೆ 'ಥಿಕ್' ಫ್ರೆಂಡ್ಸ್‌ಗಳಂತೆ ಕಂಡುಬರುತ್ತಿದ್ದ ದಿವ್ಯಶ್ರೀ ಮತ್ತು ಅನುಪಾರ ಸ್ನೇಹದ ಪರದೆಯ ಹಿಂದೆ ಅದೇನೇನೆಲ್ಲಾ ನಡೆದಿತ್ತೋ ಗೊತ್ತಿಲ್ಲ; ಆದರೆ ಪರಿಣಾಮ ಮಾತ್ರ ಭೀಕರವಾಗಿ ಹೊರಬಿದ್ದಿದೆ. ಇತ್ತೀಚೆಗಷ್ಟೆ ಮದುವೆಯಾಗಿದ್ದ ದಿವ್ಯಶ್ರೀ ಹೆಣವಾಗಿ ಮಣ್ಣು ಸೇರಿದ್ದರೆ, ಆಕೆಯನ್ನು ಕೊಂದ 'ಮೋಹದಾ ಗೆಳತಿ' ಅನುಪಾ ಜೈಲು ಕಂಬಿ ಎಣಿಸುತ್ತಿದ್ದಾಳೆ.


ಮಂಡ್ಯದ ಅನುಪಾ ಹಾಗೂ ದಿವ್ಯಶ್ರೀ 'ಗಾಢ' ಸ್ನೇಹಿತೆಯರು. ಹಾಗಂತ ಅವರದು ಬಾಲ್ಯಸ್ನೇಹವೇನಲ್ಲ; ಒಬ್ಬರಿಗೊಬ್ಬರು ಪರಿಚಯವಾದದ್ದು ಕೇವಲ 8 ತಿಂಗಳ ಹಿಂದಷ್ಟೆ! 24 ವರ್ಷ ವಯಸ್ಸಿನ ದಿವ್ಯಶ್ರೀ ಎಂ.ಎಸ್ಸಿ ಮುಗಿಸಿ ಅರಕೇಶ್ವರ ಕಾಲೇಜಿನಲ್ಲಿ ಬಿಎಡ್ ಓದುತ್ತಿದ್ದರೆ, ಅವಳಿಗಿಂತ ಎರಡು ವರ್ಷ ಚಿಕ್ಕವಳಾದ ಅನುಪಾ ಡಿಪ್ಲೊಮೊದಲ್ಲಿ ಫೇಲಾಗಿ ಸತ್ಯಹರಿಶ್ಚಂದ್ರ ಸರ್ಕಲ್ ಬಳಿ ಮೊಬೈಲ್ ಅಂಗಡಿ ನೋಡಿಕೊಂಡಿದ್ದಳು. ಹಾಗೇ ಸುಮ್ಮನೆ ಶುರುವಾದ ಅವರೀರ್ವರ ಸ್ನೇಹ ಕೆಲವೇ ದಿನಗಳಲ್ಲಿ ತನ್ನ ಮಿತಿಯನ್ನು ತಳ್ಳಿಕೊಂಡು ಸಲಿಂಗ ಕಾಮದ ವ್ಯಾಪ್ತಿಗೆ ಬಂದು ನಿಂತಿತ್ತು. ಎಷ್ಟರಮಟ್ಟಿಗೆ ಎಂದರೆ, ದಿವ್ಯಶ್ರೀ ನೇರವಾಗಿ ಅನುಪಾಳ ಮನೆಗೆ ಹೋಗಿ ಅವಳದೇ ರೂಮಿನಲ್ಲಿ ಬಾಗಿಲು ಹಾಕಿಕೊಂಡು ಗಂಟೆಗಟ್ಟಲೆ ಕಳೆಯುತ್ತಿದ್ದರು. ಮೊದಮೊದಲು ಮನೆಯವರು ಇದನ್ನು ನಿರ್ಲಕ್ಷಿಸಿದರಾದರು ಅದ್ಯಾವಾಗ ಅವರಿಬ್ಬರೂ ತಬ್ಬಿಕೊಳ್ಳೋದು, ಮುತ್ತಿಟ್ಟುಕೊಳ್ಳೋದು, ಮೊಬೈಲ್‌ನಲ್ಲಿ ಅಶ್ಲೀಲವಾಗಿ ಸೆಲ್ಫಿ ತೆಗೆದುಕೊಳ್ಳೋದು ಶುರು ಮಾಡಿದರೋ ಆಗ ಅವರಿಗೂ ಅಸಹಜತೆಯ ವಾಸನೆ ಮೂಗಿಗೆ ಬಡಿದಿತ್ತು. ಈ ಕುರಿತು ಅನುಪಾಳನ್ನು ಅವಳ ಅಕ್ಕ ಪ್ರಶ್ನಿಸಿದಾಗ 'ನಾವಿಬ್ಬರೂ ಕ್ಲೋಸ್ ಫ್ರೆಂಡ್ಸ್. ಈಗಿನ ಕಾಲದಲ್ಲಿ ಇವೆಲ್ಲಾ ಸಾಮಾನ್ಯ' ಅಂತ ಹೇಳುತ್ತಿದ್ದಳು. ಒಮ್ಮೆ ಅನುಪಾಳ ಅಕ್ಕ ಇದೇ ವಿಚಾರವಾಗಿ ಇಬ್ಬರ ಮೇಲೂ ರೇಗಾಡಿದಾಗ 'ನಿಮ್ಮದು ಹಳೇ ಕಾಲದ ಸ್ನೇಹ. ಆದ್ರೆ ನಾವು ಈ ಕಾಲದ್ವು. ನಮ್ಮ ಸ್ನೇಹ ಹೀಗೇ ಇರೋದು' ಅಂತ ಜವಾಬು ಕೊಟ್ಟಿದ್ದರು. ಇದ್ಯಾಕೊ ವಿಪರೀತವಾಗುತ್ತಿದೆ ಅಂತ ಅನುಪಾಳ ಅಕ್ಕನಿಗೆ ಅನ್ನಿಸಿದಾಗ ಮುಲಾಜಿಲ್ಲದೆ ದಿವ್ಯಶ್ರೀ ಮೇಲೆ ರೇಗಾಡಿ ಇನ್ನೆಂದೂ ನೀನು ನಮ್ಮ ಮನೆಗೆ ಬರಬೇಡ ಅಂತ ತಾಕೀತು ಮಾಡಿದ್ದರು. ಅದಾದ ಮೇಲೆ ದಿವ್ಯಶ್ರೀ, ಅನುಪಾಳ ಮನೆಗೆ ಹೋಗುವುದನ್ನು ನಿಲ್ಲಿಸಿದ್ದಳು. ಆದರೆ ಅಷ್ಟರಲ್ಲಾಗಲೆ ದಿವ್ಯಶ್ರೀಳ 'ಸ್ನೇಹ'ವನ್ನು ಅಪಾರವಾಗಿ ಹಚ್ಚಿಕೊಂಡುಬಿಟ್ಟಿದ್ದ ಅನುಪಾಗೆ ಅವಳನ್ನು ಬಿಟ್ಟಿರುವುದು ಸಾಧ್ಯವಿಲ್ಲದಂತಾಗಿತ್ತು, ಹಾಗಾಗಿ ಅನುಪಾಳೇ ದಿವ್ಯಶ್ರೀಯ ಮನೆಗೆ ಹೋಗಿ ಗಂಟೆಗಟ್ಟಲೆ ಕಾಲ ಕಳೆಯುತ್ತಿದ್ದಳು.

ದಿವ್ಯಶ್ರೀ ತಂದೆ ಚಂದ್ರಶೇಖರ್‌ಗೆ ಇಬ್ಬರ ನಡವಳಿಕೆ ಮೇಲೆ ಅನುಮಾನ ಬಂದರೂ ಇಬ್ಬರು ಕ್ಲೋಸ್ ಫ್ರೆಂಡ್ಸ್‌ಗಳಲ್ವ ಅಂತ ಸಮಾಧಾನ ತಂದುಕೊಂಡು ಸುಮ್ಮನಾಗಿದ್ದರು. ಈ ಮಧ್ಯೆ ದಿವ್ಯಶ್ರೀಗೆ ಜ್ವರ ಬಂದಾಗ ಅನುಪಾಳೇ ಮನೆಗೆ ಬಂದು ದಿವ್ಯಳನ್ನು ಉಪಚರಿಸಿದ್ದಳು. ಅನುಪಾ ದಿವ್ಯಶ್ರೀಗೆ ಕಿಸ್ ಮಾಡೋದು, ತಬ್ಬಿಕೊಳ್ಳೋದು, ಭಾರೀ ಬೆಲೆ ಗಿಫ್ಟ್ ಕೊಡೋದನ್ನು ನೋಡಿದ ತಂದೆ ಚಂದ್ರಶೇಖರ್ ಅನುಮಾನ ಮತ್ತಷ್ಟೂ ಜೋರಾಗಿ ತಮ್ಮ ಮನೆಗೆ ಬರದಂತೆ ಅನುಪಾಳಿಗೆ ಎಚ್ಚರಿಕೆ ನೀಡಿದ್ದರು. ಎರಡೂ ಕಡೆಯಿಂದ 'ಮನೆಪಾಠ'ಕ್ಕೆ ಬ್ರೇಕ್ ಬಿದ್ದ ತರುವಾಯ ಅವರಿಬ್ಬರು ಸಿನಿಮಾ, ಪಾರ್ಕ್, ಶಾಪಿಂಗ್ ಅಂತೆಲ್ಲಾ ಜೊತೆಯಾಗಿಯೇ ಸುತ್ತಾಟಕ್ಕೆ ನಿಂತಿದ್ದರು.

ಈ ಮಧ್ಯೆ ಚಂದ್ರಶೇಖರ್ ಬೆಂಗಳೂರಿನ ಸಾಗರ್ ಎಂಬ ಯುವಕನ ಜೊತೆ ತಮ್ಮ ಮಗಳು ದಿವ್ಯಶ್ರೀಗೆ ಮದುವೆ ನಿಶ್ಚಯ ಮಾಡಿದ್ದರು. ಮೋಹದ ಗೆಳತಿ ಮತ್ತೊಬ್ಬನನ್ನು ಕೈಹಿಡಿಯುವ ವಿಚಾರ ತಿಳಿದ ಅನುಪಾ ಕೆಂಡಾಮಂಡಲವಾಗಿದ್ದಳು. ಆಗ 'ನೀನು ಈಗಲೇ ಮದುವೆಯಾಗೋದು ನನಗಿಷ್ಟವಿಲ್ಲ, ನಾನು ನಿನ್ನನ್ನು ಲವ್ ಮಾಡ್ತಾ ಇದ್ದೀನಿ. ಇನ್ನು 2-3 ವರ್ಷ ಮದುವೆಯನ್ನು ಮುಂದಕ್ಕೆ ಹಾಕು ಆಮೇಲೆ ನೋಡೋಣ' ಅಂತಾ ಅನುಪಾ ದಿವ್ಯಶ್ರೀಗೆ ಹೇಳಿದ್ದಳು. ದಿವ್ಯಶ್ರೀ ಕೂಡ ತನ್ನ ತಾಯಿಯ ಬಳಿ 'ನಾನು ಇನ್ನೂ ಓದ್ಬೇಕು, ಈಗ್ಲೇ ಮದುವೆ ಬೇಡ' ಎಂದು ವರಸೆ ತೆಗೆದಿದ್ದಳು. ಈ ಮೊದಲೇ ಇವರ ಸ್ನೇಹದ ಗಾಢತೆಯನ್ನು ಕಂಡಿದ್ದ ದಿವ್ಯಶ್ರೀ ತಂದೆಗೆ ಮಗಳ ವರಾತದ ವಾಸನೆ ಸಲೀಸಾಗಿ ಬಡಿದಿತ್ತು. ಆಗ ಅನೂಪಳನ್ನು ಕರೆದು 'ಏಕೆ ಈ ರೀತಿ ನನ್ನ ಮಗಳ ತಲೆ ಕೆಡಿಸಿದ್ದೀಯ. ನಮ್ಮನ್ನು ಸುಮ್ಮನೆ ಬಿಟ್ಬಿಡು ಬಿಡಮ್ಮ' ಅಂತ ದೈನೇಸಿಯಾಗಿ ಕೇಳಿಕೊಂಡಿದ್ದರು. ಆಗಲೂ ತನ್ನ ಮೊಂಡಾಟ ಬಿಡದ ಅನುಪಾ 'ಅಂಕಲ್, ದಿವ್ಯಶ್ರೀಗೆ ಈಗಲೇ ಮದುವೆ ಮಾಡಬೇಡಿ, ಓದುತ್ತಿದ್ದಾಳೆ. ಅವಳಿಗೆ ಸಾಗರ್‌ಗಿಂತ ಚೆಲುವ ಗಂಡ ಸಿಕ್ತಾನೆ. ಇವರಿಗಿಂತಲೂ ಒಳ್ಳೆಯ ಸಂಬಂಧ ಬರುತ್ತದೆ' ಅಂತೆಲ್ಲಾ ಗೋಗರೆದಿದ್ದಳು.

ಮುಗಿದ ಮದುವೆ

ಅನುಪಾಳ ಮಾತು ಕೇಳಿದರೆ ತಾವೆಂತಹ ಇಕ್ಕಟ್ಟಿಗೆ ಸಿಲುಕಬೇಕಾದೀತು ಎಂಬ ಅರಿವಿದ್ದ ದಿವ್ಯಶ್ರೀ ತಂದೆ ಚಂದ್ರಶೇಖರ್ ಅದಕ್ಕೆಲ್ಲಾ ಸೊಪ್ಪು ಹಾಕದೆ ಗೊತ್ತು ಮಾಡಿದ್ದ ಯುವಕನೊಂದಿಗೆ ಮಗಳ ಮದುವೆಯನ್ನು ಮಾರ್ಚ್ 8ರಂದು ನಗರದ ಎಸ್.ಬಿ.ಸಮುದಾಯದಲ್ಲಿ ನಡೆಸಲು ನಿರ್ಧರಿಸಿ ಲಗ್ನಪತ್ರಿಕೆ ಮುದ್ರಿಸಿಯೇ ಬಿಟ್ಟರು. ಮದುವೆ ನಿಲ್ಲಿಸಲು ಅನುಪಾ ವೆರೈಟಿ ವೆರೈಟಿ ತಂತ್ರ ಹೂಡಿದರೂ



ದಿವ್ಯಶ್ರೀ ಮತ್ತು ಅನುಪಾ

ಅವ್ಯಾವವೂ ಬರ್ಕತ್ತಾಗಲಿಲ್ಲ. ಕೊನೆಯ ಪ್ರಯತ್ನವಾಗಿ ತನಗೆ ಟೈಫಾಯಿಡ್ ಆಗಿದೆ ಅಂತ ಹೇಳಿಕೊಂಡು ಸೀದಾ ಆಸ್ಪತ್ರೆಯಲ್ಲಿ ಅಡ್ಮಿಟ್ ಆದಳು. ಇತ್ತ ಅನುಪಾ ಮದುವೆಗೆ ಬರದಿದ್ರೆ ತಾನು ತಾಳಿ ಕಟ್ಟಿಸಿಕೊಳ್ಳುವುದೇ ಇಲ್ಲ ಅಂತ ದಿವ್ಯಶ್ರೀ ಪಟ್ಟು ಹಿಡಿದು ಕುಳಿತಳು. ಮದುವೆಯೊಂದು ನಿರ್ವಿಘ್ನವಾಗಿ ನಡೆದರೆ ಸಾಕು ಆಮೇಲೆ ಮಗಳನ್ನು ಬೆಂಗಳೂರಿಗೆ ಸಾಗಹಾಕಿ ಇಬ್ಬರ ಗೆಳೆತನಕ್ಕೆ ಬ್ರೇಕ್ ಹಾಕಬಹುದು ಎಂದು ಆಲೋಚಿಸಿದ ಚಂದ್ರಶೇಖರ್ ಮಗಳ ಬಲವಂತಕ್ಕೆ ಮಣಿದು, ತಾವೇ ಆಸ್ಪತ್ರೆಗೆ ಹೋಗಿ ಅನುಪಾಳ ಮನವೊಲಿಸಿ ಡಿಸ್ಚಾರ್ಜ್ ಮಾಡಿಸಿಕೊಂಡು ಮದುವೆಗೆ ಕರೆದುಕೊಂಡು ಬಂದರು. ಹಾಗೋಹೀಗೋ ಮದುವೆ ಶಾಸ್ತ್ರ ಮುಗಿಯಿತು.

ಮದುವೆಯ ನಂತರ ಅನುಪಾ ಪಕ್ಕಾ ವಿರಹಿಯಂತೆ ವರ್ತಿಸಲು ಶುರು ಮಾಡಿದಳು. ದಿವ್ಯಶ್ರೀ ಇಲ್ಲದೆ ನಾನು ಬದುಕೋಲ್ಲ ಅಂತ ಬಡಬಡಿಸಲಾರಂಭಿಸಿದಳು. ಅದು ಯಾವ ಅತಿರೇಕಕ್ಕೆ ಹೋಯಿತೆಂದರೆ ಮನೆಯಲ್ಲಿ ನೇಣು ಹಾಕಿಕೊಳ್ಳುವ ಯತ್ನಕ್ಕೂ ಅನುಪಾ ಮುಂದಾದಳು. ಆದರೆ ಮನೆಯವರು ಅಡ್ಡ ಬಂದು, ಅನಾಹುತ ತಪ್ಪಿಸಿ ಬುದ್ಧಿವಾದ ಹೇಳಿ ಸಮಾಧಾನಪಡಿಸಿದ್ದರು.

ಆದರೂ ತಮ್ಮಿಬ್ಬರ ನಡುವಿನ ಆ 'ಸಲಿಂಗ ಬಾಂಧವ್ಯ'ವನ್ನು ಮರೆಯಲಾರದೆ ಚಡಪಡಿಕೆಗೆ ಬಿದ್ದ ಅನುಪಾ ಗೆಳತಿಯ ಪ್ರಸ್ತಶಾಸ್ತ್ರದ ರಾತ್ರಿಯೇ ಆಕೆಯ ಮನೆಗೆ ಬಂದು ದಿವ್ಯಶ್ರೀ ಜೊತೆ ಮಾತನಾಡಬೇಕು ಅಂತ ರಾದ್ಧಾಂತ ಮಾಡಿದಳು. ಆದರೆ ದಿವ್ಯಶ್ರೀಯ ಪೋಷಕರು ಬೈದು ಅನುಪಾಳನ್ನು ಅಲ್ಲಿಂದ ವಾಪಸ್ ಕಳುಹಿಸಿದರು. ಅಲ್ಲದೇ ಮುಂಜಾಗರೂಕತೆಯ ಉದ್ದೇಶದಿಂದ ತಮ್ಮ ಮಗಳ ಬಳಿ ಇದ್ದ ಮೊಬೈಲನ್ನೂ ತಾವೇ ಕಿತ್ತಿಟ್ಟುಕೊಂಡರು. ಮನೆಯಿಂದ ಹೊರಬಿದ್ದ ಅನುಪಾ ಸಾಕಷ್ಟು ಬಾರಿ ಕಾಲ್ ಮಾಡಿದರೂ ಮೊಬೈಲ್ ದಿವ್ಯಾಶ್ರೀಯ ಹೆತ್ತವರ ಬಳಿ ಇದ್ದುದರಿಂದ ಪ್ರಯೋಜನವಾಗಲಿಲ್ಲ. ತನ್ನನ್ನು ಗೆಳತಿ ನೆಗ್ಲೆಕ್ಟ್ ಮಾಡುತ್ತಿದ್ದಾಳೆ ಅಂತ ಸಿಟ್ಟು ಮಾಡಿಕೊಂಡ ಅನೂಪ ನೇರವಾಗಿ ದಿವ್ಯಶ್ರೀ ಗಂಡ ಸಾಗರ್ ಮೊಬೈಲ್‌ಗೇ ಕಾಲ್ ಮಾಡಿ 'ದಿವ್ಯಶ್ರೀ ಜೊತೆ ಮಾತನಾಡಬೇಕು ಫೋನ್ ಕೊಡಿ' ಅಂತ ಕೇಳಿದಳು. ಕಥೆ, ಚಿತ್ರಕಥೆ, ನಿರ್ದೇಶನ ಒಂದೂ ಅರಿಯದ ಗಂಡ ಸಾಗರ್ ಗೆಳತಿಯರಿಬ್ಬರೂ ಏನೋ ಮಾತಾಡಿಕೊಳ್ಳಲಿ ಅಂತ ಫೋನನ್ನು ಹೆಂಡತಿ ಕೈಗಿಟ್ಟ. ಪಕ್ಕದಲ್ಲಿ ಗಂಡ ಇದ್ದುದರಿಂದಲೋ ಏನೊ ದಿವ್ಯಶ್ರೀ ಫೋನ್‌ನಲ್ಲಿ ಸರಿಯಾಗಿ ಮಾತನಾಡಿಲ್ಲ. ಇದರಿಂದಾಗಿ ಮತ್ತಷ್ಟೂ ಸಿಟ್ಟಾದ ಅನುಪಾ 'ಐ ಹೇಟ್ ಯೂ' ಅಂತ ಸಾಗರ್ ಮೊಬೈಲ್‌ಗೇ ಮೆಸೇಜ್ ಬಿಸಾಕಿದಳು.

ಇದಾದ ಮೂರು ದಿನಗಳ ಬಳಿಕ ಕಾಂಪಿಟ್ ಪರೀಕ್ಷೆ ಬರೆಯುವ ಸಲುವಾಗಿ ದಿವ್ಯಶ್ರೀ ಗಂಡ ಸಾಗರ್ ಜೊತೆ ಬೆಂಗಳೂರಿಗೆ ತೆರಳಿದಳು. ಬಲ್ಲ ಮೂಲಗಳಿಂದ ವಿಷಯ ಖಾತ್ರಿಪಡಿಸಿಕೊಂಡ ಅನುಪಾ ದಿವ್ಯಶ್ರೀಗೆ ಫೋನ್ ಮಾಡಿ 'ನನ್ನನ್ನು ಏಕೆ ಬಿಟ್ಟು ಹೋಗ್ತಿದೀಯ, ನಾನೂ ಬರ್ತೀನಿ ನನ್ನನ್ನೂ ಕರ್ಕೊಂಡು ಹೋಗು' ಅಂತ ದುಂಬಾಲು ಬಿದ್ದಳು. ಜೊತೆಯಲ್ಲಿ ಗಂಡ ಇದ್ದುದರಿಂದ ಅದು ಸಾಧ್ಯವಾಗಿರಲಿಲ್ಲ. ಆದರೇನಂತೆ ತಾನೊಬ್ಬಳೇ ಸಪರೇಟಾಗಿ ಬೆಂಗಳೂರಿಗೆ ಬಂದಿಳಿದ ಅನೂಪಾ ದಿವ್ಯಶ್ರೀಯನ್ನು ಭೇಟಿ ಮಾಡಿ ಮಾತನಾಡಿದಳು. ಸಲಿಂಗಕಾಮದ ಹುಚ್ಚು ಪ್ರೀತಿಯಲ್ಲಿ ಹೊರಬರಲಾರದಷ್ಟು ದೂರಹೋಗಿದ್ದ ಅನುಪಾ, ದಿವ್ಯಶ್ರೀ ತಲೆಕೆಡಿಸಿದ್ದರಿಂದ ಇಬ್ಬರೂ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದರು. ಅದರಂತೆ ಶ್ರೀರಂಗಪಟ್ಟಣದ ಕೆಆರ್‌ಎಸ್ ಬಳಿ ಒಮ್ಮೆ ಹಾಗೂ ನಿಮಿಷಾಂಭ ದೇವಾಲಯದ ಬಳಿ ಕಾವೇರಿ ನದಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರಾದರೂ ಕೊನೇ ಕ್ಷಣದಲ್ಲಿ ಸ್ಕ್ರೀನ್‌ಪ್ಲೇ ಚೇಂಜಾಗಿ ಸೂಸೈಡ್ ಸ್ಪಾಟ್‌ಗಳಿಂದ ವಾಪಾಸಾಗಿದ್ದರು. ಇದು ಮನೆಯವರಿಗೆ ಗೊತ್ತಾಗಿ ಇಬ್ಬರಿಗೂ ಮತ್ತೊಂದು ಸುತ್ತಿನ ಬುದ್ಧಿವಾದ ಹೇಳುವ ಯತ್ನ ಮಾಡಿದ್ದರು.

ಮರ್ಡರ್ ಮಾಡೇಬಿಟ್ಟಳು

ಇತ್ತ ದಿವ್ಯಶ್ರೀ ಗಂಡನ ಜೊತೆ ಬೆಂಗಳೂರು ಸೇರಿಕೊಂಡಿದ್ದರಿಂದ ಅವರಿಬ್ಬರ ನಡುವೆ ಒಡನಾಟ ಕೊಂಚ ಕಡಿಮೆಯಾದಂತಾಗಿತ್ತು. ಆದರೆ ಅನೂಪಳ ಒಳಗಿದ್ದ 'ಭಗ್ನ ಗೆಳತಿ' ಬೇಗೆ ತಾಳದೆ ಕೊಸರಾಡುತ್ತಲೇ ಇದ್ದಳು. ಆ ಕೊಸರಾಟದಲ್ಲೇ ಆಕೆ ಗಟ್ಟಿ ನಿರ್ಧಾರವೊಂದಕ್ಕೆ ಬಂದಿದ್ದಳು. ಅದು ಮಾರ್ಚ್ 31, ಅಂದರೆ ದಿವ್ಯಶ್ರೀ ಮದುವೆಯಾಗಿ ಕೇವಲ 23 ದಿನವಾಗಿತ್ತಷ್ಟೆ. ಅರ್ಕೇಶ್ವರ ಕಾಲೇಜಿನಲ್ಲಿ ತನ್ನ ಬಿ.ಎಡ್ ಪರೀಕ್ಷೆ ಬರೆಯುವುದಕ್ಕೋಸ್ಕರ ಬೆಂಗಳೂರಿನಿಂದ ದಿವ್ಯಶ್ರೀ ಮಂಡ್ಯಕ್ಕೆ ಬಂದಿದ್ದಳು. ಸುದ್ದಿ ಮುಟ್ಟಿದ್ದೇ ತಡ ಅನೂಪಾ, ದಿವ್ಯಶ್ರೀ ಮೊಬೈಲ್‌ಗೆ ಹಲವಾರು ಬಾರಿ ಕರೆ ಮಾಡಿದಳು. ಪರೀಕ್ಷೆ ಬರೆಯುವುದಕ್ಕಾಗಿ ದಿವ್ಯಶ್ರೀ ಮೊಬೈಲನ್ನು ಮನೆಯಲ್ಲೇ ಬಿಟ್ಟು ಹೋಗಿದ್ದರಿಂದ ಆಕೆ ಅಟೆಂಡ್ ಮಾಡಲು ಆಗಿರಲಿಲ್ಲ. ಆಕೆ ಕಾಲೇಜಿಗೆ ಹೋಗಿರುವ ಕ್ಲೂ ಹಿಡಿದ ಅನೂಪಾ, ದಿವ್ಯಶ್ರೀಯ ಗೆಳತಿಯೊಬ್ಬಳಿಗೆ ಫೋನಾಯಿಸಿ ದಿವ್ಯಶ್ರೀಗೆ ಕೊಡುವಂತೆ ಕೇಳಿದಳು. ಫೋನಿನಲ್ಲಿ ಮಾಮೂಲಿಯಾಗೇ ಮಾತಾಡಿದ ಅನೂಪ 'ನಿನ್ನನ್ನು ನೋಡಿ ಎಷ್ಟೋ ದಿನವಾಯ್ತು, ಸಿಗು ನೋಡ್ಬೇಕು' ಅಂದಳು. ಅಂತೆಯೇ ತನ್ನ ಹೊಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ ಕಾಲೇಜಿನ ಬಳಿ ತೆರಳಿದ ಅನುಪಾ, ಗೆಳತಿಯನ್ನು ಮಾತಾಡಿಸಿದ್ದಲ್ಲದೆ ಹಾಗೇ ಒಂದು ರೌಂಡ್ ಸುತ್ತಾಡಿಕೊಂಡು ಬರೋಣ ಎಂದು ಕರೆದುಕೊಂಡು ಹೊರಟಳು. ಅಪಾಯದ ಅರಿವಿಲ್ಲದ ದಿವ್ಯಶ್ರಿ ತಾನೇ ಅನುಪಾಳ ಬೈಕ್ ರೈಡ್ ಮಾಡಿಕೊಂಡು ಸಾವಿನ ಮನೆಗೆ ದಿಬ್ಬಣ ಹೊರಟಳು. ಗೆಳತಿಯನ್ನು ಸೀದಾ ಅಸಿಸ್ಟೆಂಟ್ ಟೌನ್ ಬಳಿ ಇರುವ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿ ಪಕ್ಕ ನಿರ್ಜನ ಪ್ರದೇಶಕ್ಕೆ ಕರೆತಂದ ಅನೂಪಾ ಕೆಲಹೊತ್ತು ಖುಷಿಯಾಗಿಯೇ ಕಾಲ ಕಳೆದಳು.

ನಂತರ ಅನುಪಾಳಲ್ಲಿದ್ದ ಕ್ರೂರ ಮನಸ್ಸು ದಿವ್ಯಶ್ರೀ ಕೊಲೆಗೆ ಸಿದ್ಧವಾಗಿತ್ತು. ಕೊನೆಯದಾಗಿ ತನ್ನನ್ನು ಒಮ್ಮೆ ಗಾಢವಾಗಿ ತಬ್ಬಿಕೊಳ್ಳುವಂತೆ ಅನೂಪಾ ದಿವ್ಯಾಳನ್ನು ಕೇಳಿಕೊಂಡಳು. ಅವರಿಬ್ಬರ ನಡುವೆ ಅದೇನೂ ಹೊಸದಲ್ಲವಾದ್ದರಿಂದ ಕಿಂಚಿತ್ತೂ ಅನುಮಾನಿಸದ ದಿವ್ಯ ಅನೂಪಳ ತೆಕ್ಕೆಗೆ ಮೈ ಅನಿಸಿದ್ದಳು. ಕೂಡಲೇ ತಾನು ತಂದಿದ್ದ ವೈರ್ ಅನ್ನು ಕೈಗೆತ್ತಿಕೊಂಡ ಅನುಪಾ, ದಿವ್ಯಶ್ರೀ ಕುತ್ತಿಗೆಗೆ ಬಿಗಿದು ಉಸಿರು ನಿಂತು ಹೋಗುವಂತೆ ಎಳೆದಳು.

ಪ್ರಾಣ ಉಳಿಸಿಕೊಳ್ಳಲು ದಿವ್ಯಶ್ರೀ ಒಂದಿಷ್ಟು ಕೊಸ... ಒದ್ದಾಡಿದಳಾದರು ಆ ನಿರ್ಜನ ಪ್ರದೇಶದಲ್ಲಿ ಅವ್ಯಾ... ಆಕೆಯ ಜೀವ ಉಳಿಸಲು ನೆರವಾಗಿ ಬರದಾದವು. ಕೆ... ನಿಮಿಷದಲ್ಲಿ ದಿವ್ಯಶ್ರೀ ಹೆಣವಾಗಿ ನೆಲದ ಮೇಲೆ ಬಿ... ತನ್ನ 'ಪ್ರಾಣ' ಸ್ನೇಹಿತೆಯನ್ನೇ ನಿರ್ದಯವಾಗಿ ಕೊ... ಅನೂಪಾ ಆನಂತರ ಏನೂ ಆಗೇ ಇಲ್ಲವೇನೊ ಎಂ... ಮನೆ ಸೇರಿಕೊಂಡು ಗಪ್‌ಚುಪ್ ಆಗಿಬಿಟ್ಟಳು.

ವಿಷಯ ಹೊರಬಂತು


ಇತ್ತ ಪರೀಕ್ಷೆ ಬರೆಯಲೆಂದು ಬೆಳಗ್ಗೆ ಮನೆ... ಮಗಳು ಸಂಜೆಯಾದರೂ ಮನೆಗೆ ವಾಪಾಸಾಗದ್ದನ್ನು ಕ... ಗಾಬರಿಯಾದ ದಿವ್ಯಶ್ರೀಯ ತಂದೆ ಚಂದ್ರಶೇ... ಕಾಲೇಜಿನ ಬಳಿ ತೆರಳಿ, ಆಕೆಯ ಸ್ನೇಹಿತೆಯರ... ವಿಚಾರಿಸಿದರು. ಆಗ ಅನೂಪಾ, ದಿವ್ಯಶ್ರೀಯ... ಕರೆದೊಯ್ದಿದ್ದ ಸಂಗತಿ ಅವರಿಗೆ ಗೊತ್ತಾಯಿತು. ಕೂ... ಅನೂಪಾಳ ಮನೆಗೆ ಹೋದ ಚಂದ್ರಶೇಖರ್ ತನ್ನ ಮ... ಎಲ್ಲಿ ಎಂದು ಆಕೆಯನ್ನು ವಿಚಾರಿಸಿದರು. 'ನನಗೆ ದಿವ... ಸಿಕ್ಕೇ ಇಲ್ಲ, ನಾನವಳನ್ನು ನೋಡಿಯೇ ಇಲ್ಲ, ದಿವ್ಯಶ್ರೀ... ನನಗೆ ಫೋನ್ ಮಾಡಿ ಭೇಟಿಯಾಗೋಣ ಅಂದಿ... ಆದರೆ ನಾನು ಅವಳನ್ನು ಭೇಟಿ ಮಾಡಲು ಸಾಧ್ಯವಾ... ಅಂತ ಕಥೆ ಕಟ್ಟಿ ವಾದಿಸಿದ ಅನೂಪಾ ಕೊಲೆಯ ಸುಳಿ... ಕಿಂಚಿತ್ತೂ ಬಿಟ್ಟುಕೊಡಲಿಲ್ಲ.

ತಕ್ಷಣವೇ ಪೂರ್ವ ಪೊಲೀಸ್ ಠಾಣೆಯಲ್ಲಿ ... ಮಗಳು ದಿವ್ಯಶ್ರೀ ಕಾಣೆಯಾಗಿದ್ದಾಳೆಂದು ಚಂದ್ರಶೇ... ದೂರು ನೀಡಿದರು. ಮಾರನೆಯ ದಿನ, ಅಂದರೆ ಏ... 1ರಂದು ನಗರದ ಹೊರವಲಯದ ಸರ್ಕಾರಿ ರೇಷ್ಮೆ ... ಕೋಠಿಯ ಬಳಿಯಲ್ಲಿ ಸುಮಾರು 25 ವರ್ಷ ವಯ... ಅಪರಿಚಿತ ಯುವತಿಯ ಶವ ಪತ್ತೆಯಾಗಿರುವ ... ಪೊಲೀಸರಿಗೆ ಮುಟ್ಟಿತು. ಮಂಡ್ಯ ಗ್ರಾಮಾಂತರ ... ಪಿಎಸ್‌ಐ ಶಿವಕುಮಾರ್ ಯುವತಿಯ ಶವವನ್ನು ಜಿಲ... ಸಾಗಿಸಿ ಗುರುತು ಪತ್ತೆಯ ತನಿಖೆ ಶುರು ಮಾಡಿಕೊ... ಹಿಂದಿನ ದಿನವಷ್ಟೇ ಪೂರ್ವ ಪೊಲೀಸ್ ಠಾಣೆ... ಯುವತಿಯೊಬ್ಬಳ ಮಿಸ್ಸಿಂಗ್ ಕಂಪ್ಲೆಂಟ್ ದಾಖಲ... ವಿಷಯ ತಿಳಿದ ಸಿಪಿಐ ಲೋಕೇಶ್, ದಿವ್ಯಶ್ರೀ ... ಚಂದ್ರಶೇಖರ್‌ಗೆ ಸುದ್ದಿ ಮುಟ್ಟಿಸಿ ಜಿಲ್ಲಾಸ್ಪತ್ರೆಗೆ ಬ... ಶವದ ಗುರುತು ಹಿಡಿಯುವಂತೆ ತಿಳಿಸಿದರು. ಶವ ನೋ... ಚಂದ್ರಶೇಖರ್ ಸ್ಥಳದಲ್ಲೇ ಕುಸಿದುಬಿದ್ದರು; ಯಾಕೆ... ಅದು ಅವರ ಮಗಳು ದಿವ್ಯಶ್ರೀಯ ಹೆಣವಾ... ಪೊಲೀಸರ ತನಿಖೆಯ ಸಂದರ್ಭದಲ್ಲಿ ಅನುಪಾಳ ... ತಮಗೆ ಅನುಮಾನ ಇರುವುದಾಗಿ ಚಂದ್ರಶೇ... ಹೇಳಿಕೊಂಡಿದ್ದರು. ಪೊಲೀಸರು ಅನುಪಾಳನ್ನು ... ಕರೆತಂದು ವಿಚಾರಣೆ ಮಾಡುತ್ತಿದ್ದಂತೆಯೇ ಬೆದರಿ... ಇಡೀ ವೃತ್ತಾಂತವನ್ನೇ ಬಿಚ್ಚಿಟ್ಟು ತಪ್ಪೊಪ್ಪಿಕೊಂಡಳ...

ಪೊಲೀಸರಿಂದ ಕೊಲೆ ರಹಸ್ಯ ಅಧಿಕೃತ... ಬಯಲಾಗುತ್ತಿದ್ದಂತೆಯೇ ಮಂಡ್ಯ ನಗರ ಬೆಚ್ಚಿ... ಸಲಿಂಗಕಾಮ ಅಕ್ರಮವೋ, ಸಕ್ರಮವೋ ಎಂಬ... ಕೋರ್ಟ್ ಆವರಣದಲ್ಲಿ, ಪ್ರಜ್ಞಾವಂತ ವೇದಿಕೆಗಳಲ್ಲಿ ... ಚರ್ಚೆ ನಡೆಯುತ್ತಲೇ ಇದೆ. ಕೆಲ ದೇಶ... ಸಲಿಂಗಕಾಮವನ್ನು ಮಾನ್ಯ ಮಾಡಿದ್ದರೂ ಭಾ... ಸಂಪ್ರದಾಯಸ್ಥರು ಅದಕ್ಕಿನ್ನೂ ಸಿದ್ಧರಾಗಿಲ್ಲ. ಕಳೆದ ... ದೆಹಲಿ ಹೈಕೋರ್ಟ್ ಇಂತಹ ವ್ಯತಿರಿಕ್ತ ತೀರ್ಪು ... ವ್ಯಕ್ತಿ-ಅಭಿವ್ಯಕ್ತಿ ಸ್ವಾತಂತ್ರ್ಯ ವಲಯದಿಂದ ... ಎದುರಾದುದನ್ನು ಕಂಡು ತಮ್ಮೊಳಗೆ ಚರ್ಚಿಸಿಕೊಂ... ಗೇಲಿ ಮಾಡಿಕೊಂಡೋ ಸುಮ್ಮನಾಗುತ್ತಿದ್ದ ಜನರಿಗ... ನೆರೆಯಲ್ಲೇ ಒಂದು ಹೆಣ ಬೀಳಿಸುವಷ್ಟರ... ಸಲಿಂಗಕಾಮ ಬೇರೂರಿದೆ ಎಂಬುದನ್ನು ... ದಿಗ್ಭ್ರಾಂತವಾಗಿದೆ.

■ ಮಂಡ್ಯ ನಾಗ...

ಅಂಕೋಲಾ: ಹೆಚ್ಚುತ್ತಿದೆ ದಲಿತಪೀಡಕರ ಅಟ್ಟಹಾಸ



ಸಮಾನತೆ ಸಾರುವ ಸಂವಿಧಾನ ಅಸ್ತಿತ್ವಕ್ಕೆ ಬಂದು ...ವರ್ಷಗಳಾಗುತ್ತಿದ್ದರೂ ಈ ನೆಲದಲ್ಲಿ ದಲಿತರ ಬೆವರು, ...ಕ್ಕೆ ಬೆಲೆ ಇಲ್ಲವೆನ್ನುವುದನ್ನು ಖೈರ್ಲಾಂಜಿಯಿಂದ ಹಿಡಿದು ...ಬಾಲಪಲ್ಲಿಯವರೆಗೆ ನೂರಾರು ದುರಂತಗಳು ಮತ್ತೆಮತ್ತೆ ...ಬೀತುಪಡಿಸುತ್ತಿವೆ. ಇತ್ತೀಚೆಗಷ್ಟೆ ಚಾಮರಾಜನಗರದ ...ತೇಮರಹಳ್ಳಿಯಲ್ಲಿ ನಡೆದ ಇಬ್ಬರು ದಲಿತ ಕೂಲಿಗಳ ...ರಚ್ಛೇದನ ಕೃತ್ಯವನ್ನು ಹೇಗೆಲ್ಲಾ ತಿರುಚಲಾಗುತ್ತಿದೆ ಎಂಬುದು ...ಕು ದಲಿತೋದ್ಧಾರದ ಮುಖವಾಡ ಬಯಲುಮಾಡಲು.

ಅಂಕೋಲಾ ತಾಲ್ಲೂಕಂತೂ ಇತ್ತೀಚಿನ ದಿನಗಳಲ್ಲಿ ...ಲಿತ ದೌರ್ಜನ್ಯದ ಬೀಡಾಗುತ್ತಿದೆ. ದಲಿತ ಸಮುದಾಯದ ...ಮಾನ್ಯ ಕೂಲಿಗಳಿಂದ ಮೊದಲ್ಗೊಂಡು ಉನ್ನತ ದಲಿತ ...ಧಿಕಾರಿಗಳವರೆಗೆ ಇಲ್ಲಿ ಯಾರಿಗೂ ಭದ್ರತೆಯೇ ಇಲ್ಲದಂತ ...ತಾವರಣ ಸೃಷ್ಟಿಯಾಗುತ್ತಿದೆ. ಕಳೆದ ಒಂದೆರಡು ತಿಂಗಳ ...ವಧಿಯಲ್ಲಿ ನಡೆದ ಮೂರು ಘಟನೆಗಳು ಅಂಕೋಲಾದಲ್ಲಿ ...ಲಿತರಿಗೆ ಎಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ...ಂಬುದಕ್ಕೆ ಸಾಂಕೇತಿಕ ಸಾಕ್ಷಿಯಾಗಿ ನಿಲ್ಲುತ್ತವೆ.

ತಹಸೀಲ್ದಾರ್‌ರಿಗೂ ಕಿರುಕುಳ

ಸಾಮಾನ್ಯ ದಲಿತರ ಪಾಡು ಒತ್ತಟ್ಟಿಗಿರಲಿ, ತಹಸೀಲ್ದಾರ್ ...ತಹ ತಾಲ್ಲೂಕು ದಂಡಾಧಿಕಾರಿಗೇ ಇಲ್ಲಿ ನೆಮ್ಮದಿಯಿಲ್ಲ ...ಂದಮೇಲೆ ಪರಿಸ್ಥಿತಿ ಅದಿನ್ನೆಷ್ಟು ಹದಗೆಡುತ್ತಿರಬೇಡ. ...ಲ್ಲಿಯ ತಹಸೀಲ್ದಾರ್ ವಿ.ಜೆ.ಲಾಂಜೇಕರ್ ದಲಿತ ...ಮುದಾಯಕ್ಕೆ ಸೇರಿದವರು. ಇದೇ ಕಾರಣಕ್ಕೆ ಅವರನ್ನು ...ರ್ವಜನಿಕವಾಗಿ ಅವಮಾನಿಸುವ ಘಟನೆಗಳು ...ಡೆಯುತ್ತಲೇ ಇವೆ. ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ...ಂದು ಕಾರ್ಯಕ್ರಮದಲ್ಲಿ ಸಾರ್ವಜನಿಕರ ಮಧ್ಯದಲ್ಲಿಯೇ ...ಂಜೇಕರ್ ಅವರಿಗೆ ಅವಾಚ್ಯವಾಗಿ ಬೈದು ನಿಂದಿಸಿದ ...ಟನೆ ನಡೆಯಿತು.

ಸಾರ್ವಜನಿಕ ಸಮಾರಂಭವೊಂದರಲ್ಲಿ ಭಾಗವಹಿಸು ...ದಕ್ಕಾಗಿ ಲಾಂಜೇಕರ್ ವೇದಿಕೆಯ ಮೇಲೇರಿದ್ದರು. ಅದೇ ...ಮಯಕ್ಕೆ ವೇದಿಕೆ ಏರಿದ ವ್ಯಕ್ತಿಯೊಬ್ಬ 'ನೀನೊಬ್ಬ ...ಲಿತನಾಗಿದ್ದು, ನಿನಗೆ ಅಧಿಕಾರ ನಡೆಸುವುದೇ ಗೊತ್ತಿಲ್ಲ, ...ಹಸೀಲ್ದಾರರಾಗಲು ಯೋಗ್ಯತೆ ಇಲ್ಲ' ಎಂಬಿತ್ಯಾದಿಯಾಗಿ ...ಂದಿಸಲು ಶುರು ಮಾಡಿದ್ದ. ವಿಪರ್ಯಾಸವೆಂದರೆ ಹಾಗೆ ...ಂದಿಸಿದ್ದು ಯಾರೊ ಅನಕ್ಷರಸ್ಥನೊ ಅಥವಾ ಮಾನಸಿಕ ...ಸ್ವಸ್ಥನೊ ಅಲ್ಲ; ತನ್ನನ್ನು ತಾನು ನ್ಯಾಯದೇವತೆಯ ರಕ್ಷಕ ...ಂದು ಕರೆದುಕೊಳ್ಳುವ ಒಬ್ಬ ನ್ಯಾಯವಾದಿ. ಆ ಮಹಾಶಯ ...ಹೋರಾಟಗಾರನಂತೆ ಪೋಸು ನೀಡುತ್ತಾ ಅಮಾಯಕರಿಗೆ ...ರುಕುಳ ನೀಡುವುದನ್ನೇ ತನ್ನ ಕಸುಬಾಗಿಸಿಕೊಂಡ ಕ್ರಿಮಿ. ...ಲ್ಲದೇ ತಾನೊಬ್ಬ ಸಾರಾಯಿ ವಿರೋಧಿ ಹೋರಾಟ ...ಗಾರನೆಂದು ಹೇಳಿಕೊಳ್ಳುತ್ತಲೇ ಸಾರಾಯಿ ಮಾರುವವರನ್ನು ...ಅಬಕಾರಿ ಇಲಾಖೆಯವರು ಬಂಧಿಸಿದರೆ, ಅಂತಹವರನ್ನು ...ಜಾಮೀನಿನ ಮೇಲೆ ಬಿಡುಗಡೆ ಮಾಡಿಸಿ ಲಕ್ಷಾಂತರ ...ರೂಪಾಯಿ ವಸೂಲಿ ಮಾಡುವ ಜಾಯಮಾನದವನು. ...ವನ ಹೋರಾಟದ ವೈಖರಿ ಜನರ ಪಾಲಿಗೆ ನಗ್ನಸತ್ಯ!


ಇಂತಹ ವ್ಯಕ್ತಿ ಸಭಾ ಮರ್ಯಾದೆಯನ್ನೂ ಲೆಕ್ಕಿಸದೆ ...ತಹಸೀಲ್ದಾರರ ಮೇಲೆ ಪೂರ್ವಾಗ್ರಹಪೀಡಿತನಾಗಿ ...ನಿಂದಿಸುತ್ತಿದ್ದರೆ ಆತನನ್ನು ತಡೆಯುವ ಗೋಜಿಗೆ ಯಾರೂ ...ಮುಂದಾಗಲಿಲ್ಲ, ಬದಲಿಗೆ ಇದೀ ಘಟನೆಯನ್ನು ಮೊಬೈಲ್ ...ನಲ್ಲಿ ಚಿತ್ರಿಸಿಕೊಂಡು ವಿಕೃತ ಖುಷಿ ಅನುಭವಿಸಲಾಯ್ತು ...ದರಿಂದ ಬೇಸತ್ತ ಲಾಂಜೇಕರ್ ಐ.ಪಿ.ಸಿ 499 ಸೆಕ್ಷನ್ ...ಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಆದರೆ ಯಥಾಪ್ರಕಾರ ...ಲ್ಲೂ ದಲಿತಪೀಡಕರನ್ನು ರಕ್ಷಿಸಲು ಮೇಲ್ವರ್ಗದವರು ...ಸರತ್ತು ಮಾಡುತ್ತಿದ್ದಾರೆ. ಆ ವಕೀಲನ ಪರವಾಗಿ ...ನಿಂತಿರುವುದಲ್ಲದೆ ಪ್ರಕರಣವನ್ನು ಮುಂದುವರಿಸದಂತೆ ...ತಹಸೀಲ್ದಾರರಿಗೆ ಎಚ್ಚರಿಕೆಯನ್ನೂ ನೀಡುತ್ತಿದ್ದಾರೆ. ಹೀಗೆ ...ತನ ತುಷ್ಟೀಕರಣಕ್ಕೆ, ನಿಂತಿರುವ ಮೇಲ್ವರ್ಗದ

ಬೆಂಬಲದಿಂದಾಗಿ ಆತ ಇದುವರೆವಿಗೂ ತಾನು ಮಾಡಿದ ತಪ್ಪಿಗೆ ಕ್ಷಮೆ ಕೇಳಿಲ್ಲ, ಬದಲಾಗಿ ತಾನು ಮಾಡಿದ್ದೇ ಘನಕಾರ್ಯ ಎನ್ನುವ ರೀತಿ ರಾಜಾರೋಷವಾಗಿ ಓಡಾಡಿಕೊಂಡಿದ್ದಾನೆ; ಅದೇ ಹೋರಾಟಗಾರನ ಗೆಟಪ್ಪಿನಲ್ಲಿ!

ಪಟ್ಟಣ ಪಂಚಾಯ್ತಿಯಲ್ಲೂ ತಪ್ಪದ ಕಿರುಕುಳ

ಇನ್ನು ಪಟ್ಟಣ ಪಂಚಾಯತಿಯ ದಲಿತ ಸದಸ್ಯ ಸಂದೀಪ ಗಣಪತಿ ಬಂಟ್ ವಿಚಾರದಲ್ಲಿ ನಡೆದಿರುವ ಹಕೀಕತ್ತನ್ನು ಗಮನಿಸಿದರೆ ಸಮಾಜದಲ್ಲಿ ದಲಿತಶೋಷಕರನ್ನು ರಕ್ಷಿಸಲು ಹೇಗೆಲ್ಲಾ ಹುನ್ನಾರ ನಡೆಸಲಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ವಿಪರ್ಯಾಸವೆಂದರೆ ಪೊಲೀಸ್ ಇಲಾಖೆಯೇ ಈ ವಿಚಾರದಲ್ಲಿ ಆಪಾದಿತರ ಪರವಾಗಿ ವರ್ತಿಸುತ್ತಿರುವುದು ಕೂಡಾ ಇಲ್ಲಿ ಸಾಬೀತಾಗಿದೆ.

ಅಂಕೋಲಾದ ಪಟ್ಟಣ ಪಂಚಾಯತ್‌ನ 14 ಸದಸ್ಯರಲ್ಲಿ 6 ಬಿಜೆಪಿಗರು, 4 ಕಾಂಗ್ರೆಸ್ಸಿಗರು, 2 ಬಿಎಸ್‌ಆರ್ ಕಾಂಗ್ರೆಸ್ಸಿಗರು, 1 ಜೆಡಿಸ್, 1 ಪಕ್ಷೇತರ ಸದಸ್ಯರಿದ್ದಾರೆ. ಹಾಗಾಗಿ ಪಟ್ಟಣ ಪಂಚಾಯ್ತಿಗೆ ಸಂಘಪರಿವಾರ ಹಿನ್ನೆಲೆಯ ಕೆ.ನಾರ್ವೇಕರ್‌ನೇ ಅಧ್ಯಕ್ಷ. ಸಹಜವಾಗಿಯೇ ಸಂಘ ಪರಿವಾರದ ಕಾನೂನಿನಂತೆ ಇಲ್ಲಿ ದಲಿತರ್‍ಯಾರಿಗೂ ನಯಾಪೈಸೆಯ ಕಿಮ್ಮತ್ತಿಲ್ಲ. ಅವರು ಇಲ್ಲಿ ಸೊಲ್ಲೆತ್ತುವುದೇ ಮಹಾಪರಾಧ ಎನ್ನುವ ವಾತಾವರಣ ನಿರ್ಮಾಣ ಮಾಡಲಾಗಿದೆ. ಆದರೆ ಸಂದೀಪ್ ಗಣಪತಿ ಕೊಂಚ ಬಿಸಿರಕ್ತದ ಯುವಕ. ಅನ್ಯಾಯ ಅಕ್ರಮಗಳನ್ನು ಪ್ರಶ್ನಿಸುವ ಜಾಯಮಾನದವ. ಅದೇ ಕಾರಣಕ್ಕೆ ಅಧ್ಯಕ್ಷ ನಾರ್ವೇಕರ್‌ಗೆ ಸಂದೀಪ್ ಎಂದರೆ ಎಲ್ಲಿಲ್ಲದ ಸಿಟ್ಟು. ಆತನ ಮೇಲೆ ಮೊದಲಿನಿಂದಲೂ ಹಗೆ ಸಾಧಿಸುತ್ತಲೇ ಬಂದಿದ್ದಾನೆ.



ಫೆಬ್ರವರಿ 2 ರಂದು ನಡೆದ ಪಟ್ಟಣ ಪಂಚಾಯತ ವಿಶೇಷ ಸಭೆಯಲ್ಲಿ ಮಾಹಿತಿ ಕೇಳಲು ಸಂದೀಪ್ ಮುಂದಾದಾಗ, ಜನಪ್ರತಿನಿಧಿಗಳ ಸಭೆ ಎನ್ನುವುದನ್ನೂ ಲೆಕ್ಕಿಸದೆ ಸಂದೀಪ್‌ನನ್ನು ಅಧ್ಯಕ್ಷ ನಾರ್ವೇಕರ್ ಅವಾಚ್ಯ ಶಬ್ದಗಳಿಂದ ಬೈದು ಜಾತಿನಿಂದನೆ ಮಾಡಿದ್ದ. ಸಭಾ ನಡವಳಿ ಪಾಲಿಸಬೇಕಾದ ಮುಖ್ಯಾಧಿಕಾರಿ ಉಪಸ್ಥಿತನಿದ್ದರೂ ಸಂದೀಪ್ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆಗೆ ಮೂಕಸಾಕ್ಷಿಯಾಗಿ ಕುಳಿತಿದ್ದ. ತನ್ನ ಮೇಲಾದ ಈ ಮಾನಸಿಕ ಹಲ್ಲೆಯಿಂದ ಜರ್ಜರಿತನಾದ ಸಂದೀಪ್, ಪಟ್ಟಣ ಪಂಚಾಯತ ಅಧ್ಯಕ್ಷ ಭಾಸ್ಕರ ಕೆ.ನಾರ್ವೇಕರ್, ಮುಖ್ಯ ಅಧಿಕಾರಿ ಹಾಗೂ ಇಂಜಿನೀಯರ್ ವಿರುದ್ಧ ಠಾಣೆಯಲ್ಲಿ ದೂರು ದಾಖಲಿಸಿದ್ದ.

ಪಟ್ಟಣ ಪಂಚಾಯ್ತಿ ಅಧ್ಯಕ್ಷ ಭಾಸ್ಕರ್ ಕೆ ನಾರ್ವೇಕರ್ ಪ್ರಭಾವಿ ಕುಳ ಮತ್ತು ರಾಜಕಾರಣಿಗಳು ಹಾಗೂ ಸಂಘಪರಿವಾರದ ನೆಂಟಸ್ತಿಕೆ ಹೊಂದಿರುವುದರಿಂದ ಕೇಸು ದಾಖಲಿಸಿಕೊಂಡ ಪೊಲೀಸರು ಆತನನ್ನು ಬಂಧಿಸುವ ಬದಲು 'ಆತ ತಮ್ಮ ಕೈಗೆ ಸಿಗುತ್ತಿಲ್ಲ, ನಾಪತ್ತೆಯಾಗಿದ್ದಾನೆ' ಎಂಬ ಸಬೂಬು ಹೇಳಿಕೊಂಡು ಪ್ರಕರಣವನ್ನು ಹಳ್ಳ ಹಿಡಿಸುವ ತಯಾರಿಯಲ್ಲಿದ್ದರು.

ಮಾರ್ಚ್ 8 ರಂದು ಪೊಲೀಸ್ ಠಾಣೆ ಎದುರೇ ಇರುವ ಜೈಹಿಂದ್ ಮೈದಾನದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೃಷಿ ಉತ್ಸವವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಬಂದೋಬಸ್ತ್‌ಗೆಂದು ಪಿಎಸ್‌ಐ ಕುಮಾರ್ ಹಾಡಕರ್ ಅವರ ನೇತೃತ್ವದಲ್ಲಿ ಪೊಲೀಸರ ದಂಡೇ ಅಲ್ಲಿತ್ತು. ಯಾವ ನಾರ್ವೇಕರ್ ತಮ್ಮ ಕೈಗೆ ಸಿಗುತ್ತಿಲ್ಲ, ನಾಪತ್ತೆಯಾಗಿದ್ದಾನೆ, ಭೂಗತನಾಗಿದ್ದಾನೆ ಅಂತ ಪೊಲೀಸರು ನೆಪ ಹೇಳುತ್ತಿದ್ದರೊ ಅದೇ ನಾರ್ವೇಕರ್ ಆ ಸಮಾರಂಭದ ಮುಖ್ಯ ಅತಿಥಿಯಾಗಿ ವೇದಿಕೆಯಲ್ಲಿ ರಾರಾಜಿಸುತ್ತಿದ್ದ. ಆಪಾದಿತ ವ್ಯಕ್ತಿ ಕಣ್ಣ ಮುಂದಿದ್ದರೂ ಆತನನ್ನು ಬಂಧಿಸದೆ ಸೆಲ್ಯೂಟ್ ಹೊಡೆದು ವೇದಿಕೆಯಲ್ಲಿ ಆತನಿಗೆ ರಕ್ಷಣೆ ಕೊಟ್ಟುಕೊಂಡು ನಿಲ್ಲುತ್ತಾರೆಂದರೆ ಪೊಲೀಸ್ ಇಲಾಖೆ ದಲಿತಶೋಷಣೆಯ ಈ ಪ್ರಕರಣವನ್ನು ಅದಿನ್ನೆಷ್ಟು ಗಂಭೀರವಾಗಿ ಪರಿಗಣಿಸಿರಬೇಡ?

ಈ ವಿಪರ್ಯಾಸ ಕಂಡ ಅದ್ಯಾರೊ ಪುಣ್ಯಾತ್ಮ ಕೂಡಲೇ ಸಿ.ಪಿ.ಐ ಗಣೇಶ ಹೆಗಡೆಯವರಿಗೆ ಫೋನಾಯಿಸಿ ಅವರ ಇಲಾಖೆಯ ಗುಣಗಾನ ಮಾಡಿರಬೇಕು, ಅವರು ಕೂಡಲೇ ಆರೋಪಿ ನಾರ್ವೇಕರ್‌ರನ್ನು ಬಂಧಿಸುವಂತೆ ಪಿಎಸ್‌ಐಗೆ ಆರ್ಡರ್ ಮಾಡಿದ್ದರು. ಆದರೆ ಈ ಸಂಗತಿ ಲೀಕ್ ಆಗಿ ನಾರ್ವೇಕರ್‌ನ ಕಿವಿ ತಲುಪಿತ್ತು, ವೇದಿಕೆಯಲ್ಲಿದ್ದ ಭಾಸ್ಕರ ಕೆ.ನಾರ್ವೇಕರ್‌ನು ಸ್ಟೇಜ್ ಹಿಂಬದಿಯಿಂದ ಜಿಗಿದವನೇ ಅಲ್ಲಿಂದ ಪೇರಿಕಿತ್ತಿದ್ದ. ಕೊನೆಗೂ ಪೋಲಿಸರ ಬಾಯಿಂದ ಬಂದಿದ್ದು 'ಓಹ್! ಆರೋಪಿ, ಜಸ್ಟ್ ಮಿಸ್' ಎಂಬ ಅಣಿಮುತ್ತುಗಳು ಮಾತ್ರ.

ಆರಂಭದಲ್ಲಿ ಹಾಲು ಮಾರಾಟ ಮಾಡಿ ಜೀವನ ಮಾಡಿಕೊಂಡಿದ್ದ ಈ ನಾರ್ವೇಕರ್ ಸಂಘ ಪರಿವಾರದ ಪಥಕ್ಕೆ ಬಿದ್ದು ರಾಜಕೀಯ ಸೇರಿಕೊಂಡಿದ್ದಾನೆ. ಬಿಜೆಪಿ ಸರ್ಕಾರದ ಸಂದರ್ಭದಲ್ಲಿ ಸಚಿವನಾಗಿದ್ದ ಆನಂದ ಅಸ್ನೋಟಿಕರನ ಪ್ರಭಾವ ಬಳಸಿಕೊಂಡೇ ಇವತ್ತು ಬೇನಾಮಿ ಹೆಸರಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಗೆ ಒಡೆಯ ಎನಿಸಿದ್ದಾನೆ. ಅಲ್ಲದೇ ತಾನು ಮೀನುಗಾರನೆಂದು ಸುಳ್ಳು ದಾಖಲೆ ಸೃಷ್ಟಿಸಿ ಮಂಜುಗಡ್ಡೆ ಕಾರ್ಖಾನೆ ನಿರ್ಮಿಸಿಕೊಂಡು ಅದರಿಂದಲೂ ಕಮಾಯಿ ಕಾಣುತ್ತಿದ್ದಾನೆ. ಹಾಗೆ ನೋಡಿದರೆ ಇಲ್ಲಿ ಅರ್ಬನ್ ಬ್ಯಾಂಕಿನ ಅಧ್ಯಕ್ಷ ಕೂಡಾ ಆಗಿರುವ ಈತನಿಗೆ ನಿಯಮಗಳ ಪ್ರಕಾರ ಪಟ್ಟಣ ಪಂಚಾಯ್ತಿ ಅಧ್ಯಕ್ಷನಾಗುವ ಅರ್ಹತೆಯೇ ಇಲ್ಲ. ಆದರೆ ತಮ್ಮದೇ ಅಂಧಾದರ್ಬಾರ್‌ನಲ್ಲಿ ಎಲ್ಲವನ್ನೂ ಜೀರ್ಣಿಸಿಕೊಳ್ಳುತ್ತಿದ್ದಾನೆ.

ಎಸಿಎಫ್ ಸಾವಂತನ ದೌರ್ಜನ್ಯ

ದಲಿತರೆಂಬ ಉಡಾಫೆಯಿಂದ ತಹಸೀಲ್ದಾರ್, ಪಟ್ಟಣ ಪಂಚಾಯ್ತಿ ಸದಸ್ಯರಂತವರ ಮೇಲೆಯೇ ಎಗ್ಗಿಲ್ಲದೆ ದೌರ್ಜನ್ಯ ನಡೆಯುತ್ತದೆ ಎಂದಮೇಲೆ ಪಾಪ, ಅಸಹಾಯಕ ದಲಿತರ ಗತಿಯೇನಾಗಬೇಡ. ಅಂತದ್ದೇ ದೌರ್ಜನ್ಯ ಇಬ್ಬರು ಅಮಾಯಕರ ಹುಡುಗರ ಮೇಲೆ ನಡೆದಿದೆ. ತಮ್ಮ ಪಾಡಿಗೆ ತಾವು ಸೈಕಲ್ ತುಳಿದು ಹೊರಟಿದ್ದ ಮನೀಷ ಆಗೇರ, ಸಂದೀಪ ಆಗೇರ ಎಂಬಿಬ್ಬರು ದಲಿತ ಯುವಕರನ್ನು ಹಠಾತ್ತನೇ ಹೊತ್ತು ತಂದ ಅರಣ್ಯ ಇಲಾಖೆಯ ಸಿಬ್ಬಂದಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಸ್.ವಿ. ಸಾವಂತನ ಚೇಂಬರ್‌ನಲ್ಲಿ ಬಟ್ಟೆ ಬಿಚ್ಚಿ ಹಲ್ಲೆ ಮಾಡಿದ್ದರು. ಅಷ್ಟಕ್ಕೂ ಅವರು ಅಂತಹ ಅಪರಾಧವನ್ನೇನೂ ಮಾಡಿರಲಿಲ್ಲ; ರಸ್ತೆಯಲ್ಲಿ ಬರುವಾಗ ಆಯತಪ್ಪಿ ಎ.ಸಿ.ಎಫ್.



ಎಸ್. ವಿ. ಸಾವಂತನ ಖಾಸಗಿ ವಾಹನಕ್ಕೆ ಸೈಕಲ್ ತಾಗಿಸಿದ್ದರಷ್ಟೆ. ಅಂತಹ ಖಾಸಗಿ ಜಿದ್ದನ್ನಿಟ್ಟುಕೊಂಡು ಎಸ್.ವಿ.ಸಾವಂತ್ ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮವಾಗಿ ಅವರನ್ನು ತನ್ನ ಚೇಂಬರಿಗೆ ಕರೆಸಿಕೊಂಡು ಹಲ್ಲೆ ಮಾಡಿಸಿದ್ದ.




ದಲಿತ ಸಂಘಟನೆಗಳಿಗೆ ವಿಷಯ ತಿಳಿಯುತ್ತಿದ್ದಂತೆಯೇ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿ ಎ.ಸಿ.ಎಫ್. ಮೇಲೆ ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದರು. ಆದರೆ ಪ್ರಕರಣಕ್ಕೆ ಎಂಟ್ರಿಕೊಟ್ಟ ಶಾಸಕ ಸತೀಶ ಸೈಲ್ ಸ್ವಜಾತಿ ಬಂಧು ಸಾವಂತನ ರಕ್ಷಣೆಗೆ ದಲಿತ ಮುಖಂಡರಲ್ಲಿ ಅಂಗಲಾಚಿದ್ದರು. ಅಲ್ಲದೇ ಪ್ರಕರಣವನ್ನು ರಾಜಿ ಮಾಡಿಸುವ ಉಸಾಬರಿಯನ್ನು 'ಕಳ್ಳರ ಗುರು' ಎಂದೇ ಕುಖ್ಯಾತಿಯಾದ ಮಂಗಲದಾಸನಿಗೆ ಒಪ್ಪಿಸಲಾಗಿತ್ತು. ಈತನ ಮಧ್ಯಸ್ಥಿಕೆಯಲ್ಲಿ ಹಲ್ಲೆಗೆ ಒಳಗಾದ ಯುವಕರಿಗೆ ಸುಮಾರು 4.50 ಲಕ್ಷ ರೂಪಾಯಿಗಳನ್ನು ಕೊಡಿಸಿ ಪ್ರಕರಣವನ್ನು ರಾಜಿ ಮಾಡಿಸಲಾಗಿದೆ. ಅಷ್ಟಕ್ಕೂ ಈ ಹಣ ಬಂದಿದ್ದಾದರೂ ಎಲ್ಲಿಂದ? ಅಕ್ರಮ ಉಸುಕು ಮತ್ತು ಕಲ್ಲುಕೋರೆ ದಂಧಾವಾಲಗಳಿಂದ ವಸೂಲಿ ಮಾಡಿ ಕಲೆಹಾಕಿದ ಹಣ ಅದಾಗಿದೆ. ಈ ಎರಡು ಅಕ್ರಮ ವ್ಯವಹಾರಗಳು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವದರಿಂದ ಅರಣ್ಯಾಧಿಕಾರಿ ಎಸ್. ವಿ. ಸಾವಂತನ ಬೆಂಬಲದೊಂದಿಗೆ ನಡೆಯುತ್ತಿರುವ ದಂಧೆಗಳಾಗಿವೆ.

ಅಂದಹಾಗೆ, ಶಾಸಕ ಸತೀಶ್ ಸೈಲ್ ಆಜ್ಞೆಯಂತೆ ಎಸಿಎಫ್ ಸಾವಂತ್‌ನನ್ನು ರಕ್ಷಿಸುವಲ್ಲಿ ಯಶಸ್ವಿಯಾದ ಮಂಗಲದಾಸ ಕೂಡಾ ದೊಡ್ಡ ಪ್ರಮಾಣದ ಅಕ್ರಮ ಕಲ್ಲುಕೋರೆ ಹಾಗೂ ಉಸುಕು ಉದ್ಯಮಿ. ಹಿಂದೆ ಅಕ್ರಮ ಅದಿರು ವ್ಯವಹಾರದಲ್ಲಿ ಸತೀಶ್ ಸೈಲ್ ಜೊತೆ ಕೈಜೋಡಿಸಿದ್ದಂತವ.

ಈ ಮೂರು ಪ್ರಕರಣಗಳು ಸಾಂಕೇತಿಕ ಸಾಕ್ಷಿಗಳಷ್ಟೆ. ಇಂತಹ ಪ್ರಕರಣಗಳು ಅಂಕೋಲಾದಲ್ಲಿ ಮಾಮೂಲಿಯಾಗುತ್ತಿವೆ. ದಲಿತರು ತಮ್ಮ ಕೇರಿಗಳಲ್ಲಿ ನೆಮ್ಮದಿಯಿಂದ ಬದುಕುತ್ತಿದ್ದ ದಿನಗಳು ದೂರಾಗಿ ಆತಂಕದಲ್ಲೇ ದಿನದೂಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ರಕ್ಷಣೆ ನೀಡಬೇಕಾದ ಪೊಲೀಸ್ ಇಲಾಖೆಯೇ ದಲಿತಪೀಡಕರೊಂದಿಗೆ ಕೈಜೋಡಿಸಿ ಕೂತಿದೆ. ಇದು ಹೀಗೇ ಮುಂದುವರೆದರೆ ಕಂಬಾಲಪಲ್ಲಿಯಂತಹ ದಾರುಣಕ್ಕೆ ಅಂಕೋಲಾ ಸಾಕ್ಷಿಯಾಗುವ ದಿನಗಳು ದೂರ ಇಲ್ಲ ಎಂದೆನಿಸುತ್ತಿದೆ.

■ ವರದಿಗಾರ



ಸಂಪುಟ ಸಂಕಟ!!

ಯಾರಿಗೆ ಮಣೆ, ಏಕೆ ವಿಸ್ತರಣೆ?

ಎರಡನೇ ವರ್ಷ ತುಂಬುವ ಮೊದಲೇ ಹೊಸ ತಲೆಬೇನೆಗೆ ತಲೆ ಕೊಡಬೇಕಾದ ಕರ್ಮ ಮುಖ್ಯಮಂತ್ರಿ ಸಿದ್ದರಾಮಯ್ಯನವರದ್ದು. ಅದು ಸಂಪುಟ ಸಂಕಟ. ಅಸಮರ್ಥರನ್ನು ಅಷ್ಟು ಸಲೀಸಾಗಿ ಹೊರಗಟ್ಟುವಂತಿಲ್ಲ. ವರ್ಚಸ್ವೀ ನಾಯಕರನ್ನು ಒಳಸೇರಿಸುವುದೂ ಕಷ್ಟ, ಸೇರಿಸದೇ ಇದ್ದರೆ ಇನ್ನೂ ಕಷ್ಟ. ಹಿರಿಯರಿಗಾಗಿ ಕಿರಿಯ ಮಂತ್ರಿಗಳು ತಮ್ಮ ಸಚಿವ ಸ್ಥಾನವನ್ನೇ ತ್ಯಾಗ ಮಾಡಬೇಕೆಂದರೆ ಅದನ್ನು ಯಾರೊಬ್ಬರೂ ಕ್ರೀಡಾ ಮನೋಭಾವದಿಂದ ಸ್ವೀಕರಿಸುವುದಿಲ್ಲ, ಹಾಗೆಯೇ ಮಂತ್ರಿಗಿರಿಗಾಗಿ ಹಠಕ್ಕೆ ಬಿದ್ದವರನ್ನೂ ಹಾಗೆಯೇ ಸುಮ್ಮನಿರಿಸುವುದೂ ತಾಪತ್ರಯ!

ಮುಂದೂಡಿಕೊಂಡೇ ಬಂದ ತಲೆಶೂಲೆಗೀಗ ಚಿಕಿತ್ಸೆ ಕೊಡಿಸಲೇಬೇಕಾದ ಉಭಯ ಸಂಕಟ. ಮುಂದೂಡು ವಂತಿಲ್ಲ, ಹಾಗೇ ಬಿಟ್ಟರೂ ತಲೆನೋವು ತಪ್ಪಲ್ಲ, ಏಕೆಂದರೆ ಕಾಯುವ ತಾಳ್ಮೆ ಯಾರಲ್ಲೂ ಉಳಿದಿಲ್ಲ, ಮುಖ್ಯಮಂತ್ರಿ ಹುದ್ದೆಗೆ ಸರಿಸಮನಾದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷಗಾದಿ ಯಿದ್ದರೂ ಪರಮೇಶ್ವರ್‌ಗೆ ಪುಡಿ ಖಾತೆಗಾದರೂ ಮಂತ್ರಿಯಾಗಲೇಬೇಕೆಂಬ ದುರಾಶೆ. ಸರ್ಕಾರದ ಸಾಧನೆಗಳನ್ನು ಜನತೆಗೆ ಮುಟ್ಟಿಸುವ ಬದಲು ತಾವೇ ಸರ್ಕಾರಕ್ಕೆ ಫಜೀತಿ ತಂದಿಟ್ಟು ಪರೋಕ್ಷವಾಗಿ ಮಂತ್ರಿಗಿರಿಯ ಬೇಡಿಕೆಯಿಡುವ ಪರಮೇಶ್ವರ್ ಪೌರುಷದ ಹಿಂದಿರುವುದು ಮಂತ್ರಿಗಾದಿಯ ದಾಹವೆ.

ಕೇವಲ ಪರಮೇಶ್ವರ್ ಮಾತ್ರವಲ್ಲ ಕಾಂಗ್ರೆಸ್ ಸರ್ಕಾರದ ಹಿರೀಕ ಕಾಗೋಡು ತಿಮ್ಮಪ್ಪನವರಿಗೂ ಮಂತ್ರಿಯಾಗಬೇಕಿದೆ. ಏಕೆಂದರೆ ಅವರ ಬದುಕಿನ ಕೊನೆಗಾಲಕ್ಕಾದರೂ ಮಂತ್ರಿಯಾಗದೇ ಹೋದರೆ ಹೆಂಗೆ? ಹಾಗೆಯೇ ರಮೇಶ್‌ಕುಮಾರ್ ಸಿಟ್ಟು ಸೆಡವಿಗೂ ಕಾರಣವಿದೆ. ತನಗಿಂತ ಎಷ್ಟೋ ಕಿರಿಯರಾದವರೇ ಅನನುಭವಿಗಳೇ ಲೋಕಜ್ಞಾನವಿಲ್ಲದವರೇ ಮಂತ್ರಿಗಳಾಗಿ ಮಿಂಚುತ್ತಿರುವಾಗ ರಮೇಶ್‌ಕುಮಾರ್ ಥರದ ತಾಕತ್ತಿನ ರಾಜಕಾರಣಿಯ ಸಾತ್ವಿಕ ಸಿಟ್ಟಿಗೂ ಕಾರಣವಿದೆ. ಬಹುಶಃ ಮುಖ್ಯಮಂತ್ರಿಯಾದ ಹೊಸದರಲ್ಲೇ ಇಂಥ ಹಿರೀಕರು, ವರ್ಚಸ್ವೀಗಳನ್ನೆಲ್ಲ ಸಿದ್ದು ಸಂಪುಟಕ್ಕೆ ಸೇರಿಸಿಕೊಂಡಿದ್ದರೆ ತಲೆನೋವಿರುತ್ತಿರಲಿಲ್ಲ, ಅದೇನಾಯಿತೋ ಈಗದು ಕೆರೆತವಾಗಿ, ಗಾಯವಾಗಿ ಹುಣ್ಣಾಗಿ ಪರಿಣಮಿಸಿದೆ.

ಜಾಗ ಖಾಲಿ

ಇಲ್ಲಿಗೆ ಆರು ತಿಂಗಳ ಹಿಂದೆಯೇ ಸಂಪುಟ ಪುನರ್ರಚನೆಯ ಮಾತು ಕೇಳಿಬಂತಾದರೂ ತಾಳ್ಮೆ ವಹಿಸಿದ್ದು ಸಿದ್ದುವೇ. ಒಮ್ಮೆ ಮಂತ್ರಿಯಾದವರನ್ನು ಏಕಾಏಕಿ ಮಾಜಿಗಳನ್ನಾಗಿ ಮಾಡುವುದಕ್ಕಿಂತಲೂ ಗೌರವಯುತವಾಗಿ ಬೀಳ್ಕೊಟ್ಟು ವಿಶ್ವಾಸಕ್ಕೆ ತೆಗೆದುಕೊಳ್ಳುವ ತಂತ್ರಕ್ಕೆ ಕೈಯಿಟ್ಟ ಸಿದ್ದು ಕನಿಷ್ಠ 20 ತಿಂಗಳು ಅಥವಾ ಎರಡು ವರ್ಷದ ಮಟ್ಟಿಗಾದರೂ ಮಂತ್ರಿಯಾಗಿ ಇರಗೊಟ್ಟು, ಆನಂತರವೇ ಸಂಪುಟ ಪುನರ್ರಚನೆಯೆಂದರು. ಏಪ್ರಿಲ್ ಹೊತ್ತಿಗೆ 2 ವರ್ಷ ತುಂಬಲಿದೆ. ಬಜೆಟ್ ಅಧಿವೇಶನಕ್ಕೂ ಮೊದಲೇ ಸಂಪುಟ ಪುನರ್ರಚಿಸುವಂತೆ ಒತ್ತಡವಿತ್ತು, ಮೊನ್ನೆ ಏಪ್ರಿಲ್ 6ರ ಸೋಮವಾರ ಸೋನಿಯಾರನ್ನು ಅವರ ಗೃಹಕಚೇರಿಯಲ್ಲೇ ಸಿದ್ದು ಭೇಟಿಯಾಗಿ ಈ ಬಗ್ಗೆ ಪ್ರಸ್ತಾಪಿಸಿದ್ದೂ ಆಯಿತು. ಅದಾದನಂತರ ಎಐಸಿಸಿ ಕಚೇರಿಗೆ ಬಂದ ಸಿದ್ದು ದಿಗ್ವಿಜಯ್ ಸಿಂಗ್ ಜೊತೆ ಒಂದೂವರೆ ಗಂಟೆ ಚರ್ಚಿಸಿದ್ದಾಯಿತು. ಕೆಲವರ ಪ್ರಕಾರ ಪಂಚಾಯ್ತಿ ಚುನಾವಣೆ ನಂತರವೇ ಸಂಪುಟವನ್ನು ಪುನರ್ ರಚಿಸುತ್ತೇನೆ ಎಂಬ ಸಿದ್ದು ಮಾತಿಗೆ ಹೈಕಮಾಂಡ್ ಒಪ್ಪಿಗೆ ಕೊಟ್ಟಿದೆ.

ಪಾಲಿಕೆ ಪ್ರತಿಷ್ಠೆ!

ಒಮ್ಮೆ ಮಂತ್ರಿಗಳಾದವರನ್ನು ಗೌರವಯುತವಾಗೇ ಅಂದರೆ ಕನಿಷ್ಠ 2 ವರ್ಷ ಮಂತ್ರಿಗಳಾಗಿರಲು ಬಿಟ್ಟು ಆನಂತರವೇ ನಿರ್ಗಮಿಸುವಂತೆ ಮಾಡುವುದು ಸಿದ್ದು ತಂತ್ರ. ಅಲ್ಲಿಗೆ ಹೊಸ ಮಂತ್ರಿಗಳಾಗುವವರ ತಾಳ್ಮೆಯೂ ಒಂದು ಹಂತಕ್ಕೆ ಬಂದು ನಿಲ್ಲುತ್ತದೆ. ಏಕಾಏಕಿ ತಮ್ಮನ್ನು ಸಂಪುಟದಿಂದ ಕಿತ್ತರೆಂಬ ಆರೋಪಕ್ಕೂ ಅವಕಾಶವಿರದು. ಈ ಎಲ್ಲಾ ಲೆಕ್ಕ ಹಾಕಿಯೇ ಸಿದ್ದು ಸುರಕ್ಷಿತ ಸರ್ಜರಿಯೊಂದಕ್ಕೆ ಕೈಹಾಕುತ್ತಿದ್ದಾರೆ.

ಸದ್ಯ ಖಾಲಿ ಇರುವುದು ಕೇವಲ ನಾಲ್ಕೆ ನಾಲ್ಕು ಸಚಿವ ಸ್ಥಾನಗಳಾದರೂ ಈಗಿರುವ ಕನಿಷ್ಠ ಆರು ಮಂತ್ರಿಗಳನ್ನು ಬದಲಾಯಿಸಿ ಒಟ್ಟು ಹತ್ತು ಮಂದಿ ಹೊಸಬರನ್ನು ಮಂತ್ರಿಗಳಾಗಿಸುವುದು ಸಿದ್ದು ಪ್ಲಾನ್. ಈಗಾಗಲೇ ಹೈಕೋರ್ಟು ಬಿಬಿಎಂಪಿ ಚುನಾವಣೆ ನಡೆಸುವಂತೆ ಆದೇಶ ಹೊರಡಿಸಿದ್ದಾಗಿದೆ. ಏಪ್ರಿಲ್ ತಿಂಗಳೊಳಗೆ ಚುನಾವಣೆಯ ಪ್ರಕ್ರಿಯೆಗಳನ್ನೆಲ್ಲ ಮುಗಿಸಿ ಮೇ ಹೊತ್ತಿಗೆ ಚುನಾವಣೆ ನಡೆದರೂ ರಾಜ್ಯದ ರಾಜಧಾನಿಯ ಪಾಲಿಕೆಯ ಪ್ರತಿಷ್ಠೆಯನ್ನು ಮುಗಿಸಿಕೊಂಡೇ ಸಂಪುಟ ಪುನರ್ರಚಿಸುವ ನಿರಾಳಕ್ಕೆ ಕೈಯಿಡುವುದು ಸಿದ್ದು ಉದ್ದೇಶ.

ಅಲ್ಲಿಗೆ ಸಿದ್ದು ಸರ್ಕಾರ ಎರಡು ವರ್ಷ ಪೂರೈಸಿದಂತಾಯ್ತು, ರಾಜಧಾನಿಯ ಪಾಲಿಕೆಯನ್ನೂ ಗೆದ್ದಂತಾಯ್ತು, ಸುರಕ್ಷಿತ ನಡೆಯ ಈ ಎಲ್ಲಾ ಮುಂಜಾಗರೂಕತೆಯಿಂದಲೇ ಸಿದ್ದು ಸಂಪುಟದ ಸರ್ಜರಿಗೆ ಕೈಯಿಡಹೊರಟಿದ್ದರ ಹಿಂದಿರುವುದು ಮಂತ್ರಿಗಿರಿಗಾಗಿ ಲಾಬಿಗಿಳಿದವರ ಒತ್ತಡ ಮತ್ತು ತೆರೆಮರೆಯ ಬೆದರಿಕೆ ತಂತ್ರಗಳೆ. ಪ್ರಾರಂಭದಲ್ಲೇ ರಮೇಶ್‌ಕುಮಾರ್ ಮಂತ್ರಿಯಾಗಿದ್ದರೆ ತಲೆನೋವಿರುತ್ತಿರಲಿಲ್ಲ, ಕಾಗೋಡು ಥರದವರನ್ನು ಹೇಗೋ ಸಂಭಾಳಿಸಬಹುದಿತ್ತು, ಸರ್ಕಾರದ ಹಿತಶತ್ರುಗಳ ಸಂಖ್ಯೆ ಕಮ್ಮಿಯಿದ್ದಿದ್ದರೆ ಪರಮೇಶ್ವರ್





ಶ್ರೀನಿವಾಸ್ ಪ್ರಸಾದ್



ಕೃಷ್ಣ ಬೈರೇಗೌಡ



ದಿನೇಶ್ ಗುಂಡೂರಾವ್



ಕೋಳಿವಾಡರ ಫಜೀತಿ, ಖಂಡ್ರೆ, ಭೀಮಣ್ಣನ ದುರ್ಗತಿ ಮತ್ತು ಅಶೋಕ್ ಪಟ್ಟಣರ ರೀತಿ....!

ಹಾವೇರಿ ಜಿಲ್ಲೆಯ ಮಟ್ಟಿಗೆ ಸಿದ್ದು ಸಂಪುಟದಲ್ಲಿ ಸದ್ಯ ಪ್ರಾತಿನಿಧ್ಯವೆಂಬುದೇ ಶೂನ್ಯ. ಅದಕ್ಕೀಗ ಒಂದಲ್ಲ ಎರಡಲ್ಲ ಮೂವರ ಪೈಪೋಟಿ. ಅದು ಕೇವಲ ಹಾವೇರಿಗಷ್ಟೇ ಸೀಮಿತವಾಗಿಲ್ಲ, ರಾಜ್ಯದ ಜಾತಿರಾಜಕಾರಣದ ಮಟ್ಟಿಗೂ ಯಾರಾಗುತ್ತಾರೆಂಬುದು ಅಷ್ಟೇ ಗಮನಾರ್ಹ. ಏಕೆಂದರೆ ಕೆ.ಬಿ. ಕೋಳಿವಾಡರಿಗೀಗ ಎಪ್ಪತ್ತರ ಇಳಿ ಹರೆಯ!

ಬಹುಶಃ ಈ ಬಾರಿ ಗೆದ್ದಿದ್ದೇ ಕೋಳಿವಾಡರ ಕೊನೆಯ ಚುನಾವಣೆಯಿರಬೇಕು. ಎಸ್.ಎಂ. ಕೃಷ್ಣ ಸಂಪುಟದಲ್ಲಿ ಮಂತ್ರಿಯಾಗಿದ್ದ ಕೋಳಿವಾಡ್ ಅರಸು ಕಾಲದ ರಾಜಕಾರಣಿ. ಗದಗದ ಹುಲಿ ಕೆ.ಎಚ್. ಪಾಟೀಲರ ಶಿಷ್ಯ ಕೂಡ. 1972 ರಲ್ಲಿ ಮೊದಲ ಬಾರಿ ಶಾಸಕರಾಗಿ ಗೆದ್ದ ಕೋಳಿವಾಡ್ ಈಗಿನ ರಾಜಕಾರಣಿಗಳಿಗೆ ಹೋಲಿಸಿದರೆ ಅತ್ಯಂತ ಹಿರೀಕ. ಕೋಳಿವಾಡ್ ಶಾಸಕರಾಗುವ ಹೊತ್ತಿಗೆ ಈಗಿನ ಕೃಷ್ಣ ಭೈರೇಗೌಡ, ದಿನೇಶ್ ಗುಂಡೂರಾವ್, ತಂಗಡಗಿಯಂಥವರು ಹುಟ್ಟೇ ಇರಲಿಲ್ಲ, ಮುಖ್ಯಮಂತ್ರಿ ಸಿದ್ದು, ಪರಮೇಶ್ವರ್ ಥರದವರೇ ಇನ್ನೂ ರಾಜಕೀಯಕ್ಕೆ ಬಂದಿರಲಿಲ್ಲ.

ನೇರ ಮತ್ತು ನಿಷ್ಠುರ ವ್ಯಕ್ತಿತ್ವದ ಕೋಳಿವಾಡ್ ಯಾವತ್ತೂ ಅಧಿಕಾರಕ್ಕಾಗಿ ಅಡ್ಡದಾರಿ ಹಿಡಿದವರಲ್ಲ, ಬಿಜೆಪಿ, ಕೆಜೆಪಿ ಎಂದೂ ತಲೆಕೆಡಿಸಿಕೊಳ್ಳಲಿಲ್ಲ, ಸದ್ಯ ಕಾಂಗ್ರೆಸ್ಸಿನ ಬೇರೆಲ್ಲ ಶಾಸಕರಿಗಿಂತಲೂ ಹಿರಿಯರಾದ ಕೋಳಿವಾಡ್‌ರನ್ನು ಹಾವೇರಿ ಜಿಲ್ಲೆಯ ಮಟ್ಟಿಗೆ ಮಂತ್ರಿ ಮಾಡುವುದೋ ಅಥವಾ ಪಕ್ಷನಿಷ್ಠೆಯ ಕಾರಣಕ್ಕೆ ಸಂಪುಟಕ್ಕೆ ಸೇರಿಸಿಕೊಳ್ಳುವುದೋ ಗೊತ್ತಾಗುತ್ತಿಲ್ಲ, ಏಕೆಂದರೆ ಕೋಳಿವಾಡ್‌ರನ್ನು ಮಂತ್ರಿ ಮಾಡಿದರೆ ಹಾನಗಲ್‌ನ ಮನೋಹರ್ ತಹಸೀಲ್ದಾರ್ ರೊಚ್ಚಿಗೇಳುತ್ತಾರೆ. ಅಂಥಾ ಸಿ.ಎಂ. ಉದಾಸಿಯನ್ನೇ ಸೋಲಿಸಿ ಶಾಸಕರಾದ ಮನೋಹರ್ ತಹಶೀಲ್ದಾರ್‌ಗೆ ಸರಿಸಮನಾಗಿ ಮಂತ್ರಿ ಪದವಿಗೆ ನಿಂತ ಮತ್ತೊಬ್ಬ ರಾಜಕಾರಣಿ ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ್. ಜಾತಿಯಿಂದ ಕುರುಬ ಬೇರೆ.

ಹಾನಗಲ್ ತಹಶೀಲ್ದಾರ್‌ಗೂ ಈಗ ಎಪ್ಪತ್ತರ ಇಳಿವಯಸ್ಸು. ಮತ್ತೊಂದು ಚುನಾವಣೆಗೆ ನಿಲ್ಲಲಾರರೇನೊ. ಇದು ಸಿದ್ದು ಪಾಲಿನ ಹಾವೇರಿ ಫಜೀತಿ. ಮೂವರ ಪೈಕಿ ಯಾರೇ ಮಂತ್ರಿಯಾದರೂ ಮಿಕ್ಕವರು ಬಂಡೇಳುತ್ತಾರೆ. ಹಾಗೆಯೇ ಸಂತೋಷ್ ಲಾಡ್ ರಾಜೀನಾಮೆ ಕೊಟ್ಟ ನಂತರ ಧಾರವಾಡ ಜಿಲ್ಲೆಗೆ ಪ್ರಾತಿನಿಧ್ಯ ತಪ್ಪಿಹೋಗಿದೆ. ಬಳ್ಳಾರಿಯಿಂದ ಅನಿಲ್ ಲಾಡ್ ಮಂತ್ರಿಗಿರಿಯ ಹಠ ಹಿಡಿದರೆ ಲಾಡ್ ವಿರುದ್ಧ ಪರಮೇಶ್ವರ್ ನಾಯಕ್ ಅಖಾಡಕ್ಕಿಳಿದಿದ್ದಾರೆ. ಏಕೆಂದರೆ ತನ್ನ ಪಕ್ಷದ ಶಿವಮೂರ್ತಿ ನಾಯಕ್‌ರನ್ನು ಮಂತ್ರಿ ಮಾಡಬೇಕೆಂಬುದು ಪರಮೇಶ್ವರ್ ನಾಯಕ್ ಪಟ್ಟು.

ಬೀದರ್‌ನ ಹುಮ್ನಾಬಾದ್ ಶಾಸಕ ರಾಜಶೇಖರ ಪಾಟೀಲ್‌ಗೆ ಖರ್ಗೆ-ಧರಂಸಿಂಗ್ ಬೆಂಬಲವಿದೆ. ಇದರ ವಿರುದ್ಧ ತನ್ನ ಮಗ ಈಶ್ವರ್ ಖಂಡ್ರೆಯನ್ನೆ ಮಂತ್ರಿ ಮಾಡಹೊರಟಿದ್ದಾರೆ ಲಿಂಗಾಯತ ಪಿತಾಮಹ ಭೀಮಣ್ಣ ಖಂಡ್ರೆ. ಸಿದ್ದು ಕೂಡ ಈಶ್ವರ್ ಖಂಡ್ರೆ ಪರವೇ ಇದ್ದಂತಿದೆ. ಆದರೆ ರಾಜಶೇಖರ ಪಾಟೀಲರ ತಂದೆ ಬಸವರಾಜ ಪಾಟೀಲ ಸದ್ಯ ಬಿಜೆಪಿಯಲ್ಲಿದ್ದರೂ ಕಾಂಗ್ರೆಸ್ ಹೈಕಮಾಂಡ್ ಮಟ್ಟಿಗೆ ಪ್ರಭಾವಿಯೆ. ಕಾಂಗ್ರೆಸ್ ವರಿಷ್ಠ ಶಿವರಾಜ್ ಪಾಟೀಲರಿಗೆ ಬಸವರಾಜ ಪಾಟೀಲರು ಸಂಬಂಧಿಯೂ ಹೌದು.


ಈ ಎಲ್ಲಾ ಅಡೆತಡೆಗಳನ್ನು ಮೀರಿ ಈಶ್ವರ್ ಖಂಡ್ರೆಗೆ ಮಂತ್ರಿಗಿರಿ ಸಿಗುತ್ತಾ?

ಇತ್ತ ಗುಲ್ಬರ್ಗಾಕ್ಕೆ ಬಂದರೆ ಮಾಲಿಕಯ್ಯ ಗುತ್ತೇದಾರ್‌ಗೆ ಮಂತ್ರಿಗಿರಿ ಮಿಸ್ಸಾಗುವಂತಿಲ್ಲ, ಮಿಸ್ಸಾಗಿದ್ದೇ ಆದರೆ ಗುತ್ತೇದಾರ್ ಕಾಂಗ್ರೆಸ್ಸಿನಲ್ಲಿ ನಿಲ್ಲುವುದೂ ಕಷ್ಟವೆ. ಆದರೆ ಈಡಿಗರ ಖೋಟಾದಡಿ ಕಾಗೋಡು ಏನಾದರೂ ಮಂತ್ರಿಯಾದರೆಂದರೆ ಗುತ್ತೇದಾರ್‌ಗೆ ಯಾವ ಖೋಟಾದಡಿ ಮಂತ್ರಿಗಿರಿಯೋ ಬಲ್ಲವರ್‍ಯಾರು? ರಾಯಚೂರಿನ ಮಟ್ಟಿಗೆ ದೇವದುರ್ಗದ ವೆಂಕಟೇಶ್ ನಾಯಕ್ ಸೀನಿಯಾರಿಟಿ ಮೇರೆಗೆ ಮಂತ್ರಿಗಿರಿಯ ಡಿಮ್ಯಾಂಡಿಟ್ಟಿದ್ದಾರೆ. ಇನ್ನು ಕೊಪ್ಪಳದ ರಾಯರೆಡ್ಡಿಯನ್ನು ಮಂತ್ರಿ ಮಾಡಲೇಬೇಕೆಂದರೆ ಅದಕ್ಕೆ ತಂಗಡಗಿಯನ್ನು ಬಲಿಕೊಡಲೇಬೇಕು.

ಇದು ಕೇವಲ ಸಿದ್ದು ಪಾಲಿನ ತಲೆನೋವಷ್ಟೇ ಅಲ್ಲ, ಕಾಂಗ್ರೆಸ್ ಹೈಕಮಾಂಡಿಗೂ ತಲೆನೋವೆ. ಬೆಳಗಾವಿಯ ವಿಷಯಕ್ಕೆ ಬಂದರೆ ಇದಕ್ಕಿಂತಲೂ ದೊಡ್ಡ ತಾಪತ್ರಯಕ್ಕೆ ಸಿದ್ದು ಅಣಿಯಾಗಬೇಕು. ಬೆಳಗಾವಿಯ ಒಟ್ಟು 18 ಮಂದಿ ಶಾಸಕರ ಪೈಕಿ 11 ಮಂದಿ ಕಾಂಗ್ರೆಸ್ ಶಾಸಕರು. ಈ ಪೈಕಿ ಅಥಣಿಯ ಪಿ.ಎಂ. ಅಶೋಕ್ ಅಲಿಯಾಸ್ ಅಶೋಕ್ ಪಟ್ಟಣ ಅತ್ಯಂತ ಹಿರೀಕ ಮತ್ತು ಮಹಾನ್ ಚಾಲಾಕಿ. ಖಮರುಲ್ ಇಸ್ಲಾಂ ಜಾಗಕ್ಕೆ ಬೆಳಗಾವಿ ಶಾಸಕ ಫಿರೋಜ್ ಸೇಠ್‌ರನ್ನು ತಂದರೆ ಪಟ್ಟಣ್ ಸಿಟ್ಟಿಗೇಳುತ್ತಾರೆ. ಹಾಗೊಮ್ಮೆ ಪಟ್ಟಣ್‌ರನ್ನೇನಾದರೂ ಮಂತ್ರಿ ಮಾಡಿದರೆ ಗೋಕಾಕದ ಕಾಂಗ್ರೆಸ್ ನಾಯಕ ಸತೀಶ್ ಜಾರಕಿಹೊಳಿಗೆ ಹೊಟ್ಟೆ ಸಂಕಟ.

ಇಂಥ ನೂರೆಂಟು ತಾಪತ್ರಯ ಫಜೀತಿಗಳಿಗೆ ತಲೆಕೊಟ್ಟು ತನ್ನ ಸಂಪುಟ ಪುನರ್ರಚಿಸಬೇಕಾದ ಸವಾಲನ್ನು ಸಿದ್ದು ಹೇಗೆ ನಿಭಾಯಿಸುತ್ತಾರೆಂಬುದೇ ಅಸಲೀ ಪ್ರಶ್ನೆ.

ಸೋನಿಯಾ ನಿವಾಸದಲ್ಲಿ ನಿಜಕ್ಕೂ ನಡೆದದ್ದೇನು?



ಎಐಸಿಸಿ ಅಧ್ಯಕ್ಷೆ ಸೋನಿಯಾ ತನ್ನನ್ನು ಭೇಟಿಯಾಗಲು ಬಂದ ಮುಖ್ಯಮಂತ್ರಿ ಸಿದ್ದುವನ್ನು ಕೇವಲ ಹತ್ತೇ ನಿಮಿಷಕ್ಕೆ ಸಾಗಹಾಕಿದ್ದು ಎಷ್ಟು ಸತ್ಯ? ಮೃತ ಐಎಎಸ್ ಡಿ.ಕೆ. ರವಿ ಪ್ರಕರಣವನ್ನು ನಿಭಾಯಿಸಿದ ರೀತಿಗೆ ಸೋನಿಯಾ ಸಿದ್ದು ವಿರುದ್ಧ ಸಿಟ್ಟಾಗಿದ್ದಾರೆಂಬುದು ನಿಜವೇ?

ಏನು ಹುನ್ನಾರವೋ ಗೊತ್ತಿಲ್ಲ. ಏಪ್ರಿಲ್ 6ರ ಸೋಮವಾರ ಬೆಳಿಗ್ಗೆ ದೆಹಲಿಯಲ್ಲಿ ಸೋನಿಯಾ ನಿವಾಸಕ್ಕೆ ಹೋಗಿದ್ದ ಸಿ.ಎಂ. ಸಿದ್ದು ಜೊತೆ ಮೇಡಂ ನೆಟ್ಟಗೆ ಮುಖ ಕೊಟ್ಟೂ ಮಾತಾಡಲಿಲ್ಲ. ಸಂಪುಟದ ವಿಸ್ತರಣೆಗೂ ಒಪ್ಪಿಲ್ಲ. ಕೇವಲ ಹತ್ತೇ ನಿಮಿಷಕ್ಕೇ ಸೋನಿಯಾ ಛೇಂಬರಿನಿಂದ ಮುಖ ಕಪ್ಪಿಟ್ಟು ಸಿದ್ದು ವಾಪಸ್ಸಾದರೆಂಬ ಸುದ್ದಿಯ ದಕೀಕತ್ತಾದರೂ ಏನು?

ಕಾಂಗ್ರೆಸ್ ಸಂಸ್ಕೃತಿ, ಸೋನಿಯಾ ಕಾರ್ಯ ವೈಖರಿ ಮತ್ತು ಎಐಸಿಸಿಯ ಸಂರಚನೆ ಬಲ್ಲ ಯಾರಿಗಾದರೂ ಇಂಥ ಸುದ್ದಿ ನಗೆ ಬರಿಸಲೇಬೇಕು. ಏಕೆಂದರೆ ಸೋನಿಯಾ ವೈಯಕ್ತಿಕವಾಗಿ ಯಾರನ್ನೂ 10 ನಿಮಿಷಕ್ಕೂ ಮೇಲೆ ಮಾತಾಡಿಸುವುದಿಲ್ಲ. ಸಿದ್ದು ಸಂಪುಟ ವಿಸ್ತರಣೆ ಕುರಿತಂತೆ ಪ್ರಸ್ತಾಪಿಸಿದ್ದಕ್ಕೆ ಸೋನಿಯಾ ಅದನ್ನು ರಾಜ್ಯದ ಉಸ್ತುವಾರಿ ದಿಗ್ವಿಜಯ್ ಸಿಂಗ್ ಬಳಿ ಚರ್ಚಿಸುವಂತೆ ಹೇಳಿದ್ದರಲ್ಲಿ ಯಾವುದೇ ವಿಶೇಷವಿರಲಿಲ್ಲ. ಏಕೆಂದರೆ ಸೋನಿಯಾ ಯಾವತ್ತಿಗೂ ಆಯಾ ರಾಜ್ಯದ ಉಸ್ತುವಾರಿಗಳ ಹೊರತಾಗಿ ವ್ಯವಹರಿಸಿದ ಉದಾಹರಣೆಯೇ ಇಲ್ಲ. ಅದೆಂಥಾ ಬಿಕ್ಕಟ್ಟಾದರೂ ಸೋನಿಯಾ ಅನಗತ್ಯವಾಗಿ ಗಂಟೆಗಟ್ಟಲೇ ಹರಟೆ ಕೊಚ್ಚುವಷ್ಟು ವಾಚಾಳಿಯೂ ಅಲ್ಲ ಬಾಲಕಿಯೇನಲ್ಲ!

ಹಾಗೇ ಸೋನಿಯಾ ನಿವಾಸದಿಂದ ಹೊರಬಿದ್ದ ಸಿದ್ದು ತದನಂತರ ಎಐಸಿಸಿ ಕಚೇರಿಗೆ ಹೋಗಿ ದಿಗ್ವಿಜಯ್ ಸಿಂಗ್ ಜೊತೆ ಒಂದೂವರೆ ಗಂಟೆ ಕೂರಬೇಕಾದ ಅಗತ್ಯವಾದರೂ ಏನು?

ಹತ್ತೇ ನಿಮಿಷಕ್ಕೆ ಹೊರಬಂದ ಸಿದ್ದುಗೆ ಹೈಕಮಾಂಡ್ ಅವಮಾನಿಸಿತೆಂದೂ ಡಿ.ಕೆ. ರವಿ ಪ್ರಕರಣವನ್ನು ನಿಭಾಯಿಸಿದ್ದರ ವಿರುದ್ಧ ಸೋನಿಯಾ ಗರಮ್ಮಾಗಿದ್ದಾರೆಂದು ಅದ್ಯಾವ ಜ್ಯೋತಿಷಿ ಅದೇನು ದಿವ್ಯದೃಷ್ಟಿಯಿಂದ ಹೇಳಿದ್ದನ್ನು ಕೇಳಿ ಪ್ರಕಾರೆಬ್ಬಿಸುವ ಸುದ್ದಿವೀರರಿಗೆ ಯಾವ ಪ್ರಶಸ್ತಿ ಕೊಡಬೇಕೊ?

ಗುಟ್ಟಾಗಿರಲಿಲ್ಲ. ಇದು ಕಾಂಗ್ರೆಸ್ ಸರ್ಕಾರಕ್ಕಷ್ಟೇ ಅಲ್ಲ ಮು.ಮಂ. ಸಿದ್ದುಗೂ ಮುಜುಗರವುಂಟು ಮಾಡಿತು. ಇನ್ನು ಹೈಕಮಾಂಡ್ ಸುಮ್ಮನಿರುತ್ತಾ? ತಮ್ಮನ್ನು ಕ್ಯಾರೇ ಎನ್ನುತ್ತಿಲ್ಲ ಎಂದು, ಸಮಸ್ಯೆ ಹೇಳಿಕೊಂಡು ಹೋದರೆ ಉಡಾಫೆ ಮಾಡು ತ್ತಾರೆಂದು, ಓರ್ವ ಮಂತ್ರಿಯಂತೆ ವರ್ತಿಸದೆ ಏಕವಚನದಿಂದ ಮಾತಾಡುತ್ತಾರೆಂದು, ಯಾವತ್ತಿಗೂ ಕೈಗೆ ಸಿಗುತ್ತಲೇ ಇಲ್ಲವೆಂದು ಅಂಬಿ ವಿರುದ್ಧ ಕಾಂಗ್ರೆಸ್ಸಿನ ಬರೋಬ್ಬರಿ ಒಂದು ಡಜನ್ ಶಾಸಕರು ಹೈಕಮಾಂಡ್‌ಗೆ ದೂರು ಸಲ್ಲಿಸಿದ್ದರು.

ಕೃಷಿ ಮಂತ್ರಿ ಕೃಷ್ಣ ಭೈರೇಗೌಡರಿಗೆ ಅದೇನಾಯಿತೋ ಗೊತ್ತಿಲ್ಲ. ಈ ಹಿಂದೆ ತಂದೆ ನಿಭಾಯಿಸಿದ್ದ ಖಾತೆಯೇ ಸಿಕ್ಕಿತ್ತು. ನಾಡಿನುದ್ದಗಲಕ್ಕೂ ಸಂಚರಿಸಿ ರೈತರ ಸಮಸ್ಯೆಗಳನ್ನು ಅರಿಯಬಹುದಿತ್ತು. ರಾಜಕೀಯವಾಗಿ ಬೆಳೆಯಬಹುದಿತ್ತು. ಯಾಕೋ ಇಮ್ಮಡಿ ಭೈರೇಗೌಡರು ತಮ್ಮ ಕ್ಷೇತ್ರಕ್ಕೆ ತೋರಿದ ಕಾಳಜಿಯನ್ನು ಇಲಾಖೆಯತ್ತ ತೋರಲಿಲ್ಲ. ಇನ್ನು ದಿನೇಶ್ ಗುಂಡೂರಾವ್‌ಗೆ 'ಅನ್ನ ಭಾಗ್ಯ'ದ ಅದೃಷ್ಟವೇ ಒಲಿದು ಬಂದಿತ್ತು. ಇಡೀ ದೇಶಕ್ಕೇ ಮಾದರಿಯಾದ ಪಡಿತರ ವ್ಯವಸ್ಥೆಯ ಯಶಸ್ಸಿನ ಲಾಭಕ್ಕಾಗಿ ರಾಜ್ಯವ್ಯಾಪಿ ಪ್ರಚಾರ, ಪ್ರವಾಸ ಯಾವುದನ್ನೂ ಮಾಡಲಿಲ್ಲ. ತಮ್ಮ ಸ್ವಕ್ಷೇತ್ರ ಗಾಂಧಿನಗರದ ಹೊರತಾಗಿ ಅವರಿಗೆ ಹೊತ್ತ ಹೊಣೆಯೂ ನೆನಪಾಗಲಿಲ್ಲ.


ಜಾಣತನವಾಗಿತ್ತು. ಏಕೆಂದರೆ ಕಾಂಗ್ರೆಸ್ ವರಿಷ್ಠ ದಿಗ್ವಿಜಯ್ ಸಿಂಗ್ ಶುರುವಿನಿಂದಲೂ ಮಂತ್ರಿಗಳ performance ಕುರಿತೇ ಹೆಚ್ಚು ಮಾತಾಡುತ್ತಾ ಬಂದರು.


ಈಗ ಇದೆಲ್ಲದರ ಕ್ಲೈಮ್ಯಾಕ್ಸ್ ಸನ್ನಿಹಿತಗೊಂಡಂತಿದೆ. ಏಕೆಂದರೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷಗಾದಿಗೂ ಹೊಸ ಆಯ್ಕೆಯಾಗಬೇಕಿದೆ. ಪರಮೇಶ್ವರ್‌ರನ್ನು ಮಂತ್ರಿ ಮಂಡಲಕ್ಕೆ ಹೊತ್ತಾಕಿ ಆ ಜಾಗಕ್ಕೆ ಅಪಾಯಕಾರಿಯಲ್ಲದ ಮಗ್ಗುಲ ಮುಳ್ಳಾಗದ ಹೊಸಬನನ್ನು ತಂದರೆ ತಲೆನೋವೂ ಕಮ್ಮಿ ಕೆಲಸವೂ ನಿರಾಳ. ಬಹುಶಃ ಪರಮೇಶ್ವರ್‌ಗೆ ಶ್ರೀನಿವಾಸ್ ಪ್ರಸಾದ್‌ರ ಕಂದಾಯ ಖಾತೆಯನ್ನೇ ಕೊಡುವ ಉದ್ದೇಶವಿರಬೇಕು. ತೆರವಾದ ಅಂಬಿ ಜಾಗಕ್ಕೆ ಅದೇ ಒಕ್ಕಲಿಗ ಕೋಮಿನ ಅರಕಲಗೂಡು ಮಂಜುರನ್ನು ತಂದಲ್ಲಿ ಹಾಸನದ ಮಟ್ಟಿಗೆ ಪಕ್ಷವೂ ಬೆಳೆಯುತ್ತದೆ ಮತ್ತು ಜೆಡಿಎಸ್ ಪ್ರಾಬಲ್ಯಕ್ಕೆ ಕೊಂಚವಾದರೂ ತಡೆ ಹಾಕಿದಂತಾಗುತ್ತದೆ. ಜೊತೆಗಿದ್ದು ಜೆಡಿಎಸ್ ಜೊತೆ ಕಣ್ಣಾಮುಚ್ಚಾಲೆಯಾಡುವ ಅಂಬಿಗಿಂತಲೂ ಅಪ್ಪಮಕ್ಕಳ ವಿರುದ್ಧ ನೇರಾನೇರ ತೊಡೆತಟ್ಟುವ ಮಂಜುವೇ ಲಾಯಕ್ಕಲ್ಲವೆ?

ಸದ್ಯ ಬ್ರಾಹ್ಮಣ ಜಾತಿಯನ್ನು ಪ್ರತಿನಿಧಿಸುತ್ತಿರುವ ಇಬ್ಬರ ಪೈಕಿ ದೇಶಪಾಂಡೆಯನ್ನು ಜೊತೆಗಿಟ್ಟುಕೊಂಡೇ ದಿನೇಶ್ ಗುಂಡೂರಾವ್ ಬದಲಿಗೆ ರಮೇಶ್‌ಕುಮಾರ್‌ರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದು









...ಡ ಆ ಮಟ್ಟದ ಧೈರ್ಯ ಮಾಡುತ್ತಿರಲಿಲ್ಲ. ಈಗ ...ಕ್ಷರಶಃ ಹುತ್ತಕ್ಕೆ ಕೈಯಿಟ್ಟಂಥ ಪಜೀತಿಗೆ ಸಿಎಂ ...ಸಿಕೊಡಬೇಕಿದೆ.

ಸದ್ಯ ಸಂಪುಟದಿಂದ ಕೈಬಿಡಹೊರಟವರ ...ಪಟ್ಟಿಯೇ ಸಿದ್ದು ಪಾಲಿಗೆ ತಲೆನೋವಾಗಿ ...ರಿಣಮಿಸಿರುವುದು. ವಸತಿ ಸಚಿವ ಅಂಬರೀಶ್‌ರನ್ನು ...ಬಿಟ್ಟು ಅವರ ಬದಲಿಗೆ ಅರಕಲಗೂಡು ಶಾಸಕ ...ಮಂಜುರನ್ನು ಮಂತ್ರಿಯಾಗಿಸುವುದು ಕೇವಲ ಸಿದ್ದು ...ಇತ್ರವಷ್ಟೇ ಅಲ್ಲ, ಹೈಕಮಾಂಡ್ ಯೋಜನೆ ಕೂಡ. ...ಷ್ಣ ಭೈರೇಗೌಡ, ಖಮರುಲ್ ಇಸ್ಲಾಂ, ಬಾಬುರಾವ್ ...ಚಿಂಚನಸೂರು, ದಿನೇಶ್ ಗುಂಡೂರಾವ್, ಶ್ರೀನಿವಾಸ್ ...ಪ್ರಸಾದ್, ಪರಮೇಶ್ವರ್ ನಾಯ್ಕ್- ಹೀಗೆ ಸಂಪುಟಕ್ಕೆ ...ಹೊರೆಯಾದ ಅರ್ಧ ಡಜನ್ ಮಂತ್ರಿಗಳ ಪಟ್ಟಿಯೂ ...ಸಿದ್ಧವಾಗಿದೆ.

ಆದರೆ ಇಂಥ ಮಂತ್ರಿಗಳನ್ನು ಅಷ್ಟು ಸುಲಭಕ್ಕೆ ...ಮಾಜಿಗಳನ್ನಾಗಿಸುವುದು ಸಾಧ್ಯವೇ?

ಅಂಬರೀಶ್ ಹೇಳಿಕೇಳಿ ಡೋಂಟ್‌ಕೇರ್ ಜಾಯ ...ಮಾನದ ಆಸಾಮಿ. ಪಾರ್ಟಿ, ಶಿಸ್ತು, ಪಕ್ಷನಿಷ್ಠೆ, ... ಕಾಲ್, ಸೌಜನ್ಯ, ಸಜ್ಜನಿಕೆ ಯಾವುದೂ ...ಲ್ಲದ ಅಂಬಿ ತನ್ನ ಮಂತ್ರಿಗಿರಿ ಕಳೆದ ಮಾರನೇ ...ದಿನವೇ ಏನೇನು ರಾದ್ಧಾಂತ ಮಾಡಲಿಕ್ಕಿಲ್ಲ? ಇನ್ನು ...ಶ್ರೀನಿವಾಸ್ ಪ್ರಸಾದ್ ಕೂಡ ಸಾಮಾನ್ಯ ಅಂಕೆಗೂ ...ಸಿಗದವರು. ರಾಜ್ಯದ ದಲಿತ ರಾಜಕಾರಣದಲ್ಲಿ ಈಗ ...ಪರಮೇಶ್ವರ್ ಶುರು ಹಚ್ಚಿಕೊಂಡ ಪಾರಮ್ಯವನ್ನೇ ...ಶ್ರೀನಿವಾಸ್ ಪ್ರಸಾದ್ ಮುಂದುವರೆಸಿದರೆ ಏನು ...ಮಾಡುವುದು? ಖಮರುಲ್ ಇಸ್ಲಾಂ ಮುಸ್ಲಿಂ ...ರಾಜಕಾರಣದಲ್ಲಿ ತನ್ನದೇ ಹಿಡಿತ ಮತ್ತು ಪ್ರಭಾವ ...ಹೊಂದಿರುವ ಆಸಾಮಿ. ಒಂದೆಡೆ ವೃದ್ಧಾಪ್ಯ ...ಜೊತೆಗೆ ಅನಾರೋಗ್ಯ!

...ಮಂತ್ರಿಯಾಗಿ ಎರಡು ವರ್ಷಗಳೇ ಕಳೆದರೂ ...ತಮ್ಮೂರು ಬೆಂಗಳೂರು ಮತ್ತು ಗುಲ್ಬರ್ಗಾದ

ಹೊರತಾಗಿ ನಾಡಿನ ಇನ್ನೊಂದೇ ಒಂದು ಜಿಲ್ಲೆಗೂ ಕಾಲಿಕ್ಕಲಿಲ್ಲ. ಅಂಬಿಯದ್ದೂ ಇದೇ ಪಾಡು. ಮಂಡ್ಯ ಬಿಡಿ, ಬೆಂಗಳೂರಲ್ಲೂ ಅಂಬಿ ಸಕ್ರಿಯರಾಗಲಿಲ್ಲ. ವಸತಿ ಯೋಜನೆಗಳು ನೆನೆಗುದಿಗೆ ಬಿದ್ದವು. ತೀವ್ರ ಅನಾರೋಗ್ಯಕ್ಕೀಡಾದ ಅವರ ಆಸ್ಪತ್ರೆ ವೆಚ್ಚವನ್ನೂ ಸರ್ಕಾರವೇ ನಿಭಾಯಿಸಬೇಕಾದದ್ದು ಒಂದು ಸಮಸ್ಯೆಯಾದರೆ ಮತ್ತೊಂದೆಡೆ ಮಂಡ್ಯದಲ್ಲಿ ಪರೋಕ್ಷವಾಗಿ ಜೆಡಿಎಸ್ ಜೊತೆ ಕೈಜೋಡಿಸಿದ್ದು ಸರ್ಕಾರಕ್ಕೆ ತಲೆನೋವಾಯಿತು. ತೀರ ಇತ್ತೀಚೆಗೆ ಮಂಡ್ಯ ನಗರಸಭೆ ಅಧ್ಯಕ್ಷ ಸಿದ್ದರಾಜುವನ್ನೇ ಇಳಿಸಲು ಹೋಗಿ ಜೆಡಿಎಸ್‌ಗೆ ನೆರವಾದರೆಂಬ ಆರೋಪ ಬೇರೆ.

ಕುಮಾರಸ್ವಾಮಿ ನೇತೃತ್ವದಲ್ಲಿ ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಮಂಡ್ಯದ ಜೆಡಿಎಸ್ ನಗರಸಭಾ ಸದಸ್ಯರ ಸಭೆಯಲ್ಲಿ ಅಂಬಿ ಪರಮಾಪ್ತ ಅಮರಾವತಿ ಚಂದ್ರಶೇಖರ್ ಭಾಗವಹಿಸಿದ್ದು ಕೂಡ

ಸಿದ್ದು ಆಳ್ವಿಕೆಯ ಎರಡು ವರ್ಷಗಳುದ್ದಕ್ಕೂ ರಾಜ್ಯದ ಜನ ಕಂಡಿದ್ದು ಒಂದೋ ಮುಖ್ಯಮಂತ್ರಿ ಸಿದ್ದು ರಾಜ್ಯ ಸುತ್ತುತ್ತಾ ಹೆಸರು ಮಾಡಿದ್ದು ಮತ್ತು ಸಮಾಜ ಕಲ್ಯಾಣ ಮಂತ್ರಿ ಆಂಜನೇಯ ಡೈಲಾಗ್ ಹೊಡೆದದ್ದು. ಇದು ಬಿಟ್ಟರೆ ಕಾಂಗ್ರೆಸ್ ಸರ್ಕಾರದ ಕುರಿತಂತೆ ಸುದ್ದಿಯಾಗಿದ್ದು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಕ್ಯಾತೆ, ಪಜೀತಿಗಳೇ!

ಕೇವಲ ಕಾಂಗ್ರೆಸ್ ಕಾರ್ಯಕರ್ತರಷ್ಟೇ ಅಲ್ಲ ಮಾಧ್ಯಮಗಳೇ ಸಿದ್ದು ಸಂಪುಟದ ನಿಷ್ಕ್ರಿಯ ಮಂತ್ರಿಗಳ ವಿರುದ್ಧ ಪದೇಪದೇ ಬೊಟ್ಟು ಮಾಡಿ ಅಣಕಿಸಿದವು. ಇನ್ನು ತಾನು ಎತ್ತಿ ಆಡಿ ನಿಷ್ಠೂರವಾಗುವುದಕ್ಕಿಂತಲೂ ಇದನ್ನು ಹೈಕಮಾಂಡ್ ಹೆಗಲಿಗೇ ಹಾಕಿ ತಾನು ಹೇಳಬೇಕಾದ್ದನ್ನೆಲ್ಲ ದಿಗ್ವಿಜಯ್‌ಸಿಂಗ್ ಬಾಯಿಂದ ಹೇಳಿಸಿದ್ದು ಸಿದ್ದು

ಹೈಕಮಾಂಡ್ ವರಿಷ್ಠರಿಗೂ ಒಪ್ಪಿಗೆಯಾದಂತಿದೆ. ರಮೇಶ್‌ಕುಮಾರ್ ಚಾಣಾಕ್ಷ ಮತ್ತು ವರ್ಚಸ್ವಿ ಕೂಡ. ಹುಟ್ಟಿನಿಂದಷ್ಟೇ ಬ್ರಾಹ್ಮಣ. ವೈಚಾರಿಕವಾಗಿ ಯಾವ ಕ್ರಾಂತಿಕಾರಿಗೂ ಕಮ್ಮಿಯಿಲ್ಲದ ವಾಗ್ಮಿ. ಜೊತೆಗೆ ಕಾಗೋಡು ತಿಮ್ಮಪ್ಪ ಸೇರಿಕೊಂಡರೆ ಸಿದ್ದು ಸಂಪುಟದ ತೂಕ ಮತ್ತಷ್ಟು ಹೆಚ್ಚುತ್ತದೆ. ಇದೇ ಸಾಲಿಗೆ ಸೇರಬಲ್ಲ ಮತ್ತೊಬ್ಬ ಬಸವರಾಜ ರಾಯರೆಡ್ಡಿ.

ಒಂದಲ್ಲ ಎರಡು ಬಾರಿ ಸಂಸದರಾಗಿ ಗೆದ್ದು ನಾಲ್ಕು ಬಾರಿ ಶಾಸಕರೂ ಆದ ರಾಯರೆಡ್ಡಿ ದಕ್ಷಿಣ ಕರ್ನಾಟಕದ ಜೊತೆ ಉತ್ತರ ಕರ್ನಾಟಕದ ಸಮತೋಲನ ಕಾಯಬಲ್ಲ ಸಮರ್ಥ ಆಯ್ಕೆ. ಹಾಗೊಮ್ಮೆ ಕಾಗೋಡು ಸಂಪುಟಕ್ಕೆ ಎಂಟ್ರಿ ಕೊಟ್ಟಿದ್ದೇ ಆದಲ್ಲಿ ಅದೇ ಈಡಿಗ ಕೋಮಿನ ಮಾಲಿಕಯ್ಯ ಗುತ್ತೇದಾರ್‌ನ ಗತಿಯೇನು? ಅಥವಾ ಗುತ್ತೇದಾರ್ ಕಾರಣಕ್ಕೆ ಕಾಗೋಡು ತಮ್ಮ ಬದುಕಿನ ಕೊನೆಗಾಲಕ್ಕೂ ಮಂತ್ರಿಗಿರಿಗಾಗಿ ಪರಿತಪಿಸುತ್ತಲೇ ಇರಬೇಕಾ?

ಸಿದ್ದು ಪಾಲಿಗೆ ನಿಜಕ್ಕೂ ನೋವಿನ ಸಂಗತಿಯಿದು. ಕುರುಬರ ಪಾಳಯದಿಂದ ಹೆಚ್.ಎಂ. ರೇವಣ್ಣ ಮಂತ್ರಿಯಾದರೆ ಯಾವ ಅಚ್ಚರಿಯೂ ಇಲ್ಲ. ಎಲ್ಲಕ್ಕೂ ಮಿಗಿಲಾಗಿ ವಾಲ್ಮೀಕಿ ಜನಾಂಗಕ್ಕೊಂದು ಸಂತೋಷದ ಸುದ್ದಿಯಿದೆ. ಅದು ಮಧುಗಿರಿ ಶಾಸಕ ಕೆ.ಎನ್. ರಾಜಣ್ಣ ಮೊದಲ ಬಾರಿಗೆ ಮಂತ್ರಿಯಾಗುವ ಸಾಧ್ಯತೆ. ರಾಜಣ್ಣ ಜಾತಿ, ಪ್ರಾಂತವನ್ನು ಮೀರಿದ ಜನನಾಯಕ. ಸದಾ ಜನರ ನಡುವಿದ್ದೇ ಹೆಣಗಾಡುವ ಕೆಲಸಗಾರ.

ಅಸಮರ್ಥರು, ನಿಷ್ಕ್ರಿಯರು, ಜೊತೆಗಿದ್ದು ಕೈಕೊಡುವವರಿಗಿಂತಲೂ ಸ್ವಂತ ವರ್ಚಸ್ಸಿನ, ಸಿದ್ದುವನ್ನು ಒಳಗೂ ಹೊರಗೂ ಸಮರ್ಥಿಸಿಕೊಳ್ಳಬಲ್ಲ ಹೊಸಬರು ಬಂದರೆಂದರೆ ಅದರ ಲಾಭ ಕೇವಲ ಕಾಂಗ್ರೆಸ್ ಸರ್ಕಾರಕ್ಕಷ್ಟೇ ಅಲ್ಲ, ಕನ್ನಡ ಜನತೆಗೂ ಸಲ್ಲಲೇಬೇಕಲ್ಲವೆ?

■ ರಾ. ಸೋಮನಾಥ್

ಮಾಜಿ ಆಗುವ ಸಂಭವ

1. ಖಮರುಲ್ ಇಸ್ಲಾಮ್
2. ಶಾಮನೂರು ಶಿವಶಂಕರಪ್ಪ
3. ಬಾಬೂರಾವ್ ಚಿಂಚನಸೂರು
4. ಶ್ರೀನಿವಾಸ್ ಪ್ರಸಾದ್
5. ರಮಾನಾಥ್ ರೈ
6. ಕೃಷ್ಣ ಭೈರೇಗೌಡ
7. ದಿನೇಶ್ ಗುಂಡೂರಾವ್
8. ಅಂಬರೀಶ್
9. ಪರಮೇಶ್ವರ್ ನಾಯ್ಕ
10. ಶಿವರಾಜ ತಂಗಡಗಿ

ಮಂತ್ರಿಯಾಗುವ ಸಂಭವ

1. ಜಿ. ಪರಮೇಶ್ವರ್
2. ಕಾಗೋಡು ತಿಮ್ಮಪ್ಪ
3. ಅಶೋಕ ಪಟ್ಟಣ
4. ರಮೇಶ್‌ಕುಮಾರ್
5. ಕೋಳಿವಾಡ
6. ಬಸವರಾಜ ರಾಯರೆಡ್ಡಿ
7. ಎನ್.ಎ. ಹ್ಯಾರೀಸ್/ನಜೀರ್ ಅಹ್ಮದ್
8. ಎ. ಮಂಜು
9. ಮಾಲಿಕಯ್ಯ ಗುತ್ತೇದಾರ್
10. ಬಸವರಾಜ್ ಪಾಟೀಲ್ ಹುಮ್ನಾಬಾದ್
11. ಕೆ.ಎನ್. ರಾಜಣ್ಣ
12. ಶಕುಂತಲಾ ಶೆಟ್ಟಿ

ಕೇಜ್ರಿವಾಲ್ ಎಂಬ ನಟ–ನಿರ್ದೇಶಕ–ನಿರ್ಮಾಪಕ!



ಆಮ್ ಆದ್ಮಿ ಪಕ್ಷದ ಆಂತರಿಕ ಬಿಕ್ಕಟ್ಟು ದಿನೇದಿನೇ ತೀವ್ರ ಸ್ವರೂಪ ಪಡೆಯುತ್ತಿದೆ. ಕೇಜ್ರಿವಾಲ್ 'ತಮ್ಮ' ತತ್ವಗಳಿಗೆ ಅತ್ಯಂತ ಬದ್ಧತೆ ತೋರುತ್ತಿದ್ದಾರೆ. ಪ್ರಶ್ನೆ ಮಾಡಿದ ಪ್ರತಿಯೊಬ್ಬರನ್ನು ಒಂದೋ ಅಮಾನತ್ತು ಮಾಡುವುದು ಅಥವ ಪಕ್ಷದಿಂದಲೇ ಹೊರದಬ್ಬುವ ಕೆಲಸವನ್ನು ಅತ್ಯಂತ 'ಶಿಸ್ತುಬದ್ಧವಾಗಿ' ಮಾಡುತ್ತಿದ್ದಾರೆ. ಹೀಗಾಗಿ ಪಕ್ಷದಲ್ಲಿ ಆಂತರಿಕ ಪ್ರಜಾತಂತ್ರ ಮತ್ತು ಪಾರದರ್ಶಕತೆಗಾಗಿ ಎದ್ದಿರುವ ದನಿ ಮತ್ತಷ್ಟು ಹೆಚ್ಚಾಗುತ್ತಿದೆ. ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್ ಮುಂತಾದವರು ಏಪ್ರಿಲ್ 14ರಂದು ದೆಹಲಿಯಲ್ಲಿ 'ಸ್ವರಾಜ್ ಸಂವಾದ್' ಹೆಸರಿನಲ್ಲಿ ಕಾರ್ಯಕರ್ತರ ಸಭೆ ಏರ್ಪಡಿಸಿದ್ದಾರೆ. ಈ ಸಭೆಯಲ್ಲಿ ಭಾಗವಹಿಸಿದವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಕೇಜ್ರಿಕೂಟ ಈಗಾಗಲೇ ವಾರಂಟ್ ಜಾರಿ ಮಾಡಿದೆ. ಈ ದುರದೃಷ್ಟಕರ ವಿದ್ಯಮಾನ ಯಾವ ರೀತಿ ಪರ್ಯಾವಸಾನವಾಗುತ್ತದೆ ಎಂಬುದನ್ನು ಈಗಲೇ ಹೇಳಲಾಗದು.

ಈ ಬಿಕ್ಕಟ್ಟಿಗೆ ಯಾರು ಕಾರಣ? ಈ ಬಗ್ಗೆ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರ ಮತ್ತು ಬೆಂಬಲಿಗರ ನಡುವೆ ತರಹೇವಾರಿ ಅಭಿಪ್ರಾಯಗಳಿವೆ. ಯೋಗೇಂದ್ರ ಬಣ ಎತ್ತಿರುವ ಪ್ರಶ್ನೆಗಳ ಬಗ್ಗೆ ಸಹಮತ ಇರುವವರಿಗೂ ಕೂಡ ಒಂದು ವಿಷಯದಲ್ಲಿ ಅವರ ಬಗ್ಗೆ ಅಸಮ್ಮತಿ ಇದ್ದಂತೆ ತೋರುತ್ತದೆ. ಈಗತಾನೇ ಸರ್ಕಾರ ರಚನೆಯಾಗಿರೋದರಿಂದ ಒಂದಷ್ಟು ದಿನ ಸುಮ್ಮನಿರಬಹುದಿತ್ತಲ್ಲಾ? ಪಕ್ಷದ ಆಂತರಿಕ ವಿಷಯಗಳನ್ನು ಬೀದಿಗೆ ತರಲು ಯಾಕಿಷ್ಟು ಅರ್ಜೆಂಟು ಇವರಿಗೆ? ಎಂಬುದು ಅವರ ತಕರಾರು. ಆದರೆ ಎಎಪಿ ಪಕ್ಷದ ಆಂತರಿಕ ಬೆಳವಣಿಗೆಗಳನ್ನು ಆಮೂಲಾಗ್ರವಾಗಿ ಒರೆಗೆ ಹಚ್ಚಿ ನೋಡಿದರೆ ಒಂದು ಕಟುಸತ್ಯ ಅರಿವಿಗೆ ಬರುತ್ತದೆ. ಅದೇನೆಂದರೆ ಅರ್ಜೆಂಟಿದ್ದದ್ದು ಭಿನ್ನರಿಗಲ್ಲ, ತನ್ನ ಹೈಕಮಾಂಡ್ ಪವರ್ ಸ್ಥಾಪಿಸಲು ಉದ್ದೇಶಿಸಿದ್ದ ಕೇಜ್ರಿವಾಲರಿಗೆ!

ಈ ವಾದ ಸ್ವಲ್ಪ ವಿಚಿತ್ರವೆನಿಸಬಹುದು. ವಾಸ್ತವ ಸಂಗತಿಗಳು ನಮ್ಮ ಕಣ್ಣೆದುರಿನಲ್ಲೇ ಇರುವುದರಿಂದ ಇದನ್ನು ಅರ್ಥಮಾಡಿಕೊಳ್ಳುವುದು ಅಂಥಾ ಕಷ್ಟವೇನಿಲ್ಲ.

2014ರ ಆಗಸ್ಟ್‌ನಲ್ಲಿ ಸಂಗ್ರೂರ್‌ನಲ್ಲಿ ನಡೆದ ಕಾರ್ಯಕಾರಿಣಿಯಲ್ಲಿ ಇದೇ ನಾಯಕರ ನಡುವಿನ ಭಿನ್ನಾಭಿಪ್ರಾಯ ತಾರಕಕ್ಕೇರಿತ್ತು ಎಂಬ ಸುದ್ದಿಗಳು ಅಡ್ಮಿರಲ್ ರಾಮದಾಸ್ ಬರೆದಿದ್ದ ಪತ್ರದಿಂದ ಬಹಿರಂಗಗೊಂಡಿದೆ. ದೆಹಲಿ ಚುನಾವಣೆಯ ಮೇಲೆ ದುಷ್ಪರಿಣಾಮ ಬೀರುವುದನ್ನು ತಪ್ಪಿಸಲು ಅಡ್ಮಿರಲ್ ರಾಮದಾಸ್ ಅವರ ಮಧ್ಯಸ್ಥಿಕೆಯಲ್ಲಿ ಚುನಾವಣೆ ಮುಗಿಯುವತನಕ ಭಿನ್ನಾಭಿಪ್ರಾಯಗಳ ಬಗ್ಗೆ ಯಾರೂ ಸಂಘಟನೆಯಿಂದ ಹೊರಗೆ ಬಾಯಿಬಿಡಬಾರದೆಂತಲೂ, ಚುನಾವಣೆ ನಂತರದ ಸಭೆಯಲ್ಲಿ ಈ ವಿಷಯಗಳನ್ನು ಆದ್ಯತೆಯ ಮೇರೆಗೆ ಚರ್ಚಿಸಿ ಬಗೆಹರಿಸಿಕೊಳ್ಳುವುದೆಂದು ತೀರ್ಮಾನವಾಯಿತು.

ದೆಹಲಿಯ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ 2014ರ ಡಿಸೆಂಬರ್‌ನಲ್ಲಿ ಮತ್ತೆ ವಿವಾದ ತಲೆಯೆತ್ತಿತು. ಕಳಂಕಿತರಿಗೆ ಟಿಕೆಟು ಕೊಟ್ಟಿದ್ದಾರೆಂಬುದು ಭೂಷಣ್ ಅವರ ಆರೋಪ. ಕೊನೆಗೆ ಲೋಕಪಾಲ್ ತನಿಖೆ ನಡೆದು ಇಬ್ಬರಿಗೆ ಟಿಕೆಟ್ ರದ್ದುಪಡಿಸಲಾಯ್ತು. ನಂತರ ಅನೈತಿಕ ದೇಣಿಗೆ ವಿಚಾರದ ಬಗ್ಗೆ ವಿಮರ್ಶೆ ಬಂತು. ಹೀಗೆ ಕೇಜ್ರಿವಾಲ್ ಕೆಲವು ಮೌಲ್ಯಗಳ ಬಗ್ಗೆ ರಾಜೀ ಮಾಡಿಕೊಳ್ಳುತ್ತಿದ್ದಾರೆಂಬುದು ಯೋಗೇಂದ್ರ ಮತ್ತು ಭೂಷಣ್‌ರ ವಿಮರ್ಶೆಯಾಗಿತ್ತು.


ಚುನಾವಣೆ ನಡೆದು ಅಭೂತಪೂರ್ವ ಗೆಲುವು ಸಾಧಿಸಿದ ನಂತರ ಕೇಜ್ರಿವಾಲ್ ಧೋರಣೆಯಲ್ಲಿ ಹಠಮಾರಿತನ ಹೆಚ್ಚಾಗಿದ್ದು ನಿಚ್ಚಳವಾಗಿ ಕಂಡುಬರುತ್ತದೆ.

ಪೂರ್ವ ನಿಗದಿಯಂತೆ ಫೆಬ್ರವರಿ 26ರಂದು ಆಪ್‌ನ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಯಿತು. ಆದರೆ ಇಂಥಾ ಮಹತ್ವದ ಸಭೆಗೆ ಕೇಜ್ರಿವಾಲ್ ಮತ್ತು ಮನಿಷ್ ಸಿಸೋಡಿಯಾ ಹಾಜರಾಗಲಿಲ್ಲ. ದೆಹಲಿ ಸರ್ಕಾರಕ್ಕೆ ಸಂಬಂಧಿಸಿದ ತುರ್ತು ಕೆಲಸಗಳಿವೆ ಎಂಬುದು ಅವರು ನೀಡಿದ ಕಾರಣ. ಆಂತರಿಕ ವಿವಾದಗಳ ಬಗ್ಗೆ ಲೋಕ್‌ಪಾಲ್ ರಾಮದಾಸ್ ಅವರು ಕಾರ್ಯಕಾರಿಣಿಗೆ ಬರೆದಿದ್ದ ಪತ್ರದ ಬಗ್ಗೆ ಚರ್ಚೆ ನಡೆಯಿತು. ತಮ್ಮ ಪತ್ರದಲ್ಲಿ ರಾಮದಾಸ್ ಅವರು ಪಕ್ಷದ ನಾಯಕತ್ವದಲ್ಲಿರುವ ಭಿನ್ನಾಭಿಪ್ರಾಯವನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳುವಂತೆ ಸೂಚಿಸಿದ್ದರು. ಪಕ್ಷದ ಆಂತರಿಕ ವ್ಯವಹಾರದಲ್ಲಿ ಹೆಚ್ಚಿನ ಪ್ರಜಾತಂತ್ರ ಹಾಗೂ ಪಾರದರ್ಶಕತೆ ತರಬೇಕೆಂಬ ವಿಷಯವನ್ನೂ ಪ್ರಸ್ತಾಪಿಸಿದ್ದರು. ಇದು ಹೇಗೂ ಕೇಜ್ರಿವಾಲರಿಗೆ ರುಚಿಸುವ ವಿಚಾರವಾಗಿರಲಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಈಗ ಕಷ್ಟವೇನಲ್ಲ. ಆಂತರಿಕ ಭಿನ್ನಾಭಿಪ್ರಾಯಗಳು ತೀವ್ರವಾಗಿರುವ ಸಂದರ್ಭದಲ್ಲಿ ಇಡೀ ಪಕ್ಷದ ರಾಷ್ಟ್ರೀಯ ಭವಿಷ್ಯಕ್ಕೆ ಸಂಬಂಧಿಸಿದ ವಿಚಾರಗಳು ಚರ್ಚಿಸಬೇಕಾದ ಮಹತ್ವದ ಸಭೆಗೆ ಕೇಜ್ರಿವಾಲರ ಗೈರುಹಾಜರಿಯನ್ನು ವಿಶ್ಲೇಷಿಸುವುದು ಕೂಡ ಈಗ ಸುಲಭ.

ಈ ವಿಷಯವಲ್ಲದೆ ಮಾಧ್ಯಮಗಳಲ್ಲಿ ಕೇಜ್ರಿವಾಲ್ ವಿರುದ್ಧ ಯಾದವ್ ಸುಳ್ಳು ಪ್ರಚಾರದಲ್ಲಿ ತೊಡಗಿದ್ದಾರೆ ಎಂಬ ಆರೋಪವೂ ಸಭೆಯಲ್ಲಿ ಚರ್ಚೆಗೆ ಬಂತು. ಈ ಆರೋಪವನ್ನು ನಿರಾಕರಿಸಿದ ಯೋಗೇಂದ್ರ ಈ ಬಗ್ಗೆ ತನಿಖೆ ನಡೆಸುವಂತೆ ಮನವಿ ಮಾಡಿದರು.

ಮಾರ್ಚ್ 1ರಂದು ಮತ್ತೆ ಕೆಲವು ಮಹತ್ವದ ಬೆಳವಣಿಗೆಗಳಾದವು. "ಪಕ್ಷದ ಭಿನ್ನಮತೀಯರು ಕೇಜ್ರಿವಾಲ್‌ರನ್ನು ಹುದ್ದೆಯಿಂದ ಇಳಿಸಲು ಪ್ರಯತ್ನಿಸುತ್ತಿದ್ದಾರೆ" ಎಂದು ಕೇಜ್ರಿ ಶಿಷ್ಯ ಸಂಜಯ್ ಸಿಂಗ್ ಟ್ವೀಟ್ ಮಾಡಿದರು. ಅದೇ ದಿನ ರಾಮದಾಸ್‌ರ ಪತ್ರ ಮಾಧ್ಯಮಗಳಿಗೆ ಸೋರಿಕೆಯಾಗಿ ಚರ್ಚೆಯ ವಸ್ತುವಾಯ್ತು. ಅದೇದಿನ ಕಾಂಗ್ರೆಸ್ ಎಂಎಲ್‌ಎಗಳ ಖರೀದಿಗೆ ಕೇಜ್ರಿವಾಲ್ ಪ್ರಯತ್ನಿಸಿದ್ದರೆಂಬ ಆರೋಪದ ಬಗ್ಗೆ ಭೂಷಣ್ ಬರೆದಿದ್ದ ಪತ್ರ ಸೋರಿಕೆಯಾಯ್ತು.





ಮಾರ್ಚ್ 2ರಂದು ಟೆಲಿಫೋನ್ ಸಂಭಾಷಣೆಯ ತುಣುಕೊಂದನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ ಸಂಜಯ್‌ಸಿಂಗ್ ಮತ್ತು ಅಶುತೋಶ್ ಅವರು "ಪತ್ರಕರ್ತರಿಗೆ ಕೇಜ್ರಿವಾಲ್ ವಿರುದ್ಧ ಯಾದವ್ ಮಾಹಿತಿ ನೀಡಿದ್ದಾರೆ. ಕೇಜ್ರಿವಾಲ್‌ರನ್ನು ಪದಚ್ಯುತಿ ಮಾಡಲು ಪ್ರಯತ್ನಿಸುತ್ತಿದ್ದಾರೆ" ಎಂದು ಆರೋಪಿಸಿದರು.

ಇಡೀ ಮಾರ್ಚ್ 3ರಂದು ಹತ್ತು ದಿನಗಳ ಚಿಕಿತ್ಸೆಗೆಂದು ಬೆಂಗಳೂರಿಗೆ ಪ್ರಯಾಣ ಬೆಳೆಸಿದ ಕೇಜ್ರಿವಾಲ್ "ಪಕ್ಷದಲ್ಲಿ ನಡೆಯುತ್ತಿರುವ ಸಂಗತಿಗಳಿಂದ ಬಹಳ ಘಾಸಿಯಾಗಿದೆ, ನೋವಾಗಿದೆ. ಈ ಕೊಳಕು ಬಡಿದಾಟದಲ್ಲಿ ನಾನು ಭಾಗಿಯಾಗಲಾರೆ" ಎಂದು ಟ್ವೀಟ್ ಮಾಡಿದರು.

ಅದೇ ದಿನ ಮತ್ತೊಬ್ಬ ಕೇಜ್ರಿ ಶಿಷ್ಯ ಆಶಿಶ್ ಕೇತಾನ್ "ಪ್ರಶಾಂತ್ ಭೂಷಣ್ ಅವರು ತಮ್ಮ ತಂದೆ ಶಾಂತಿಭೂಷಣ್ ಮತ್ತು ಸೋದರಿ ಜೊತೆ ಸೇರಿ ಪಕ್ಷದ ಮೇಲೆ ಸಂಪೂರ್ಣ ಹಿಡಿತ ಸಾಧಿಸಲು ಹವಣಿಸುತ್ತಿದ್ದಾರೆ" ಎಂಬ ಹೀನಾಯ ಆರೋಪ ಮಾಡಿದರು.

ಮಾರ್ಚ್ 4ರಂದು ಕೇಜ್ರಿವಾಲ್ ಅನುಪಸ್ಥಿತಿಯಲ್ಲಿ ನಡೆದ ನ್ಯಾಷನಲ್ ಎಕ್ಸಿಕ್ಯೂಟಿವ್ ಸಭೆ ಪ್ರಶಾಂತ್ ಭೂಷಣ್ ಮತ್ತು ಯೋಗೇಂದ್ರರನ್ನು ಪಿಎಸಿಯಿಂದ ವಜಾ ಮಾಡಿತು. ತಮ್ಮ ಮೇಲಿನ ಆರೋಪಗಳ ಬಗ್ಗೆ ನಿಷ್ಪಕ್ಷ ಒಂದು ತನಿಖೆ ನಡೆಸಿ ತೀರ್ಮಾನಕ್ಕೆ ಬನ್ನಿ ಎಂಬ ಮನವಿಯನ್ನೂ ಮಾನ್ಯ ಮಾಡದೆ ಸರಳ ಬಹುಮತದೊಂದಿಗೆ ಈ ನಿರ್ಣಯ ಕೈಗೊಳ್ಳಲಾಯ್ತು.

ಸಭೆಯಲ್ಲಿ ಹಾಜರಿದ್ದ ಮಹಾರಾಷ್ಟ್ರದ ಪ್ರತಿನಿಧಿ ಮಾಯಾಂಕ್ ಗಾಂಧಿಯವರು ಸಭೆ ನಡೆದ ರೀತಿಯನ್ನು ಆಕ್ಷೇಪಿಸಿ ಮಾರ್ಚ್ 5ರಂದು ತಮ್ಮ ಬ್ಲಾಗ್‌ನಲ್ಲಿ ಬರೆದರು. ಕೇಜ್ರಿವಾಲ್ ಒತ್ತಡದಿಂದಲೇ ಯೋಗೇಂದ್ರ ಮತ್ತು ಪ್ರಶಾಂತ್‌ರನ್ನು ವಜಾ ಮಾಡಲಾಗಿದೆ ಎಂಬ ಸತ್ಯವನ್ನೂ ಬಿಚ್ಚಿಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಆಶಿಶ್ ಕೇತಾನ್ "ಕೆಲವು ವ್ಯಕ್ತಿಗಳು ಬ್ಲಾಗ್ ಬರೆಯುವುದರಲ್ಲಿ ತೊಡಗಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಇತಿಹಾಸವನ್ನೇ ಬರೆಯುತ್ತಾರೆ" ಎಂದು ಕಿಚಾಯಿಸಿದರು. ಆದರೆ ವಾಸ್ತವದಲ್ಲಿ ಮಾಯಾಂಕ್ ಗಾಂಧಿ ದಶಕಗಳ ಕಾಲದಿಂದಲೂ ಸಾಮಾಜಿಕ ಚಳವಳಿಗಳಲ್ಲಿ ತೊಡಗಿಸಿಕೊಂಡಿದ್ದವರು. ಅಂಥವರನ್ನು ಕೇವಲ ಬ್ಲಾಗ್ ಬರಹಗಾರ ಎಂಬಂತೆ ಕೀಳುಗಾಣಿಸಿ ಬರೆದದ್ದು ಆಶಿಶ್ ಕೇತಾನ್‌ರಂಥ ಪತ್ರಕರ್ತನಿಗೆ ಹೇಗೆ ಸಾಧ್ಯವಾಯಿತು ಎಂಬುದು ನಿಜಕ್ಕೂ ಆಶ್ಚರ್ಯದ ಸಂಗತಿ.

ಮಾರ್ಚ್ 7ರಂದು ಆ ಸಭೆಯ ಮತ್ತಷ್ಟು ವಿವರಗಳನ್ನು ನೀಡಿದ ಮಾಯಾಂಕ್ ಗಾಂಧಿ ತಾನು ಸತ್ಯ ಹೇಳುತ್ತಿರುವ ಕಾರಣಕ್ಕೆ ತಮ್ಮನ್ನು ಪಕ್ಷದಿಂದ ಹೊರಹೋಗುವಂತೆ ಒತ್ತಡ ಬಂದರೂ ಬರಬಹುದು ಎಂದು ಭವಿಷ್ಯ ನುಡಿದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಚರ್ಚೆಗೆ ಕಾರಣವಾಯ್ತು.

ಮಾರ್ಚ್ 8ರಂದು ಪಂಜಾಬ್‌ನ ಎಂಪಿ ಭಗವಂತ್ ಮಾನ್ ಮತ್ತು ಅಶುತೋಶ್ ಅವರು ಕೇಜ್ರಿವಾಲ್ ಪರ ವಕಾಲತ್ತು ವಹಿಸಿ ಯೋಗೇಂದ್ರ ವಿರುದ್ಧ ಪಕ್ಷ ವಿರೋಧಿ ಚಟುವಟಿಕೆಯ ಆರೋಪ ಮಾಡಿದರು.

ಮಾರ್ಚ್ 10ರಂದು ಕೇಜ್ರಿವಾಲ್ ಲೆಫ್ಟಿನೆಂಟ್‌ಗಳಾದ ಸಂಜಯ್‌ಸಿಂಗ್, ಮನಿಷ್ ಸಿಸೋಡಿಯಾ, ಪಂಕಜ್ ಗುಪ್ತ ಮತ್ತು ಗೋಪಾಲ್ ರಾಯ್ ಜಂಟಿ ಬಹಿರಂಗಪತ್ರ ಬರೆದು ಭೂಷಣ್ ಮತ್ತು ಯಾದವ್ ದೆಹಲಿ ಚುನಾವಣೆಯಲ್ಲಿ ಪಕ್ಷವನ್ನು ಸೋಲಿಸಲು ಪ್ರಯತ್ನಿಸಿದ್ದಾರೆಂದು ಅದೇ ಹಳೇ ಆರೋಪಗಳನ್ನು ಪುನರುಚ್ಚರಿಸಿದರು.

ಜೈಲು - ಜಾಮೀನು ಮತ್ತು ಎರಡು ನಾಲಗೆ!

ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಆಮ್ ಆದ್ಮಿ ಪಾರ್ಟಿ ಕಡಿಮೆ ಅವಧಿಯಲ್ಲೇ ಒಂದು ಐಕಾನ್ ಆಗಿದೆ. ದೇಶದ ಅತಿ ಭ್ರಷ್ಟರ ಪಟ್ಟಿಯೊಂದನ್ನು ಕೇಜ್ರಿವಾಲ್ ಈ ಹಿಂದೆ ಬಿಡುಗಡೆ ಮಾಡಿದ್ದರು. ಅದರ ವಿರುದ್ಧ ಮಾನಗೇಡಿ ನಿತಿನ್ ಗಡ್ಕರಿ ಮಾನಹಾನಿ ಮೊಕದ್ದಮೆ ಹೂಡಿದ್ದು ಒಂದು ಕುಚೋದ್ಯವೇ ಸರಿ. ಈ ಕೇಸಿನಲ್ಲಿ ದೆಹಲಿ ಪೊಲೀಸರು 2014ರ ಮೇ 21ರಂದು ಕೇಜ್ರಿವಾಲರನ್ನು ಬಂಧಿಸಿದ್ದರು. ಕೇಜ್ರಿವಾಲ್ ಒಂದು ವಾರ ಕಾಲ ಜೈಲುವಾಸ ಅನುಭವಿಸಿದ್ದೂ ಆಯ್ತು. ಈಗ ಅದೆಲ್ಲ ಹಳೆಯ ಕತೆಯಾಗಿದೆ.

ಈ ಹಳೆಯ ಕತೆ ಕೇಜ್ರಿವಾಲ್ ಕೈಯಲ್ಲಿ ಹೇಗೆ ವಿಶಿಷ್ಟ ಅಸ್ತ್ರವಾಗಿ ಪರಿಣಮಿಸಿದೆ ನೋಡಿ.

ಮಾರ್ಚ್ 28ನೇ ತಾರೀಕು ನಡೆದ ನ್ಯಾಷನಲ್ ಕೌನ್ಸಿಲ್ ಸಭೆಯಲ್ಲಿ ಭಾರೀ ಬಿಗುವಿನ ವಾತಾವರಣ. ಇಡೀ ದೇಶ ಆ ಸಭೆಯತ್ತ ಆಶಾಭಾವದಿಂದ ನೋಡುತ್ತಿತ್ತು. ಅಂಥಾ ಸಭೆಯಲ್ಲಿ ಒಂದು ಭಾವನಾತ್ಮಕ ಭಾಷಣ ಮಾಡಿ ತನ್ನ 'ವಿರೋಧಿ'ಗಳ ವಿರುದ್ಧ ಇಡೀ ಸಭೆಯನ್ನು ರೊಚ್ಚಿಗೆಬ್ಬಿಸುವಲ್ಲಿ ಕೇಜ್ರಿವಾಲ್ ಯಶಸ್ವಿಯಾಗಿದ್ದರು. ತಮ್ಮ ವಾದದ ಸಮರ್ಥನೆಗೆ ಸುಳ್ಳುಗಳನ್ನು, ಅರ್ಧ ಸತ್ಯಗಳನ್ನೂ ಧಾರಾಳವಾಗಿ ಬಳಸಿದರು. ಗಡ್ಕರಿ ಕೇಸಿನ ಜೈಲು ಪ್ರಸಂಗವನ್ನು ವಕೀಲರಾಗಿದ್ದ ಪ್ರಶಾಂತ್ ಭೂಷಣ್ ಮೇಲೆ ಹೊರಿಸಿ ದಾಳಿ ಮಾಡಿದರು. "ನ್ಯಾಯಾಧೀಶರು ಜಾಮೀನು ಪಡೆದುಕೊಳ್ಳುವಂತೆ ಹೇಳಿದರು. ನಾನು ಜಾಮೀನುದಾರರು ಇಲ್ಲ ಎಂದೆ. ವೈಯಕ್ತಿಕ ಬಾಂಡ್ ಬರೆದುಕೊಡಿ ಎಂದರು. ನನಗೆ ಈ ಬಾಂಡ್ ಎಂದರೇನೆಂದು ಗೊತ್ತಿರಲಿಲ್ಲ. ಎದುರಿಗಿದ್ದ ಪ್ರಶಾಂತ್‌ಜಿ ಕಡೆ ನೋಡಿದೆ. ಅವರು ಬೇಡ ಎಂಬಂತೆ ತಲೆ ಆಡಿಸಿದರು. ನಾನು ಜಾಮೀನಿಗೆ ಸಹಿ ಮಾಡುವುದಿಲ್ಲ ಎಂದೆ. ನನ್ನನ್ನು ಜೈಲಿಗೆ ಕಳಿಸಿದರು. ಅವರ ಒಂದು ಕಣ್ಸನ್ನೆಯಿಂದ ನಾನು ಜೈಲು ಸೇರುವಂತಾಯಿತು."

ಈ ಮಾತನ್ನು ಕೇಳಿ ರೊಚ್ಚಿಗೆದ್ದ ಸಭಿಕರು 'ವಿರೋಧಿ'ಗಳ ವಿರುದ್ಧ ಜೋರು ಘೋಷಣೆ ಕೂಗಲು ಶುರುಮಾಡಿದರು. ಹೀಗೆ ತಾನು ಜೈಲು ಸೇರಲು ಪ್ರಶಾಂತ್ ಭೂಷಣ್ ಅವರೇ ಕಾರಣ ಎಂಬ ಸಂದೇಶವನ್ನು ಇಡೀ ಸಭೆಗೆ ರವಾನಿಸಿದ್ದರು.

ಕೇಜ್ರಿವಾಲ್ ಸಂದರ್ಭಕ್ಕೆ ತಕ್ಕಂತೆ ಹೇಗೆ ಎರಡು ನಾಲಗೆ ಬಳಸುತ್ತಾರೆ ಎಂಬುದಕ್ಕೆ ಈ ಪ್ರಸಂಗ ಬಹಳ ಒಳ್ಳೆಯ ಉದಾಹರಣೆ. ಇದೇ ಪ್ರಸಂಗದ ಬಗ್ಗೆ 2014ರ ಮೇ 29ರಂದು ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ನಡೆದ ವಾಲಂಟೀರ್ಸ್ ಮೀಟಿಂಗ್‌ನಲ್ಲಿಯೂ ಕೇಜ್ರಿವಾಲ್ ಮಾತಾಡಿದ್ದರು. ಆದರೆ ಅದು ಮೊನ್ನೆಯ ಭಾಷಣಕ್ಕೆ ಸಂಪೂರ್ಣ ತದ್ವಿರುದ್ಧವಾದುದು.

"ಜಡ್ಜ್ ನನಗೆ ಜಾಮೀನು ಪಡೆದುಕೊಳ್ಳಲು ಹೇಳಿದರು. ಜಾಮೀನು ಪಡೆದುಕೊಳ್ಳಲು ನಾನು ಯಾವ ಅಪರಾಧವನ್ನೂ ಮಾಡಿರಲಿಲ್ಲ. ಜಾಮೀನು ಪಡೆದುಕೊಳ್ಳುವ ಅವಶ್ಯಕತೆ ಯಾರಿಗಿದೆ. ಲಲ್ಲೂ ಪ್ರಸಾದ್‌ಗಿದೆ. ಸುರೇಶ್ ಕಲ್ಮಾಡಿಗಿದೆ. ಅತ್ಯಾಚಾರಿಗಳು, ಭ್ರಷ್ಟಾಚಾರಿಗಳು ಜಾಮೀನು ಪಡೆದುಕೊಳ್ಳುತ್ತಾರೆ. ನಾನು ಯಾವ ಅಪರಾಧಕ್ಕಾಗಿ ಜಾಮೀನು ಪಡೆದುಕೊಳ್ಳಬೇಕು? ನನ್ನ ಆತ್ಮಸಾಕ್ಷಿ ಅದಕ್ಕೆ ಒಪ್ಪಲಿಲ್ಲ, ಅದಕ್ಕೆ ಜೈಲಿಗೆ ಹೋದೆ."

ಕೇಜ್ರಿವಾಲ್‌ರ ಮಾತು ಕೇಳಿದ ಮಂದಿ ತಮ್ಮ ನಾಯಕನ ಧೀಮಂತಿಕೆಯನ್ನು ಕಂಡು ಘೋಷಣೆ ಕೂಗಿದ್ದೇ ಕೂಗಿದ್ದು. ಕೇಜ್ರಿವಾಲ್ ಕೂಟದ ಇತರರ ಅಭಿಪ್ರಾಯ ನೋಡೋಣ. "ಇದು ಹಣದ ವಿಚಾರವಲ್ಲ; ಮೌಲ್ಯಗಳ ವಿಚಾರ. ನಿತಿನ್ ಗಡ್ಕರಿಯನ್ನು ಭ್ರಷ್ಟ ಅಂತ ಕರೆಯುವುದು ಅಪರಾಧ ಎಂದಾದರೆ ನಾವು ಜೈಲಿಗೆ ಹೋಗಲು ಸಿದ್ಧ" ಎಂದು ಸಿಸೋಡಿಯಾ ಮಾಧ್ಯಮಗಳೆದುರು ಘೋಷಿಸಿದ್ದರು. "ಇದು ಭ್ರಷ್ಟಾಚಾರದ ವಿರುದ್ಧ ಹೋರಾಟ; ಇಂಥಾ ರಾಜಕೀಯ ಹೋರಾಟದಲ್ಲಿ ಬಾಂಡ್ ಕೊಡಬಾರದು ಎಂಬುದು ನಮ್ಮ ನಿಲುವು" ಎಂದು ಅಶುತೋಶ್ ಹೇಳಿಕೆ ಕೊಟ್ಟಿದ್ದರು.

ಕೇವಲ ಹತ್ತು ತಿಂಗಳಲ್ಲಿ ಇದೇ ವಿಷಯವನ್ನು ತಮ್ಮ ವಿರೋಧಿಗಳ ತಲೆಗೆ ಕಟ್ಟುತ್ತಾರೆಂದರೆ ಇವರ ನೈತಿಕತೆಯ ಮಟ್ಟ ಎಂಥದ್ದು? ಈ ಪ್ರಸಂಗ ಕೇವಲ ಒಂದು ಉದಾಹರಣೆಯಷ್ಟೆ. ಆಮ್ ಆದ್ಮಿ ಪಾರ್ಟಿಯ ಎಲ್ಲ ಕಾರ್ಯಕರ್ತರು ಗಂಭೀರವಾಗಿ ಆಲೋಚಿಸಬೇಕಾದ ವಿಷಯವಿದು. ಅನುಮಾನವಿದ್ದವರು ಯೂಟ್ಯೂಬ್‌ನಲ್ಲಿರುವ ಕೇಜ್ರಿವಾಲ್‌ರ ಈ ಎರಡೂ ಭಾಷಣಗಳನ್ನು ಕೇಳಿಯೇ ತೀರ್ಮಾನಿಸಬಹುದು.

ಅದೊಂಥರ ರೆಡ್‌ಹ್ಯಾಂಡ್ ಡಿಸಿಷನ್ ಆಗಿರುತ್ತೆ ಅಲ್ಲವೆ?

ದೇಣಿಗೆ - ಸೂಚ್ಯಂಕ

ಆಂತರಿಕ ಪ್ರಜಾತಂತ್ರವನ್ನು ಆಗ್ರಹಿಸಿ ಆಪ್ ಪಕ್ಷದಲ್ಲಿ ಎದ್ದಿರುವ ಭಿನ್ನಮತ ತೀವ್ರಗೊಳ್ಳುತ್ತಿದ್ದಂತೆ ಅದರ ಜನಪ್ರಿಯತೆಯೂ ತೀವ್ರವಾಗಿ ಕುಸಿಯುತ್ತಿದೆ. ಪಕ್ಷದ ದೇಣಿಗೆ ಸಂಗ್ರಹದ ಮೇಲೆ ಇದರ ನೇರ ಪರಿಣಾಮ ಉಂಟಾಗಿದೆ.

ಆಪ್ ಪಕ್ಷ ಸ್ಥಾಪನೆಗೊಂಡ ದಿನದಿಂದಲೂ ಪ್ರತಿನಿತ್ಯ ಸಾವಿರಾರು ಮಂದಿ ಬೆಂಬಲಿಗರು ಸ್ವಪ್ರೇರಣೆಯಿಂದ ಪಕ್ಷದ ಅಕೌಂಟ್‌ಗೆ ದೇಣಿಗೆಯನ್ನು ಜಮಾ ಮಾಡುತ್ತಿದ್ದರು. ಆದರೆ ಭಿನ್ನಮತ ತಾರಕಕ್ಕೇರಿದ ಕಳೆದ ಮಾರ್ಚ್ ತಿಂಗಳಿನಲ್ಲಿ ದೇಣಿಗೆ ಸಂಗ್ರಹಕ್ಕೆ ಭಾರೀ ಹೊಡೆತ ಬಿದ್ದಿದೆ. ಮಾರ್ಚ್ 26ರಂದು ಉಭಯ ಬಣಗಳ ನಡುವೆ ಮಾತುಕತೆ ಮುರಿದುಬಿದ್ದ ದಿನದ ದೇಣಿಗೆ ಎಎಪಿಯ ಇತಿಹಾಸದಲ್ಲೇ ಅತ್ಯಂತ ಕಡಿಮೆ. ಕೇವಲ 264 ರೂಗಳು!


ಕಳೆದ ಮಾರ್ಚ್‌ನ ಮಾಸಿಕ ಸಂಗ್ರಹ 45.4 ಲಕ್ಷ ರೂಗಳು ಮಾತ್ರ. ಇದು 2014ರ ಮಾರ್ಚ್‌ನ ಸಂಗ್ರಹದ ಶೇಕಡ 5 ಮಾತ್ರ ಎಂದರೆ ಆಶ್ಚರ್ಯವೆನಿಸುತ್ತದೆ. ಕಳೆದ ವರ್ಷ ಲೋಕಸಭಾ ಚುನಾವಣೆಯ ತಯಾರಿಯಲ್ಲಿದ್ದಾಗ ಮಾರ್ಚ್ ತಿಂಗಳಿನಲ್ಲಿ 9.2 ಕೋಟಿ ಸಂಗ್ರಹವಾಗಿತ್ತು.

ಈ ಬಾರಿಯ ದೆಹಲಿ ವಿಧಾನಸಭಾ ಚುನಾವಣೆಯ ಅವಧಿಯನ್ನೇ ನೋಡಿ. 2015ರ ಜನವರಿಯಲ್ಲಿ ಅತಿ ಹೆಚ್ಚು ಅಂದರೆ 12.2 ಕೋಟಿ! ಫೆಬ್ರವರಿಯಲ್ಲಿ 5.3 ಕೋಟಿ!

ಈ ದೇಣಿಗೆ ವ್ಯತ್ಯಯಕ್ಕೂ ಎಎಪಿ ಜನಪ್ರಿಯತೆ- ಒಂದು ಅರ್ಥದಲ್ಲಿ ಕೇಜ್ರಿವಾಲ್ ಜನಪ್ರಿಯತೆ- ಕುಸಿಯುತ್ತಿರುವುದಕ್ಕೂ ನೇರಾನೇರ ಸಂಬಂಧವಿದೆ ಎಂಬುದನ್ನು ಯಾರೂ ಅಲ್ಲಗಳೆಯುತ್ತಿಲ್ಲ.

ಅಧಿಕಾರದ ಕ್ರೇಜೀವಾಲಾ!

ಹೀಗೆ ಪ್ರತಿಯೊಂದು ಸಂದರ್ಭದಲ್ಲೂ ಕೇಜ್ರಿವಾಲ್ ನೇರ ಚರ್ಚೆಯಿಂದ ತಪ್ಪಿಸಿಕೊಳ್ಳುತ್ತಾ, ತನ್ನ ಬೆಂಬಲಿಗರ ಮೂಲಕ ಯೋಗೇಂದ್ರ ಮತ್ತು ಪ್ರಶಾಂತ್ ಇಬ್ಬರು ಪಕ್ಷ ವಿರೋಧಿಗಳು, ಅಧಿಕಾರ ಕಬಳಿಸಲು ಹೊಂಚುಹಾಕುತ್ತಿರುವ ಅವಕಾಶವಾದಿಗಳು ಎಂಬ ಅಪಪ್ರಚಾರ ನಡೆಸುತ್ತಲೇ ಬಂದಿರುವುದು ಎದ್ದು ಕಾಣುತ್ತದೆ. ಇದಕ್ಕೆ ಪ್ರತಿಯಾಗಿ ಆ ಇಬ್ಬರು "ಭಿನ್ನಮತೀಯರು" ತಮ್ಮ ಮೇಲಿನ ಆರೋಪಗಳಿಗೆ ಸ್ಪಷ್ಟೀಕರಣ ನೀಡುತ್ತಾ ಬಂದಿದ್ದಾರೆ. ಜೊತೆಜೊತೆಗೆ ತಮ್ಮ ಹೋರಾಟ ವ್ಯಕ್ತಿಗತ ನೆಲೆಯದ್ದಲ್ಲವೆಂದೂ, ಪಕ್ಷದಲ್ಲಿ ಆಂತರಿಕ ಪ್ರಜಾತಂತ್ರ ಮತ್ತು ಪಾರದರ್ಶಕತೆ ಸ್ಥಾಪಿಸಲು ಸೂಕ್ತ ವ್ಯವಸ್ಥೆಯನ್ನು ರೂಪಿಸುವುದಕ್ಕಾಗಿ ಎಂಬ ಅಂಶವನ್ನು ಪದೇಪದೇ ಹೇಳುತ್ತಲೇ ಬಂದಿದ್ದಾರೆ. ಅಂಥಾ ಮೌಲಿಕ ಅಂಶಗಳ ಬಗ್ಗೆ ಘೋರ ನಿರ್ಲಕ್ಷ ತೋರುತ್ತಿರುವ ಕೇಜ್ರಿವಾಲ್ ಅವರ ಎಲ್ಲ ಬೇಡಿಕೆಗಳನ್ನು ನಾವು




ಒಪ್ಪಿಕೊಂಡಿರುವುದಾಗಿ ಬಾಯಿ ಮಾತಿನಲ್ಲಿ ಹೇಳುತ್ತಾ ಬಂದಿದ್ದಾರೆ. ಆದರೆ ಕೃತಿಯಲ್ಲಿ ಪ್ರಶ್ನೆ ಮಾಡುವವರನ್ನು ಮಟ್ಟಹಾಕುವ ದುಷ್ಟ ಧೋರಣೆಯನ್ನು ಪ್ರದರ್ಶಿಸುತ್ತಿದ್ದಾರೆ. ಹೀಗೆ ಮಾರ್ಚ್ 28ರ ಸಭೆಯಲ್ಲಿ ಅಂತಿಮವಾಗಿ ತಮ್ಮ "ವಿರೋಧಿ"ಗಳನ್ನು ಸಂಪೂರ್ಣ ಮೂಲೆಗುಂಪು ಮಾಡಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು.

ತಮ್ಮ ಬೆಂಬಲಿಗರೊಂದಿಗೆ ಪೂರ್ವ ಸಿದ್ಧತೆ ಮಾಡಿಕೊಂಡಿದ್ದ ಕೇಜ್ರಿವಾಲ್ ನರೇಶ್ ಯಾದವ್ ಎಂಬ ಎಂಎಲ್‌ಎಯೊಬ್ಬರ ರೆಸಾರ್ಟ್‌ನಲ್ಲಿ ಕಾರ್ಯಕಾರಿಣಿಯನ್ನು ವ್ಯವಸ್ಥೆ ಮಾಡಿದರು. ಅದು ಎಂಥಾ ವ್ಯವಸ್ಥೆ ಅಂತೀರಿ? ಯಾರೂ ಮಿಸುಕಾಡಲಾಗದಂಥ ಪಕಡ್‌ಬಂಧಿ ವ್ಯವಸ್ಥೆ.

ದಾರಿಯುದ್ದಕ್ಕೂ "ಬಂಡಾಯಗಾರರನ್ನು ಹೊರಹಾಕಿ" ಎಂಬ ಪೋಸ್ಟರ್ ಹಿಡಿದ ಕಾರ್ಯಕರ್ತರು ಕೇಜ್ರಿವಾಲ್ ಪರ ಘೋಷಣೆ ಕೂಗುತ್ತಿದ್ದರು. ಸಭಾಂಗಣದ ಒಳಗಡೆ ಗೂಂಡಾಗಳನ್ನು ತಂದು ನಿಲ್ಲಿಸಿದ್ದರು ಎಂದು ವಿರೋಧಿ ಬಣದವರು ಆರೋಪಿಸಿದ್ದಾರೆಂದರೆ ಪರಿಸ್ಥಿತಿಯನ್ನು ಸುಲಭವಾಗಿ ಅಂದಾಜಿಸಬಹುದು. ತಮ್ಮ ಅಭಿಪ್ರಾಯಕ್ಕೆ ವಿರುದ್ಧ ನಿಲುವುಳ್ಳ ಕೆಲವರನ್ನು ಮೊದಲೇ ಮಿಸ್‌ಗೈಡ್ ಮಾಡಿ ಮೀಟಿಂಗ್‌ಗೆ ಬರದಂತೆ ತಡೆಯುವ ತಂತ್ರವನ್ನೂ ಬಳಸಿದ್ದರು.

ಇಂಥಾ ಚಾರಿತ್ರಿಕ ಸಭೆಯಲ್ಲಿ ಕೇಜ್ರಿವಾಲ್ ಒಂದು ಗಂಟೆ ಕಾಲ ಭಾಷಣ ಮಾಡಿದರು. ಆ ಭಾಷಣದ ಯಾವೊಂದು ಅಂಶವೂ ಪಕ್ಷ ಎದುರಿಸುತ್ತಿದ್ದ ಗಂಭೀರ ಸವಾಲುಗಳನ್ನು ಕುರಿತದ್ದಾಗಿರಲಿಲ್ಲ. ಬದಲಿಗೆ ತಾನು ಹೇಗೆ ಕಷ್ಟಪಟ್ಟೆ, ಪ್ರಾಣವನ್ನು ಪಣ ಇಟ್ಟು 15 ದಿನ ಉಪವಾಸ ಮಾಡಿದೆ. ಶುಗರ್ ಲೆವೆಲ್ 350ಕ್ಕೇರಿತ್ತು. ಹೃದಯಾಘಾತ ಸಂಭವಿಸುವಂತಾಗಿ ಹೇಗೆ ಜೈಲು ಸೇರಬೇಕಾಗಿ ಬಂತು (ವಿವರಗಳಿಗೆ ಬಾಕ್ಸ್ ನೋಡಿ), ಹೆಂಡತಿ ಮಕ್ಕಳಿಗೆ ಸಮಯ ಕೊಡದಂತೆ ಪಕ್ಷಕ್ಕಾಗಿ ದುಡಿದದ್ದು ಇತ್ಯಾದಿ



ವಿಚಾರಗಳನ್ನು ಅತ್ಯಂತ ಎಮೋಷನಲ್ ಆಗಿ ಮಂಡಿಸಿ ತನ್ನ ವಿರೋಧಿಗಳ ವಿರುದ್ಧ ಇಡೀ ಸಭೆಯನ್ನು ಎತ್ತಿಕಟ್ಟುವಲ್ಲಿ ಯಶಸ್ವಿಯಾದರು.. "ಇಂಥಾ ಸಂದರ್ಭದಲ್ಲಿ ನೀವು ನನ್ನ ಜೊತೆ ಇರ್ತೀರೋ ಅಥವ ಅವರ ಜೊತೆ ಇರ್ತೀರೋ ತೀರ್ಮಾನಿಸಿಕೊಳ್ಳಿ" ಎಂದು ಫತ್ವಾ ಹೊರಡಿಸಿಬಿಟ್ಟರು. ತನ್ನ ಮಾತು ಮುಗಿಸಿದ ನಂತರ ಗೋಪಾಲ್‌ರಾಯ್‌ರನ್ನು ಸಭೆಯ ಅಧ್ಯಕ್ಷರೆಂದು ಘೋಷಿಸಿ, ಸಭೆಯಿಂದ ಹೊರಟೇಬಿಟ್ಟರು. ಭಿನ್ನರ ಮತ್ತು ಇತರರ ಸಮಜಾಯಿಷಿ ಕೇಳಲಿಕ್ಕಾಗಲಿ, ಪಕ್ಷದ ಮುಂದಿನ ಭವಿಷ್ಯದ ಬಗ್ಗೆ ಚರ್ಚಿಸಲಿಕ್ಕಾಗಲಿ ಉಳಿಯಬೇಕೆಂಬ ಯಾವ ಆಸಕ್ತಿಯೂ ಅವರಿಗಿರಲಿಲ್ಲ, ಹೇಗಿದ್ದರೂ ತಾವೇ ನಿರ್ದೇಶಿಸಿದ ನಾಟಕ ರಂಗದ ಮೇಲೆ ಪ್ರದರ್ಶನವಾಗುತ್ತದೆ ಎಂಬುದು ಅವರಿಗೆ ಖಾತ್ರಿಯಿತ್ತು.

ನಂತರ ನಡೆದದ್ದೆಲ್ಲಾ ಮತ್ತೊಂದು ಬಗೆ ನಾಟಕ. ದಿಢೀರ್ ಅಧ್ಯಕ್ಷ ಗೋಪಾಲ್‌ರಾಯ್ ಇಬ್ಬರು ಭಿನ್ನರನ್ನು ವಜಾ ಮಾಡುವ ಬಗ್ಗೆ ಒಂದು ಸಾಲಿನ ನಿರ್ಣಯವನ್ನು ಸಭೆಯ ಮುಂದಿಟ್ಟು, ಪರ ವಿರುದ್ಧ ಓಟು ಚಲಾಯಿಸುವಂತೆ ಆಗ್ರಹಿಸಿದರು. ಕನಿಷ್ಟ ಪಕ್ಷ ಅವರಿಗೆ ಮಾತನಾಡಲು ಅವಕಾಶ ಕೊಡಬೇಕೆಂಬ ಪ್ರಜಾತಾಂತ್ರಿಕ ಪ್ರಜ್ಞೆಯೂ ಇಲ್ಲದಂತೆ ವರ್ತಿಸಿದರು. ಇದು ಯಾವ ಮಾದರಿ ಡೆಮಾಕ್ರಸಿ ಎಂದು ಪ್ರಶ್ನೆ ಮಾಡಿದ ರಂಜಾನ್ ಚೌಧರಿ ಎಂಬಾತನಿಗೆ ಸಭೆಯಲ್ಲೇ ಇದ್ದ ಕಟ್ಟಾಳುಗಳು ಕಾಲು ಮುರಿಯುವಂತೆ ಬಡಿದರು.

ಇಬ್ಬರು ಭಿನ್ನರ ಜೊತೆಗೆ ಮತ್ತಿಬ್ಬರು ಬೆಂಬಲಿಗರಾದ ಪ್ರೊ. ಆನಂದಕುಮಾರ್ ಮತ್ತು ಪ್ರೊ.ಅಜಿತ್ ಝಾರನ್ನು ಅವರ ಹುದ್ದೆಗಳಿಂದ ವಜಾ ಮಾಡಿದರು. ಅಷ್ಟು ಮಾತ್ರವಲ್ಲ ತಮ್ಮ ಹಾದಿಗೆ ಅಡ್ಡಗಾಲಾಗುತ್ತಾರೆಂದು ಲೋಕಪಾಲರನ್ನು ರದ್ದುಪಡಿಸಿ, ತಮಗೆ ಬೇಕಾದ ಮಂದಿಯನ್ನು ಲೋಕಪಾಲ್ ಎಂದು ನೇಮಿಸಿಕೊಂಡರು.

ಅಂದಿನಿಂದ ಇಂದಿನವರೆಗೆ ಪ್ರತಿದಿನವೂ ಒಂದಲ್ಲ ಒಂದು ರಾಜ್ಯದ ಕಾರ್ಯಕರ್ತರನ್ನು ಅಥವಾ ಪದಾಧಿಕಾರಿಗಳನ್ನು ಒಂದೋ ಅವಮಾನತುಗೊಳಿಸಲಾಗುತ್ತಿದೆ ಅಥವ ಉಚ್ಚಾಟಿಸಲಾಗುತ್ತಿದೆ.

ಪ್ರಶ್ನೆಯೆತ್ತಿದ ಕಾರಣಕ್ಕೆ ಪಂಜಾಬ್‌ನ ಎಂಪಿ ಅಭ್ಯರ್ಥಿ ಜ್ಯೋತಿ ಮಾನ್ ಮತ್ತು ಬಲದೀಪ್ ಸಿಂಗ್ ಎಂಬುವವರನ್ನು ಸಸ್ಪೆಂಡ್ ಮಾಡಲಾಗಿದೆ. ಉತ್ತರಪ್ರದೇಶ, ರಾಜಸ್ಥಾನ, ಹರ್ಯಾಣ ಮುಂತಾದ ರಾಜ್ಯಗಳ ಹಲವು ನಾಯಕರನ್ನು ಸಸ್ಪೆಂಡ್ ಮಾಡಲಾಗಿದೆ.

ರಂಗಕ್ಕಿಳಿದ ಕಾರ್ಯಕರ್ತರು!

ಕೇಜ್ರಿವಾಲ್ ಕೂಟದ ಮಿತಿಮೀರಿದ ಹುಚ್ಚಾಟವನ್ನು ಕಂಡು ರೋಸಿಹೋದ ಕಾರ್ಯಕರ್ತರು ಪಕ್ಷದಲ್ಲಿ ಪ್ರಜಾತಂತ್ರವನ್ನು ಸ್ಥಾಪಿಸಲು ಕ್ರಿಯಾಶೀಲರಾಗಿದ್ದಾರೆ. 'ಯುನೈಟೆಡ್‌ಎಎಪಿ ಡಾಟ್ ಆರ್ಗ್' ಎಂಬ ವೆಬ್‌ಸೈಟ್ ಆರಂಭಿಸಿ ಅಭಿಪ್ರಾಯ ಸಂಗ್ರಹಕ್ಕೆ ತೊಡಗಿದ್ದಾರೆ. ಹಾಗೆ ಸಂಗ್ರಹವಾದ ಸುಮಾರು 11 ಸಾವಿರ ಅಭಿಪ್ರಾಯಗಳಲ್ಲಿ ಶೇಕಡ 90ರಷ್ಟು ಅಭಿಪ್ರಾಯಗಳು ಕೇಜ್ರಿವಾಲ್‌ರ ನಡೆಯ ವಿರುದ್ಧವಾಗಿವೆ ಎಂಬುದು ಗಮನಾರ್ಹ.

ಕೊನೆಯಲ್ಲಿ ಪ್ರಿಯಾ ಜೇಮ್ಸ್ ಎಂಬ ಎಎಪಿ ಕಾರ್ಯಕರ್ತೆ ಬರೆದಿರುವ ಪತ್ರ ನೋಡೋಣ. ಈಕೆ ಅಮೆರಿಕದಲ್ಲಿರುವ ಎಎಪಿಯ ಸುರಿತ ಕಾರ್ಯಕರ್ತೆ. ಪಕ್ಷಕ್ಕಾಗಿ 200ಕ್ಕಿಂತಲೂ ಹೆಚ್ಚಿನ ವಿಡಿಯೋಗಳನ್ನು ತಯಾರಿಸಿ, ಎಡಿಟ್ ಮಾಡಿದ ಪ್ರೆಸ್ಸಿ ದೊಡ್ಡ ಪ್ರಮಾಣದ ಹಣ ಸಂಗ್ರಹದಲ್ಲೂ ಈಕೆಯ ಪಾಲಿದೆ.

"ಎಎಪಿಯಲ್ಲಿ ಆಂತರಿಕ ಪ್ರಜಾತಂತ್ರದ ಕೊರತೆ ಇದೆಯೆಂಬ ರಹಸ್ಯ ವಾಲಂಟೀರ್ಸ್‌ಗಳಾದ ನಮಗೆ ಗೊತ್ತಿದ್ದ ವಿಷಯವೇ. ಅದು ಈ ವಿವಾದದ ಮೂಲಕ ಬಹಿರಂಗಗೊಂಡಿದೆ ಅಷ್ಟೆ. ಎಎಪಿ ಎಂಬುದು ಒನ್‌ಮ್ಯಾನ್ ಪಾರ್ಟಿಯಾಗುತ್ತಿದೆ ಎಂಬ ವಾಸ್ತವಕ್ಕೆದುರಾಗಿ ನಾವು ನಿಲ್ಲಲೇಬೇಕು. ಎಲ್ಲ ಅಂತಿಮ ನಿರ್ಧಾರಗಳನ್ನು, ಭವಿಷ್ಯದ ಯೋಜನೆಗಳನ್ನು ಕೇಜ್ರಿವಾಲ್ ಮಾತ್ರ ತೆಗೆದುಕೊಳ್ಳುತ್ತಾರೆ. ಒಂದುವೇಳೆ ಕೇಜ್ರಿವಾಲ್ ತಮ್ಮ ಪಕ್ಷದೊಳಗೆ ಸ್ವರಾಜ್ ಮತ್ತು ಉತ್ತರದಾಯಿತ್ವದ ತತ್ವಗಳನ್ನು ಜಾರಿಗೊಳಿಸಲು ವಿಫಲವಾದರೆ, ಇಡೀ ದೆಹಲಿ ರಾಜ್ಯದಲ್ಲಿ ಆ ತತ್ವಗಳನ್ನು ಹೇಗೆ ಜಾರಿಗೆ ತರುತ್ತಾರೆ? ಎಂಬ ಪ್ರಶ್ನೆಯನ್ನು ಈಗಾಗಲೇ ಹಲವು ಮಂದಿ ಕೇಳುತ್ತಿದ್ದಾರೆ. ನಮ್ಮನ್ನು ನಾವು ಸರಿಪಡಿಸಿಕೊಳ್ಳದೇ ಹೋದರೆ ಎಎಪಿಯ ಕುಸಿತ ಇಲ್ಲಿಂದಲೇ ಆರಂಭವಾಗುತ್ತದೆ

"ಕೇಜ್ರಿವಾಲ್ ಜನರ ನಾಡಿಮಿಡಿತವನ್ನು ಚೆನ್ನಾಗಿ ಹಿಡಿಯಬಲ್ಲ ಚುರುಕುಬುದ್ಧಿಯುಳ್ಳ ಒಬ್ಬ ಚಾಣಾಕ್ಷ ರಾಜಕಾರಣಿ. ಅಂಥ ನಾಯಕ ಮೂರ್ಖನಂತೆ ವರ್ತಿಸಲಾರರು ಎಂದು ನಿರೀಕ್ಷಿಸೋಣ. ಕೇಜ್ರಿವಾಲ್‌ರ ರಾಜಕೀಯ ಕೌಶಲ್ಯ, ಯಾದವ್‌ರ ಸಂವಹನ ಕೌಶಲ್ಯ, ಭೂಷಣ್‌ರ ನೈತಿಕತೆಯ ಗಟ್ಟಿತನ, 'ಮೀರಾ ಸನ್ಯಾಲ್‌ರ ಆರ್ಥಿಕ ಚಿಂತನೆಗಳು ಮತ್ತು ಮೇಧಾ ಪಾಟ್ಕರ್ ಅವರ ಸಾಮಾಜಿಕ ನ್ಯಾಯ ಆಮ್‌ಆದ್ಮಿ ಪಕ್ಷಕ್ಕೆ ಅತ್ಯಗತ್ಯ ಎಂಬುದು ನನ್ನ ಪ್ರಾಮಾಣಿಕ ನಂಬಿಕೆ. ಚಿಂತನೆಗಳಲ್ಲಿ ಇಂಥಾ ವೈವಿಧ್ಯತೆಯೇ ನಮ್ಮ ಪಕ್ಷದಲ್ಲಿ ಸಮತೋಲನ ಕಾಯ್ದುಕೊಳ್ಳುವಂತೆ ಮಾಡುತ್ತದೆ. ಭಾರತದಂಥಾ ವೈವಿಧ್ಯಮಯ ದೇಶದಲ್ಲಿ ಎಎಪಿಯೊಳಗಿನ ಇಂಥಾ ವೈವಿಧ್ಯ ಸಂಯೋಜನೆ ಭವಿಷ್ಯದ ಬಗ್ಗೆ ಭರವಸೆಯನ್ನು ಹೆಚ್ಚಿಸುತ್ತದೆ."

"ಕಾರ್ಯಕರ್ತರಾದ ನಮಗೆ ಕೇಜ್ರಿವಾಲ್ ನಾಯಕರೋ, ಯಾದವ್ ಅಥವ ಭೂಷಣ್ ನಾಯಕರಾಗುತ್ತಾರೋ ಎಂಬುದು ಅಷ್ಟು ಮುಖ್ಯವಲ್ಲ. ನಮಗೆ ಈ ದೇಶದ ರಾಜಕೀಯ ಭವಿಷ್ಯ ಮುಖ್ಯ. ಈ ರಾಜಕೀಯವನ್ನು ಸ್ವಚ್ಛಗೊಳಿಸಲಿಕ್ಕಾಗಿಯೇ ನಾವೆಲ್ಲ ಕೈಯಲ್ಲಿ ಪೊರಕೆ ಹಿಡಿದಿದ್ದೇವೆ. ಕೊಳಕು ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸುವುದರಲ್ಲಿ ನಮಗೆ ಆಸಕ್ತಿ ಇದೆಯೇ ಹೊರತು ನಾಯಕರನ್ನು ಬದಲಾಯಿಸುವುದರಲ್ಲಲ್ಲ" ಎಂದು ಮತ್ತೊಬ್ಬ ಕಾರ್ಯಕರ್ತೆ ವಾದ ಮಂಡಿಸಿದ್ದಾನೆ.

ಆಪ್ ಪಕ್ಷ ಬಳಸುತ್ತಿರುವ ಪಕ್ಷದ ಲಾಂಛನವನ್ನು ಡಿಸೈನ್ ಮಾಡಿದ್ದು ಸುನಿಲ್ ಲಾಲ್ ಎಂಬ ಕಾರ್ಯಕರ್ತ. ಕೇಜ್ರಿವಾಲ್ ಕೂಟದ ದುರ್ವರ್ತನೆಯಿಂದ ಬೇಸತ್ತು ತಾನು ರೂಪಿಸಿರುವ ಆ ಲಾಂಛನವನ್ನು ಇನ್ನು ಮುಂದೆ ಬಳಸಬಾರದೆಂದು ಒತ್ತಾಯ ಹಾಕಿದ್ದಾನೆ.

ಭಿನ್ನರು ಪಕ್ಷದಿಂದ ಹೊರಹೋದರೆ ಸಾಕೆಂದು, ಕೇಜ್ರಿವಾಲ್ ಕೂಟ ಎಷ್ಟೆಲ್ಲ ಅವಮಾನಕಾರಿಯಾಗಿ ವರ್ತಿಸಿದರೂ ಯೋಗೇಂದ್ರ ಮತ್ತು ಭೂಷಣ್ ಅವರುಗಳು ಮಾತ್ರ ತಾವು ಪಕ್ಷ ತೊರೆಯುವುದಿಲ್ಲ ಎಂದು ಹಠ ತೊಟ್ಟು ನಿಂತುಬಿಟ್ಟಿದ್ದಾರೆ. "ನ ತೋಡೇಂಗೆ ನ ಛೋಡೇಂಗೆ ! ಸುದರೇಂಗೆ ಔರ್ ಸುದರೇಂಗೆ !!" ಎಂಬ ಹೊಸ ಘೋಷಣೆ ಕೊಟ್ಟಿದ್ದಾರೆ. ಅಂದರೆ ಪಕ್ಷವನ್ನು ಒಡೆಯುವುದೂ ಇಲ್ಲ, ಬಿಟ್ಟು ಹೋಗುವುದೂ ಇಲ್ಲ. ಅದನ್ನು ಸರಿಪಡಿಸುತ್ತೇವೆ ಎಂದರ್ಥ. ಅದಕ್ಕಾಗಿ ಇದೇ ಏಪ್ರಿಲ್ 14ರಂದು ದೆಹಲಿಯ ಬಳಿ 'ಸ್ವರಾಜ್ ಸಂವಾದ್' ಎಂಬ ಹೆಸರಿನಲ್ಲಿ ಕಾರ್ಯಕರ್ತರ ಸಮಾವೇಶವನ್ನು ಸಂಘಟಿಸುತ್ತಿದ್ದಾರೆ. 27 ರಾಜ್ಯಗಳಿಂದ 3000ಕ್ಕೂ ಹೆಚ್ಚು ಮಂದಿ ಕಾರ್ಯಕರ್ತರು ಹಾಜರಾಗುವುದಾಗಿ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ವಿದೇಶಗಳಲ್ಲಿ ನೆಲೆಸಿರುವ 100ಕ್ಕೂ ಹೆಚ್ಚು ಕಾರ್ಯಕರ್ತರು ಈಗಾಗಲೇ ತಮ್ಮ ಹಾಜರಿಯನ್ನು ಖಚಿತಪಡಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಈ ಸಭೆಯಲ್ಲಿ ಭಾಗವಹಿಸಿದರೆ ಶಿಸ್ತು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಕೇಜ್ರಿವಾಲ್‌ರ 'ಅಧಿಕೃತ' ಆದೇಶ ಹೊರಬಿದ್ದಿದೆ. ಮುಂದೇನಾಗುತ್ತದೋ ಕಾದು ನೋಡಬೇಕು.

ಈ ದೇಶದಲ್ಲಿ ಪರ್ಯಾಯ ರಾಜಕಾರಣದ ಕನಸನ್ನು ಬಿತ್ತಿದ್ದ ಆಮ್ ಆದ್ಮಿ ಪಕ್ಷ ತನ್ನ ಆಂತರಿಕ ಸಂಘರ್ಷವನ್ನು ದಾಟಿ ಬರಲಿ. ಜನಪರವಾದ ಹೊಸ ರಾಜಕೀಯದ ತತ್ವ ಆದರ್ಶಗಳನ್ನು ಗಟ್ಟಿಯಾಗಿ ನೆಲೆಗೊಳಿಸಲಿ ಎಂಬುದು ಹಾರೈಕೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

"ನನ್ನ ಕಾರು ನನಗೆ ವಾಪಸ್ ಕೊಡಿ"

ಮೊದಲ ಬಾರಿ ಸಿಎಂ ಆಗಿದ್ದಾಗ ಕೇಜ್ರಿವಾಲ್ ಓಡಾಟಕ್ಕೆ ಬಳಸುತ್ತಿದ್ದದ್ದು ನೀಲಿ ಬಣ್ಣದ ಮಾರುತಿ ವ್ಯಾಗನ್‌ಆರ್ ಕಾರನ್ನು! 2013ರ ಜನವರಿ ಒಂದರಂದು ಕುಂದನ್ ಶರ್ಮ ಎಂಬ ಸ್ವಯಂಸೇವಕ ಈ ಕಾರನ್ನು ಪಕ್ಷಕ್ಕೆ ದೇಣಿಗೆಯಾಗಿ ಕೊಟ್ಟಿದ್ದರು. ಇಂಗ್ಲೆಂಡ್‌ನಲ್ಲಿ ಉದ್ಯೋಗಿಯಾಗಿರುವ ಕುಂದನ್ ಶರ್ಮ ತನ್ನ ಕಾರನ್ನು ಸ್ವತಃ ಕೇಜ್ರಿವಾಲ್ ಬಳಸುತ್ತಿರುವುದನ್ನು ಕಂಡು ಸಂತಸಗೊಂಡಿದ್ದರು. ತನ್ನ ಕಾರು ಅತ್ಯಂತ ಗೌರವಾನ್ವಿತ ವ್ಯಕ್ತಿಯ ಬಳಕೆಯಲ್ಲಿದೆ ಎಂದು ಸಂಭ್ರಮಪಟ್ಟಿದ್ದರು. ಕಾರು ಮಾತ್ರವಲ್ಲದೇ ತನ್ನ ಬೈಕು ಮತ್ತು ಲಕ್ಷಾಂತರ ರೂಪಾಯಿ ದೇಣಿಗೆಯನ್ನೂ ಕೊಟ್ಟಿದ್ದರು. ಅವರ ತಂದೆ ತಮ್ಮ ಪೆನ್ಷನ್ ಹಣದ ಮೂರನೇ ಒಂದು ಭಾಗವನ್ನು ದೇಣಿಗೆಯಾಗಿ ಕೊಟ್ಟಿದ್ದರು. ಆದರೆ ಎಂದಿಗೂ ಅವರು ಈ ಬಗ್ಗೆ ಸಾರ್ವಜನಿಕವಾಗಿ ಮಾತಾಡಿದವರಲ್ಲ.


ಇಂಥಾ ಕುಂದನ್‌ರಿಗೆ ಈಗ ಭ್ರಮನಿರಸನವಾಗಿದೆ. ಕೇಜ್ರಿವಾಲ್ ಮೇಲೆ ಅವರು ಇಟ್ಟಿದ್ದ ವಿಶ್ವಾಸ ಕರಗಿಹೋಗಿದೆ. ಅವರು ಕೇಜ್ರಿ ವಿರುದ್ಧ ಪ್ರತಿಭಟನೆಗೆ ಮುಂದಾಗಿದ್ದಾರೆ. ಅದು ಮಾಮೂಲಿ ಪ್ರತಿಭಟನೆಯಲ್ಲ; "ನನ್ನ ಕಾರನ್ನು ವಾಪಸ್ ಕೊಡಿ" ಎಂಬ ಪ್ರತಿಭಟನೆ!

ಇಂಥಾ ಕ್ರಮಕ್ಕೆ ಏನು ಕಾರಣ? ಆತನ ಮಾತಲ್ಲೇ ಕೇಳೋಣ. "ನನ್ನ ಈ ನಿರ್ಧಾರಕ್ಕೆ ಕಳೆದ ಕೆಲವು ವಾರಗಳ ಬೆಳವಣಿಗೆಗಳು ಮಾತ್ರ ಕಾರಣವಲ್ಲ. ಹಲವು ತಿಂಗಳುಗಳ ನನ್ನದೇ ಸ್ವಂತ ಅನುಭವ ಕಾರಣ. ದೆಹಲಿ ಚುನಾವಣೆಗೆ ಮುನ್ನ ಒಬ್ಬ ಕಳಂಕಿತ ಅಭ್ಯರ್ಥಿಯ ಬಗ್ಗೆ ನಾನು ಆಕ್ಷೇಪಣೆ ಎತ್ತಿದ್ದೆ. ಕೇಜ್ರಿವಾಲರನ್ನು ಸಂಪರ್ಕಿಸಿ ನನ್ನ ಅಸಮ್ಮತಿಯನ್ನು ಸೂಚಿಸಲು ಎಲ್ಲ ಪ್ರಯತ್ನ ಮಾಡಿದ್ದೆ. ಇ-ಮೇಲ್, ಫೋನ್ ಕಾಲ್ ಇತ್ಯಾದಿ ಪ್ರಯತ್ನ ಮಾಡಿದ್ದೆ. ಆದರೆ ಅದಕ್ಕೆ ಯಾವುದೇ ಪ್ರತಿಸ್ಪಂದನೆ ಸಿಗಲಿಲ್ಲ. ಬದಲಿಗೆ ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ನಾನು ಮತ್ತು ನನ್ನ ಪತ್ನಿ 'ಅವಾಮ್' ಎಂಬ ಭಿನ್ನಮತೀಯ ಗುಂಪಿನ ಏಜೆಂಟರೆಂಬ, ಪ್ರಚಾರಪ್ರಿಯರೆಂಬ ಹಣೆಪಟ್ಟಿಗೆ ಗುರಿಯಾದೆವು.

"ನಾವು ದೆಹಲಿಯ ಸರ್ಕಾರವನ್ನು ಬದಲಿಸಲಿಕ್ಕೆ ಮಾತ್ರ ಬಂದವರಲ್ಲ, ದೇಶದಲ್ಲಿ ಪರ್ಯಾಯ, ಪರಿಶುದ್ಧವಾದ ರಾಜಕೀಯದ ಕನಸು ಹೊತ್ತು ಬಂದವರು. ಆದರೆ ಇಂದು ನನ್ನ ತಂದೆಗೆ ಮುಖ ಕೊಟ್ಟು ಮಾತಾಡಲು ಕಷ್ಟವಾಗುತ್ತಿದೆ. ನಮ್ಮೆಲ್ಲ ಕನಸುಗಳು ಛಿದ್ರಗೊಂಡಿವೆ. ಕೇಜ್ರಿವಾಲ್ ಮೇಲೆ ಈಗ ಎಳ್ಳಷ್ಟು ಭರವಸೆಯೂ ಉಳಿದಿಲ್ಲ" ಎನ್ನುತ್ತಾರೆ.

ಹಾಗಂತ ಇವರು ಯೋಗೇಂದ್ರ ಬಣದ ಅನುಯಾಯಿಗಳಲ್ಲ, "ಯೋಗೇಂದ್ರ ಮತ್ತು ಪ್ರಶಾಂತ್ ಅವರು ಸರಿಯೋ ತಪ್ಪೋ ಅನ್ನೋ ತೀರ್ಮಾನ ನಾನು ಹೇಳಲಾರೆ. ಆದರೆ ಅವರು ಎತ್ತಿರುವ ಪ್ರಶ್ನೆಗಳು ಬಹಳ ಮೌಲಿಕವಾದವು. ಅದಕ್ಕಾಗಿಯೇ ಅವರನ್ನು ಹೊರಗೆ ತಳ್ಳಲಾಗುತ್ತಿದೆ ಅನಿಸುತ್ತಿದೆ. ಈ ಸದ್ಯ ನಮಗೆ ಯಾರೊಂದಿಗೂ ಗುರುತಿಸಿಕೊಳ್ಳುವ ಮನಸ್ಸಿಲ್ಲ"

ಸಾವಿರಾರು ಕಾರ್ಯಕರ್ತರಲ್ಲಿ ಪರ್ಯಾಯ ರಾಜಕೀಯದ ಭರವಸೆ ಮೂಡಿಸಿದಷ್ಟೇ ವೇಗದಲ್ಲಿ ಭ್ರಮನಿರಸನವನ್ನೂ ಉಂಟುಮಾಡುತ್ತಿರುವ ಕೇಜ್ರಿವಾಲ್‌ಗೆ ಏನು ಹೇಳೋಣ?



ಚಿನ್ನದ ಕನ್ನಡಕ

"ಏ ಬೇಗ ಬೇಗ ಕಸ ಹೊಡೀರಿ. ಉತ್ಸವದಲ್ಲಿ ಒಂದೂ ಕಸ ಕಾಣಂಗಿಲ್ಲ" ಹನುಮಕ್ಕ ಒದರುತ್ತಾ ಸಂಗಡಿಗರಿಗೆ ಕೂಗಿ ಕೂಗಿ ಹೇಳುತ್ತಿದ್ದಳು. ಅವರೂ ಹುಬಿರಿಯಲ್ಲಿ ಸುದಿಗೊಂದಿಯಲ್ಲಿರುವ ಕಸವನ್ನೆಲ್ಲಾ ಹುಡುಕಿ ಗುಡ್ಡೆ ಹಾಕುತ್ತಿದ್ದರು. ಹನುಮಪ್ಪ ಇನ್ನಿಬ್ಬರೊಂದಿಗೆ ಗಬ್ಬು ನಾರುತ್ತಿದ್ದಂತಹ ಮ್ಯಾನ್ ಹೋಲಿಗೆ ಇಳಿದಿದ್ದ. ಕಸವೆಲ್ಲಾ ರಸವಾಗಿ ಜೀವವಾಯುವಿನ ಜೊತೆಗೆ ಪ್ರಾಣಹಾನಿ ವಾಯುಗಳೂ ಹೆಚ್ಚಿದ್ದದ್ದು ವಾಸನೆಯಿಂದಲೇ ತಿಳಿಯುತ್ತಿತ್ತು. ಅದಕ್ಕೆ "ಅಣ್ಣಾ ಉಸ್ರು ಕಟ್ಟುವ್ರೆ ಹೊರಿಕ್ಕೆ ಬಂದ್ಬುಡು" ಎನ್ನುತ್ತಿದ್ದ ಸೂರಿ ಅಲ್ಲೆ ಹೊರಗೆ ಕೂತು "ಆಗಾಗ ಅಣ್ಣಾ ಹನುಮಂತಣ್ಣ" ಎಂದು ಮಾತನಾಡಿಸುತ್ತಿದ್ದ. ಹನುಮಂತಣ್ಣ ಒಳಗಿನಿಂದಲೇ "ಈ ಬೇವರ್ಸಿ ಸರ್ಕಾರಗಳು ಅಭಿವೃದ್ಧಿ ಅಭಿವೃದ್ಧಿ ಅಂತವೆ. ಇದೇ ನೋಡ್ಲಾ ಸೂರಿ ಅಭಿವೃದ್ಧಿ" ಎನ್ನುತ್ತಾ ಹರಿವಿಗೆ ಕಟ್ಟಿಕೊಂಡಿದ್ದ ಹೊಲಸನ್ನು ಗುದ್ದಲಿಯಿಂದ ಬಾಚಿ ಸೂರಿಗೆ ನೀಡುತ್ತಿದ್ದ. ಸೂರಿಯೂ ಅದನ್ನು ತಳ್ಳುವ ಗಾಡಿಯೊಳಗೆ ಸುರಿಯುತ್ತಾ "ಹೌದೇಳಣ್ಣ ಈ ಬಡ್ಡೆತ್ತವ್ನ ಕೋಟಿಗಟ್ಲೆ ಕಿಲೋಮೀಟರ್ ದೂರದಲ್ಲಿರೋ ಗ್ರಹಗಳತ್ರ ಹೋಗಕ್ಕಾಯ್ತದೆ. ಭೂಮಿ ಮ್ಯಾಲಿರೋ ನಮ್ಮತ್ತೋರತ್ರ ಬರಕ್ಕಾಗಕ್ಕಿಲ್ಲ. ಇರೋ ಭೂಮೀನ ಹಾಳು ಮಾಡ್ಕಂಡು ಇಲ್ದೆ ಇರೋ ಭೂಮೀನ ಹುಡುಕಕ್ಕೊಂಟವ್ರೆ ನೋಡು" ಎಂದ. ಅವನ ಮಾತು ಕೇಳಿ ಆಶ್ಚರ್ಯದಿಂದ ಹನುಮಂತಣ್ಣ "ಪರ್ವಾಗಿಲ್ವೆ.. ಬಾಳ ತಿಳ್ಕಂಡಿದೀಯ ಕಣ್ಲಾ" ಎಂದ. "ಏನೂ ಇಲ್ಲ ಮಣ್ಣು. ನಮ್ಮಪ್ಪ ಓದ್ಸು ಅಂದ್ರೆ ಅವ್ನ ಕೆಲ್ಸಕ್ಕೆ ಹಾಕ್ಕಂಡಾ. ಆದ್ರೆ ದಿನಾ ಪೇಪರ್ ನೋಡದು ಬುಟ್ಟಿಲ್ಲ ನೋಡಣ್ಣ. ಅದೊಂದು ನಂಗೆ ಒಲಿದು ಬಂದದೆ" ಎಂದ. ಜಗತ್ತಿನ ವಿಷಯಗಳೆಲ್ಲವ ಅವರ ಮಾತಿನಲ್ಲಿ ವಿಮರ್ಶೆಗೊಳಗಾಗುತ್ತಿದ್ದವು. ತನ್ನ ಬಳಿಯಲ್ಲಿ ಕಸ ಹೊಡೆದುಕೊಂಡು ಬಂದ ಹನುಮಕ್ಕನನ್ನು "ಅಕ್ಕೋ.." ಎಂದು ಕೂಗಿ "ಎಷ್ಟು ಕೊಟ್ಟಕ್ಕಾ ಉತ್ಸವುಕ್ಕೇ" ಎಂದ.

"ಈ ಸಲಿ ಇನ್ನೂರು ಕೊಟ್ಟೇನಿ ಕಣಾ."

"ಪರ್ವಾ ಇಲ್ವೆ. ಜಾಸ್ತಿನೇ ಕೊಟ್ಟಿದ್ದಿ. ಅದೇನ್ ಹೊಸ ಖುಸಿ ಈ ಸಲಿ?"

"ಹೋದ ಸಲಿ ಮಾರಮ್ಮನ ಮೂಗುತಿಗೆ ಎಷ್ಟು ಕೊಟ್ಟೆಪ್ಪ ನೀನು?"

"ನೂರುಪ್ಪಾಯಿ."

"ಮತ್ತೆ ಕಣ್ಣಿಗೆ ಕಾಣದಿರೋ ಮಾರಮ್ಮುಂಗೆ ನೂರು ಕೊಡಬೇಕಾರೇ ಕಣ್ಣಿಗೆ ಕಾಣೋ ದೇವ್ರುಗೆ ಇನ್ನೂರು ಕೊಡಬಾರದೇನು?"


"ಮೇಸ್ತ್ರಿ ಮುನಿಯಣ್ಣ ಖುಸಿಯಾಗಿರ್ತನೆ ಮತ್ತೆ."

"ಖುಸಿಯಾಗಿಲ್ದೆ ಇನ್ನೇನು? ಈ ವರ್ಷ ಉತ್ಸವುಕ್ಕೆ ಅಂಬೇಡ್ಕರ್ ಮೂರ್ತಿಗೆ ಚಿನ್ನದ ಕನ್ನಡಕ ಮಾಡುಸ್ತೀನಂತ ಧರ್ಮಣ್ಣ ಹೇಳಿದ್ನಲ್ಲ ಅದುಕ್ಕೆ ನಮ್ಮ ದುಡ್ಡುನ್ನುವೆ ಅದುಕ್ಕಾಕಕ್ಕೆ ಹೇಳಿ ಅಂದಿದ್ದುಕ್ಕೆ ಒಪ್ಕಂಡ್ನಂತೆ. ಅದುಕ್ಕೆ ನಾನು ಇನ್ನೂರು ಕೊಟ್ನಪ್ಪ, ಕನ್ನಡಕ ಮಾಡ್ಸಕ್ಕೆ."

"ಹಂಗಾರೆ ನಾನು ಕೊಡ್ತೀನಕ್ಕೋ" ಹೊರಬಂದ ಹನುಮಂತಪ್ಪನನ್ನು ಸೂರಿ ಕೈ ಹಿಡಿದು ಮೇಲೆತ್ತಿ ರಸ್ತೆ ತುಂಬಾ ಕಸ ತುಂಬಿಕೊಳ್ಳಲು ತಳ್ಳುವ ಬಂಡಿಯನ್ನು ನೂಕಿಕೊಂಡು ಹೊರಟ.

ಬೆಳಗ್ಗೆ ಸರಿಯಾಗಿ ಎಂಟು ಗಂಟೆಗೆ ಅಂಬೇಡ್ಕರ್ ರಸ್ತೆ ಕಳೆ ಕಟ್ಟಿತ್ತು. ಬಣ್ಣದ ಕಾಗದಗಳು ಲೈಟ್‌ಕಂಬಗಳನ್ನು ಒಂದು ಸುತ್ತು ತಬ್ಬಿಕೊಂಡು ಮುನ್ನಡೆದಿದ್ದವು. ಪ್ರತಿ ಲೈಟು ಕಂಬಕ್ಕೆ ನೇತು ಹಾಕಿದ ಬ್ಯಾನರುಗಳಲ್ಲಿ ಪ್ರತಿ ಮೂಲೆಯಲ್ಲಿ ಅಂಬೇಡ್ಕರರ ಭಾವಚಿತ್ರ ಹಾಕಿಸಿ ಸಂವಿಧಾನ ಶಿಲ್ಪಿ ಎಂದು ಹೆಸರು ಬರೆದಿತ್ತು. ಅದಕ್ಕೆ ಕೈ ಮುಗಿದು ನಿಂತ ಜನನಾಯಕರ ಪಕ್ಕದಲ್ಲಿ ದಲಿತರ ಬಂಧು, ಬಡವರ ಕಣ್ಮಣಿ, ದಲಿತ ನಾಯಕ, ದಲಿತ ಸಿಂಹ, ದಲಿತ ಚಿರತೆ ಮುಂತಾದ ಬಿರುದುಗಳ ಜೊತೆ ಅವರ ಹೆಸರಿತ್ತು. ಅವರ ಕಾಲ್ಕೆಳಗೆ ಮುಂಡವಿಲ್ಲದ ರುಂಡಗಳಿದ್ದವು. ಪ್ರತಿ ರುಂಡದ ಕೆಳಗೆ ಅದರ ಯಜಮಾನನ ಹೆಸರು ಬರೆಯಲಾಗಿತ್ತು. ಸಾಲಾಗಿ ದನಿಯೆತ್ತಿದ್ದ ಮೈಕುಗಳು "ನಮಿಸಿರಿ ಇಗೋ ಅಂಬೇಡ್ಕರಿವರು, ಶರಣು ಹೇಳಿರಯ್ಯಾ" ಎಂದು ಕಂಬಾರರು ಬರೆದ ಹಾಡು ಹಾಡುತ್ತಿದ್ದವು.

ರಸ್ತೆಯ ಆರಂಭದಲ್ಲಿದ್ದ ಗಣೇಶನ ಗುಡಿಯ ಮುಂದೆ ಟ್ರ್ಯಾಕ್ಟರ್ ಬೆಳ್ಳಿಯ ಪಲ್ಲಕ್ಕಿಯನ್ನು ಅಡ್ಡಡ್ಡವಾಗಿ ಹೊತ್ತು ನಿಂತಿತ್ತು. ಪಲ್ಲಕ್ಕಿ ಬೆಳ್ಳಿಯದ್ದು ಎಂದು ಕಾಣುವಂತೆ ಅಲ್ಲಲ್ಲಿ ತೆಳುವಾಗಿ ತರಹೇವಾರಿ ಹೂವುಗಳನ್ನು ಪೋಣಿಸಲಾಗಿತ್ತು. ಪಲ್ಲಕ್ಕಿಯ ಮಧ್ಯ ಭಾಗದಲ್ಲಿ ಅಂಬೇಡ್ಕರರ ಆಳೆತ್ತರದ ಕನ್ನಡಕ ಹಾಕಿಲ್ಲದ ಪ್ರತಿಮೆ ನಿಂತಿತ್ತು. ಟ್ರ್ಯಾಕ್ಟರಿನ ಸುತ್ತ 'ಸಿರಿವಂತರ ಸಿರಿತನ ದರಿದ್ರರ ಬಡತನದಲ್ಲಿದೆ. ಅದನ್ನು ನಿವಾರಿಸಲು ದುಡಿಯುವವರೆಲ್ಲರೂ ಜಾತಿಮತಗಳನ್ನು ಬಿಟ್ಟು ಸಂಘಟಿತರಾಗಬೇಕು', 'ನನ್ನ ಜನ ಆಳುವ ವರ್ಗವಾಗಬೇಕು. ರಾಜ್ಯಾಧಿಕಾರ ದಾಸ್ಯತನವನ್ನು ನಾಶಪಡಿಸುವ ಕೀಲಿಕೈ', 'ಗುಲಾಮನಿಗೆ ನೀನು ಗುಲಾಮನೆಂದು ಅರಿಯುವಂತೆ ಮಾಡುವುದೇ ಶಿಕ್ಷಣ' ಎಂಬ ಅಂಬೇಡ್ಕರರ ಉಕ್ತಿಗಳು ಸಂದೇಶ ಸಾರುತ್ತಿದ್ದವು. ಪಲ್ಲಕ್ಕಿಯ ಕಮಾನು 'ಶಿಕ್ಷಣ, ಸಂಘಟನೆ, ಹೋರಾಟ' ಎಂದು ಹೇಳುತ್ತಿತ್ತು.



ತಮಟೆ ಸದ್ದಿಗೆ ಕೇಕೆ ಹಾಕಿಕೊಂಡು ಕುಣಿಯುತ್ತಿದ್ದ ಜನಸ್ತೋಮ ದೇವಸ್ಥಾನದೊಳಗಿನ ಗಂಟೆ ಸದ್ದಿಗೆ ನಿಶ್ಶಬ್ದವಾಯಿತು. ತಮಟೆ ಸದ್ದು ಮಾತ್ರ ನಿಲ್ಲಲಿಲ್ಲ. ಪೂಜಾರಿ ಕೈಗಂಟೆ ಅದುರುವಂತೆ ತಮಟೆ ಸದ್ದು ಮಾಡುತ್ತಲೇ ಇತ್ತು. ಧರ್ಮ "ಜೋರಾಗಿ ಹಾಕ್ರಲೇ ಬಡ್ಡೆತ್ತವಕ್ಕೆ" ಎಂದಾಗ ತಮಟೆ ಸದ್ದು ನಿಂತಿತು. ಅಷ್ಟೊತ್ತಿಗೆ ಪೂಜೆಯೂ ಮುಗಿದು ಪೂಜಾರಿ "ಅಂಬೇಡ್ಕರಾಯ ನಮಃ" ಎಂದದ್ದು ಮಾತ್ರ ಸ್ಪಷ್ಟವಾಗಿ ಕೇಳಿಸಿತ್ತು. ಆರತಿ ಹಿಡಿದು ಹೊರಬಂದ ಪೂಜಾರಿ ತಟ್ಟೆಗೆ ಧರ್ಮನ ಜೇಬಿನಿಂದ ಸಾವಿರ ರೂಪಾಯಿ ನೋಟು ಬಿತ್ತು. ಅವನ ಹಣೆಗೆ ಕುಂಕುಮವಿಟ್ಟು, ಕಿವಿಗೆ ಹೂವನ್ನಿಟ್ಟು, ತಲೆಯ ಮೇಲೆ ಗಂಟೆಯನಿಟ್ಟು ಮುಂದೆ ನಡೆದ ಪೂಜಾರಿಗೆ ಭರ್ಜರಿ ಕಲೆಕ್ಷನ್ನಾಯಿತು. ಟ್ರ್ಯಾಕ್ಟರನ್ನೂ ಬೆಳಗಿದ ಆರತಿ ಕನ್ನಡಕವಿಲ್ಲದೆ ತೋರು ಬೆರಳನ್ನು ಮೇಲೆತ್ತಿ ನಿಂತಿದ್ದ ಅಂಬೇಡ್ಕರರನ್ನೂ ಬೆಳಗಿತು. ಮಂತ್ರಘೋಷಗಳ ನಡುವೆ ಗಣೇಶನ ಪಾದದ ಬಳಿಯಲ್ಲಿ ಪೂಜೆಗೊಳಗಾಗಿದ್ದ ಚಿನ್ನದ ಕನ್ನಡಕವನ್ನು ಪೂಜಾರಿ ಅಂಬೇಡ್ಕರರಿಗೆ ತೊಡಿಸಿದ. ಚಪ್ಪಾಳೆ ತಟ್ಟಿದರು. ತಮಟೆ ಸದ್ದು ಮೊಳಗಿತು. "ವಿಘ್ನ ವಿನಾಯಕನಿಗೆ.. ಜೈ, ಡಾಕ್ಟರ್ ಬಿ. ಆರ್. ಅಂಬೇಡ್ಕರ್‌ರವರಿಗೆ.. ಜೈ, ದೀನಬಂಧು ಧರ್ಮಣ್ಣನಿಗೇ.. ಜೈ" ಎನ್ನುವ ಉದ್ಘೋಷಗಳು ತೇಲಿದವು.

"ಅಣ್ಣಾ.. ಮೆರವಣಿಗೆ ಸ್ಟಾರ್ಟ್ ಮಾಡಕ್ಕೇಳಣ್ಣ" ಅಲ್ಲೊಬ್ಬ ಅಂದ.

"ತಡಿರೋ ರೇವಣ್ಣಗೌಡ್ರು ಬಂದ್ಬಿಡ್ಲಿ" ಎಂದ ಧರ್ಮ.

ಅಂದು ಧರ್ಮ ಟಾಪ್ ಟು ಬಾಟಮ್ ಬಿಳಿ ಬಟ್ಟೆಯಿಂದ ಭರ್ಜರಿಯಾಗಿಯೇ ಕಾಣುತ್ತಿದ್ದ. ಹಣೆಯ ಮೇಲೆ ಅಡ್ಡವಾದ ಕೆಂಪು ಕುಂಕುಮ. ಎರಡು ಕಿವಿಗಳ ಕೆಳಗೆ ಬಿಳಿ ವಿಭೂತಿ, ಕೊರಳಲ್ಲಿ ಆಂಜನೇಯನ ಮೂರ್ತಿ ಹೊಂದಿದ್ದ ಚಿನ್ನದ ಸರ. ಎಡಗೈಗೆ ವಾಚು, ಬಲಗೈಲಿ ಕೆಂಪು ಅರಿಶಿನ ಬಣ್ಣದ ತರಹೇವಾರಿ ದಾರಗಳು ಮತ್ತು ಪಂಚಲೋಹದ ಕಡಗ. ಇದ್ದ ಹತ್ತು ಕೈ ಬೆರಳುಗಳಲ್ಲಿ ಏಳಕ್ಕೆ ಹಸಿರು, ಕೆಂಪು, ನೀಲಿ, ಬಿಳಿ, ಕಪ್ಪು, ನೇರಳೆ, ಹಳದಿ ಹರಳುಳ್ಳ ಉಂಗುರಗಳು, ಮತ್ತೊಂದಕ್ಕೆ ಗಣೇಶನದ್ದು ಹಾಗೂ ಅರಿಶಿನ ಮೆತ್ತಿದ ಅಕ್ಕಿಕಾಳುಗಳನ್ನು ಹಿಡಿದಿಟ್ಟಿರುವ ಗುಂಗುರು ತಲೆಗೂದಲು. ಇವಿಷ್ಟು ಧರ್ಮನ ಐಡೆಂಟಿಟಿ. ಇವೆಲ್ಲವನ್ನೂ ಹುಟ್ಟಿದಾಗಿನಿಂದೇನು ಕಲಿತಿರಲಿಲ್ಲ. ಇದು ಅವರ ಮನೆಯ ಸಂಪ್ರದಾಯವೂ ಅಲ್ಲ. ರೇವಣ್ಣ ಗೌಡನ ಸಹವಾಸ ಹೀಗೆ ಅವನನ್ನು ಮಾಡಿತ್ತು.

ಧರ್ಮ ಅಂಬೇಡ್ಕರ್ ಕಾಲೋನಿ ವಾರ್ಡ್‌ನ ಕಾರ್ಪೊರೇಟರ್. ಮೀಸಲಾತಿ ವಾರ್ಡಾಗಿದ್ದರಿಂದ ರೇವಣ್ಣಾ ಗೌಡರ ಬಲದೊಂದಿಗೆ ತನ್ನದನ್ನೂ ಸೇರಿಸಿಕೊಂಡು ಗದ್ದುಗೆ ಏರಿದ್ದ. ಪಿಯುಸಿ ಫೇಲಾದ ಮೇಲೆ ಮಾಡಲು ಕೆಲಸವಿಲ್ಲದಿದ್ದಾಗ ರೇವಣ್ಣಗೌಡರೇ ತನ್ನೊಂದಿಗೆ ಹಾಕಿಕೊಂಡು ಸುತ್ತುತ್ತಿದ್ದರು. ತಾನು ಬೆಳೆಸಿದ ಹುಡುಗ ತನ್ನ ಜೊತೆಯೇ ಹತ್ತಾರು ವರ್ಷಗಳಿಂದ ಇದ್ದವನು ಎಂಬ ಕಾರಣಕ್ಕೆ ತನ್ನಂತೆ ಕಾರ್ಪೊರೇಟರ್ ಆಗಲು ಸಹಕರಿಸಿದ್ದರು. ಧರ್ಮನೂ ಅಷ್ಟೆ ಪ್ರತಿ ಕೆಲಸವನ್ನೂ ಚಾಚೂತಪ್ಪದೆ ರೇವಣ್ಣಗೌಡರಿಗೆ ತಿಳಿಸಿಯೇ ಮುಂದುವರೆಯುತ್ತಿದ್ದ. ಗೌಡರ ಕೃಪೆಯಿಂದ ಎರಡೇ ವರ್ಷದಲ್ಲಿ ಮನೆಯೂ ಮಾಡಿಕೊಂಡಿದ್ದ. ಜೊತೆಗೆ ಅಂಬೇಡ್ಕರ್ ಕಾಲೋನಿಯ ಯುವಕರ ಸಪೋರ್ಟ್ ಕೂಡ ಆತನನ್ನು ಈ ಎತ್ತರಕ್ಕೆ ಬೆಳೆಸಿತ್ತು. ಅದಕ್ಕಾಗಿ ಅವರಿಗೆ ಆಗಾಗ ಪಾರ್ಟಿಗಳು ನೆರವೇರುತ್ತಿದ್ದವು.

ರೇವಣ್ಣಗೌಡನ ಕಾರು ದೇವಸ್ಥಾನದ ಬಳಿ ಬಂದೊಡನೆ ಜನಸ್ತೋಮ ತನ್ನ ಉದ್ಘೋಷಕ್ಕೆ "ಬಡವರ ಬಂಧು ರೇವಣ್ಣಗೌಡರಿಗೇ.. ಜೈ" ಎಂಬುದನ್ನೂ ಸೇರಿಸಿಕೊಂಡಿತು. ರೇವಣ್ಣಗೌಡ ಬಂದವನೇ ಧರ್ಮನ ಕಿವಿಯಲ್ಲಿ "ಅಂಬೇಡ್ಕರ್ ಜಯಂತಿ ದಿನ ಅದೂ ಇದೇ ರಸ್ತೇಲಿ ಆ ಸಾಬಿ ಮಾಂಸ ಮಾರ್ತಾವ್ನಲ್ಲೋ. ಫಸ್ಟು ಆ ಅಂಗಡೀನ ಮುಚ್ಸು" ಎಂದು ಪಿಸುಗುಟ್ಟಿದ. ಧರ್ಮ ಕೆಂಡಮಂಡಲವಾದವನೇ ತನ್ನ ಸಹಚರನ ಬೈಕಿನಲ್ಲಿ ಕುಳಿತು ಮಾಂಸದ ಅಂಗಡಿ ಹತ್ತಿರ ಬಂದ.

"ಲೋ ಶಫಿ. ಇವತ್ತು ಅಂಬೇಡ್ಕರ್ ಜಯಂತಿ ಅಂತ ಗೊತ್ತಿಲ್ವೆನ್ಲಾ? ಅಂಗಡಿ ತಕ್ಕಂಡು ಕುಂತಿದ್ದಿ. ಮುಚ್ಲಾ ಅಂಗಡೀನ" ಎಂದ.

"ಅಣ್ಣಾ.. ಗೌರ್ಮೆಂಟು ಮಾಂಸ ಮಾರಾಟ ಮಾಡ್ಬೇಡಿ ಅಂತ ಹೇಳಿಲ್ವಲ್ಲ, ಅದುಕ್ಕೆ ತೆಗ್ದೆ ಅಣ್ಣ" ಉತ್ತರಿಸಿದ ಶಫಿ.

"ಇಲ್ಲಿ ನಾನೇ ಸರ್ಕಾರ. ಗಾಂಧಿ ಜಯಂತಿಗೆ ಅಂಗಡಿ ಬಂದ್ ಮಾಡಿದಂಗೆ ಇನ್ಮೇಲೆ ಇದಕ್ಕೂ ಬಂದ್ ಅಷ್ಟೆ. ಹಾಕ್ಲಾ ಬಾಗ್ಲಾ" ಎಂದು ಗದರಿದ.

"ಆಯ್ತು ಬುಡಣ್ಣ ಉತ್ಸವ ಮುಗುದ ಮ್ಯಾಲೆ ತಗೀತೀನಿ, ಆಯ್ತಾ?"

"ಇವತ್ತೆಲ್ಲ ತೆಗಿಯಂಗೇ ಇಲ್ಲ ಕಣಲೇ. ಅಂತಾ ನಮ್ಮ ಚನ್ನಣ್ಣನೇ ಚಪ್ಪಲಿ ಅಂಗಡಿ ಮುಚ್ಚಿಲ್ವಾ? ಬಾಗ್ಲಾಕಂಡು ಮೆರವಣಿಗೆಗೆ ಬಾ. ಅಂಬೇಡ್ಕರ್ ಬರ್ದಿರೋ ಸಂವಿಧಾನದಿಂದ ಕಣಲೇ ನಾನು ನೀನು ಜೀವ್ನ ಮಾಡ್ತಿರದು ಇಲ್ಲಿ. ಹಾಕು ಬಾಗ್ಲು ಮಗನೇ."

"ಆಯ್ತು ಬುಡಣ್ಣಾ" ಎಂದ ಶಫಿ. ಬೈಕು ಹತ್ತುತ್ತಿದ್ದ ಧರ್ಮನನ್ನು ಅಮಾಯಕತೆಯಿಂದ "ಅಣ್ಣಾ ಅಂಬೇಡ್ಕರ್ ಬಾಡು ತಿಂದಿದಿಲ್ವಾ?" ಎಂದು ಪ್ರಶ್ನಿಸಿದ. ತಬ್ಬಿಬ್ಬಾದ ಧರ್ಮ "ಮೆರವಣಿಗೆಗೆ ಬಾ ಹೇಳ್ತೀನಿ" ಎಂದು ಹೊರಟ.

ಧರ್ಮ ಪಲ್ಲಕ್ಕಿಯ ಬಳಿ ಬರುತ್ತಿದ್ದಂತೆಯೇ ರೇವಣ್ಣಗೌಡ "ಆ ನನ್ಮಗಂಗೆ ಸರ್ಯಾಗಿ ಹೇಳಿ ಬಂದ್ಯಾ?" ಎಂದ. ಅದಕ್ಕೆ ಕಣ್ಣು ಹೊಡೆದು ತಲೆಯಾಡಿಸಿದ ಧರ್ಮ "ರೇವಣ್ಣಗೌಡರಿಗೇ" ಎಂದಾಗ "ಜೈ" ಎಂದಿತು ಗುಂಪು. ಮತ್ತೆ ಘೋಷಣೆಗಳು ಮೊಳಗಿದವು. ಟ್ರ್ಯಾಕ್ಟರ್ ತನ್ನ ಸದ್ದು ಮಾಡಿ ಆರಂಭವಾಯಿತು. ಮುಂಭಾಗದಿಂದ ಹೊಗೆ ಬುಸುಬುಸನೇ ಮೇಲೇರಿತು. ರೇವಣ್ಣಗೌಡ ಜೋಶಿನಲ್ಲಿ ತಾನೇ ಟ್ರ್ಯಾಕ್ಟರ್ ಓಡಿಸಲು ಮುಂದಾದ. ಮತ್ತೆ ಗುಂಪು ಅವನಿಗೆ ಜೈಕಾರ ಹಾಕಿತು. ಅವನನ್ನು ಮೇಲೆತ್ತಿ ಕುಣಿದಾಡಿತು. ಗದ್ದಲದಲ್ಲಿ ಅವನ ಚಪ್ಪಲಿಯೂ ಹರಿಯಿತು. ಅದನ್ನು ಹೊಲಿದು ಕೊಡಲು ಕೈಯಲ್ಲಿ ಹೂಮಾಲೆ ಹಿಡಿದು ನಿಂತಿದ್ದ ಚನ್ನಣ್ಣನಿಗೆ ಗುಂಪಿನಲ್ಲೊಬ್ಬ ಒಪ್ಪಿಸಿದ. "ಇವತ್ತು ಅಂಬೇಡ್ಕರ್ ಉತ್ಸವ ಅಂತ ಅಂಗಡಿ ಬಾಗ್ಲಾಕೆಲ್ವ" ಎಂದ ಚನ್ನಣ್ಣನಿಗೆ "ಇದು ರೇವಣ್ಣಗೌಡರ ಚಪ್ಪಲಿ" ಎಂಬ ಉತ್ತರ ಸಿಕ್ಕೊಡನೇ ಚಪ್ಪಲಿಯನ್ನು ಒಂದು ಕೈಯಲ್ಲಿ ಹಿಡಿದು ಅಂಗಡಿಯ ಬಳಿ ಓಡಿದ.

ಚನ್ನಣ್ಣ ಅಂಬೇಡ್ಕರ್ ರಸ್ತೆಯಲ್ಲಿ ಪುಟ್ಟದೊಂದು ಚಪ್ಪಲಿ ಹೊಲಿಯುವ ಅಂಗಡಿ ಹಾಕಿಕೊಂಡಿದ್ದ. ಸರ್ಕಾರ ಅದಕ್ಕೆ ಅವನಿಗೆ ದುಡ್ಡು ಕೊಟ್ಟಿತ್ತು. ಆ ಪೆಟ್ಟಿಗೆ ಹೊರಗೆ ಮೈತುಂಬಾ ಅಂಬೇಡ್ಕರರನ್ನು ಹೊತ್ತುಕೊಂಡು ನಗುತ್ತಿತ್ತು. ಒಳಗೆಲ್ಲಾ ಹಳೆಯ ಹರಿದ ಚಪ್ಪಲಿಗಳು ಹೊಲಿಸಿಕೊಂಡು ಪಾಲಿಶ್ ಮಾಡಿಸಿಕೊಂಡು ನಗುತ್ತಿದ್ದವು. ಚನ್ನಣ್ಣನಿಗೆ ರೇವಣ್ಣಗೌಡನ ಪರಿಚಯ ತೀರ ಹಳೆಯದು. ಅವರಪ್ಪನೊಂದಿಗೆ ಚಪ್ಪಲಿಯನ್ನು ಕೊಡುಕೊಳ್ಳುವ ಸಂಬಂಧವನ್ನು ಇಟ್ಟುಕೊಂಡುಬಂದಿದ್ದ ತಲತಲಾಂತರದಿಂದ ಮಾಡಿಕೊಂಡು ಬಂದಿದ್ದ ಕಾಯಕದಿಂದಾಗಿ 'ಅಂಬೇಡ್ಕರ್ ಬೀದಿಯ ಚನ್ನಣ್ಣ' ಎಂದೇ ಪರಿಚಿತವಾಗಿದ್ದ. ಇಂತಹ ಚನ್ನಣ್ಣನಿಗೆ ಅಂದು ರಾತ್ರಿ ಮನೆಯ ಬಳಿಯೇ ರೇವಣ್ಣಗೌಡನ ಮಗಳು ಹುಡುಕಿಕೊಂಡು ಬಂದಿದ್ದಳು. ಅವಳ ಅಂದವಾದ ಚಪ್ಪಲಿಯೊಂದು ಹರಿದುಹೋಗಿತ್ತು. ಬೆಳಗ್ಗೆ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿದ್ದು ಈ ಚಪ್ಪಲಿಯನ್ನೇ ಹಾಕಿಕೊಂಡು ಹೋಗಬೇಕು, ಇದೇ ನಾಳೆ ಹಾಕಿಕೊಳ್ಳುವ ಬಟ್ಟೆಗೆ ಮ್ಯಾಚ್ ಆಗುವುದು ಎಂದು ಕೇಳಿಕೊಂಡಿದ್ದಕ್ಕೆ ಚನ್ನಣ್ಣ ಆಕೆಯನ್ನು ಒಂದು ಕ್ಷಣವೂ ತನ್ನ ಮನೆಯ ಮುಂದೆ ನಿಲ್ಲಿಸಿಕೊಳ್ಳದಂತೆ ಬೆಳಗ್ಗೆಯೇ ನಿಮ್ಮ ಮನೆಗೆ ಚಪ್ಪಲಿ ತಲುಪಿಸುತ್ತೀನಿ ಎಂದು ಹೇಳಿ ಕಳುಹಿಸಿದ್ದ. ರಾತ್ರೋರಾತ್ರಿ ಅಂಗಡಿ ಬಾಗಿಲು ತೆಗೆದು ಆ ಐಷಾರಾಮಿ ಚಪ್ಪಲಿಗೆ ಮೆರುಗು ನೀಡಿದ್ದ.

ಆ ಚಪ್ಪಲಿಯನ್ನು ಗೌಡರ ಮನೆಗೆ ತಲುಪಿಸುವ ತನಕ ಅವನಿಗೆ ಸಮಾಧಾನವಿರಲಿಲ್ಲ. ಬೆಳಗ್ಗೆ ಸೂರ್ಯ ಕಣ್ಬಿಡುತ್ತಿದ್ದಂತೆ ಚಪ್ಪಲಿಗಳನ್ನು ತನ್ನ ಟವೆಲ್ಲಿನಲ್ಲಿ ಸುತ್ತಿಕೊಂಡು ರೇವಣ್ಣಗೌಡನ ಮನೆಯ ಬಳಿ ತೆರಳಿದ. ಸೆಕ್ಯುರಿಟಿ ಚಪ್ಪಲಿ ಕೊಟ್ಟುಹೋಗಲು ಹೇಳಿದನಾದರೂ ಇನ್ನೇನಾದರೂ ಸರಿ ಮಾಡುವುದಿರಬೇಕೆಂದು ಅವನನ್ನು ಕಾಂಪೌಂಡ್ ಒಳಗೆ ಬಿಟ್ಟುಕೊಂಡು ಗೌಡನ ಮಗಳನ್ನು ಕರೆಯಲು ಒಳಹೋಗಿದ್ದ. ಅರಮನೆಯಂತಹ ಮನೆಯನ್ನೊಮ್ಮೆ ಹೊರಗಡೆಯೇ ಕಣ್ತುಂಬ ತುಂಬಿಕೊಂಡು ನೋಡಿಕೊಂಡು ಅದರ ಅಂದಾಜು ಬೆಲೆಯನ್ನು ತನ್ನ ಮಟ್ಟಕ್ಕೆ ಲೆಕ್ಕ ಹಾಕುತ್ತಾ ಮನೆಯ ಬಳಿ ಬಂದು ಅಂಗಳದ ದೊಡ್ಡ ಕಂಬದ ಬುಡದಲ್ಲಿ ಕುಕ್ಕರಗಾಲಿನಲ್ಲಿ ಕುಳಿತ. ರೇವಣ್ಣಗೌಡ ಅದ್ಯಾರೊಂದಿಗೋ ಫೋನಿನಲ್ಲಿ ಮಾತಾಡಿಕೊಂಡು ಹೊರಬಂದು ಚನ್ನನ ಮುಖವನ್ನೊಮ್ಮೆ ನೋಡಿ "ಬೇವರ್ಸಿ ನನ್ನ ಮಗನೇ ಬೆಳ್ಳಂಬೆಳಗ್ಗೆ ನಿನ್ನ ಮುಖ ತೋರ್ಸಿದ್ಯಲ್ಲೋ. ಯಾವನೋ ನಿನ್ನ ಒಳಗೆ ಬಿಟ್ಟ ಬೋಳಿಮಗ" ಎಂದು ಅರಚಾಡಲು ಶುರುವಿಟ್ಟ. ಓಡಿಬಂದ ಸೆಕ್ಯುರಿಟಿಯ ಕೆನ್ನೆ ಕೆಂಪಾಗಿಸಿ "ಈ ಅನಿಷ್ಟ ಮುಂಡೇ ಮಕ್ಕಳು ಮನೆಗೆ ಬರೋ ಹೊತ್ತೇನೋ ಇದು. ಇಷ್ಟೊತ್ತಲ್ಲಿ ಒಳಗ್ಯಾಕೆ ಬಿಟ್ಟೆ ಬೋಳಿಮಗನೇ" ಕೆಂಡಕಾರಿದ. ರೇವಣ್ಣಗೌಡನ ಮುಂದೆ ನಡುಗುತ್ತಾ ನಿಂತಿದ್ದ ಚನ್ನಣ್ಣ ಕೈಯಲ್ಲಿದ್ದ ಟವೆಲ್ಲನ್ನು ಬಿಚ್ಚಿ ಚಪ್ಪಲಿಗಳನ್ನು ತೋರಿಸುತ್ತಿದ್ದಂತೆ "ಅಯ್ಯೋ, ಸೂಳೆ ಮಗನೇ, ನಿನ್ನ ಮುಖ ತೋರ್ಸಿದಲ್ದೆ ಆ ಅನಿಷ್ಟ ಚಪ್ಪಲಿ ತೋರಿಸ್ತೀಯ" ಎಂದು ಎಗರಿ ಬರುತ್ತಿದ್ದಂತೆ ಮಗಳು ಅಡ್ಡ ಬಂದು "ಅವು ನಂದೇ ಸ್ಲಿಪ್ಪರ್ ಡ್ಯಾಡಿ. ಯಾಕೆ ಏನಾಯ್ತು?" ಎಂದಳು. ಚನ್ನಣ್ಣ ಒಂದೂ ಮಾತಾಡದೇ ಟವೆಲ್ಲಿನ ಸಮೇತ ಚಪ್ಪಲಿಗಳನ್ನು ಅಲ್ಲೇ ಬಿಟ್ಟು ಬಂದಿದ್ದ. ಮಗಳ ಮುಖವನ್ನೊಮ್ಮೆ ದುರುಗುಟ್ಟಿ ನೋಡಿ ರೇವಣ್ಣಗೌಡ ಒಳನಡೆದಿದ್ದ.

ಜೇಬಿನಲ್ಲಿದ್ದ ಕೀಲಿಕೈ ಅಂಗಡಿಯ ಬಾಗಿಲು ತೆರೆಯಿತು. ಚನ್ನಣ್ಣ ತೊಟ್ಟಿದ್ದ ಬಿಳಿ ಅಂಗಿ, ಪಂಚೆ ಗೂಟಕ್ಕೆ ನೇತು ಬಿದ್ದವು. ಮಿಣಿಯೊಡನೆ ದಾರವೂ ಸೇರಿ ರೇವಣ್ಣಗೌಡನ ಚಪ್ಪಲಿಗಳನ್ನು ನೆಟ್ಟಗೆ ಮಾಡಲು ಇಳಿಯಿತು. ಕಿಂಚಿತ್ತೂ ಕಾಣದಂತೆ ದಾರವನ್ನು ಮಿಣಿ ಚಪ್ಪಲಿಯೊಳಗೆ ಸೇರಿಸುತ್ತಿತ್ತು. ಚನ್ನಣ್ಣನ ಗಮನ ಬೇರೆಲ್ಲೋ ಹರಿದಾಡುತ್ತಿತ್ತು. ತಿಮ್ಮಣ್ಣ ಅಂಗಡಿಯ ಮುಂದೆ ಬಂದು ಕಣ್ಣೀರಿಡುತ್ತಾ ಅದನ್ನು ಒರೆಸಿಕೊಳ್ಳುತ್ತಿರುವುದೂ ತಿಳಿಯದೆ ಚನ್ನಣ್ಣ ಚಿಂತಾಮಗ್ನನಾಗಿಹೋಗಿದ್ದ. ಉಮ್ಮಳಿಸಿ ಬರುತ್ತಿದ್ದ ಅಳುವನ್ನು ತಡೆಯಲೆತ್ನಿಸುತ್ತಿದ್ದ ತಿಮ್ಮಣ್ಣನ ಬಿಕ್ಕಳಿಕೆ ಚನ್ನಣ್ಣನನ್ನು ಬಡಿದೆಬ್ಬಿಸಿತು. "ಅಸಿಸಿ ಅದೆಷ್ಟು ದಿನಾಂತ ನೆನಸ್ಕಂಡು ಸಾಯ್ತಿ ತಿಮ್ಮ. ಆಗಿದ್ದು ಆಗೋಯ್ತು. ಕಾಲೋನಿ ಜನವೆಲ್ಲಾ ಖುಷಿಯಾಗಿರ್ವಾಗ ನಿಂದೆಂತಾದು ಕಣ್ಣೀರು ಸುಮ್ಕಿರು" ಎಂದ ಚನ್ನಣ್ಣ. "ಹೆಂಗೆ ಸುಮ್ಕಿರ್ಲಪ್ಪ. ಇದ

ಅಲ್ಲ ನಿನ್ನತ್ರಿಗೆ ಸುಟ್ಕೋಗಿದ್ದು" ಎಂದು ಮತ್ತೆ ...ರಿಟ್ಟ ತಿಮ್ಮಣ್ಣ ದಾರವನ್ನು ರಂಪಿಯಿಂದ ಕತ್ತರಿಸಿ ... ಚಪ್ಪಲಿಯ ಸಂದುಗೊಂದುಗಳನ್ನು ಪರಿಶೀಲಿಸುತ್ತಾ ...ೇ ದಿನಾದ್ರನಂತೆ. ಪ್ರಪಂಚದಲ್ಲಿ ಈ ದಿನ ಯಾರು ...ಂಗಿಲ್ಲ ಬುಡು ನಿನ್ನ ಮಾತು ಕಟ್ಕಂಡ್ರೆ" ಎಂದ ...ಣ್ಣ ಕಣ್ಣೊರೆಸಿಕೊಳ್ಳುತ್ತಾ "ಪ್ರಪಂಚದಲ್ಲಿ ಈ ದಿನ ...ರು ಸಾಯ್ತರೆ ಆದ್ರೆ ಈ ಮೆರವಣಿಗೆಯಿಂದಾಗೆ ...ಲ್ಲಣ್ಣ" ಅಂದ ತಿಮ್ಮಣ್ಣ ಅಂಗಡಿಯಿಂದ ಹೊರಬಂದು ...ಣ್ಣನ ಹೆಗಲ ಮೇಲೆ ಕೈ ಹಾಕಿ ಸಮಾಧಾನಪಡಿಸುತ್ತಾ ...ರ್ ಮಾಡಕ್ಕಾಯ್ತದೆ. ಅವಳ ಹಣೆಬರಹದಲ್ಲಿ ಅದೇ ...ತ್ತು ಅನುಸ್ತದೆ. ಒಂಟೋದ್ಲು, ಅದುಕ್ಕೆ ಈ ಮೆರವಣಾಗೇನೆ ...ೆ ಅನ್ನಕಾಯ್ತದಾ? ಆ ಪುಣ್ಯಾತ್ಮ ಇಲ್ದಿದ್ರೆ ನನಗೆ ಈ ...ಡಿ, ನಿನಗೆ ಮನೆ, ಮಗನ್ಗೆ ಕೆಲ್ಸ, ಕಾಲೋನಿಗೆ ಸೌಕರ್ಯ ...ತ್ತಾ? ಉಪ್ಪಿಲ್ಲದ ಸಾರಿಲ್ಲ ಸಾವಿಲ್ಲದ ಮನೆಯಿಲ್ಲ, ...ವ್ರು" ಎಂದ ಚನ್ನಣ್ಣ, ತಿಮ್ಮಣ್ಣನ ಅಳು ಕರಗುತ್ತಾ ...ಿತು. ಎರಡು ಬೀಡಿಗಳಿಗೆ ಬೆಂಕಿ ತಗುಲಿತು.

...ಇಲ್ಲಿಗೆ ಮೂರು ವರ್ಷದ ಹಿಂದಿನ ಮಾತು. ಎಲ್ಲವೂ ...ೇ ಇತ್ತು ಏನೂ ಬದಲಾಗಿರಲಿಲ್ಲ, ಇದೇ ದಿನಾಂಕ, ...ೇ ರಸ್ತೆ ಇದೇ ಬಣ್ಣದ ಕಾಗದಗಳು, ಇದೇ ಸಡಗರ, ...ೇ ಚನ್ನಣ್ಣನ ಮುಚ್ಚಿದ ಅಂಗಡಿ, ಇದೇ ಅಂಬೇಡ್ಕರ್ ... ಪಲ್ಲಕ್ಕಿ ಉತ್ಸವ, ಆದರೆ ಬ್ಯಾನರುಗಳಲ್ಲಿ ಬದಲಿತ್ತು, ...ಮುಗಿದು ರೇವಣ್ಣಗೌಡನಿದ್ದ ಅವನ ಕೆಳಗೆ ಧರ್ಮನ ...ಡ್ಡ ರುಂಡವಿತ್ತು, ಅಂಬೇಡ್ಕರರ ಪ್ರತಿಮೆಗೆ ಮಾಮೂಲಿ ...ತಕವಿತ್ತು ಅಷ್ಟೆ. ಗಣೇಶನ ಗುಡಿಯಿಂದ ಮೆರವಣಿಗೆ ...ರಟಿತ್ತು. ಬಣ್ಣಗಳನ್ನು ಮೈಮೇಲೆಲ್ಲ ಚೆಲ್ಲಿಕೊಂಡು ...ರಿಗೂ ಎರಚಿಕೊಂಡು ಗುಂಪು ತಮಟೆಯ ಸದ್ದಿಗೆ ...ಯುತ್ತಾ ರಸ್ತೆಯಲ್ಲಿ ಸಾಗಿತ್ತು, ಅಲ್ಲಲ್ಲಿ ಹೂವಿನ ...ರಗಳನ್ನು ಹಿಡಿದುಕೊಂಡು ರಸ್ತೆ ಬದಿಯ ...ಡಿಯವರು ನಿಂತಿದ್ದರು. ಪಲ್ಲಕ್ಕಿ ಹತ್ತಿರ ಬಂದಾಗ ಆ ...ವಿನ ಹಾರವನ್ನು ಅಂಬೇಡ್ಕರರ ಪ್ರತಿಮೆಗೆ ಹಾಕಲು ... ಕೈ ಮುಗಿಯುತ್ತಿದ್ದರು. ಧರ್ಮನ ಹೆಗಲ ಮೇಲೆ ...ಾಕಿಕೊಂಡು ರೇವಣ್ಣಗೌಡ ಇತರರಿಗೂ ಕೈ ಬೀಸುತ್ತಿದ್ದ ...ವಣಿಗೆಗೆ ಬರಲು ಕರೆಯುತ್ತಿದ್ದ. ಆಗಾಗ ಗುಂಪಿನ ...ತ್ಯೆ ಹೋಗಿ ಕುಣಿಯುತ್ತಿದ್ದ. ಹೀಗೆ ಉತ್ಸವ ...ೀರಾಗಿಯೇ ನಡೆದು ಅರ್ಧ ದಾರಿಗೆ ಬಂದಿರುವಾಗ ...ರದಲ್ಲಿ ಅಗ್ನಿಶಾಮಕ ವಾಹನದ ಗಂಟೆ ಸದ್ದು ಕೇಳುತ್ತಿತ್ತು, ...ೂರ್ಣ ಇಕ್ಕಟ್ಟಾಗಿ ಇರುವೆಯೂ ಹೊಕ್ಕದಂತಾಗಿದ್ದ ...ಯಲ್ಲಿ ಅಗ್ನಿಶಾಮಕ ವಾಹನ ತೆರಳಬೇಕೆಂದರೆ ಅಂಬೇಡ್ಕರ್ ...ಮೆಯನ್ನು ಹೊತ್ತಿದ್ದ ಪಲ್ಲಕ್ಕಿ ಉತ್ಸವ ಸ್ವಲ್ಪ ಹೊತ್ತು ...ತವಾಗಿ ನಿಂತು ಸಹಕರಿಸುವ ಅಗತ್ಯವಿತ್ತು. ಆದರೇನು ...ಡುವುದು ಆ ಗೌಜು ಗದ್ದಲದಲ್ಲಿ ಅಗ್ನಿ ಶಾಮಕದ ಸೈರನ್ ಸದ್ದು ಅಲ್ಲಿದ್ದವರ ಕಿವಿಗೆ ಬೀಳಲಿಲ್ಲ, ಪೊಲೀಸರು ಬಂದು ರೇವಣ್ಣಗೌಡ ಮತ್ತು ಧರ್ಮನಲ್ಲಿ ವಿನಂತಿಸಿಕೊಂಡರು. ಅವರಿಗೆ ಆ ವಿಷಯ ತಿಳಿಸುವಷ್ಟರಲ್ಲೇ ಸಾಕುಸಾಕಾಗಿ ಹೋಗಿದ್ದ ಪೊಲೀಸರಿಗೆ ಅತ್ತ ಕಡೆಯಿಂದ "ಆ ರೂಟಲ್ಲಿ ಬರಕ್ಹೇಳ್ರಿ ಸಾರ್. ಈಗ ಮೆರವಣಿಗೆ ನಿಲ್ಸಕಾಯ್ತದಾ" ಎಂಬ ಉತ್ತರ ಬಂದಿತ್ತು, ಅಂಬೇಡ್ಕರ್ ಕಾಲೋನಿಯಲ್ಲಿ ಹತ್ತಿ ಉರಿಯುತ್ತಿದ್ದ ಬೆಂಕಿಯ ಹೊಗೆ ಆಕಾಶದೆತ್ತರಕ್ಕೆ ಚಾಚಿದ್ದರೂ ಒಬ್ಬರ ಕಣ್ಣೂ ಅತ್ತ ಕಡೆ ನಾಟಲಿಲ್ಲ, ಒಂದು ಗಂಟೆಯಲ್ಲಿ ಮೆರವಣಿಗೆ ಮುಗಿದಿತ್ತು, ಕುಣಿದು ಕುಪ್ಪಳಿಸಿದವರು ಕಂಠಪೂರ್ತಿ ನೀರು ಕುಡಿಯುತ್ತಿದ್ದರು. ಕಾಲೋನಿಯಿಂದ ಓಡಿಬಂದ ತಿಮ್ಮಣ್ಣ ಧರ್ಮನ ಮುಂದೆ ಕೂತು ಎದೆಬಡಿದುಕೊಂಡು ಅಳಲಾರಂಭಿಸಿದ. ಸಾವಧಾನದಿಂದ ವಿಚಾರಿಸಲಾಗಿ ಕಾಲೋನಿಯ ತನ್ನ ಮನೆಗೆ ಬೆಂಕಿ ಬಿದ್ದು ಅಗ್ನಿಶಾಮಕದವರು ತಡವಾಗಿ ಬರಲಾಗಿ ಮನೆಯೊಂದಿಗೆ ಅದರಲ್ಲಿ ಕಾಯಿಲೆ ಬಿದ್ದು ಮಲಗಿದ್ದ ತನ್ನ ಹೆಂಡತಿಯೂ ಸುಟ್ಟು ಹೋದ ವಿಷಯ ತಿಳಿಸಿದ. ಧರ್ಮನಿಗೆ ಎಲ್ಲವೂ ಅರ್ಥವಾಗಿ ಹೋಯಿತು. ರೇವಣ್ಣಗೌಡನೊಂದಿಗೆ ಸುಟ್ಟ ಜೀವ ನೋಡಲು ತೆರಳಿದರು. ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಅವರೊಂದಿಗೆ ಇವರೂ ಕಣ್ಣೀರಿಟ್ಟರು. ರೇವಣ್ಣಗೌಡ ನಿಂತಲ್ಲೇ ಹತ್ತು ಸಾವಿರದ ಕಟ್ಟು ತೆಗೆದು ತಿಮ್ಮಣ್ಣನಿಗೆ ನೀಡಿದ. ಹಿಂದೆ ಯಾವನೋ 'ರೇವಣ್ಣಂಗೇ..' ಎನ್ನುತ್ತಿದ್ದಂತೆ ಅವನ ಬಾಯಿ ಮುಚ್ಚಿಸಲಾಯಿತು. ಸರ್ಕಾರದಿಂದ ಮನೆ ಕಟ್ಟಿಸುವ ಭರವಸೆ ನೀಡಿ ಅಂತ್ಯಕ್ರಿಯೆಗೆ ಅಣಿಯಾಗಿಸಿದ. ಅಂಬೇಡ್ಕರ್ ಉತ್ಸವದಲ್ಲಿ ಅಚಾತುರ್ಯವೊಂದು ನಡೆದುಹೋಗಿದೆ ಎಂಬುದು ಜನಸ್ತೋಮದಲ್ಲಿ ಕಾಲಕ್ರಮೇಣ ವಿಸ್ಮೃತಿಗೊಂಡಿತು. ಆದರೆ ಮನದೊಡತಿ ಕಳೆದುಕೊಂಡಿದ್ದ ತಿಮ್ಮಣ್ಣನ ಸ್ಮೃತಿಗೆ ಗರಬಡಿದಿರಲಿಲ್ಲ.

ಮೆರವಣಿಗೆ ಭರ್ಜರಿಯಾಗಿಯೇ ನಡೆಯುತ್ತಿತ್ತು. ರೇವಣ್ಣಗೌಡ ಟ್ರ್ಯಾಕ್ಟರನ್ನು ಓಡಿಸುತ್ತಿರುವುದು ಕಾಲೋನಿ ಜನರಲ್ಲಿ ಅವನ ಮೇಲೆ ಭಕ್ತಿಯನ್ನು ಮೂಡಿಸುತಿತ್ತು, ಸಾಲಾಗಿ ರಸ್ತೆ ಬದಿಯಲ್ಲಿ ನಿಂತು ಕೈಯಲ್ಲಿ ಹೂವಿನ ಹಾರವಿಟ್ಟುಕೊಂಡಿದ್ದವರು ಅಂಬೇಡ್ಕರ್ ಕೊರಳಿಗೆ ಭಾರವಾಗಿಸಿ ಟ್ರ್ಯಾಕ್ಟರನ್ನೂ ಹೂವಿನಿಂದಲೇ ಮುಚ್ಚಿದ್ದರು. ಕಪ್ಪು ಅಂಬೇಡ್ಕರರಿಗೆ ತೊಡಿಸಿದ್ದ ಚಿನ್ನದ ಕನ್ನಡಕ ಇಂದಿನ ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು, ಜನರ ಬಾಯಲ್ಲಿ ಅದರ ಅಂದಚೆಂದ ತುಳುಕಾಡುತ್ತಿತ್ತು, ಕಣ್ಣಿನಲ್ಲೇ ಅದರ ತೂಕ ಮಾಡಿ ಬೆಲೆಯನ್ನೂ ಕಟ್ಟಿ ಸೇಟ್‌ಜೀಯನ್ನೇ ಅಣಕಿಸುತ್ತಿದ್ದರು. ಅಲ್ಲಿ ನೆರೆದಿದ್ದವರೆಲ್ಲರ ಬಾಯಲ್ಲೂ ಚಿನ್ನದ ಕನ್ನಡಕದ್ದೇ ಮಾತು.

"ಅಂಬೇಡ್ಕರ್ ಬದ್ಕಿದ್ದಾಗ ಚಿನ್ನದ ಕನ್ನಡಕ ಹಾಕಿದ್ರೋ ಇಲ್ವೋ ಈಗಂತು ನಮ್ಮ ಧರ್ಮಣ್ಣನ ದಯೆಯಿಂದ ಹಾಕಂಗಾಗೈತೆ."

"ಹೌದೌದು, ಆ ಕಪ್ಪು ಮೂರ್ತಿಗೆ ಆ ಬಂಗಾರದ ಕನ್ನಡಕ ಅದೆಷ್ಟು ಹೊಂದೈತೆ ಅಂತೀನಿ."

"ಈ ಸರಿ ಸೇರಿರೋಷ್ಟು ಜನಾನ ನಾನ್ಯಾವತ್ತೂ ನೋಡಿಲ್ಲ, ಎಲ್ಲಾ ಆ ಕನ್ನಡಕದ ಮಹಿಮೆ."

"ರೇವಣ್ಣಗೌಡ್ರು ಇಲ್ದಿದ್ರೆ ಅಂಬೇಡ್ಕರುಗೆ ಚಿನ್ನದ ಕನ್ನಡಕ ಬತ್ತಿತ್ತಿಲ್ಲ ಬುಡು."

ಮಾತುಗಳು ಹಾರುತ್ತಿದ್ದವು.

ಚನ್ನಣ್ಣನ ಅಂಗಡಿಯ ಬಳಿ ಮೆರವಣಿಗೆ ಬಂದೇ ಬಿಟ್ಟಿತು. "ಅಯ್ಯೋ ನಾನೆಂತ ಹಡಕಸ್ಬಿ ನೋಡು. ಗೌಡ್ರುಗೆ ಚಪ್ಲಿ ಕೊಡದೇ ಮರ್ತು ಕುಂತಿವ್ನಿ" ಮೇಲೆದ್ದು ಚನ್ನಣ್ಣ ತಲೆ ಬಗ್ಗಿಸಿಯೇ ರೇವಣ್ಣ ಗೌಡನ ಕಾಲಿಗೆ ಚಪ್ಪಲಿಯನ್ನು ಸೇರಿಸಿದ. ಅಂಗಡಿಯಲ್ಲಿದ್ದ ಹೂವಿನ ಹಾರವನ್ನು ತಂದು ಅಂಬೇಡ್ಕರ್ ಮೂರ್ತಿಗೆ ನೀಡಿ ಕೈ ಮುಗಿದು ನೋಡುತ್ತಾನೆ ಅಂಬೇಡ್ಕರರ ಕಣ್ಣಿಗೆ ಹಾಕಿದ್ದ ಚಿನ್ನದ ಕನ್ನಡಕವೇ ಕಾಣುತ್ತಿಲ್ಲ!

"ಅಣ್ಣೋ.. ಚಿನ್ನದ ಕನ್ನಡಕ ಎಲ್ಲಿ?" ಎಂದು ಕೂಗಿದ. ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲಿ ಗದ್ದಲ ಉಂಟಾಯಿತು. ಕನ್ನಡಕ ಕಾಣದಾಗಿ ರೇವಣ್ಣಗೌಡನನ್ನು, ಧರ್ಮನನ್ನೂ ಅಲ್ಲಿ ನೆರೆದಿದ್ದವರೆಲ್ಲರನ್ನೂ ತಬ್ಬಿಬ್ಬಾಗಿಸಿತು. ತಮಟೆ ಸದ್ದು ನಿಂತಿತು. ಎಲ್ಲ ಎಲ್ಲಿದ್ದರೋ ಅಲ್ಲಲ್ಲೆ ಪಕ್ಕದಲ್ಲಿ ತಡಕಾಡುತ್ತಾ ಓಡಾಡಿದರು. "ಅಲ್ಲೇ ಟ್ರ್ಯಾಕ್ಟರಿನಲ್ಲಿ ಬಿದ್ದಿರ್ತದೆ ನೋಡ್ರೊ", "ಹೂವಿನ ಹಾರದಲ್ಲಿ ಸಿಕ್ಕಾಕಂಡಿರ್ರೈತಪ್ಪ", "ಮೂರ್ತಿ ಅಕ್ಕ ಪಕ್ಕ ಇದ್ದವರ ಜೇಬು ಹುಡುಕ್ರೋ..." ಎತ್ತ ಕಡೆ ನೋಡಿದರೂ ಗಾಬರಿ ಗೊಂದಲ. ಅಂಬೇಡ್ಕರ್ ಪ್ರತಿಮೆಯ ಕೊರಳಿನಲ್ಲಿದ್ದ ಎಲ್ಲಾ ಹಾರವನ್ನೂ ಹರಿದು ತೆಗೆದು ತಡಕಾಡಿದರು.

ಪಲ್ಲಕ್ಕಿಯಿಂದ ಅಂಬೇಡ್ಕರರ ಪ್ರತಿಮೆಯನ್ನು ಕೆಳಗಿಳಿಸಲಾಯಿತು. ಟ್ರ್ಯಾಕ್ಟರಿನಲ್ಲಿದ್ದ ಹೂವಿನ ಹಾರವನ್ನು ಒಂದೊಂದಾಗಿ ಬಿಡಿಸಿ ಒದರಿ ಹೊರಹಾಕಲಾಯಿತು. ಪಲ್ಲಕ್ಕಿಯನ್ನು ಕೆಳಗಿಳಿಸಲಾಯಿತು. ಅದರ ಮೇಲಿದ್ದ ಹೂವೆಲ್ಲವನ್ನು ಹರಿದು ನೋಡಲಾಯಿತು. ಅಂಬೇಡ್ಕರರ ಘೋಷಣೆಗಳ ಬ್ಯಾನರುಗಳನ್ನು ಹರಿದು ತೂರಿ ಚಿನ್ನದ ಕನ್ನಡಕ ಹುಡುಕಲು ಜಾಗ ಮಾಡಿಕೊಂಡಾಯ್ತು. ಹತ್ತಾರು ಕೈಗಳು ಟ್ರ್ಯಾಕ್ಟರಿನಲ್ಲಿ ಹುಡುಕುತ್ತಿದ್ದರೆ ಮಿಕ್ಕವರು ಗಣೇಶನ ಗುಡಿಯಿಂದಲೂ ಹುಡುಕುತ್ತಾ ಬಂದರು. ಚಿನ್ನದ ಕನ್ನಡಕ ತನ್ನ ಮೆಲುಗೈ ಸಾಧಿಸಿ ಅಂಬೇಡ್ಕರರನ್ನು ಪಲ್ಲಕ್ಕಿಯಿಂದ ಕೆಳಗಿಳಿಸಿ ಅನಾಥವಾಗಿಸಿತ್ತು.

ಅಲ್ಲೆ ಕುಳಿತಿದ್ದ ತಿಮ್ಮಣ್ಣನ ದೃಷ್ಟಿ ಅಂಬೇಡ್ಕರ್ ಕಡೆ ಹರಿಯಿತು. ಮೆಲ್ಲನೆ ನಡೆದು ಬಂದವನೇ ಕಣ್ಣಲ್ಲಿ ನೀರು ತುಂಬಿಕೊಂಡ. ಬಿಸಿಲಿನ ತಾಪಕ್ಕೋ ತನ್ನವರ ಸ್ವಾರ್ಥಕ್ಕೋ ಕಾಣೆ ಪ್ರತಿಮೆ ಸುಡುತ್ತಿತ್ತು, "ಇಂತ ಪಾಪಿಗೋಸ್ಕರ ತಂದೆ ಅಷ್ಟೆಲ್ಲಾ ಮಾಡ್ದೆ" ಎಂದು ಅಂಬೇಡ್ಕರರನ್ನು ಒಮ್ಮೆ ಸವರಿದ. ಅಂಬೇಡ್ಕರ್ ಮತ್ತಷ್ಟು ಸುಡುತ್ತಿದ್ದರು. ಸೂರ್ಯನ ತಾಪಕ್ಕೆ ಕಣ್ಣು ಮಿಂಚುತ್ತಿದ್ದವು. ಕೈ ಮುಟ್ಟಿದ, ಕಾಲು ಮುಟ್ಟಿದ, ಮುತ್ತಿಕ್ಕಿದ. ಸಮಾಧಾನವೇ ಆಗುತ್ತಿಲ್ಲ, ಗಣೇಶನನ್ನು ಮುಟ್ಟುವುದಿರಲಿ ಒಳಗೇ ಪ್ರವೇಶವಿಲ್ಲ, ಹಾಗೆಯೇ ಅಂಬೇಡ್ಕರರ ಪ್ರತಿಮೆಯನ್ನು ಎತ್ತರದಲ್ಲಿರಿಸಿ ಬಡವರು ಹತ್ತಿ ಮುಟ್ಟದಂತೆ ಮಾಡಿಟ್ಟಿದ್ದರು. ದೊಡ್ಡೋರಿಗಷ್ಟೇ ಹೂವಿನ ಹಾರಹಾಕುವ ಅವಕಾಶ. ಇವತ್ತು ಹಾಗಾಗಿಲ್ಲ, ಯಾರು ಬೇಕಾದರೂ ಮುಟ್ಟಬಹುದಿತ್ತು, ಚನ್ನಣ್ಣನೂ ಜೊತೆಗೂಡಿ ಅಂಬೇಡ್ಕರ್ ಪ್ರತಿಮೆಯನ್ನು ಇಬ್ಬರೂ ಎತ್ತಿಕೊಂಡಾಗ ಹಲವರು ಓಡಿಬಂದು ಹಿಡಿದು ಚನ್ನಣ್ಣನ ಅಂಗಡಿಯ ಪಕ್ಕದಲ್ಲಿದ್ದ ಅರಳಿ ಮರದಡಿ ನಿಲ್ಲಿಸಿದರು. ಶಫಿ, ಸೂರಿ, ಹನುಮಂತ, ಹನುಮಕ್ಕ ಎಲ್ಲರೂ ಪ್ರತಿಮೆಯ ಸುತ್ತಾ ನೆರೆದರು. ಅಂಬೇಡ್ಕರರನ್ನು ಒಮ್ಮೆ ಮುಟ್ಟಿ ಕಣ್ಣಿಗೊತ್ತಿಕೊಂಡರು, ತಬ್ಬಿದರು, ಮುದ್ದಾಡಿದರು. ಸೆರಗು, ಟವೆಲ್ಲುಗಳಲ್ಲಿ ಒರೆಸಿದರು. ಅಂಬೇಡ್ಕರರನ್ನೇ ಕಣ್ತುಂಬಿಕೊಂಡರು. ಮಕ್ಕಳು ತಾತನ ಸುತ್ತಾ ಸುತ್ತುತ್ತ ಸಂತೋಷಗೊಂಡರು. ತಿಮ್ಮಣ್ಣ ಮತ್ತೆ ಅಂಬೇಡ್ಕರರನ್ನು ಮುಟ್ಟಿದ ಪ್ರತಿಮೆ ತಣ್ಣಗಾಗಿತ್ತು, ಇದನ್ನೇ ಟ್ರ್ಯಾಕ್ಟರಿನಲ್ಲಿ ಕುಳಿತು ನೋಡುತ್ತಿದ್ದ ರೇವಣ್ಣಗೌಡ ಹುಸಿನಗೆಯಿಂದ "ಲೋ.. ಚನ್ನ ಇದೇ ನೋಡು ನಿಮ್ಮ ದ್ಯಾವ್ರುಗ್ಗೆ ಸರಿಯಾದ ಜಾಗ" ಎಂದು ಚಪ್ಪಲಿ ಅಂಗಡಿಯನ್ನೊಮ್ಮೆ ನೋಡಿದ.


"ನಿಜ ಕಣಣ್ಣ, ಅಂಬೇಡ್ಕರ್ ನಮಗೂ ಸರಿಯಾದ ದಾರಿನೇ ತೋರ್ಸವ್ರೆ, ಅವ್ರೂ ಅರಳಿ ಮರದ ಕೆಳಗೇ ನಿಂತವ್ರೆ" ಎಂದ ತಿಮ್ಮಣ್ಣನ ಮಗ ನವೀನ. ಅದಕ್ಕೆ ತಕ್ಕಂತೆ ಅಂಬೇಡ್ಕರರ ತೋರು ಬೆರಳು ಚಪ್ಪಲಿ ಅಂಗಡಿಯ ಮೇಲೆ ಹಾರಾಡುತ್ತಿದ್ದ ಕುಡುಗೋಲು–ಕಸಪೊರಕೆ ಬೆಸೆದ ಬಾವುಟ ತೋರಿಸುತ್ತಿತ್ತು. ಅದರ ಕೆಳಗೆ 'ನಿನಗೆ ಎಲ್ಲಿ ಗೌರವವಿಲ್ಲವೋ ಅಲ್ಲಿ ನಿನ್ನ ಚಪ್ಪಲಿಗಳನ್ನೂ ಸಹ ಬಿಡಬೇಡ' ಎಂದೂ ಬರೆದಿತ್ತು. ರೇವಣ್ಣಗೌಡ ನವೀನನ ಮೇಲೆ ಕಣ್ಣಿಟ್ಟ. ನವೀನ ಚಪ್ಪಲಿ ಅಂಗಡಿಯಲ್ಲಿದ್ದ ರಂಪಿಯನ್ನು ಹೊರತಂದು ಕಲ್ಲಿನ ಮೇಲೆ ಮಸೆಯುತ್ತಾ ಕುಂತ. ಇದ್ದಕ್ಕಿದ್ದಂತೆ ಯಾವನೋ ಉತ್ಸವದ ಕಹಳೆ ಊದಿದ. ರೇವಣ್ಣಗೌಡನಿಗೆ ಪಕ್ಕದಲ್ಲಿ ಆನೆಯೇ ಘೀಳಿಟ್ಟಂತಾಗಿ ಬೆಚ್ಚಿಬಿದ್ದು, ಟ್ರ್ಯಾಕ್ಟರಿನಿಂದ ಕೆಳಗಿಳಿದು ನಡುಗಲಾರಂಭಿಸಿದ.

■ ವಿಕಾಸ ಆರ್ ಮೌರ್ಯ

...ಭಾರತೀಯ ಬಂಡವಾಳಶಾಹಿ ಪಕ್ಷ!


ಮೋದಿ ಸರ್ಕಾರ ಅಪ್ಪಟ ಕಾರ್ಪೊರೇಟ್‌ಸ್ನೇಹಿ ...ರ್ಕಾರ ಎಂಬುದನ್ನು ನೇರವಾಗಿ ಮನವರಿಕೆ ...ಡಿಕೊಟ್ಟಿರುವ ಬಿಜೆಪಿ ಸಂಸದ ಶ್ಯಾಮ್ ಚರಣ್ ...ಕ್ಲಾನಿಗೆ ಮತದಾರರೀಗ ಅಭಿನಂದನೆಗಳನ್ನು ...ಸಬೇಕಾಗಿದೆ. ಅಲಹಾಬಾದ್ ಕ್ಷೇತ್ರದ ಪ್ರತಿನಿಧಿಯಾ...ವ ಶುಕ್ಲಾ ಓರ್ವ ದೊಡ್ಡ ಬೀಡಿ ಉದ್ಯಮಿಯೂ ...ದ್ದಾನೆ. ನಿರ್ದಿಷ್ಟ ವಾಣಿಜ್ಯೋದ್ಯಮಕ್ಕೆ ಸಂಬಂಧಪಟ್ಟ ...ಯಗಳನ್ನು ಪರಿಶೀಲಿಸುವ ಸಂಸದೀಯ ಸಮಿತಿಗೆ ...ೇ ವಾಣಿಜ್ಯೋದ್ಯಮದ ಹಿತಾಸಕ್ತಿ ಹೊಂದಿರುವವರನ್ನು ...ಿಸಬಾರದೆಂಬ ನಿಯಮವಿದ್ದರೂ ಅದನ್ನೆಲ್ಲ ಗಾಳಿಗೆ ...ರಿ ಈತನನ್ನು ದೇಶದ ತಂಬಾಕು ಮಾರಾಟದ ನೀತಿನಿಯಮಗಳನ್ನು ಪರಿಶೀಲಿಸುತ್ತಿರುವ ಸಮಿತಿಯ ಸದಸ್ಯನಾಗಿ ನೇಮಕ ಮಾಡಲಾಗಿದೆ. ಇತ್ತೀಚೆಗಷ್ಟೆ ಈತ "ತಂಬಾಕು ಸೇವನೆಗೂ ಕ್ಯಾನ್ಸರ್ ರೋಗಕ್ಕೂ ಸಂಬಂಧವಿಲ್ಲ" ಎಂಬ ತಂಬಾಕು ಉದ್ಯಮದ ಪರ ಹೇಳಿಕೆಯನ್ನು ಕೊಟ್ಟು ಸಾರ್ವಜನಿಕರಿಂದ ಛೀಮಾರಿ ಹಾಕಿಸಿಕೊಂಡಿದ್ದಾನೆ. ಈ ಸಮಿತಿಯ ಅಧ್ಯಕ್ಷನಾಗಿರುವ ದಿಲೀಪ್ ಗಾಂಧಿ ಎಂಬ ಮತ್ತೊಬ್ಬ ಬಿಜೆಪಿ ಸಂಸದನೂ ಶುಕ್ಲಾನ ಹೇಳಿಕೆಗೆ ದನಿಗೂಡಿಸಿದ್ದಾನೆ.

ಮತದಾರರೆಲ್ಲರೂ ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ದೇಶದ ರಾಜಕೀಯ ವ್ಯವಸ್ಥೆಯ ಮೇಲೆ ಕಾರ್ಪೊರೇಟುಗಳ ಹಿಡಿತ ದಿನೇದಿನೇ ಹೆಚ್ಚುತ್ತಿದೆ.



'ಪ್ರಜಾಸತ್ತೆಯ ಸುಧಾರಣೆಗಾಗಿರುವ ಸಂಘಟನೆ' ಪ್ರಕಾರ 2014ರ ಚುನಾವಣೆಗಳ ವೇಳೆ ಪಕ್ಷಗಳು ಪಡೆದಿರುವ ಡೊನೇಷನ್ ಮೊತ್ತದಲ್ಲಿ ಶೇಕಡಾ 90ಕ್ಕೂ ಅಧಿಕ ಅಂಶ ಕಾರ್ಪೊರೇಟ್ ಸಂಸ್ಥೆಗಳಿಂದ ಬಂದಿದೆ. ಇಂತಹ ಬೃಹತ್ ವಾಣಿಜ್ಯ ಹಿತಾಸಕ್ತಿಗಳ ನೆರವಿನಿಂದಲೇ ಅಧಿಕಾರಕ್ಕೆ ಬಂದಿರುವ ಮೋದಿ ಸರ್ಕಾರ ಈಗ ಹೇಗಾದರೂ ಮಾಡಿ ಆ ಋಣವನ್ನು ತೀರಿಸಲು ಹೊರಟಿರುವುದು ಸ್ಪಷ್ಟವಿದೆ. "ಮೇಕ್ ಇನ್ ಇಂಡಿಯಾ", ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿದ ಭೂಸ್ವಾಧೀನ ಮತ್ತಿತರ ಮಸೂದೆಗಳು, ಅದರ ಬೆನ್ನಲ್ಲೇ ಬಂದಿರುವ ಈ ಶುಕ್ಲಾ ಪ್ರಕರಣ ಇವೆಲ್ಲದರ ಹಿಂದೆ ಅಡಗಿರುವುದು ಉದ್ಯಮಿಗಳ ಉದ್ಧಾರದ ಹಿತಾಸಕ್ತಿಯಲ್ಲದೆ ಇನ್ನೇನೂ ಅಲ್ಲ. ತನ್ನನ್ನು ಆರಿಸಿದ ಜನಸಾಮಾನ್ಯರ ಬಗ್ಗೆ ಎಳ್ಳಷ್ಟೂ ಕಾಳಜಿ ಇರದ ಬಿಜೆಪಿಯನ್ನು ಇನ್ನು ಮುಂದೆ ಭಾರತೀಯ ಜನತೆಯ ಪಕ್ಷವೆನ್ನುವ ಬದಲು ಭಾರತೀಯ ಬಂಡವಾಳಶಾಹಿ ಪಕ್ಷವೆಂದು ಕರೆಯುವುದೇ ಉಚಿತ. 2014ರ ಚುನಾವಣೆಗಳಲ್ಲಿ ಜಯಭೇರಿ ಬಾರಿಸಲು ಸುಮಾರು 714 ಕೋಟಿ ರೂಪಾಯಿಗಳನ್ನು ವ್ಯಯಿಸಿದ ಪಕ್ಷದ ಬೆಂಬಲಕ್ಕೆ ರುಯ್ಯಾ, ಅದಾನಿ, ಅಂಬಾನಿ ಮೊದಲಾದ ದೊಡ್ಡ ದೊಡ್ಡ ಕಾರ್ಪೊರೇಟ್ ಕುಳಗಳು ಸಾಲಾಗಿ ನಿಂತಿದ್ದರು ಎಂಬುದಕ್ಕೆ ಮೋದಿ ಸರ್ಕಾರದ ಬಜೆಟ್ಟು ಮತ್ತು ಅದು ರೂಪಿಸುತ್ತಿರುವ ಕರಾಳ ಕಾರ್ಪೊರೇಟ್‌ಪರ ಶಾಸನಗಳೇ ಸಾಕ್ಷಿ.

ಅದಾನಿ ಕಂಪೆನಿಗೆ ಇಂದು ಭಾರತದಲ್ಲಷ್ಟೆ ಅಲ್ಲ ವಿದೇಶಗಳಲ್ಲಿಯೂ ಹೊಸ ಹೊಸ ಕಾಂಟ್ರಾಕ್ಟುಗಳು ದೊರಕಿರುವುದು ಅದೃಷ್ಟದ ಲೀಲೆಯಂತೂ ಅಲ್ಲವೇ ಅಲ್ಲ. ಅಂಬಾನಿ ಸಾಮ್ರಾಜ್ಯವೂ ಇನ್ನಷ್ಟು ವಿಸ್ತರಣೆಯಾಗುತ್ತಿದೆ. ಮೋದಿ ಸಂಪುಟದಲ್ಲಿ ಸಚಿವನಾಗಿರುವ ಬಿಜೆಪಿ ಮುಖಂಡ ನಿತಿನ್ ಗಡ್ಕರಿ ಮತ್ತಾತನ ಕುಟುಂಬ 2013ರಲ್ಲಿ ಯುರೋಪ್ ಪ್ರವಾಸ ಕೈಗೊಂಡ ವೇಳೆ ಅವರನ್ನೆಲ್ಲ ಎಸ್ಸಾರ್ ಕಂಪೆನಿ ಉಪಾಧ್ಯಕ್ಷ ರವಿ ರುಯ್ಯಾನ ಸೂಪರ್ ಲಕ್ಷುರಿ ನೌಕೆಯಲ್ಲಿ ಮೂರು ದಿನಗಳ ಕಾಲ ಸತ್ಕರಿಸಿದ್ದರ ಮರ್ಮವೇನು? ಬ್ರಿಟನ್ ಮೂಲದ ಇದೇ ಎಸ್ಸಾರ್ ಕಂಪೆನಿ ಮಧ್ಯಪ್ರದೇಶದ ಮಹಾನ್ ಎಂಬಲ್ಲಿ ನಿರ್ಮಿಸುತ್ತಿರುವ ಕಲ್ಲಿದ್ದಲು ಆಧರಿತ ಉತ್ಪಾದನಾ...



ಬಡ ಆದಿವಾಸಿಗಳ ಹಕ್ಕುಗಳು ಉಲ್ಲಂಘನೆ ಆಗುತ್ತಿದ್ದು ಆ ಅಕ್ರಮಗಳ ಬಗ್ಗೆ ಬ್ರಿಟನ್‌ನ ಸಂಸದರಿಗೆ ಮನವರಿಕೆ ಮಾಡಿಕೊಡಲೆಂದು ಗ್ರೀನ್‌ಪೀಸ್ ಸಂಸ್ಥೆಯ ಪ್ರಿಯಾ ಪಿಳ್ಳೆ ಅಲ್ಲಿಗೆ ಹೊರಟಾಗ ಮೋದಿ ಸರ್ಕಾರ ಆಕೆಯನ್ನು ತಡೆದುದೇಕೆಂದು ಮತದಾರರಿಗೆ ಈಗಲಾದರೂ ಅರ್ಥವಾಗಿರಬಹುದು.


ಸಂಸತ್ತನ್ನು ಮೊದಲ ಬಾರಿಗೆ ಪ್ರವೇಶಿಸುವ ಮುನ್ನ ಮೆಟ್ಟಿಲನ್ನು ಚುಂಬಿಸಿದ್ದು ಟಿವಿ ಕ್ಯಾಮರಾಗಳ ಮುಂದೆ ಆಡಿದ ನಾಟಕವೇ ಹೊರತು ಮತ್ತೇನೂ ಆಗಿರಲಿಲ್ಲ ಎಂಬುದನ್ನು ನಂತರದ ಈ ವಿದ್ಯಮಾನಗಳೆಲ್ಲ ಸ್ಪಷ್ಟಪಡಿಸುತ್ತಿಲ್ಲವೇ? ಕೇವಲ ಕಾರ್ಪೊರೇಟ್ ಧಣಿಗಳ ಅಭಿವೃದ್ಧಿಗಾಗಿ ಕಂಕಣ ತೊಟ್ಟಿರುವ ಮೋದಿ ಸರ್ಕಾರಕ್ಕೆ ವಾಸ್ತವವಾಗಿ ಸಂಸದೀಯ ಪ್ರಜಾಪ್ರಭುತ್ವ ಒಂದು ಮಗ್ಗುಲಮುಳ್ಳಾಗಿ ಪರಿಣಮಿಸಿದೆ. ಹಾಗಾಗಿ ಮುಂದೊಂದು ದಿನ ಸಂಸದೀಯ ವ್ಯವಸ್ಥೆಯೇ ಹೈಜಾಕ್ ಆಗುವ ಸಾಧ್ಯತೆಗಳನ್ನು [illegible] ತಳ್ಳಿಹಾಕಲಾಗುವುದಿಲ್ಲ. ■

ಬಿಜೆಪಿ ಮತ್ತು ಕಾಂಗ್ರೆಸ್ಸಿನ ಅಂಬೇಡ್ಕರ್ ಪ್ರೀತಿ

"ಸೈತಾನ್ ಕಿ ಮೂಡಿ ಭಗವದ್ಗೀತ?" ಎಂಬ ಮಾತು ವಿಪರ್ಯಾಸದ ಸೂಚಕವಾದರೂ ಅಚ್ಚರಿಯ ವಿಚಾರವೇನಲ್ಲ, ಅದೇರೀತಿ ಇಂದು ಬಿಜೆಪಿ ಮತ್ತು ಕಾಂಗ್ರೆಸ್ಸಿನ ಬಾಯಲ್ಲಿ ಅಂಬೇಡ್ಕರ್ ಗುಣಗಾನ ನಡೆಯುತ್ತಿರುವುದು ಸಹ ವಿಪರ್ಯಾಸವೆನಿಸಿದರೂ ಆಶ್ಚರ್ಯ ಮೂಡಿಸುವಂಥದ್ದಲ್ಲ, ಏಕೆಂದರೆ ಐತಿಹಾಸಿಕ ವ್ಯಕ್ತಿಗಳು ಬದುಕಿದ್ದಾಗ ಅವರನ್ನು ಕಾಡಿದ, ಪೀಡಿಸಿದ ಶಕ್ತಿಗಳೆ ಅವರ ಮರಣದ ನಂತರ ಹಾಡುತ್ತಾ, ಹೊಗಳುತ್ತಾ, ಅವರ ಚಿಂತನೆಗಳನ್ನು ತಮಗೆ ಬೇಕಾದಂತೆ ತಿರುಚುತ್ತಾ ಬಳಸಿಕೊಳ್ಳುವುದು ಸರ್ವೆ ಸಾಮಾನ್ಯ. ಏಸು, ಪೈಗಂಬರ್, ಬಸವಣ್ಣ, ಕಬೀರ್, ಗುರುನಾನಕ್, ಭಗತ್ ಸಿಂಗ್ ಇನ್ನು ಮುಂತಾದ ಅನೇಕ ಉದಾಹರಣೆಗಳನ್ನು ನಾವು ಕಾಣಬಹುದು. ಅದಕ್ಕೆ ಹೊಸ ಸೇರ್ಪಡೆ ಅಂಬೇಡ್ಕರ್.

2016ರ ಏಪ್ರಿಲ್ 14ಕ್ಕೆ ಅಂಬೇಡ್ಕರ್ ಹುಟ್ಟಿ ನೂರಿಪ್ಪತ್ತೈದು ವರ್ಷಗಳಾಗುತ್ತದೆ. ಅಂಬೇಡ್ಕರ್‌ರವರ ಈ 125ನೇ ಜನ್ಮ ದಿನಾಚರಣೆಯ ವರ್ಷವನ್ನು ಈ ನೆಲದ ಜಾತ್ಯತೀತ ಹಾಗೂ ಪ್ರಜಾತಾಂತ್ರಿಕ ಶಕ್ತಿಗಳು ಆಚರಿಸಿದರೆ ಅದು ಸಂತಸದ ವಿಚಾರ. ಆದರೆ ಅಂಬೇಡ್ಕರ್ ದಿನಾಚರಣೆಯನ್ನು ಅವರಿಗಿಂತ ಅದ್ದೂರಿಯಾಗಿ ಆಚರಿಸುವ ಉಮೇದಿನಲ್ಲಿರುವುದು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು. ಈ ಎರಡು ಪಕ್ಷಗಳು ಪರಸ್ಪರ ಪೈಪೋಟಿಯಲ್ಲಿ ವರ್ಷದಾದ್ಯಂತ ಅಂಬೇಡ್ಕರ್ ದಿನವನ್ನು ಆಚರಿಸಲು ತೀರ್ಮಾನಿಸಿವೆ. ಅಂಬೇಡ್ಕರ್ ಬದುಕಿದ್ದಾಗ ಅವರು ಈ ಕಾಂಗ್ರೆಸ್ ಹಾಗೂ ಕೋಮುವಾದಿ ಶಕ್ತಿಗಳನ್ನು ನಿರಂತರವಾಗಿ ವಿರೋಧಿಸುತ್ತಾ ಬಂದವರು. ಅಂಬೇಡ್ಕರ್‌ರವರ ವಿರೋಧ ಬಲವಾದ ತಾತ್ವಿಕ ನೆಲೆಗಟ್ಟಿನ ಮೇಲೆ ನಿಂತಿದೆ. ಅಂಬೇಡ್ಕರ್ ಚಿಂತನೆಗಳಿಗೆ ಕಾಂಗ್ರೆಸ್ ನಿರಂತರ ಅಡ್ಡಗಾಲು ಹಾಕುತ್ತಾ ಬಂದಿದ್ದರೆ, ಕೋಮುವಾದಿಗಳು ಅದಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ ದೇಶವನ್ನು ತೆಗೆದುಕೊಂಡು ಹೋಗಲು ಪ್ರಯತ್ನಿಸುತ್ತಾ





ಬಂದಿದ್ದಾರೆ. ಕಾಂಗ್ರೆಸ್ ಟೊಳ್ಳು ಪ್ರಜಾತಂತ್ರವನ್ನು ಪ್ರತಿಪಾದಿಸಿದರೆ, ಬಿಜೆಪಿ ಪ್ರಜಾತಂತ್ರ ವಿರೋಧಿ ಮೌಲ್ಯಗಳನ್ನು ಬೆಳೆಸುತ್ತಿದೆ. ಒಂದೆಡೆ ಅಂಬೇಡ್ಕರ್‌ರವರ ಉಸಿರಾದ ಪ್ರಜಾತಂತ್ರ ಹಾಗೂ ಸಮಾನತೆಯ ವಿರುದ್ಧವಾದ ನೀತಿಗಳನ್ನು ಜಾರಿ ಮಾಡುತ್ತಾ ಮತ್ತೊಂದೆಡೆ ಅಂಬೇಡ್ಕರ್ ಗುಣಗಾನದ ನಾಟಕವಾಡಲು ನಿರ್ಧರಿಸಿವೆ. ಈ ಸಂದರ್ಭದಲ್ಲಿ ಈ 'ಬಲಿತ' ಪಕ್ಷಗಳಿಗೆ ಕೆಲವು ಪ್ರಶ್ನೆಗಳನ್ನು ನಾವು ಕೇಳಲೇಬೇಕಿದೆ.

ಕಾಂಗ್ರೆಸ್ಸಿನ ಯೂಸ್ ಅಂಡ್ ಥ್ರೋ ಪಾಲಿಸಿ?

ಅಂಬೇಡ್ಕರ್ ಕಾಲದಿಂದಲೂ ಕಾಂಗ್ರೆಸ್ ತನ್ನನ್ನು ದಲಿತ ಪರವಾದ ಪಕ್ಷವಾಗಿ ಬಿಂಬಿಸಿಕೊಳ್ಳಲು ಪ್ರಯತ್ನಿಸಿದೆ. ಆದರೆ ಅಂಬೇಡ್ಕರ್ ಕಾಂಗ್ರೆಸ್ಸನ್ನು ನಿರಂತರವಾಗಿ ವಿರೋಧಿಸುತ್ತಾ ಬಂದಿದ್ದಾರೆ. ಈ ವಿರೋಧ ತಾತ್ವಿಕವಾದದ್ದೋ ಅಥವ ತಪ್ಪಾದದ್ದೋ? ಅಂಬೇಡ್ಕರ್‌ರವರ ಕಾಂಗ್ರೆಸ್ ವಿರೋಧಕ್ಕೆ ಈ ಕೆಳಕಂಡ ಅಂಶಗಳು ಕಾರಣವಾಗಿದ್ದು ವಾಸ್ತವವಲ್ಲವ್ರೋ?

ಸ್ವತಂತ್ರ ಪೂರ್ವದ ಕಾಂಗ್ರೆಸ್ಸಿನಲ್ಲಿ ಎಲ್ಲರೂ ಇದ್ದರೂ ಅದರ ನಾಯಕತ್ವದ ಪ್ರಧಾನ ಧಾರೆ ಮೇಲ್ವರ್ಗ ಮತ್ತು ಮೇಲ್ಜಾತಿಯಿಂದ ಕೂಡಿದ್ದು ಎಂಬ ಅಂಬೇಡ್ಕರ್‌ರವರ ವಿಶ್ಲೇಷಣೆ ತಪ್ಪಾದದ್ದೆ? ಕಾಂಗ್ರೆಸ್ಸನ್ನು ಪೋಷಿಸಿದ್ದು, ಕಾಂಗ್ರೆಸ್ ಪ್ರತಿನಿಧಿಸಿದ್ದು ಈ ಸಮಾಜದ ಮೇಲ್‌ಸ್ತರವನ್ನೇ ಅಲ್ಲವೆ? ಸಮಾಜವನ್ನು ಸಮಾನತೆಯೆಡೆಗೆ ನಡೆಸಲು ಅಂಬೇಡ್ಕರ್ ಮುಂದಿಟ್ಟ ಬಹುಪಾಲು ಪ್ರಸ್ತಾಪನೆಗಳು ನೀತಿಗಳಾಗದೇ ಹೋಗಲು ಕಾಂಗ್ರೆಸ್ ಕಾರಣವಲ್ಲವೆ?

ಅಂಬೇಡ್ಕರ್ ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು ಬೇಕೆಂಬ ಆಗ್ರಹವನ್ನು ಮುಂದಿಟ್ಟಾಗ ಅದನ್ನು ಪಟ್ಟು ಹಿಡಿದು ವಿರೋಧಿಸಿದ್ದು, ಗಾಂಧಿ ಉಪವಾಸದ ಮೂಲಕ ಬ್ಲ್ಯಾಕ್‌ಮೇಲ್ ಮಾಡಿದ್ದು, ಗಾಂಧಿಗೇನಾದರೂ ಆದರೆ ಇಡೀ ದಲಿತ ಕೇರಿಗಳನ್ನು ನಾಶ ಮಾಡುವುದಾಗಿ ಬೆದರಿಸಿದ್ದು, ಕೊನೆಗೆ ಪೂನಾ ಒಪ್ಪಂದದಂತಹ ದಲಿತ ಹಿತಾಸಕ್ತಿಗೆ ವಿರುದ್ಧವಾದ ನೀತಿಗೆ ಖುದ್ದು ಅಂಬೇಡ್ಕರ್‌ರವರು ಸಹಿ ಹಾಕುವಂತೆ ಮಾಡಿದ್ದು ಕಾಂಗ್ರೆಸ್ ಪಕ್ಷವಲ್ಲವೆ?

ಸ್ವಾತಂತ್ರ ಬರುವ ಮೊದಲು ಭಾವಿ ಭಾರತದಲ್ಲಿ ತುಳಿತಕ್ಕೊಳಗಾದವರ ಸ್ಥಾನವೇನೆಂಬುದು ತೀರ್ಮಾನವಾಗಬೇಕು ಎಂದು ಆಗ್ರಹಿಸಿದ್ದನ್ನು ತಿರುಚಿ, "ಅಂಬೇಡ್ಕರ್ ಸ್ವಾತಂತ್ರ್ಯ ವಿರೋಧಿ" ಎಂದು ಪ್ರಚಾರ ಮಾಡಿದ್ದು ಕಾಂಗ್ರೆಸ್ ಅಲ್ಲವೆ?

ದಮನಿತ ಸಮುದಾಯದ ಮೇರು ವ್ಯಕ್ತಿಯಾಗಿ ಅಂಬೇಡ್ಕರ್ ಬೆಳೆದಾಗ ಅವರನ್ನು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿ, ಅವರು ಮುಂದಿಟ್ಟ ಪ್ರಮುಖ ಪ್ರಸ್ತಾಪಗಳಾದ "ಭೂಮಿಯ ರಾಷ್ಟ್ರೀಕರಣ ಹಾಗೂ ಮರುಹಂಚಿಕೆ", "ದಲಿತರಿಗೆ ಪ್ರತ್ಯೇಕ ಗ್ರಾಮಗಳ ರಚನೆ", "ಪೂನಾ ಒಪ್ಪಂದದ ರದ್ಧತಿ-ಪ್ರತ್ಯೇಕ ಮತದಾನ" ಮುಂತಾದವುಗಳನ್ನು ಸೋಲಿಸಿ ಮೂಲೆಗುಂಪು ಮಾಡಿದ್ದು ಇದೇ ಕಾಂಗ್ರೆಸ್ ಪಕ್ಷವಲ್ಲವೆ?


ಅಂಬೇಡ್ಕರ್‌ರನ್ನು ಕ್ಯಾಬಿನೆಟ್ ಮಂತ್ರಿಯನ್ನಾಗಿ ಮಾಡಿಕೊಂಡರೂ ಅವರನ್ನು ನೀತಿ ರೂಪಿಸುವ "ವರ್ಕಿಂಗ್ ಕಮಿಟಿ"ಗಳಲ್ಲಿ ಸೇರಿಸಿಕೊಳ್ಳದೆ ಅವರ ಸ್ಥಾನವನ್ನು ಅಲಂಕಾರಿಕವಾಗಿ ಬಳಸಿಕೊಂಡಿದ್ದು, ಅವರು ಮುಂದಿಟ್ಟ ಹಿಂದೂ ಧರ್ಮವನ್ನು ಸಮಾನತೆಯ ಆಧಾರದ ಮೇಲೆ ಪರಿಷ್ಕರಿಸುವ ಹಿಂದೂ ಕೋಡ್ ಬಿಲ್ ಅನ್ನು ವಿರೋಧಿಸಿದ್ದು, ಅವರು ಎಚ್ಚರಿಸಿದರೂ ಪಾಕಿಸ್ತಾನ ವಿರೋಧಿ ವಿದೇಶಿ ನೀತಿಯನ್ನು ಅನುಸರಿಸಿದ್ದು, ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸದೆ ಉಳಿಸಿಕೊಂಡು ಬಂದದ್ದು ಕಾಂಗ್ರೆಸ್ ಪಕ್ಷವಲ್ಲವೆ? ಈ ಕಾರಣಕ್ಕಾಗಿಯೇ ನೊಂದು ಕ್ಯಾಬಿನೆಟ್ ಖಾತೆಗೆ ಅಂಬೇಡ್ಕರ್ ರಾಜೀನಾಮೆ ನೀಡಲಿಲ್ಲವೆ?

ಅಂಬೇಡ್ಕರ್‌ರವರು ಮತ್ತೆ ಚುನಾವಣೆಗೆ ನಿಂತಾಗ ಅವರನ್ನು ಲೋಕಸಭೆಗೆ ಬರದಂತೆ ತಡೆಯಲು ತನ್ನ ಕ್ಯಾಂಡೇಟುಗಳನ್ನು ಹಾಕಿ, ಸವರ್ಣೀಯರಲ್ಲಿ ಅಂಬೇಡ್ಕರ್ ಹಿಂದೂ ವಿರೋಧಿ ಎಂಬ ಚಿಂತನೆಯನ್ನು ಉದ್ರೇಕಿಸಿ, ಅವರ ಓಟನ್ನು ಬಳಸಿಕೊಂಡು ಅಂಬೇಡ್ಕರ್‌ರನ್ನು ಸೋಲಿಸಿದ್ದು, ಅಂಬೇಡ್ಕರ್ ಜೊತೆಗಿದ್ದ ದಲಿತ ಪ್ರತಿನಿಧಿಗಳನ್ನು 'ಆಪರೇಷನ್ ಆಮಿಷ'ದ ಮೂಲಕ ತನ್ನ ಪಕ್ಷಕ್ಕೆ ಸೆಳೆದುಕೊಂಡು, ಅಂಬೇಡ್ಕರ್‌ರನ್ನು ಒಂಟಿಯನ್ನಾಗಿಸಿದ್ದು ಕಾಂಗ್ರೆಸ್ ಪಕ್ಷವೆ ಅಲ್ಲವೆ?

ಈ ದೇಶದ ರಾಜಕೀಯ ಸಮಾನತೆ ಯಶಸ್ವಿಗೊಳ್ಳಬೇಕಾದರೆ ಆರ್ಥಿಕ-ಸಾಮಾಜಿಕ ಸಮಾನತೆ ಆಚರಣೆಗೆ ಬರಬೇಕಿರುವುದು, ಸ್ವಾತಂತ್ರ್ಯದ ಜೊತೆ ಸಮಾನತೆ ಈ ದೇಶದ ಮಂತ್ರವಾಗಬೇಕು ಎಂಬ ಅಂಬೇಡ್ಕರ್‌ರವರ ದಾರ್ಶನಿಕ ಮಾರ್ಗದರ್ಶನವನ್ನು ಕಸದಬುಟ್ಟಿಗೆ ಹಾಕಿ ಅಸಮಾನತೆಯನ್ನು ಪೋಷಿಸಿ ಬಳಸಿಕೊಳ್ಳುತ್ತಾ ಬಂದಿದ್ದು ಕಾಂಗ್ರೆಸ್ ಪಕ್ಷವಲ್ಲವೆ?

ಅಂಬೇಡ್ಕರ್ ಆಶಯಗಳನ್ನು ಸಂವಿಧಾನದ ಅಲಂಕಾರವನ್ನಾಗಿ ಮಾತ್ರ ಮಾಡಿಟ್ಟು; ಈ ದೇಶದ ಪ್ರತಿ ನೀತಿಯೂ ಬಲಾಢ್ಯರ ಪರವಾಗಿರುವಂತೆ ನೋಡಿಕೊಂಡು ಬಂದದ್ದು, ದಲಿತರ ಮೂಗಿಗೆ ತುಪ್ಪ ಸವರಿ - ಬಲಿತರ ಬಾಯಿಗೆ ರೊಟ್ಟಿಯನ್ನಿಟ್ಟಿದ್ದು ಕಾಂಗ್ರೆಸ್ ಪಕ್ಷವೆ ಅಲ್ಲವೆ?

ಅಂಬೇಡ್ಕರ್ ದಿನವನ್ನು ಕಾಂಗ್ರೆಸ್ ಆಚರಿಸುವುದಾದರೆ ಅಂಬೇಡ್ಕರ್ ಆಶಯಗಳಿಗೆ ಅದು ಮಾಡಿರುವ ಈ ಚಾರಿತ್ರಿಕ ಅಪಚಾರಗಳನ್ನು ಆತ್ಮವಿಮರ್ಶೆ ಮಾಡಿಕೊಳ್ಳಲು ಸಿದ್ಧವಿದೆಯೆ? ದಲಿತರ ಹೆಸರಿನಲ್ಲಿ ಬಲಿತರ ರಾಜಕಾರಣ ಮಾಡುತ್ತಾ ಬಂದ ಕಾಂಗ್ರೆಸ್ಸಿನ ಅಂಬೇಡ್ಕರ್ ಪ್ರೀತಿ ಪ್ರಾಮಾಣಿಕವಾದದ್ದು ಎಂದು ನಂಬಿದರೆ ನಾವು ಮೂರ್ಖರಾಗುವುದಿಲ್ಲವೆ?



ಬಿಜೆಪಿಯ ಖತರ್‌ನಾಕ್ ಪಾಯ್ಸನ್ ಪಾಲಿಸಿ

ಅಂಬೇಡ್ಕರ್ ದಿನಾಚರಣೆಯನ್ನು ಆಚರಿಸುವುದೆಂದರೆ ಅವರ ಚಿಂತನೆಗಳನ್ನು ಎತ್ತಿ ಹಿಡಿಯುವುದು, ಅವರ ಆಶಯಗಳ ಅನುಷ್ಠಾನಕ್ಕಾಗಿ ಶ್ರಮಿಸುವುದು ಎಂದು ಅರ್ಥ. ಅಂಬೇಡ್ಕರ್‌ರವರ ಯಾವ ಚಿಂತನೆಗಳನ್ನು, ಯಾವ ಆಶಯಗಳನ್ನು ಬಿಜೆಪಿ ಅನುಮೋದಿಸುತ್ತದೆ? ಅಂಬೇಡ್ಕರ್ ಎಲ್ಲಾ ರೀತಿಯ ಮೇಲುಕೀಳಿನ ವಿರೋಧಿಯಾಗಿದ್ದರು, ಸಮಾನತೆಯ ಪ್ರತಿಪಾದಕರಾಗಿದ್ದರು. ಆದರೆ ಬಿಜೆಪಿಯ ಬಾಯಲ್ಲಿ ಅಪ್ಪಿತಪ್ಪಿಯೂ ಸಮಾನತೆಯ ಪದ ಬರುವುದಿಲ್ಲ, ಹಾಗಿರುವಾಗ ಸಮಾನತಾವಾದಿಯ ಜೊತೆ ಬಿಜೆಪಿಗೆ ಇರುವ ಸಮಾನ ಅಂಶವಾದರೂ ಯಾವುದು?

ಅಂಬೇಡ್ಕರ್‌ರವರ ಆತ್ಮವಿದ್ದದ್ದು ಈ ಸಮಾಜದ ತುಳಿತಕ್ಕೊಳಗಾದವರ ಕೇರಿಗಳಲ್ಲಿ, ಬಿಜೆಪಿಯ ದಂತ ಗೋಪುರವಿರುವುದು ದುಡಿಮೆಕಂಡರಾಗದ ದೇವಲೋಕದಲ್ಲಿ, ಈ ಆತ್ಮಕ್ಕೆ ನಿಮ್ಮ ಅರಮನೆಯಲ್ಲಿ ಸ್ಥಾನವಾದರೂ ಎಲ್ಲಿ?

ಅಂಬೇಡ್ಕರ್ ಬಂಡವಾಳವಾದ ಹಾಗೂ ಬ್ರಾಹ್ಮಣ್ಯವಾದವನ್ನು ಬಲವಾಗಿ ವಿರೋಧಿಸುತ್ತಾ ಬಂದವರು. ಬಿಜೆಪಿ ಅಭಿವೃದ್ಧಿಯ ಹೆಸರಿನಲ್ಲಿ ಬಂಡವಾಳದ ಪಾರುಪತ್ಯ ವಹಿಸಿದೆ, ಸಂಸ್ಕೃತಿಯ ಹೆಸರಿನಲ್ಲಿ ಬ್ರಾಹ್ಮಣ್ಯದ ಪೌರೋಹಿತ್ಯ ತೆಗೆದುಕೊಂಡಿದೆ. ಹೀಗಿರುವಾಗ ನೀವು ಬಂಡವಾಳವಾದ ಹಾಗೂ ಬ್ರಾಹ್ಮಣ್ಯವಾದವನ್ನು ಕೈಬಿಡುತ್ತಿದ್ದೀರ? ಅಥವ ಅಂಬೇಡ್ಕರ್‌ರವರಿಗೆ ಆ ಹೊಲಸನ್ನು ಮೆತ್ತಬೇಕು ಎಂದುಕೊಂಡಿದ್ದೀರ?

ಬಿಜೆಪಿ ಸನಾತನ ಹಿಂದೂ ಧರ್ಮವನ್ನು ಎತ್ತಿ ಹಿಡಿಯುತ್ತದೆ. ಈ ದೇಶವನ್ನು ಹಿಂದೂ ದೇಶವನ್ನಾಗಿ ಪರಿವರ್ತಿಸಬೇಕೆಂದು ಬಯಸುತ್ತದೆ. ಅಂಬೇಡ್ಕರ್ ಈ ಸನಾತನವಾದಿಗಳು ಎತ್ತಿಹಿಡಿಯುವ ಧರ್ಮವನ್ನು ಪ್ರಜಾಪ್ರಭುತ್ವ ವಿರೋಧಿ ಧರ್ಮವೆಂದು ಬಲವಾಗಿ ಪ್ರತಿಪಾದಿಸಿದ್ದರು. "ಪ್ರಜಾಪ್ರಭುತ್ವದ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ ಹಾಗೂ ಭ್ರಾತೃತ್ವಕ್ಕೆ ವಿರುದ್ಧವಾದ ಮೌಲ್ಯಗಳನ್ನು ಸನಾತನ ಹಿಂದು ಧರ್ಮ ಎತ್ತಿ ಹಿಡಿಯುತ್ತದೆ" ಎಂಬುದು ಅವರ ನಿಲುವಾಗಿತ್ತು, "ಚತುರ್ವರ್ಣವನ್ನು ಮತ್ತು ಪುರುಷ ಮೇಲಾಧಿಪತ್ಯವನ್ನು ಎತ್ತಿ ಹಿಡಿಯುವ ಅದು ತನ್ನ ಮೂಲ ಸಿದ್ಧಾಂತದಲ್ಲೇ ಮೇಲುಕೀಳನ್ನು ಎತ್ತಿಹಿಡಿಯುತ್ತಾ ಎಲ್ಲರೂ ಸಮಾನರು ಎಂಬುದನ್ನು ತಿರಸ್ಕರಿಸುತ್ತದೆ. ಶೂದ್ರರು ಕಲಿಯಬಾರದು, ದಲಿತರು ದೇವಾಲಯ ಪ್ರವೇಶ ಮಾಡಬಾರದು, ಮಹಿಳೆಯರು ಗಂಡಸಿಗೆ ಎದುರಾಡಬಾರದು ಎಂದು ಅವರ ಸ್ವಾತಂತ್ರ್ಯದ ಮೇಲೆ ಲಗಾಮು ಬಿಗಿಯುತ್ತದೆ. ಅಲ್ಲದೆ ಸಹ ಭೋಜನ ಮಾಡಬಾರದು, ಜಾತಿಗಳ ನಡುವೆ ವಿವಾಹ ಸಂಬಂಧ ಇಟ್ಟುಕೊಳ್ಳಬಾರದು ಎಂದು ಭ್ರಾತೃತ್ವದ ನೆಲೆಯನ್ನೆ ತಿರಸ್ಕರಿಸುತ್ತದೆ" ಎಂಬುದು ಅವರ ಆರೋಪವಾಗಿದೆ. ಬಿಜೆಪಿ ಈ ಆರೋಪಗಳನ್ನು ಒಪ್ಪಿಕೊಳ್ಳುತ್ತದ? ಕನಿಷ್ಠ ವರ್ಣ ವ್ಯವಸ್ಥೆ ಜಾತಿ ವ್ಯವಸ್ಥೆ ಪುರುಷ ಮೇಲಾಧಿಪತ್ಯ ವ್ಯವಸ್ಥೆ ತಪ್ಪು, ಇವೆಲ್ಲಾ ಚಾರಿತ್ರಿಕ ಅನ್ಯಾಯಗಳು ಎಂದಾದರೂ ಒಪ್ಪಿಕೊಳ್ಳುತ್ತದ?

ದಮನಿತ ಜಾತಿಗಳಿಗೆ ಆಗಿರುವ ಚಾರಿತ್ರಿಕ ಅನ್ಯಾಯವನ್ನು ಸರಿದೂಗಿಸುವ ಒಂದು ಮಾರ್ಗವಾಗಿ ಮೀಸಲಾತಿ ಪದ್ಧತಿಯನ್ನು ಜಾರಿಗೆ ತರುವಂತೆ ಮಾಡಲು ಅಂಬೇಡ್ಕರ್ ಹೋರಾಡಿದರು. ಆದರಿಂದಾಗಿ ಒಂದಷ್ಟು ದಲಿತರಾದರೂ ಉನ್ನತ ಓದು ಹಾಗೂ ಉದ್ಯೋಗಗಳನ್ನು ಕಾಣಲು ಸಾಧ್ಯವಾಯಿತು. ಆದರೆ ಸಂಘ ಪರಿವಾರ ಉದ್ದಕ್ಕೂ ಮೀಸಲಾತಿಯನ್ನು ವಿರೋಧಿಸುತ್ತಾ ಬಂದಿದೆ. ಸಂಘ ಪರಿವಾರದ ಎಬಿವಿಪಿ, ಮೀಸಲಾತಿ ವಿರೋಧಿ ಚಳವಳಿಗೆ ನಾಯಕತ್ವ ನೀಡುತ್ತಾ ಬಂದಿದೆ. ಇದೆಲ್ಲಾ ತಪ್ಪು ಎಂದು ನೀವು ಒಪ್ಪಿಕೊಳ್ಳುತ್ತೀರ? ಖಾಸಗೀಕರಣ ಹಾಗೂ ಕಂಟ್ರಾಕ್ಟ್ ಪದ್ಧತಿ ಬಂದನಂತರ ಇರುವ ಮೀಸಲಾತಿಗೂ ಅರ್ಥವಿಲ್ಲವಾಗಿದೆ. ಖಾಸಗೀ ಕ್ಷೇತ್ರದಲ್ಲೂ ಮೀಸಲಾತಿ ಇಂದಿನ ಅಗತ್ಯವಾಗಿದೆ. ಬಿಜೆಪಿ ಅದನ್ನು ಬೆಂಬಲಿಸುತ್ತದೆಯೆ?

ಜಾತಿಯನ್ನು ಅಳಿಸುವ ಕಾರ್ಯದಲ್ಲಿ ಅಂತರ್ಜಾತಿ ವಿವಾಹಕ್ಕೆ ಮುಖ್ಯ ಪಾತ್ರವಿರುವುದಾಗಿ ಅಂಬೇಡ್ಕರ್ ಪರಿಭಾವಿಸಿದರು. ಆದರೆ ಸಂಘ ಪರಿವಾರವೆಂದೂ ಅಂತರ್ಜಾತಿ ವಿವಾಹದ ಪರವಾಗಿಲ್ಲ, ಸಂಘ ಪರಿವಾರದ ಸಂತ ಪೇಜಾವರ ಸ್ವಾಮಿಗಳು ಇತ್ತೀಚೆಗೆ ಬಹಿರಂಗವಾಗಿಯೇ ಅದನ್ನು ಪ್ರತಿಪಾದಿಸಿದ್ದಾರೆ. ಅಂತರ್ಜಾತಿ ವಿವಾಹಗಳಿಲ್ಲದೆ ಜಾತಿಯ ನಾಶವಾದರೂ ಹೇಗೆ? ಜಾತಿಯನ್ನು ಬಯಸುವ ಬಿಜೆಪಿಗೂ, ಜಾತಿವಿನಾಶವನ್ನು ಕನಸಿದ ಅಂಬೇಡ್ಕರ್‌ರವರಿಗೂ ಎತ್ತಣದಿಂದೆತ್ತ ಸಂಬಂಧ?

ಬಿಜೆಪಿ ಅಂಬೇಡ್ಕರ್ ದಿನಾಚರಣೆಯನ್ನು ಆಚರಿಸುತ್ತಿದೆ. ಆದರೆ ಅಂಬೇಡ್ಕರ್ ಪ್ರತಿನಿಧಿಸಿದ ದಲಿತ ಸಮುದಾಯದ ಯಾವೊಂದು ಹಕ್ಕಿಗಾಗಿಯೂ ಒಮ್ಮೆಯಾದರೂ ದನಿ ಎತ್ತಲಿಲ್ಲವೇಕೆ? ದಲಿತರನ್ನು ಕೊಂದಾಗ, ಹೇಲು ತಿನ್ನಿಸಿದಾಗ, ಬೆತ್ತಲೆ ಮೆರವಣಿಗೆ ಮಾಡಿದಾಗ ನಿಮಗೆ ಅಂಬೇಡ್ಕರ್ ಜ್ಞಾಪಕಕ್ಕೆ ಬರುವುದಿಲ್ಲವೇಕೆ?

ಇದೆಲ್ಲಾ ದೊಡ್ಡ ಮಾತು, ಕನಿಷ್ಠ ಅಂಬೇಡ್ಕರ್ ಮೂರ್ತಿಗಾದರೂ ಬಿಜೆಪಿ ಗೌರವ ನೀಡಿದ್ದುಂಟೆ? ಮಹಾರಾಷ್ಟ್ರದಲ್ಲಿ ಮರಾಠ ವಿವಿಗೆ ಅಂಬೇಡ್ಕರ್ ವಿವಿ ಎಂದು ನಾಮಕರಣ ಮಾಡಿದ್ದಕ್ಕೆ ನಡೆದ ರಾದ್ಧಾಂತ, ಗೋಲಿಬಾರ್ ಹಿಂದೆ ಇದ್ದದ್ದು ಶಿವಸೇನೆ ಮತ್ತು ಬಿಜೆಪಿಯೇ ಅಲ್ಲವೆ? ದೇಶದಾದ್ಯಂತ ಲೆಕ್ಕವಿಲ್ಲದಷ್ಟು ಬಾರಿ ಅಂಬೇಡ್ಕರ್‌ರವರ ಮೂರ್ತಿಯನ್ನು ಹಾಳುಗೆಡುವ ಕೆಲಸದಲ್ಲಿ ಸಂಘ ಪರಿವಾರದ ಕಾರ್ಯಕರ್ತರು ಮುಂದಾಳತ್ವ ವಹಿಸಿಲ್ಲವೆ?

ಸದ್ಯದ ಜೀವಂತ ಉದಾಹರಣೆಯಾಗಿ ಚಿಕ್ಕಮಗಳೂರಿನ ಆಲ್ದೂರಿನಲ್ಲಿ ಅಂಬೇಡ್ಕರ್ ವೃತ್ತದ ಮುಂದೆ ಕಳೆದ ಎರಡು ವರ್ಷಗಳಿಂದ ರಿಸರ್ವ್ ಪೊಲೀಸಿನ ವ್ಯಾನು ನಿಂತು ನಿಂತು ಟೈರುಗಳೆ ನೆಲಕಚ್ಚಿರುವುದನ್ನು ಕಂಡಿಲ್ಲವೆ? ಹಲವು ವರ್ಷಗಳಿಂದ ಅಲ್ಲಿರುವ ಅಂಬೇಡ್ಕರ್ ಮೂರ್ತಿಯನ್ನು ಪೊಲೀಸರು ಕಾಯುತ್ತಿರಲು ಕಾರಣವೇನೆಂದು ಗೊತ್ತಿಲ್ಲವೆ? ಸಂಘ ಪರಿವಾರದ ಭಜರಂಗ ದಳ ಅದನ್ನು ಒಡೆದು ಹನುಮಾನ್ ಕಟ್ಟೆ ಕಟ್ಟುತ್ತೇವೆ ಎಂದು ಪಣತೊಟ್ಟಿರುವುದು ನಿಮಗೆ ಗೊತ್ತಿಲ್ಲವೆ? ಅಂಬೇಡ್ಕರ್ ಬಗ್ಗೆ ನಿಮಗೆ ಪ್ರೀತಿ ಇರುವುದಾದರೆ ಅವರ ದಿನಾಚರಣೆಯನ್ನು ನೀವು ಅಲ್ಲೇ ಆಚರಿಸಬಾರದೇಕೆ?

ಅಂದರೆ ಅಂಬೇಡ್ಕರ್ ಜೊತೆ ಔಪಚಾರಿಕ ಸ್ನೇಹವನ್ನು ನಟಿಸುತ್ತಾ ಅವರ ಪ್ರಸ್ತಾಪನೆಗಳನ್ನು ಸೋಲಿಸುತ್ತಾ ಬಂದ ಕಾಂಗ್ರೆಸ್, ಅಂಬೇಡ್ಕರ್ ಎಂದರೆ ಹಿಂದೂ ವಿರೋಧಿ ಎಂದು ವಿಷ ಕಾರುತ್ತಿದ್ದ, ಅಂಬೇಡ್ಕರ್ ಎಚ್ಚರಿಸಿದ ಮೇಲುಕೀಳಿನ ಸನಾತನ ಧರ್ಮವನ್ನು ಈ ದೇಶದ ಮೇಲೆ ಮತ್ತೆ ಹೇರಲು ಆ ಮೂಲಕ ಬಂಡವಾಳವಾದ ಹಾಗೂ ಬ್ರಾಹ್ಮಣ್ಯದ ಅಕ್ರಮ ಸಂತಾನವನ್ನು ಬೆಳೆಸಲು ಹೆಣಗಾಡುತ್ತಿರುವ ಬಿಜೆಪಿಗಳಿಗೆ ದಿಢೀರೆಂದು ಅಂಬೇಡ್ಕರ್ ಮೇಲೆ ಲವ್ ಆಗಿಬಿಟ್ಟಿದೆ. ಈ ಠಕ್ಕ ರಾಜಕಾರಣದಿಂದ ದೂರ ಉಳಿಯುವುದು ಮಾತ್ರವಲ್ಲ, ಅದನ್ನು ಬಯಲಿಗೆಳೆಯುವ ಕರ್ತವ್ಯ ಸಹ ನಮ್ಮೆಲ್ಲರ ಮುಂದಿದೆ. ದಲಿತ ಸಮುದಾಯವನ್ನು ಮತ್ತೊಮ್ಮೆ ಮೋಸಗೊಳಿಸದಂತೆ ತಡೆಯಲು ನಾವು ಕಾರ್ಯಪ್ರವೃತ್ತರಾಗಬೇಕಿದೆ. ಹಾಗಾಗಿ ಅವರಿಗಿರಲಿ ಮೊದಲು ನಮಗೆ ನಾವು ಹಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ..

ಕೊಕ್ಕರೆಯೊಂದು ಮೀನ ಪ್ರೀತಿಸಿತು,
ಈ ಪ್ರೇಮದ ಗುಟ್ಟೇನು?
ಮಸಿದ ಕತ್ತಿಯು ಕೊರಳ ಪ್ರೀತಿಸಿತು,
ಈ ಒಲವಿನ ಪರಿಯೇನು?

● ನೂರ್ ಶ್ರೀದರ್



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಭೂತ ಬಾಧೆ ಮತ್ತು ಉಚ್ಚಾಟನೆ

ಭೂತ, ಪ್ರೇತ, ದೆವ್ವ, ಗಾಳಿ, ಜಕ್ಕಿಣಿ, ಪಿಶಾಚಿ, ...ೃ, ಪ್ರೇತಾತ್ಮ ಇತ್ಯಾದಿಗಳೆಲ್ಲವನ್ನೂ ಸಮಾನಾರ್ಥಕವಾಗಿ ...ಸುವ ವಾಡಿಕೆ ಇದೆ. ದೆವ್ವದ ಕಥೆಗಳು ಯಾವಾಗಲೂ ...ೇಚಕ. ದೆವ್ವಗಳ ಜೊತೆಗೆ ಮನುಷ್ಯನ ನಡವಳಿಕೆಗಳು ...ು ಹಾಕಿಕೊಂಡು, ಸಾಮಾನ್ಯ ಮನುಷ್ಯ ಮಾಡಲಾರದ್ದನ್ನು ...ವುಗಳಿಂದ ಮಾಡಿಸುವುದರಿಂದಾಗಿ ಅವು ಹೆಚ್ಚು ...ಸಪದಕ್ಕೂ ಮತ್ತು ಜನಸಾಮಾನ್ಯರಿಗೂ ರೋಚಕದ ...ಕಾಗಿವೆ.

ದೆವ್ವಗಳಾಗುವುದು ಏಕೆ?

ನಾನು ಸಣ್ಣವನಿದ್ದಾಗ ದೆವ್ವದ ಬಗ್ಗೆ ಅನೇಕ ವಿಷಯಗಳು ...ಪಕವಾಗಿದ್ದವು. ಆತ್ಮಹತ್ಯೆ, ಅಪಘಾತ, ಕೊಲೆ ...ತ್ಯಾದಿಗಳಾಗಿ ಆಯಸ್ಸು ತುಂಬುವ ಮೊದಲೇ ಸತ್ತರೆ ...ವರು ಪ್ರೇತಾತ್ಮ ಅಥವಾ ದೆವ್ವಗಳಾಗುತ್ತಾರೆ. ಅವರು ...ವ್ಯವಾದ ಬಳಿಕ ಅವರ ಅತೃಪ್ತ ಬಯಕೆಗಳು ...ಡೇರುವವರೆಗೂ ಪ್ರೇತಾತ್ಮಗಳಾಗಿ ಅಲೆಯುತ್ತಲಿದ್ದು ...ತರ ಅವರು ಮುಕ್ತಿ ಹೊಂದಿ ಮತ್ತೊಂದು ದೇಹ ...ರಣೆ ಮಾಡಲು ಮುಂದಕ್ಕೆ ಹೋಗುತ್ತಾರೆ. ಅವರು ...ವಂತವಾಗಿದ್ದಾಗ ತೊಂದರೆ ಕೊಟ್ಟವರಿಗೆ ಸಾಮಾನ್ಯವಾಗಿ ...ಂದರೆ ಕೊಡುತ್ತಾರೆ.

ಇಂತಹ ದೆವ್ವ ಎದುರಾದಾಗ ಏನು ಮಾಡಬೇಕು? ...ಮ್ಮ ಸುತ್ತಲೂ ಉಚ್ಚೆ ಹುಯ್ದುಕೊಳ್ಳಬೇಕು. ಹೊರಗೆ ...ಲಗಿದರೆ ತಲೆಯ ಕೆಳಗೆ ಚಪ್ಪಲಿ ಇಟ್ಟುಕೊಂಡು ...ಲಗಬೇಕು. ಪೊರಕೆಯಿಂದಲೂ ಹೊಡೆದು ...ಸಬಹುದು. ದೆವ್ವ ಸನಿಹ ಬಂದಾಗ ಅದರ ಜುಟ್ಟನ್ನು ...ಿದು, ಕಿತ್ತು ಅದರ ಕೂದಲನ್ನು ಕೊಯ್ದು ನಮ್ಮ ...ಡೆಯಲ್ಲಿ ಇಟ್ಟುಕೊಂಡರೆ ನಾವು ಹೇಳಿದ ಕೆಲಸಗಳನ್ನೆಲ್ಲಾ ...ವು ಮಾಡಿಕೊಡುತ್ತವೆ, ನಮ್ಮ ಅಧೀನವಾಗಿರುತ್ತವೆ. ಹೆಂಡ ...ತುಕರ ಸಮೀಪ ಈ ದೆವ್ವಗಳು ಬರಲಾರವು. ಏಕೆಂದರೆ ...ಡವೆಂದರೆ ಅದು ಲಕ್ಷ್ಮಿ. ಧರ್ಮಸ್ಥಳದ ...ಂಜುನಾಥನನ್ನೋ, ಮಂತ್ರಾಲಯದ ರಾಘವೇಂದ್ರರನ್ನೋ, ...ಸ್ತರಾದರೆ ಕ್ರಿಸ್ತನನ್ನೋ ಸ್ಮರಿಸಬೇಕು. ಕ್ಷಮಿಸಿ, ಬರೀ ...ಸಿದರೆ ಸಾಲದು, ಜೋರಾಗಿ ಕೂಗಾಡಬೇಕು. ಇಸ್ಲಾಂನಲ್ಲಿ ...ಾನಿನಲ್ಲಿ ದೆವ್ವಕ್ಕೆ ಮಣೆ ಹಾಕಿರದಿದ್ದರೂ, ಇತರ ಸಂಸ್ಕೃತಿಗಳ ...ಾವದಿಂದ ದರ್ಗಾದ ಸಂತರೂ ದೆವ್ವಗಳನ್ನು ಓಡಿಸುತ್ತಾರೆ.

ನಾ ನಿನ್ನ ಬಿಡಲಾರೆ

ಅತೃಪ್ತ ಪ್ರೇಯಸಿಯ ಅಥವಾ ಮೋಹಿಸಿದ್ದವರ ...ತ್ಮಗಳಂತೂ ತಾವು ಮೋಹವಿಟ್ಟುಕೊಂಡಿರುವ ಗಂಡಸಿಗೆ, ...ಕ್ಕಿಂತ ಹೆಚ್ಚಾಗಿ ಆತನನ್ನು ಮದುವೆಯಾಗಿರುವವಳಿಗೆ ...ಟ ಕೊಡುವ ಕಥೆಗಳಂತೂ ಸೂಪರ್ ಡೂಪರ್ ಹಿಟ್! ...ವರಿಗೆ ಮೊರೆ ಹೋಗುವುದೋ, ಸಂತನೋ, ...ಹಾತ್ಮನೋ, ಮಹಾನ್ ಮಂತ್ರವಾದಿಯೋ ರಕ್ಷಿಸುವುದು ...ತ್ಯಾದಿಗಳೆಲ್ಲಾ ಕೊನೆಗೆ ಶುಭಂ ತೋರುವಲ್ಲಿಗೆ ...ಯಶಸ್ವಿಯಾಗುತ್ತವೆ.

ಕನ್ನಡ ಚಲನಚಿತ್ರಗಳಲ್ಲಿ 'ನಾ ನಿನ್ನ ಬಿಡಲಾರೆ' ಎಂಬ ...ತ್ರ ಆಗ ಬಹು ಯಶಸ್ವಿ ಚಿತ್ರ. ಕಾಮಿನಿ ಎಂಬಾಕೆ ...ಯುಕನ ಮೇಲೆ ಮೋಹವಿಟ್ಟುಕೊಂಡು ಮೊದಲೇ ...ತ್ತಿದ್ದರೂ, ಅವನಿಗೆ ಯಾವ ರೀತಿಯಲ್ಲಿಯೂ ಕಾಡದೇ ...ವನ ಮದುವೆಯಾದ ಮೇಲೆ ಅಸೂಯೆಯಿಂದ ...ಂಡತಿಯನ್ನೂ ಮತ್ತು ಅವನನ್ನೂ ಕಾಡಿಸಿ, ಸಾಕಷ್ಟು ...ನೆಯ ಸಾಮಾನುಗಳನ್ನೆಲ್ಲಾ ನಾಶ ಮಾಡಿ, ಕೊನೆಗೆ ...ವನನ್ನೂ ನಾಶ ಮಾಡಲು ಹೊರಟಾಗ, ನಾಯಕಿ "ಬಿಡೆನು ...ನ್ನ ಪಾದ, ಗುರುವೇ ಬಿಡೆನು ನಿನ್ನ ಪಾದ" ಎಂದು ...ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳಿಗೆ ಮೊರೆ ಹೋಗಿ, ...ಕೊನೆಗೆ ರಾಘವೇಂದ್ರ ಸ್ವಾಮಿಯ ಪಟದಿಂದ ...ಕ್ಷಿಸಿಕೊಂಡು ಬಂದು ಅದು ಕಾಮಿನಿಯ ದೆವ್ವವನ್ನು ...ಟ್ಟಿಸಿಕೊಂಡು ಹೋಗಿ ಸುಟ್ಟು ಭಸ್ಮ ಮಾಡುವಲ್ಲಿಗೆ ...ಹೋರಾಡುತ್ತಿರುವುದಿದ್ದರೂ ದೆವ್ವದ ಕಾಟದಿಂದ ಬಚಾವಾಗಿ ...ಮಂತ್ರಾಲಯದಲ್ಲಿ ... ಮುಗಿದಾಗ ಶುಭಂ ಆಗುತ್ತದೆ.

ಈಗ ಪಕ್ಕಾ ಕಾಮಿಡಿ ಸಿನಿಮಾ ಆಗಿ ತೋರುವ ಅದು ಆಗ ಭೀತಿಗೊಳಿಸುವಲ್ಲಿ ಬಹು ಯಶಸ್ವೀ ಸಿನಿಮಾ ಆಗಿತ್ತು, ಅದಕ್ಕೆ ಕಾರಣ ಅನಂತ ನಾಗ್ ಮತ್ತು ಲಕ್ಷ್ಮಿಯ ಯಶಸ್ವಿ ಜೋಡಿಯಲ್ಲ, ದೆವ್ವದ ವಿಷಯವೇ ಎಂಬುದು ನಿಜ. ಜೊತೆಗೆ ಮಾಧ್ವರ ರಾಯರ ಮಠಗಳು ಮತ್ತಷ್ಟು ಜನಪ್ರಿಯವಾದವು. ಒದ್ದೆಮುಡಿಯ ಬ್ರಾಹ್ಮಣರು ಮಾತ್ರವಲ್ಲದೇ ಇತರರೂ ರಾಘವೇಂದ್ರನ ಭಕ್ತರಾದರು. ಸುಳ್ಳು ದೆವ್ವವ ಮುಂದಿಟ್ಟುಕೊಂಡು ಸಂತರನ್ನು, ದೇವರನ್ನು ಹೇಗೆಲ್ಲಾ ಪ್ರಮೋಟ್ ಮಾಡಬಹುದು ನೋಡಿ. ಆಗ 'ನಾ ನಿನ್ನ ಬಿಡಲಾರೆ' ಚಿತ್ರ ನಡೆಯುತ್ತಿದ್ದ ಚಿತ್ರಮಂದಿರಗಳ ಮುಂದೆ ಒಂದು ರಾಘವೇಂದ್ರರ ಗುಡಿಯೇ ಎದ್ದು ಅಲ್ಲಿ ಪೂಜೆಗಳೂ ನಡೆದಿದ್ದವು. ದೀಪ, ಆರತಿ ತಟ್ಟೆ, ದಕ್ಷಿಣೆಗೆ ಹುಂಡಿ ಎಲ್ಲವೂ ಇರುತ್ತಿದ್ದವು. ವಿಸಿಟಿಂಗ್ ಕಾರ್ಡ್ ಸೈಜಿನ ಕಾರ್ಡಲ್ಲಿ ರಾಘವೇಂದ್ರರ ಚಿತ್ರವೂ, ಪೂಜ್ಯಾಯ ರಾಘವೇಂದ್ರಾಯ ಮಂತ್ರವೂ ಅದರ ಹಿಂದೆ 'ನಾ ನಿನ್ನ ಬಿಡಲಾರೆ' ಸಿನಿಮಾದ ಜಾಹೀರಾತೂ ಇರುತ್ತಿದ್ದವು.

ಎಕ್ಸಾರ್ಸಿಸ್ಟ್

ದೆವ್ವದ ಚಿತ್ರಗಳು ಸಾಕಷ್ಟು ಯಶಸ್ವೀ ಪ್ರಯೋಗಗಳೇ! ಜನರಲ್ಲಿರುವ ಹಸಿಬಿಸಿ ಕಾಮುಕತೆಯನ್ನು, ಕ್ರೌರ್ಯವನ್ನು ಗುರಿಯಾಗಿಸಿಕೊಂಡಂತೆಯೇ ಭಯವನ್ನು ಕೂಡ ವಾಣಿಜ್ಯದ ಬಂಡವಾಳ ಮಾಡಿಕೊಳ್ಳುವುದೆಂದರೆ ಇದೇ.

ಅದೇ ರೀತಿ ಹಾಲಿವುಡ್‌ನಲ್ಲಿ ಎಕ್ಸಾರ್ಸಿಸ್ಟ್ (ಭೂತೋಚ್ಚಾಟನೆ) ಎಂಬ ಇಂಗ್ಲಿಷ್ ಚಿತ್ರವೂ ಇದೇ ರೀತಿಯ ಆಂದೋಲನವನ್ನು ಉಂಟು ಮಾಡಿತ್ತು. ಹಾಲಿವುಡ್‌ನಲ್ಲಿ ತಂತ್ರಗಾರಿಕೆಯಿಂದ ಬಹು ನೈಪುಣ್ಯದಿಂದ ತೆಗೆಯುತ್ತಾರೆಂಬುದನ್ನು ಬಿಟ್ಟರೆ, ಇನ್ನಾವ ವಿಶೇಷಗಳೂ ಇಲ್ಲ. ಇಲ್ಲಿ ಅನಂತ್ ನಾಗ್ ಪೌಡರ್ ಬಳಿದುಕೊಂಡು ಮೇಕಪ್‌ನಲ್ಲಿ ಸ್ವಲ್ಪ ಡಲ್ಲಾಗಿ ಕಂಡರೆ, ಅಲ್ಲಿ ಅದು ನಿಜವೆಂದೇ ಭ್ರಮಿಸುವಷ್ಟು ನೈಪುಣ್ಯತೆ ಮೆರೆಯುತ್ತಾರೆ. ಇಲ್ಲಿ ರಾಘವೇಂದ್ರ, ದುರ್ಗೆಯಾದರೆ, ಅಲ್ಲಿ ಕ್ರಿಸ್ತ. ವಿಶ್ವದ ಎಲ್ಲಾ ಭಾಷೆಗಳ ಚಿತ್ರಗಳಲ್ಲೂ ದೆವ್ವಗಳು ಮೆರೆದಿರಬಹುದಾದಷ್ಟು ಜನಪ್ರಿಯತೆ ಅವುಗಳಿಗಿವೆ. ಹಾಲಿವುಡ್ ಮತ್ತು ಬಾಲಿವುಡ್ ದೆವ್ವಗಳ ಚಿತ್ರನಿರ್ಮಾಣದಲ್ಲಿ ಬಹಳ ಅಪಾಯಕಾರಿಗಳು. ಮಹಾನ್ ಸುಳ್ಳರು. ಅವರ ಅವೈಚಾರಿಕ ಮತ್ತು ಬೋಗಸ್ ಕಲ್ಪನೆಗಳಿಗೆ ವೈಜ್ಞಾನಿಕ ಲೇಪವನ್ನೂ ಹಚ್ಚಿ ಮೋಸಗೊಳಿಸುತ್ತಾರೆ. ಅವುಗಳನ್ನು ಬರಿಯ ಮನರಂಜನೆಯ ವಸ್ತುಗಳನ್ನಾಗಿ ತೆಗೆದುಕೊಂಡರೆ, ಜಸ್ಟ್ ಎಂಜಾಯ್! ಆದರೆ, ಬಹಳಷ್ಟು ಸಾಮಾನ್ಯ ಮಂದಿ ತಮಗೆ ಮೊದಲೇ ಇರುವಂತಹ ಭಯ ಮತ್ತು ನಂಬಿಕೆಗಳನ್ನು ಮತ್ತಷ್ಟು ಗಟ್ಟಿ ಮಾಡಿಕೊಳ್ಳುತ್ತಾರೆ.

ಇನ್ನು ಮೋಹಿನಿ ಅತ್ಯಂತ ಪ್ರಸಿದ್ಧಿಯಾಗಿರುವುದು ಅದರ ಕಾಮುಕತನದಲ್ಲಿ, ದೆವ್ವಗಳು ಭೂತಗಳು ರಕ್ತ ಕುಡಿಯುವಂತವಾದರೆ, ಇವು ವೀರ್ಯ ಕುಡಿಯುವಂತವು. ಹದಿಹರೆಯದ ಹುಡುಗರಿಗೆ ಮೆಟ್ಟಿಕೊಳ್ಳುವ ಕಥೆ ಲೈಂಗಿಕತೆಗೆ ಒಯ್ಯುತ್ತವೆ.

ಬೈಬಲ್ಲಿನ ದೆವ್ವ

ಬೈಬಲ್ಲಿನಲ್ಲಿ ದೆವ್ವ ಮೆಟ್ಟಿಕೊಂಡಿದ್ದವರನ್ನು ಯೇಸು ಗುಣಮುಖರನ್ನಾಗಿ ಮಾಡಿರುವ ಉಲ್ಲೇಖವಿದೆ. ಇಬ್ಬರು ದೆವ್ವ ಹಿಡಿದವರು ಸಮಾಧಿಯ ಗುಹೆಗಳಿಂದ ಬರುತ್ತಾರೆ. ಯೇಸುವು ದೆವ್ವಗಳನ್ನು ಅವರನ್ನು ಬಿಟ್ಟು ಹೋಗಲು ಆಜ್ಞಾಪಿಸುತ್ತಾನೆ. ಆಗ ಅವು ಹಂದಿಗಳ ಹಿಂಡಿಗೆ ನುಗ್ಗಿ, ಅವು ನೀರಿಗೆ ಬಿದ್ದು ಒಟ್ಟು ದೆವ್ವದ ಉಚ್ಚಾಟನೆಯಾಗುತ್ತದೆ. ಅದೇರೀತಿ ಸ್ವಯಂ ಯೇಸುವಿಗೇ ಪಿಶಾಚಿಯಿಂದ ಪವಾಡ ಮಾಡುವ ಮತ್ತು ಜಗತ್ತಿನ ವೈಭವದ ಆಶೆ ತೋರುವಂತ ಪ್ರಲೋಭನೆಯಾಗಿ, ಯೇಸುವು ಅದರ ಮಾತನ್ನು ನಿರಾಕರಿಸಿ, ಸೈತಾನನೇ ತೊಲಗು ಎಂದು ಬೈದು ತನ್ನ ಮಾರ್ಗವನ್ನು ತಾನು ಹಿಡಿಯುತ್ತಾನೆ. ಮತ್ತೊಮ್ಮೆ ಒಬ್ಬ ತಂದೆ ತನ್ನ ಮಗನಿಗೆ ದೆವ್ವ ಹಿಡಿದಿದೆ ಎಂದು ತಂದೊಪ್ಪಿಸಿದಾಗ, ಯೇಸು ಅವನಿಗೆ ದೆವ್ವ ಬಿಡಿಸುವ ಘಟನೆಯೂ ಇದೆ.

ಇಸ್ಲಾಂನ ಇಬ್ಲೀಸ್

ಇಸ್ಲಾಂನಲ್ಲಿ ದೆವ್ವ ಭೂತವನ್ನು ಧಾರ್ಮಿಕವಾಗಿ ನಂಬದಿದ್ದರೂ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಒಪ್ಪಿಕೊಂಡುಬಿಟ್ಟಿದ್ದಾರೆ. ಇಸ್ಲಾಂನಲ್ಲಿ ಅಲ್ಲಾಹ್, ಅಲ್ಲಾಹನ ದೂತರು, ಅವತೀರ್ಣಗೊಂಡ ಗ್ರಂಥಗಳು, ಪೈಗಂಬರರು, ಪ್ರಳಯ, ಅಲ್ಲಾಹನ ನಿರ್ಣಯ ಮತ್ತು ಸಾವಿನ ನಂತರದ ಪರಿಕಲ್ಪನೆಗಳಿದ್ದು ಮನುಷ್ಯನಿಗೆ ಯಾವುದೇ ಶಕ್ತಿ ಅತೀಂದ್ರಿಯ ಶಕ್ತಿ, ಪವಾಡಗಳು ಅವರ ಶ್ರದ್ಧಾನಂಬಿಕೆಗಳಲ್ಲಿಲ್ಲ. ಆದರೂ, ಕುರಾನಿನ ಯಾವುದೇ ಸೂರಾಃ (ಅಧ್ಯಾಯ)ವನ್ನು ಪಠಿಸುವಾಗ ಪ್ರಾರಂಭದಲ್ಲಿ 'ಅ ಊದು ಬಿಲ್ಲಾಹಿ ಮಿನ್ ಶೈತಾನಿರ್ರಜೀಮ್' (ಸೈತಾನನ ಪಾಶದಿಂದ ರಕ್ಷಿಸು) ಎಂದು ಪ್ರಾರ್ಥಿಸುವರು.

ಈ ಸೈತಾನನಾದರೂ ಯಾರು? "ಮನಸ್ಸನ್ನು ತಪ್ಪು ದಾರಿಗೆಳಸಿ ಕೆಟ್ಟ ಕೆಲಸಗಳಿಗೆ ಪ್ರೇರೇಪಿಸುವುದೇ ಸೈತಾನ" ಎಂಬುದು ಮುಸಲ್ಮಾನರಲ್ಲಿ ಮತ್ತು ಕ್ರೈಸ್ತರಲ್ಲಿ ಸ್ಪಷ್ಟ. ಆದರೆ ಅದನ್ನು ಸೈತಾನ ಎಂಬ ಕಾರಣದಿಂದಾಗಿಯೇ ಅವನ ತಲೆಗೆರಡು ಕೋಡುಗಳನ್ನು, ಉದ್ದನೆಯ ಬಾಲವನ್ನು, ಕೋರೆಹಲ್ಲುಗಳನ್ನಿಟ್ಟು, ಮೂತಿ ಮೈಗೆಲ್ಲಾ ಧಾರಾಳವಾಗಿ ಟಾಲ್ಕಂ ಪೌಡರ್ ಬಳಿದು ಒಂದು ಪ್ರತಿಮೆ ಕಟ್ಟಿಕೊಟ್ಟಿರುವ ಕಾರಣ ಅದನ್ನು ದೆವ್ವ, ಭೂತ, ಪ್ರೇತ, ಪಿಶಾಚಿಗಳ ವರ್ಗಕ್ಕೆ ಧಾರಾಳವಾಗಿ ಸೇರಿಸಲಾಗಿದೆ.

ಅಲ್ಲಾಹನ ಆಜ್ಞೆ ಮೀರುವ ಮಾನವರನ್ನು ತಪ್ಪು ದಾರಿಗೆ ಎಳೆಯುವ ಇಬ್ಲೀಸನಿಗೆ ಸೈತಾನ ಎಂದು ಕರೆಯುವುದೇ ಹೊರತು, ಇತರ ಸಂಸ್ಕೃತಿಯಲ್ಲಿರುವ ಸತ್ತಿರುವವರು ಮೋಕ್ಷ ಹೊಂದದೇ ದೆವ್ವವಾಗುವ ರೀತಿಯಲ್ಲಿ ಅವರಿಗೆ ಧಾರ್ಮಿಕವಾಗಿ ಇಲ್ಲ.

ಸೈತಾನನು ಹಜ್ ಮಾಡುವವರ ಏಕಾಗ್ರತೆಗೆ ಭಂಗ ತಂದು ಅವರ ಧ್ಯಾನವನ್ನು ತಿರುಗಿಸಲು ಮನುಷ್ಯನಂತೆ ರೂಪ ಧರಿಸಿ ಹಜ್ ಯಾತ್ರಿಕರಲ್ಲಿ ಸೇರಿಹೋಗಿದ್ದನಂತೆ. ಹ. ಇಬ್ರಾಹಿಂ ಪೈಗಂಬರರು ಯಾತ್ರಿಕರ ಮಧ್ಯೆ ಸೇರಿ ಹೋದ ಸೈತಾನನನ್ನು ಗುರುತಿಸಿ ಕುರಾನಿನ ಆಯತಗಳನ್ನು ಪಠಿಸಿ ಕಲ್ಲುಗಳನ್ನು ಎಸೆದು ಅವನನ್ನು ದೂರ ಮಾಡಿದ್ದರಂತೆ. ಅದಕ್ಕೆ ಮುಸ್ಲಿಮರು ಹಜ್ ಯಾತ್ರೆಯ ಸಮಯದಲ್ಲಿ ಮುಜ್ದಲಿಫ್ ಎಂಬಲ್ಲಿ ಮಗ್ರೀಬ್ ಮತ್ತು ಇಷಾಗಳನ್ನು ಮಾಡಿ ನಲವತ್ತ ಒಂಭತ್ತು ಸಣ್ಣ ಕಲ್ಲುಗಳನ್ನು ಆರಿಸಿ ಏಹ್ರಾಮ್ ಅಂದರೆ ಹಜ್ ಯಾತ್ರಿಕರು ತೊಡುವ ಉಡುಗೆಯ ತುದಿಯಲ್ಲಿ ಕಟ್ಟಿಕೊಂಡು 'ಮಿನಾ' ಕಡೆ ಪ್ರಯಾಣ ಬೆಳೆಸಿ ಬೆಳಗಿನ ನಮಾಜು ಮಾಡುವರು. ಅನಂತರ ಏಹ್ರಾಮ್ ಬಟ್ಟೆಯಲ್ಲಿ ಕಟ್ಟಿಕೊಂಡ ಕಲ್ಲುಗಳನ್ನು ಸೈತಾನನ ಕಲ್ಲಿಗೆ ಎಸೆಯುವರು. ಇಲ್ಲಿಯೂ ಸಹ ಸೈತಾನ ಎಂದರೆ ಅಲ್ಲಾಹನ ಆರಾಧನೆ ಮಾಡುವವರನ್ನು ಕೆಟ್ಟ ಕೆಲಸಗಳಿಗೆ ಪ್ರೇರೇಪಿಸುವವನು ಎಂದೇ ಅರ್ಥ. ಇನ್ನು ದರಗಾಗಳಲ್ಲಿ ದೆವ್ವಗಳನ್ನು ಬಿಡಿಸುವ, ಮರಕ್ಕೆ ಮೊಳೆ ಹೊಡೆಯುವ, ಸಮಾಧಿಗಳನ್ನು ಪೂಜಿಸುವ, ಭೂತಗಳನ್ನು ಪ್ರತಿಬಂಧಿಸುವ, ಸಂತನು ಪವಾಡಗಳನ್ನು ಮಾಡುವ ವಿಚಾರಗಳೆಲ್ಲವೂ ಇಸ್ಲಾಂ ಶ್ರದ್ಧೆಯಲ್ಲದ್ದು ಮತ್ತು ಇತರ ಸಾಂಸ್ಕೃತಿಕ ಪ್ರಭಾವಗಳಿಗೆ ಸಿಲುಕಿರುವಂತಹದ್ದು.

ದೆವ್ವ ಅಥವಾ ಸೈತಾನನ ಪ್ರತಿಮಾ ರೂಪಕಗಳನ್ನು ಇಸ್ಲಾಂ ಪರಿಭಾಷೆಯಲ್ಲಿ ಅರ್ಥ ಮಾಡಿಕೊಳ್ಳತೊಡಗಿದರೆ, ಸ್ವಲ್ಪ ವೈಚಾರಿಕವಾಗಿಯೂ, ವೈಜ್ಞಾನಿಕವಾಗಿಯೂ ವಿವರಿಸಲು ಅವುಗಳ ಸಮೀಪಕ್ಕೆ ಹೋಗಬಹುದು.


ಭೂತಕಾಲದ ಬಾಧೆ

ಅವರೊಬ್ಬ ವಿಚಾರವಾದಿ ಮತ್ತು ಪ್ರೊಫೆಸರ್. ಅವರೊಂದು ದಿನ ಬಹಳ ಮೌನವಾಗಿ, ಗಾಢ ಗಾಂಭೀರ್ಯದಲ್ಲಿ ಕುಳಿತಿದ್ದರು. ಅವರ ಹೆಂಡತಿಯೂ ಅದೇ ಮುಖಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದರು. ಅಷ್ಟೊಂದು ಮೋಡ ಕವಿದ ವಾತಾವರಣಕ್ಕೆ ನಾನು ಕಾರಣ ಕೇಳಿದೆ.


"ಭೂತ ಬಾಧೆ" ಎಂದು ಉತ್ತರಿಸಿದರು ಪ್ರೊಫೆಸರ್. ಅವರು ಅದನ್ನೆಲ್ಲಾ ನಂಬುವವರಲ್ಲ ಎಂದು ನನಗೆ ಗೊತ್ತು. "ಯಾವ ಭೂತ?" ಎಂದು ಕೇಳಿದರೆ, "ಭೂತ, ಭೂತಕಾಲ" ಎಂದು ಉತ್ತರಿಸಿದ ಅವರು "ನನ್ನ ಹೆಂಡತಿಗೆ ಇದ್ದಕ್ಕಿದ್ದಂತೆ ಭೂತ ಹಿಡಿದಿದೆ" ಎಂದರು. ವಾಸ್ತವದಲ್ಲಿ ಅವರ ಹೆಂಡತಿ ಯಾವುದೋ ಹಳೆಯ ಮತ್ತು ಎಂದೋ ಆಗಿಹೋಗಿರುವ ವಿಷಯವನ್ನು ಕುರಿತು ಈಗ ತಗಾದೆ ತೆಗೆದು ಜಗಳವಾಡುತ್ತಿದ್ದರು. ಅದಕ್ಕೆ ಪ್ರೊಫೆಸರ್ ಹೇಳಿದ್ದು ಭೂತಬಾಧೆ ಎಂದು. ಇದು ವ್ಯಂಗ್ಯವೋ, ವಿಡಂಬನೆಯೋ ಆಗದೇ ನನಗೆ ಬಹಳ ಉತ್ತಮ ಒಳನೋಟವಾಗಿ ಪರಿಣಮಿಸಿತು. ಭೂತಕಾಲದ ಆಗುಹೋಗುಗಳು, ಅದರ ವೈಪರೀತ್ಯಗಳ ಪ್ರಭಾವಗಳು ಮನುಷ್ಯನ ಮನಸ್ಸಿನಲ್ಲಿ ಉಳಿಯುವುದಾಗಲಿ, ಉಳಿದಿರುವ ವಿಷಯಗಳು ಮರೆತಿರುವುದಾಗಲಿ, ಮರೆತಿರುವುದರ ಪ್ರಭಾವಗಳು ಭಾವುಕವಾಗಿ ಜೀವಂತವಾಗಿರುವುದಾಗಲಿ ಯಾವುದೂ ವಿಸ್ಮಯವಲ್ಲ. ಮನೋವಿಜ್ಞಾನಿಗಳಿಗೆ ಅಥವಾ ಮನೋವಿಜ್ಞಾನದ ಕೊಂಚ ಪರಿಚಯವಿರುವವರಿಗೂ ಕೂಡ ಭೂತ (ಕಾಲ) ಬಾಧೆ ಸ್ಪಷ್ಟವಾಗಿ ಅರ್ಥವಾಗುವಂತವೇ.


ಇಂತಹ ಭೂತಗಳು ವ್ಯಕ್ತಿಗಳ ಮನೋಕ್ಷೇತ್ರದಲ್ಲಿ ಕ್ರಿಯಾಶೀಲವಾಗಿರುವಂಥಾ ವಿಷಯವು ಎಲ್ಲಾ ಸಂಸ್ಕೃತಿಯಲ್ಲಿಯೂ ಉಲ್ಲೇಖಿತವಾಗಿರುವಂತವೇ. ಅವು ತಳೆದ ಪ್ರತಿಮೆಗಳು ಮತ್ತು ರೂಪಕಗಳು ಮಾತ್ರ ವಿಭಿನ್ನ ವೇಷಗಳಲ್ಲಿರುವವು. ಈ ನೆಲಗಟ್ಟಿನಿಂದ ದೆವ್ವ ಮತ್ತು ಪ್ರೇತಗಳನ್ನು ಅರ್ಥ ಮಾಡಿಕೊಳ್ಳುತ್ತಾ ಹೋದರೆ, ಪ್ರೇತಗಳೂ, ಮೋಹಿನಿಗಳೂ, ಸೈತಾನಗಳೂ, ಪಿಶಾಚಿಗಳೂ, ಬ್ರಹ್ಮರಾಕ್ಷಸಗಳೂ, ಜಕ್ಕಿಣಿಯರೂ, ಯಕ್ಷಿಣಿಯರೂ ಲೋಕದ ಜನರು ತೊಡಿಸಿರುವ ತಮ್ಮ ವೇಷಗಳನ್ನು ಕಳಚುತ್ತಾ ಹೋಗುತ್ತಾರೆ. ಅವು ಏನೆಂಬುದನ್ನು ಮುಂದೆ ನೋಡೋಣ.















ಅರೆಸಾಕ್ಷರ ಗಂಡಸರ ಮನೋವಿಕಾರ, ಒಣಪ್ರತಿಷ್ಠೆ

ಯಾರೇ ಹುಡುಗಿ ಆತ್ಮಹತ್ಯೆ ಮಾಡಿಕೊಂಡಿರಲಿ ಅಥವಾ ಕೊಲೆಯಾಗಿರಲಿ ಅದಕ್ಕೆ ಪ್ರೇಮ ಪ್ರಕರಣ ಕಾರಣವಾಗಿದೆ ಎಂದು ಹಿಂದೆಮುಂದೆ ಆಲೋಚಿಸದೆ ತೀರ್ಪು ಕೊಡುವುದು ಮಾಧ್ಯಮದ ಹಾಗೂ ಜನರ ಹಳೇ ಅಭ್ಯಾಸ. ಬೆಂಗಳೂರಿನ ಕಾಡುಗೋಡಿ ಕಾಲೇಜಿನ ಹುಡುಗಿಯರು ಅಟೆಂಡರ್‌ನ ದಬ್ಬಾಳಿಕೆಯನ್ನು ವಿರೋಧಿಸಿದರೆಂದು ಅವನ ಒಣ ಅಹಂ ಕೆರಳಿ ಸೇಡು ತೀರಿಸಿಕೊಳ್ಳಲು ಗುಂಡು ಹಾರಿಸಿ ಒಬ್ಬ ಹುಡುಗಿಯನ್ನು ಕೊಂದಾಗ ಮಾಧ್ಯಮಗಳು ಅದು ಪ್ರೇಮ ಪ್ರಕರಣ ಎಂದು ತೀರ್ಪು ಕೊಟ್ಟೇ ಬಿಟ್ಟವು. ಇದು ಭಾರತೀಯರ ಮೂಲ ಬುದ್ಧಿ ಎನಿಸುತ್ತದೆ.



ಪ್ರೇಮ ಪ್ರಕರಣ, ಅನೈತಿಕ ಸಂಬಂಧ ಹಾಗೂ ವಿವಾಹಬಾಹಿರ ಸಂಬಂಧ ಇವುಗಳ ಬಗ್ಗೆ ಭಾರತೀಯರಿಗೆ ಯಾವಾಗಲೂ ವಿಶೇಷ ಆಸಕ್ತಿ. ಇಂತಹ ವಿಷಯದ ಬಗ್ಗೆ ಕಟ್ಟುಕತೆ ಹರಡಿಸಿ ಬಾಯಿ ಚಪ್ಪರಿಸುವುದೆಂದರೆ ನಮ್ಮವರಿಗೆ ಬಹಳ ಪ್ರೀತಿ. ಸ್ವತಃ ನಮ್ಮ ಪುರಾಣಗಳಲ್ಲೂ ದೇವರ ಅಥವಾ ಋಷಿ-ಮುನಿಗಳ ಪ್ರೇಮ ಪ್ರಕರಣ, ಅನೈತಿಕ ಸಂಬಂಧ ಹಾಗೂ ವಿವಾಹಬಾಹಿರ ಸಂಬಂಧಗಳ ಕತೆಯೇ ತುಂಬಿದೆ. ಅದನ್ನು ನಾವು ಅನುದಿನವೂ ಓದುತ್ತೇವೆ, ಚಿಕ್ಕ ಮಕ್ಕಳಿಗೂ ಈ ಕತೆಗಳನ್ನು ಹೇಳುತ್ತಲೇ ಬೆಳೆಸುತ್ತೇವೆ ಹಾಗೂ ಟಿವಿ ಸಿನಿಮಾ ನಾಟಕಗಳಲ್ಲೂ ಇದನ್ನೇ ಮುಗಿಬಿದ್ದು ನೋಡುತ್ತೇವೆ. ಹಾಗಾಗಿ ಅಂತಹದ್ದೇ ಮನೋಸ್ಥಿತಿ ಈಗಿನ ಕಾಲದಲ್ಲೂ ನಾವು ಬೆಳೆಸಿಕೊಂಡಿದ್ದೇವೆ.

ಹೊಸ ಅಟೆಂಡರ್‌ನ ಹಿನ್ನೆಲೆ ವಿಚಾರಿಸದೇ ಮಹಿಳಾ ಹಾಸ್ಟೆಲ್ ಆವರಣದಲ್ಲಿ ಕಾಲೇಜಿನವರು ಅವನಿಗೆ ಮನೆ ಕೊಟ್ಟಿದ್ದು ಕಾಲೇಜಿನ ಒಂದನೆಯ ಘೋರ ತಪ್ಪು. ಎರಡನೆಯದಾಗಿ ಆ ಮಹಿಳಾ ಹಾಸ್ಟೆಲಿಗೆ ಮಹಿಳಾ ವಾರ್ಡನ್ ನಿಯಮಿಸದೇ ಒಬ್ಬ ಹೊರಗಿನ ಗಂಡು ಅಟೆಂಡರ್‌ಗೆ ವಿದ್ಯಾರ್ಥಿನಿಗಳ ಮೇಲೆ ಅಧಿಕಾರ ಹಾಗೂ ದಬ್ಬಾಳಿಕೆ ನಡೆಸಲು ಅನುವು ಮಾಡಿಕೊಟ್ಟಿದ್ದು ಇನ್ನೊಂದು ದೊಡ್ಡ ತಪ್ಪು.

ಸಣ್ಣ ಊರಿನಿಂದ ವಲಸೆ ಬಂದ ಅರೆಸಾಕ್ಷರ ಗಂಡಸರಲ್ಲಿ ಮನೋವಿಕಾರ ಹಾಗೂ ಒಣಪ್ರತಿಷ್ಠೆ ಎಷ್ಟಿರುತ್ತದೆಯೆಂದರೆ ಅವರಿಗೆ ತಮ್ಮ ಮನೆಯ ಮಹಿಳೆಯರಾಗಿರಲಿ ಅಥವಾ ಹೊರಗಿನ ಮಹಿಳೆಯರಾಗಿರಲಿ ಎದುರು ಮಾತನಾಡಿದರೆ ಅವರ ಕೀಳು ಅಹಂ ಕೆರಳುತ್ತದೆ. ಎಲ್ಲ ಮಹಿಳೆಯರೂ ಗಂಡಸರ ಅಧಿಕಾರ ಹಾಗೂ ದಬ್ಬಾಳಿಕೆ ಜೀವನವಿಡೀ ಸಹಿಸಿಕೊಂಡಿರಬೇಕು ಹಾಗೂ ಎದುರು ಮಾತನಾಡಲೇ ಬಾರದು ಎಂಬ ಹಳೇ ಮನೋಸ್ಥಿತಿಯನ್ನು ಹಳ್ಳಿಯ ಪುರುಷ ಪ್ರಧಾನ ವ್ಯವಸ್ಥೆಯಿಂದ ಬಂದವರು ನಗರಕ್ಕೆ ವಲಸೆ ಬಂದ ಮೇಲೂ ತೊರೆಯುವುದಿಲ್ಲ. ಅದರ ಫಲಿತಾಂಶವೇ ಶಿವಮೊಗ್ಗದ ಹಳ್ಳಿಯ ಅರೆಸಾಕ್ಷರ ಮನೋರೋಗಿ ಅಟೆಂಡರ್ ಒಬ್ಬ ಮುಗ್ಧ ವಿದ್ಯಾರ್ಥಿನಿಗೆ ಗುಂಡಿಕ್ಕಿ ಕೊಂದು ಇನ್ನೊಬ್ಬ ವಿದ್ಯಾರ್ಥಿನಿಗೆ ಮಾರಣಾಂತಿಕ ಗಾಯ ಮಾಡಿದ್ದು. ಇದಕ್ಕೆ ಕಾನೂನು ರೀತ್ಯ ಕಾಲೇಜಿನ ಆಡಳಿತವನ್ನೂ ಹೊಣೆ ಮಾಡಲೇಬೇಕು.


-ಆರ್. ಬಿ. ಶೆಣಾವ, ಮಂಗಳೂರು

ಉಪದೇಶಕ್ಕೆ ಮೊದಲು ಆತ್ಮಶೋಧನೆ ಅವಶ್ಯ

ಒಮ್ಮೆ ಮಹಾತ್ಮ ಗಾಂಧೀಜಿ ಅವರು ಒಂದು ಮಾತು ಹೇಳಿದ್ದರು: "ಉಪದೇಶ ನೀಡಬೇಕೆಂದು ನನ್ನನ್ನು ಇವರು ಕೇಳಿಕೊಂಡಿದ್ದಾರೆ. ಅದಕ್ಕೆ ನಾನು ತಕ್ಕವನಲ್ಲ, ಇವತ್ತು ರಾತ್ರಿ ನಾನು ಮಾಡುತ್ತಿರುವುದು ತಪ್ಪನ್ನು ಒಪ್ಪಿಕೊಳ್ಳುವ ಕೆಲಸ. ಅಂದರೆ ಇದು ಆತ್ಮಶೋಧನೆ; ಬೇಕಾದರೆ ನೀವು ಇಂತಹ ಆತ್ಮ ಶೋಧನೆಯನ್ನೇ ಉಪದೇಶ ಎಂದುಕೊಳ್ಳಿ."

ಈ ಮೇಲಿನ ಮಾತು ಮತ್ತು ಅದಕ್ಕೆ ಪೂರಕವಾದ ಕೃತಿ ಈಗಿನ ಅಭಿವ್ಯಕ್ತಿಯಲ್ಲಿ, ಅದರಲ್ಲೂ ಮಾಧ್ಯಮದ ಮೂಲಕ ಕಾಣಸಿಗುವ ಅಭಿವ್ಯಕ್ತಿಯಲ್ಲಿ ಕಾಣುತ್ತಿಲ್ಲವೆಂದರೆ ನಂಬದೇ ಇರಲು ಆಗುವುದೇ ಇಲ್ಲ. ಮೊನ್ನೆ ಕೆ.ಎಸ್.ಭಗವಾನ್ ಅವರು ಭಗವದ್ಗೀತೆ ಮತ್ತು ಶ್ರೀರಾಮನ ಲೋಪಗಳ ಕುರಿತು ಇಡೀ ನಾಡೇ ನೋಡುವಂತೆ ಮಾತಾಡಿದಾಗ, ಹುಸ್ತು ವಿರೋಧ ಹಾಗು ಪರ ನಿಲುವುಗಳು ವ್ಯಕ್ತವಾದವು. ಈ ಹಿನ್ನೆಲೆಯಲ್ಲಿ ನೋಡುವುದಾದರೆ, ಅದರ ಬಗ್ಗೆ ಕೆಲವು ತಕರಾರುಗಳು ನನಗೂ ಇವೆ.

ಆದರೆ ಅದರ ಬಗ್ಗೆ ಮಾತನಾಡುವ ಸಂದರ್ಭ ಯಾವುದಾಗಿರಬೇಕು ಎಂಬುದೂ ಇಲ್ಲಿ ಬಹಳ ಮುಖ್ಯ. ಏಕೆಂದರೆ ಈ ದಿನ ಶ್ರೀರಾಮನನ್ನು ಮೀರಿದ ಸಮಸ್ಯೆಗಳು ಇಲ್ಲಿ ಕೋಟಿ ದಾಟಿವೆ, ಹಾಗಾಗಿ ಅಭಿವ್ಯಕ್ತಿ ಕ್ರಮಗಳು ವೈಯಕ್ತಿಕ ಗುರುತಿನ ನೆಲೆಯಿಂದ ಆಚೆ ಬಂದು



ಸಮುದಾಯದ ಪ್ರಶ್ನೆಗಳಾಗಿ ಮೂಡಬೇಕಾದ ಅನಿವಾರ್ಯತೆಯೇ ಹೆಚ್ಚಾಗಿ ಕಾಣುತ್ತದೆ.

ಹಾಗೆಯೇ ಮೇಲೆ ಹೇಳಿದ ಗಾಂಧಿ ಮಾತುಗಳನ್ನು ಗಮನಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೇನೆಂದರೆ ಉಪದೇಶದ ಭರದಲ್ಲಿ ತಪ್ಪುಗಳು ಜರುಗುತ್ತವೆ ಎಂದು. ಹೀಗಾಗಿ ಉಪದೇಶದ ಮೇಲಣ ರಚನೆ ಸಮಾಜಮುಖಿಯಂತೆ ಕಂಡರೂ ಬದಲಾದ ಚಳವಳಿ ಸನ್ನಿವೇಶದಲ್ಲಿ ಅವು ವೈಯಕ್ತಿಕ ಗುರುತು ಸಾಧಿಸುವ ಕ್ರಮಗಳಾಗಿ ಮಾರ್ಪಾಟು ಹೊಂದಿವೆ. ಅಲ್ಲದೇ ಇವು ವಾಸ್ತವ ಸಮಸ್ಯೆಯನ್ನು ಮರೆಮಾಚುವ ಕ್ರಮಗಳಾಗಿ ಗೋಚರಿಸುವುದಲ್ಲದೇ ಅಭಿವ್ಯಕ್ತಿಕಾರನು ತನಗರಿವಿಲ್ಲದೇ ಹೆಣೆದ ಅನ್ಯಾಯದ ಬಲೆಯೂ ಹೌದು.


ಇದನ್ನು ಇನ್ನೂ ಮುಂದುವರೆಸುವುದಾದರೆ, ಕೆಲವು ವಿಷಯಗಳನ್ನು ಗಮನಿಸಬಹುದು. ಅಭಿವ್ಯಕ್ತಿ ಕ್ರಮಗಳು ಸರಿಯಾದ ಸಮಯದಲ್ಲಿ ತನ್ನ ಪಾತ್ರವನ್ನು ವಿಚಿತ್ರಗೊಳಿಸಿದರೆ ಅವು ತನ್ನ ಉದ್ದೇಶಗಳನ್ನು ತಾನೇ ಕೊಂದಂತೆ. ಹೀಗಾಗಿ ಅಭಿವ್ಯಕ್ತಿಗಳು ತನ್ನ ಜನಪರ ಉದ್ದೇಶಗಳನ್ನು ಸ್ಪಷ್ಟಪಡಿಸಿಕೊಳ್ಳದೇ ಹೋದರೆ, ಸ್ವೇಚ್ಛಾಚಾರದ ರೂಪಕಗಳಾಗಿಯೇ ಗೋಚರಿಸುತ್ತವೆ. ಅಲ್ಲದೇ ಮುಂದೊಮ್ಮೆ ಗಂಭೀರವಾಗಿ ಮೂಡಿಬಂದ ನಿಜದ ಅಭಿವ್ಯಕ್ತಿಗಳೂ ಬೆಲೆ ಕಳೆದುಕೊಂಡು ಅಸಹಾಯಕತೆಯಲ್ಲಿ ನಲುಗುವ ಪ್ರಮೇಯವೇ ಹೆಚ್ಚು.

ಹೀಗಾಗಿ ಅಭಿವ್ಯಕ್ತಿಯು ಆತ್ಮಶೋಧನೆಯಿಂದ ಮೂಡಿಬಂದ ನಂಬಿಕೆಯ ಪಾಲಾಗಬೇಕು ಮತ್ತು ನಂಬುವ ವಾಸ್ತವವಾಗಬೇಕು. ಇಲ್ಲ ಇದೇ ಅಭಿವ್ಯಕ್ತಿ ಕ್ರಮಗಳೇ ಸಮಾಜದ ದಿಕ್ಕು ಬದಲಿಸುವ ಕ್ರಮಗಳು ಎಂದುಕೊಂಡರೆ, ಅದು ಅಷ್ಟಕ್ಕೇ ಸಾಲದು. ಏಕೆಂದರೆ ಅದು ಇಂತಹ ಅಭಿವ್ಯಕ್ತಿ ಕ್ರಮಗಳನ್ನು ಮೀರಿ ಬೆಳೆದ ಸಮಸ್ಯಾತ್ಮಕ ವಾಸ್ತವಗಳ ಸರಮಾಲೆ. ಹೀಗಾಗಿ ಉಪದೇಶಕ್ಕೆ ಮೊದಲು ಆತ್ಮಶೋಧನೆಯ ಅವಶ್ಯಕತೆ ಎಂದಿಗಿಂತಲೂ ಇಂದು ಹೆಚ್ಚಾಗಿಯೇ ತೋರುತ್ತದೆ.

-ರಮೇಶ್ ಎಚ್.ಕೆ. ಪಥ್, ಈ ಮೇಲ್ ಮೂಲಕ

ಸಂಸದ ನಳಿನ್ ಮತ್ತು ಅನುತ್ಪಾದಕ ಕಾರ್ಯ

ಪ್ರತಿಯೊಬ್ಬ ಸಂಸದರಿಗೆ ವರ್ಷಕ್ಕೆ ಐದು ಕೋಟಿ



ರೂಪಾಯಿ ಸಂಸದ ನಿಧಿಯಿಂದ ದೊರಕುತ್ತಿದ್ದು ಅದನ್ನು ಅವರು ತಮ್ಮ ಕ್ಷೇತ್ರದಲ್ಲಿ ಅವಶ್ಯ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸ ಬೇಕಿರುತ್ತದೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸಂಸದ ನಳಿನ್ ಕುಮಾರ ಕಟೀಲರ ಸಂಸದ ನಿಧಿಯೆಲ್ಲಾ ದೇವಸ್ಥಾನಗಳ ಜೀರ್ಣೋದ್ಧಾರ, ಬ್ರಹ್ಮಕಲಶ ಇಂತಹ ವೈದಿಕ ಕಾರ್ಯಗಳಿಗೆ ಮಾತ್ರ ವಿನಿಯೋಗ ಆಗುತ್ತಿರುವಂತಿದೆ.

ಇಡೀ ಭಾರತದಲ್ಲಿಯೇ ಅತೀ ಹೆಚ್ಚು ಅಷ್ಟಬಂಧ ಬ್ರಹ್ಮಕಲಶ ಪುನರ್-ಪ್ರತಿಷ್ಠೆಗಳು ನಮ್ಮ ಕರಾವಳಿಯಲ್ಲಿ ಮಾತ್ರ ನಡೆಯುತ್ತಿವೆ. ಸ್ಥಳೀಯ ಅವೈದಿಕ ಭೂತಾರಾಧನೆ-ನಾಗರಾಧನೆ ಸಹ ವೈದಿಕರ ಮುಷ್ಠಿಯಲ್ಲಿ ಸಿಕ್ಕಿಬಿದ್ದ ಮೇಲೆ ಭೂತಗಳಿಗೂ ವಿನಾಕಾರಣ ಬ್ರಹ್ಮಕಲಶ ಪುನಃಪ್ರತಿಷ್ಠೆ ನಡೆಯುತ್ತಿದೆ. ಇದರ ಅರ್ಥವೇನು? ಕೇವಲ ಕರಾವಳಿಯ ಪುರೋಹಿತರಿಗೆ ಮಾತ್ರ ನೈಜ ಹಿಂದೂ ಧರ್ಮ ಗೊತ್ತಿರುವುದೇ? ಉಳಿದ ಭಾರತೀಯರೇನು ಗಮಾರರೇ? ಹಿಂದೂ ಧರ್ಮದ ಮೂಲ ಸ್ಥಳವಾದ ಉತ್ತರ ಭಾರತದಲ್ಲಿ ಸಾವಿರಾರು ವರ್ಷ ಹಳೆಯ ಪ್ರಸಿದ್ಧ ದೇವಸ್ಥಾನಗಳಲ್ಲೂ ನೂರಾರು ವರ್ಷಗಳಿಂದ ಪುನರ್ ಪ್ರತಿಷ್ಠೆ ನಡೆಸಿಲ್ಲ, ಆದರೂ ಆ ದೇವಸ್ಥಾನಗಳಲ್ಲಿ ದೇವರ ಮಹಿಮೆ ಸ್ವಲ್ಪವೂ ಕಡಿಮೆಯಾಗಿಲ್ಲ, ಆದರೆ ಕೇವಲ ಕರಾವಳಿಯ ದೇವಸ್ಥಾನಗಳಲ್ಲಿ ಮಾತ್ರ ಹನ್ನೆರಡು ವರ್ಷಕ್ಕೊಮ್ಮೆ ಪುನರ್-ಪ್ರತಿಷ್ಠೆ ಬ್ರಹ್ಮಕಲಶ ನಡೆಸದಿದ್ದರೆ ದೇವಸ್ಥಾನದ ಮಹಿಮೆ ಕಡಿಮೆಯಾಗುತ್ತದೆ ಎಂಬ ಮೌಢ್ಯ ಹರಡಲಾಗುತ್ತಿದೆ.

ಕಳಪೆ ಚೈನಾ ಮೊಬೈಲ್ ಬ್ಯಾಟರಿಯನ್ನು ಆಗಾಗ ರೀಚಾರ್ಜ್ ಮಾಡಬೇಕಾಗುತ್ತದೆ. ಅದರಂತೆ ಕರಾವಳಿಯ ದೇವಸ್ಥಾನಗಳಿಗೂ ಆಗಾಗ ಕೋಟ್ಯಾಂತರ ಖರ್ಚಿನ ಪುನಃ ಪ್ರತಿಷ್ಠೆಯೆಂಬ ರಿಚಾರ್ಜ್ ಬೇಕಾಗುತ್ತದೆಯೇ? ಚೈನಾ ಮೊಬೈಲ್‌ನಂತೆ ಕರಾವಳಿಯ ದೇವಸ್ಥಾನಗಳ ಮಹಿಮೆಯು ಕಳಪೆ ಬ್ಯಾಟರಿ ಹೊಂದಿದ್ದು ಮಹಾರಾಷ್ಟ್ರ ಹಾಗೂ ಉತ್ತರ ಭಾರತದ ದೇವಸ್ಥಾನಗಳ ಮಹಿಮೆಯು ಲಾಂಗ್-ಲೈಫ್ ಬ್ಯಾಟರಿ ಹೊಂದಿರುವಂತಿದೆ.

ಮುಂಬೈಯಲ್ಲಿ ನೂರಾರು ಪುರಾತನ ದೇವಸ್ಥಾನಗಳಿವೆ. ನಾನು ಹದಿನಾರು ವರ್ಷ ಮುಂಬೈಯಲ್ಲಿದ್ದಾಗ ಅಲ್ಲಿ ಎಂದೂ ಇಂತಹ ಬ್ರಹ್ಮಕಲಶ ಪುನರ್-ಪ್ರತಿಷ್ಠೆ ನಡೆಯುವುದು ನೋಡಿಲ್ಲ, ಆದರೂ ಅದೇ ಮುಂಬೈ ನಗರದ ಲೇಡೀಸ್ ಬಾರ್ ಮತ್ತು ಅಂಡರ್‌ವರ್ಲ್ಡ್ ಶೆಟ್ಟಿಗಳು ತಮ್ಮ ಪಾಪ ತೊಳೆಯಲು ತಮ್ಮ ತವರೂರು ಕರಾವಳಿಯ ದೇವಸ್ಥಾನಗಳ ಪುನರ್-ಪ್ರತಿಷ್ಠೆ ಎಂಬ ರಿಚಾರ್ಜಿಗೆ ಲಕ್ಷಾಂತರ ರೂಪಾಯಿ ಪಾಪಕೂಪದ ಹಣ ಹರಿಸುತ್ತಾರೆ. ಮುಂಬೈಯ ಕನ್ನಡಿಗ ಬಂಟ ಉದ್ಯಮಿಗಳಿಗೆ ಹಣ ಮಾಡುವ ವಿದ್ಯೆ ಗೊತ್ತಿದೆಯೇ ಹೊರತು ನೈಜ ಧಾರ್ಮಿಕ ಜ್ಞಾನ ಎಳ್ಳಷ್ಟೂ ಇಲ್ಲ. ಮುಂಬೈ ಶೆಟ್ಟಿಗಳ ಗಂಡಸರು ಕೆಟ್ಟ ಮಾರ್ಗದಿಂದ ಹಣ ಗಳಿಸುತ್ತಾರೆ, ಆದರೆ ಇದರಿಂದಾಗಿ ಅವರ ಹೆಂಗಸರು ವಿಪರೀತ ಪಾಪಪ್ರಜ್ಞೆ ಮತ್ತು ಅಭದ್ರತೆಯಿಂದ ಬಳಲುತ್ತಾರೆ. ಹಾಗಾಗಿ ದೇವರ ಹೆಸರಲ್ಲಿ ಅವರನ್ನು ಲೂಟಿ ಹೊಡೆಯಲು ನಮ್ಮ ಕರಾವಳಿಯ ನೆಲವೇ ಅತ್ಯಂತ ಫಲವತ್ತಾಗಿದೆಯೆಂದು ಇಲ್ಲಿಯ ವೈದಿಕ ಧರ್ಮದ ವ್ಯಾಪಾರಿಗಳಿಗೆ ಗೊತ್ತಿದೆ. ಆದರೆ ಅದಕ್ಕಾಗಿ ಎಲ್ಲೆಲ್ಲೂ ಈ ಧಾರ್ಮಿಕ ನಾಟಕಗಳು. ಆದರೆ ಮಂಗಳೂರಿನ ಸಂಸದ ನಳಿನ್ ಶೆಟ್ಟಿಯಂತಹ ಜನಪ್ರತಿನಿಧಿಗಳು ಯಾವಾಗಲೂ ಇಂತಹ ಅನುತ್ಪಾದಕ ಕಾರ್ಯದಲ್ಲೇ ಮುಳುಗಿರುವುದು ಮಾತ್ರ ಈ ಪ್ರದೇಶದ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯದಲ್ಲ.

-ಜೆ. ಆರ್. ರೈ, ಮಂಗಳೂರು

ಆದರಣೆಯ ಗೌರಿಯವರೆ,

ನಾನು ನಿಮ್ಮ ಪತ್ರಿಕೆಯ ತಂಡದಲ್ಲಿ ಒಬ್ಬರಾದ ಎಸ್.ಎಫ್. ಯೋಗಪ್ಪನವರ ಕಿರಿಯ ಸಹೋದರ. ನಿಮ್ಮ ಪತ್ರಿಕೆಯನ್ನು ನಿಮ್ಮ ತಂದೆಯವರ ಕಾಲದಿಂದಲೂ ಇಲ್ಲಿಯವರೆಗೆ ತಪ್ಪದೇ ಓದುತ್ತೇನೆ. ನಿಮ್ಮ ತಂದೆಯವರ ಬಗ್ಗೆ ಪ್ರಶಂಸಿಸುವ ಅಗತ್ಯವಿಲ್ಲ, ಯಾಕೆಂದರೆ ಎಲ್ಲವನ್ನೂ ಮೀರಿ ಅತೀ ಎತ್ತರಕ್ಕೆ ಹೋದವರು.

ನನ್ನ ಅಭಿಪ್ರಾಯದಲ್ಲಿ ಅವರಿಗಿಂತಲೂ ತಾವು ಒಂದು ಹೆಜ್ಜೆ ಮುಂದಿದ್ದೀರಿ ಎಂದರೆ ಅತಿಶಯೋಕ್ತಿಯಾಗಲಾರದು. ನಿಮ್ಮ ಸಂಪಾದಕೀಯ ಓದಿದರೆ ಅದೆಲ್ಲವೂ ವಿಧಿತವಾಗುತ್ತದೆ. ನಿಮ್ಮ ಧೈರ್ಯ, ಪ್ರಾಮಾಣಿಕತೆ, ವಿಶ್ಲೇಷಿಸುವ ವಿಧಾನ ಮತ್ತು ನಿಮ್ಮ ವಿಚಾರಗಳು ಎಷ್ಟು ಪಾರದರ್ಶಕವಾಗಿವೆ ಎಂದರೆ ಒಬ್ಬ ಹೆಣ್ಣು ಮಗಳಾಗಿ, ಪತ್ರಕರ್ತರಾಗಿ, ಕೋಮು ಸೌಹಾರ್ದತೆಯ ಪ್ರಮುಖರಾಗಿ ನೀವು ಮಾಡುತ್ತಿರುವ ಕೆಲಸ ಶ್ಲಾಘನೀಯ. ಹೆಣ್ಣು ಗಂಡಿಗಿಂತಲೂ ಈ ಪುರುಷ ಪ್ರಧಾನ ಸಮಾಜದಲ್ಲಿ ಹೆಚ್ಚು ಬೆಳೆಯಬಹುದು ಎಂಬುದಕ್ಕೆ ನೀವೇ ಉದಾಹರಣೆ.

ನಿಮ್ಮ ತಂದೆಯವರ ಹಾಗೆ ಜಾಹಿರಾತು ಇಲ್ಲದೆ, ಯಾರ ಮುಲಾಜು ಇಲ್ಲದೇ ಧೈರ್ಯದಿಂದ, ಸತ್ಯಕ್ಕೇ ಜಯ ಸಿಗಬೇಕು ಎಂಬ ಧ್ಯೇಯ ಇಟ್ಟುಕೊಂಡು ಮುನ್ನಡೆಯುತ್ತಿರುವವರು ನೀವು. ನಿಮ್ಮ ರಾಜ್ಯದಲ್ಲಿ ನಕ್ಸಲ್ ಸಮಸ್ಯೆ ಕಡಿಮೆಯಾಗಬೇಕಾದರೆ ನೀವೂ ಒಬ್ಬರು ಪ್ರಮುಖ ವ್ಯಕ್ತಿ.

ನಿಮ್ಮ ಸಂಪಾದಕೀಯ ಓದುವುದೇ ಒಂದು ಥ್ರಿಲ್. ನಾನು ಅದನ್ನೆಂದೂ ಮಿಸ್ ಮಾಡಿಕೊಳ್ಳುವುದಿಲ್ಲ. ಮೊನ್ನೆ ತಾನೇ ತಮ್ಮ ಪತ್ರಿಕೆಯ ದಶಮಾನೋತ್ಸವ ಆಚರಿಸಿದ್ದೀರಿ. ಅದಕ್ಕೆ ಶುಭಾಶಯಗಳನ್ನು ಕೋರುತ್ತಾ ಮತ್ತು ಮೊನ್ನೆ ತಾನೇ ಮಾರ್ಚ್ 8ಕ್ಕೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಾಯಿತು. ಈ ಸಂದರ್ಭದಲ್ಲಿ ತಮಗೆ 'ವಿಶೇಷ ಹೆಣ್ಣು ಮಗಳು' ಎಂಬ ಬಿರುದನ್ನು ದಯಪಾಲಿಸುತ್ತಾ ನನ್ನ ಸಹೋದರ ನಿಮ್ಮ ತಂದೆಯವರ ಹಾಗು ತಮ್ಮೊಡನೆ ಅನೋನ್ಯ ಸಂಬಂಧ ಹೊಂದಿದ್ದರಿಂದ, ನಾನು ತಮಗೆ ನನ್ನ ವೈಯಕ್ತಿಕ ಎರಡು ಅಭಿಪ್ರಾಯಗಳನ್ನು ತಿಳಿಸುವ ಸಲುವಾಗಿ ಈ ಪತ್ರ ಬರೆದಿದ್ದೇನೆ. ಮತ್ತೆ ಬೇರೆ ಯಾವ ಉದ್ದೇಶವಿಲ್ಲ.

ಇಂತಿ ನಿಮ್ಮ ಪತ್ರಿಕೆಯ ಅಭಿಮಾನಿ,

-ಡಾ. ಎಚ್.ಎಫ್. ಯೋಗಪ್ಪನವರ, ಬಾಗಲಕೋಟೆ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನು[...] ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ[...] ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



ಗೆಸ್ಟ್ ರೋಲ್‌ನಲ್ಲಿ ಸಂಜನಾ

'ಗಂಡ ಹೆಂಡತಿ' ಖ್ಯಾತಿಯ ಸಂಜನಾ ಬರೀ ಗೆಸ್ಟ್ ರೋಲ್‌ಗಳಿಗೆ ಸೀಮಿತಗೊಳ್ಳುತ್ತಿದ್ದಾರಾ?

ಈ ಪ್ರಶ್ನೆ ಯಾಕೆ ಅಂದರೆ ಸಂಜನಾಳ ಪ್ರಕಾರ ಆಕೆಯ ಪ್ರತಿಭೆಗಿಂತ ದೇಹ ಸೌಂದರ್ಯಕ್ಕೆ ಪ್ರಾಮುಖ್ಯತೆ ಕೊಡಲಾಗುತ್ತಿದೆಯಂತೆ. ಸಂಜನಾಳನ್ನು ನಾಯಕಿಯಾಗಿ ಗಾಂಧೀನಗರದವರು ನೋಡಿದ್ದು ಕಡಿಮೆ. ಆಗಾಗ ಐಟಂ ಸಾಂಗ್‌ಗೆ ಹೆಜ್ಜೆ ಹಾಕುವ, ಹಾಗೆ ಬಂದು ಹೀಗೆ ಹೋಗುವ ಪಾತ್ರಕ್ಕೆ ಮಾತ್ರ ಸೀಮಿತವಾಗಿರುವ ಸಂಜನಾ ಈಗ 'ರಾಮ್ ಲೀಲಾ' ಎಂಬ ಚಿತ್ರದಲ್ಲಿ ಗೆಸ್ಟ್ ರೋಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಮೋಹನ್‌ಲಾಲ್ ತರಹದ ಹಿರಿಯರ ಜೊತೆ ಮಲೆಯಾಳಂ ಚಿತ್ರದಲ್ಲಿ ನಟಿಸಿದ್ದರೂ ಯಾಕೋ ಕನ್ನಡ ಅಥವಾ ಮಲೆಯಾಳಂನಲ್ಲಿ ದೊಡ್ಡ ಮಟ್ಟದ ಗೆಲುವು ಸಂಜನಾಳಿಗೆ ಸಿಕ್ಕಿಲ್ಲ ಎಂಬುದು ಸತ್ಯ. ಇವರ ತಂಗಿ ನಿಕ್ಕಿ ಗುಲ್ರಾನಿ 10 ಕ್ಕೂ ಹೆಚ್ಚು ಮಲೆಯಾಳಂ ಚಿತ್ರಗಳಲ್ಲಿ ನಾಯಕಿಯಾಗಿ ಮಿಂಚುತ್ತಿದ್ದಾರೆ. ಹೋಗ್ಲಿ ಇಂಥ ಗೆಸ್ಟ್ ಪಾತ್ರಗಳ ಮೂಲಕವಾದರೂ ಚಿತ್ರರಂಗದಲ್ಲಿ ಸಂಜನಾ ನೆಲೆ ಕಂಡುಕೊಳ್ಳುತ್ತಾರಾ ನೋಡೋಣ. ■

ಕಾಲಿವುಡ್‌ಗೆ ಹಾರಿದ ಚಾಂದಿನಿ

'ಎ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ಬೆಡಗಿ ಚಾಂದಿನಿ ಇದೀಗ 'ಖೈದಿ' ಸಿನಿಮಾದೊಂದಿಗೆ ಸೆಕೆಂಡ್ ಇನ್ನಿಂಗ್ಸ್ ಶುರುಮಾಡಿರುವ ಸಂಗತಿ ನಿಮಗೆ ಗೊತ್ತಿದೆ. ಈಗ ಇದೇ ಚಾಂದಿನಿ ಕಾಲಿವುಡ್ ಮತ್ತು ಬಾಲಿವುಡ್‌ಗೆ ಹಾರುತ್ತಿದ್ದಾರೆ.

ತಮಿಳು ಚಿತ್ರರಂಗದ ಪ್ರಸಿದ್ಧ ನಿರ್ದೇಶಕ ಎಸ್.ಎಂ.ವಸಂತ್ ಆಕ್ಷನ್ ಕಟ್ ಹೇಳುತ್ತಿರುವ ದ್ವಿಭಾಷಾ ಚಿತ್ರಕ್ಕೆ ಚಾಂದಿನಿ ಸೆಲೆಕ್ಟ್ ಆಗಿದ್ದಾರೆ. ತಮಿಳು ಮತ್ತು ಹಿಂದಿಯಲ್ಲಿ ಏಕಕಾಲದಲ್ಲಿ ರೆಡಿಯಾಗಲಿರುವ ಈ ಚಿತ್ರದಲ್ಲಿ ಚಾಂದಿನಿ ಜೊತೆಗೆ ಗುಲ್ಷನ್ ಗ್ರೋವರ್ ಅಭಿನಯಿಸಲಿದ್ದಾರೆ. ಮೂಲತಃ ಕಾಲಿವುಡ್‌ನ ಪ್ರಸಿದ್ಧ ನಿರ್ದೇಶಕ ಭಾರತೀರಾಜಾ ಅವರ ಶಿಷ್ಯರಾಗಿರುವ ಎಸ್.ಎಂ.ವಸಂತ್ ಭಾರತೀರಾಜಾ ಅವರ ಸಮ್ಮುಖದಲ್ಲಿಯೇ ಈ ಪ್ರಾಜೆಕ್ಟ್‌ಅನ್ನು ಅನೌನ್ಸ್ ಮಾಡಿದ್ದಾರೆ. ದ್ವಿಭಾಷೆಯಲ್ಲಿ ಚಿತ್ರ ರೆಡಿಯಾಗುವುದರಿಂದ ಬಾಲಿವುಡ್, ಕಾಲಿವುಡ್ ಮತ್ತು ಹಾಲಿವುಡ್‌ನ ತಂತ್ರಜ್ಞರನ್ನ ಬಳಸಿಕೊಳ್ಳುತ್ತಾರಂತೆ.

ಏಕಕಾಲಕ್ಕೆ ಬಾಲಿವುಡ್ ಮತ್ತು ಕಾಲಿವುಡ್‌ಗೆ ಹಾರುತ್ತಿರುವುದರಿಂದ ಫುಲ್ ಖುಷ್ ಆಗಿರುವ ಚಾಂದಿನಿ "ನಾನು ಎಲ್ಲಿಗೇ ಹೋದರೂ, ಕನ್ನಡದಿಂದ ಬಂದವಳೆಂದು ಹೇಳುತ್ತೇನೆ. ಈ ಚಿತ್ರಕ್ಕೆ ನನ್ನನ್ನ ಆಯ್ಕೆ ಮಾಡಿರುವುದು ನನಗೆ ಅಚ್ಚರಿ ತಂದಿದೆ. ತಮ್ಮ ನಿರೀಕ್ಷೆಗೆ ತಕ್ಕಂತೆ ನಾನು ಅಭಿನಯಿಸುತ್ತೇನೆ; ನಾನು ಸಿನಿಮಾ ರಂಗಕ್ಕೆ ಮತ್ತೆ ಬರುತ್ತಿದ್ದೇನೆ ಎಂದಾಗ ಎಲ್ಲರು ಪ್ರೀತಿಯಿಂದ ಸ್ವಾಗತಿಸಿದರು. ಅದರಲ್ಲೂ 'ಖೈದಿ' ಸಿನಿಮಾದಲ್ಲಿ ನಾಯಕಿಯಾಗಿ ಅಭಿನಯಿಸುತ್ತಿದ್ದೇನೆ ಎಂದಾಗ ಸಂಭ್ರಮ ಪಟ್ಟರು. ಇವತ್ತಿಗೂ ನನ್ನ ಮೇಲೆ ಅವರೆಲ್ಲ ಇಟ್ಟುಕೊಂಡಿರುವ ಪ್ರೀತಿಗೆ ನಾನು ಋಣಿ" ಅಂತಾರೆ.

ಅಂದಹಾಗೆ, ಇನ್ನೂ ಹೆಸರಿಡದ ಈ ಚಿತ್ರ ಕಾದಂಬರಿ ಆಧಾರಿತವಂತೆ. ಯಾವ ಕಾದಂಬರಿ ಅನ್ನೋದನ್ನ ನಿರ್ದೇಶಕರು ಬಿಟ್ಟುಕೊಟ್ಟಿಲ್ಲ. ಸದ್ಯದಲ್ಲೇ ಸಿನಿಮಾ ಸೆಟ್ಟೇರಲಿದೆ. ■



ಒಳ್ಳೆಯ ಸಂಬಂಧ ಯಕ್ಕಾಸ ಸಾ

ನನ್ನ ಸಂಬಂಧಿಕರ ಮಗಳು ಅವಳು. ಬಲೇ ಜಾಣೆ. ಎಂಬಿಎ ಮಾಡಿದ್ದಳು. ಹರಳು ಹುರಿದ ಹಾಗೆ ಇಂಗ್ಲಿಷಿನಲ್ಲಿ ಪಟಪಟ ಅಂತ ಮಾತನಾಡುತ್ತಿದ್ದಳು. ಬಹುರಾಷ್ಟ್ರೀಯ ಸಂಸ್ಥೆಯೊಂದು ಕರೆದು ಕೆಲಸ ಕೊಡ್ತು. ತನ್ನ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸುತ್ತಿದ್ದಳು. ತಾನಾಯಿತು, ತನ್ನ ಕೆಲಸ ಆಯಿತು ಅಂತ ಕೆಲಸಕ್ಕೆ ತಾಳಿ ಕಟ್ಟಿರುವ ಹಾಗೆ ಇರುತ್ತಿದ್ದಳು. ಅವಳ ತಾಯಿ ವಿಷಯಾನೆ ಬೇರೆ. ಗಡವನ ಹಾಗೆ ಬೆಳೆದು ನಿಂತಿರೋ ಮಗಳು ಇನ್ನೂ ಮದುವೆಯಾಗಲಿಲ್ಲವಲ್ಲ ಅನ್ನುವ ಚಿಂತೆ ಅವರನ್ನು ಕಾಡುತ್ತಿತ್ತು. ಗುರುತು ಪರಿಚಯ ಇದ್ದವರಿಗೆಲ್ಲ ಗಂಡು ನೋಡುವಂತೆ ಹೇಳುತ್ತಿದ್ದರು. ಆದರೂ ಕಂಕಣ ಕೂಡಿ ಬರಲೇ ಇಲ್ಲ. ನನಗೆ ವಧುವರರನ್ನು ಹೊಂದಾಣಿಕೆ ಮಾಡುವ ಮದುವೆ ದಲ್ಲಾಳಿ ಪರಿಚಯ ಇದ್ದ. ಅವನ ಕಿವಿಯ ಮೇಲೆ ಈ ವಿಷಯ ಹಾಕಿದೆ. ಹುಡುಗಿಯ ಪೂರ್ವಾಪರಗಳನ್ನೆಲ್ಲ ತಿಳಿದ ಮೇಲೆ 'ಒಳ್ಳೆ ಕಡೇನೆ ಸಂಬಂಧ ಮಾಡ್ಯಾನ ಬುಡಿ ಸಾ' ಅಂದ. ಜಾತಕಪಾತಕ, ಫೋಟೋ ಗೀಟೋ ತಗಂಡ. 'ಹೆಣ್ಣುಮಗಳ ಒಂದ್ಸಲ ಕಣ್ಮಟ್ಟ ನೋಡಿದ್ರೆ ಚೆನ್ನಾಗಿತ್ತಲ್ಲ ಸಾ' ಅಂದ. ನನಗೂ ಸರಿ ಎನಿಸಿತು. ಒಂದು ಭಾನುವಾರ ಆಕೆಯನ್ನು ನನ್ನ ಮನೆಗೆ ಕರೆಸಿದೆ. ಮದುವೆ ದಳ್ಳಾಲಿಯೂ ಬಂದ. ಆಕೆಯ ಪ್ರದರ್ಶನ ನಡೆಯಿತು. ಅದಾದ ನಂತರ 'ನೀನು ಹೋಗು ತಾಯಿ' ಅಂದ. ಅವಳು ಹೋದಳು. ಅದು ಇದು ಮಾತನಾಡುತ್ತಾ 'ಒಳ್ಳೆಯ ಸಂಬಂಧ ಕುದುರ್ಸೋದು ಪಸಿ ಯಕ್ಕಾಸ ಸಾ' ಅಂದ. ನನ್ನ ಅರಿವಿಗೇ ಬಾರದ ಯಾವ ಲೋಪ ಇವನು ಪತ್ತೆಹಚ್ಚಿದನೋ ಅಥವಾ ಕಮಿಷನ್ ಹೆಚ್ಚಿಗೆ ಸಿಗಲಿ ಅಂತ ಈ 'ಯಾಸ' ಕಟ್ಟುತ್ತಿದ್ದಾನೋ ಅನ್ನೋ ಸಂಶಯ ಕಾಡಿತು. 'ಏನಾಗಿದ್ದಾಳು ನಮ್ಮ ಹುಡ್ಗೀಗೆ. ಹೈಕ್ಲಾಸಾಗಿ ಅವ್ಳಲ್ಲ' ಅಂದೆ. 'ಹಾಸಿಲ್ಲ ಅಂದ್ನೆ ಸಾ. ಎಲ್ಲಾದ್ರಲೂ ಓಕೇನೆ ಸಾ. ಆದರೆ ಬಣ್ಣ ಪಸಿ ಮಾಸಲು' ಅಂದ!


ಸಮಾಧಾನವಾಗಿ ಯೋಚಿಸಿದೆ. ಇಂತಹ ಅಭಿಪ್ರಾಯ ಅವನೊಬ್ಬನದ್ದು ಮಾತ್ರ ಅಲ್ಲ, ನಮ್ಮೆಲ್ಲರ ಮನಸ್ಥಿತಿಯೂ ಅದೇ! ಹೆಣ್ಣಿನ ಚೆಲುವು ಇರುವುದು ಬಣ್ಣದಲ್ಲಿ, ಬಣ್ಣವೇ ಆಕೆಗೆ ಆಭರಣ ಎಂಬ ನಂಬಿಕೆ ನಮ್ಮದು. ವಧು ಪರೀಕ್ಷೆಯಲ್ಲಿ ಆಕೆಯ ವಿದ್ಯೆ, ಗುಣ ಗೌಣ. ಬಣ್ಣವೇ ಪ್ರಧಾನ. ಬಿಳಿ ಇದ್ದರೆ ಪಾಸು. ಕಪ್ಪು ಇದ್ದರೆ ನಪಾಸು. ಇದು ಭಾರತೀಯತೆ!

ಗೋವಾ ಮುಖ್ಯಮಂತ್ರಿ ಭಾರತೀಯ ಪರಂಪರೆ, ಸಂಪ್ರದಾಯಗಳನ್ನು ಕಾಪಿಡಿ, ಪ್ರೋತ್ಸಾಹಿಸಿ ಅಭಿವೃದ್ಧಿಪಡಿಸಬೇಕೆಂದು ಸಂಕಲ್ಪಿಸಿರುವ ಭಾರತೀಯ ಜನತಾ ಪಕ್ಷದವರಲ್ಲವಾ. ಮಹಿಳೆಯ ಮೈ ಬಣ್ಣ ಕುರಿತು ಅವರು ನೀಡಿರುವ ಘನವಾದ ಹೇಳಿಕೆ ಇದನ್ನೆಲ್ಲ ಯೋಚಿಸುವಂತೆ ಮಾಡಿತು. ಅವರಿಗೂ ನನಗೆ ಆದಂತಹ ಅನುಭವ ಆಗಿರಬೇಕು ಅಥವಾ ವಿವಿಧ ಮೂಲೆಗಳಿಂದ ಅಭಿಪ್ರಾಯ ಸಂಗ್ರಹಿಸಿರಬೇಕು. ಭಾರತೀಯ ಪುರುಷ ಪುಂಗವರು ಮೆಚ್ಚಿ ಮನದನ್ನೆಯನ್ನಾಗಿ ಸ್ವೀಕರಿಸಬೇಕಾದರೆ ನಾರೀಮಣಿಯ ಮೈಬಣ್ಣ ಎಂತಹದ್ದಿರಬೇಕು ಎಂಬ ಸ್ಪಷ್ಟ ನಿರ್ಧಾರಕ್ಕೆ ಬಂದಿರುವವರು. ಅಂತಹ ಮಹಾನುಭಾವರು ಅಧಿಕಾರದಲ್ಲಿರುವ ರಾಜ್ಯದಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ದಾದಿಯರು ಪ್ರತಿಭಟನೆ ಮಾಡುತ್ತಿದ್ದರು. ಅದೂ ಬೇಸಿಗೆ ಕಾಲದಲ್ಲಿ! ಹೊರಗೆ ಕಾದ ಹೆಂಚಿನಂತಿರುವ ನೆಲ. ತಲೆ ಹಾಕಿದರೆ ಸುಟ್ಟು ಕರುಕಲು ಮಾಡುವಂತಹ ಬಿಸಿಲಿನ ಪ್ರಖರತೆ. ಗೋವಾದ ದಾದಿಯರು ಪ್ರತಿಭಟನೆ ಮಾಡ್ತೀವಿ ಅಂತ ಅಂತಹ ಸುಡು ವಾತಾವರಣದಲ್ಲಿ ಬೇಯುತ್ತಾ ಇದ್ದಾರಲ್ಲಾ... ಬಿಸಿಲಿನ ತಾಪಕ್ಕೆ ಹೆಣ್ಣುಮಕ್ಕಳು ಕಪ್ಪಾಗುತ್ತಾರಲ್ಲಾ... ಪುರುಷರ ಅಸಡ್ಡೆಗೆ, ತಿರಸ್ಕಾರಕ್ಕೆ ಗುರಿಯಾಗುತ್ತಾರಲ್ಲಾ ಎಂದೆಲ್ಲ ಯೋಚಿಸಿ ಮುಖ್ಯಮಂತ್ರಿಗಳ ಕರುಳು ಕರಗಿ ನೀರಾಯಿತು. ಅವರ ಭವಿಷ್ಯ ಭಯಾನಕವಾಗಿ ತೋರಿತು. ಹೆಂಗಸಿಗೆ ವಯಸ್ಸು ಆಗುತ್ತಿದ್ದಂತೆ ಗಂಡನಿಗೆ ಆಕೆಯ ಆಕರ್ಷಣೆ ಕಡಿಮೆ ಆಗುತ್ತೆ ಎಂಬ ಅವರ ಪಕ್ಷದ ವರಿಷ್ಠರ ಮಾತು ನೆನಪಾಯಿತು. ವಯಸ್ಸಿನ ಜೊತೆಗೆ ಕಪ್ಪು ಬಣ್ಣ ಸೇರಿದರೆ ದಾಂಪತ್ಯಜೀವನ ಹೇಗಿರಬಹುದು ಎಂಬ ಆಲೋಚನೆಯೇ ದಿಗಿಲು ಮೂಡಿಸಿತು. ಅಕಸ್ಮಾತ್ ಆಕೆ ಇನ್ನೂ ಕನ್ಯೆಯಾಗಿದ್ದರೆ ವರ ಸಿಗುವುದೇ ದುರ್ಲಭ ಆಗಬಹುದು. ಇಂತಹ ಎಲ್ಲ ಆಲೋಚನೆಗಳು ಪ್ರತಿಭಟನಾನಿರತ ದಾದಿಯರು ಮನವಿಪತ್ರ ನೀಡಲು ಬಂದಾಗ ಕ್ಷಣಮಾತ್ರದಲ್ಲಿ ಮುಖ್ಯಮಂತ್ರಿಯವರ ಸ್ಮೃತಿಪಟಲದಲ್ಲಿ ಹಾದುಹೋಯಿತು. ಅದಕ್ಕೇ 'ಬಿಸಿಲಲ್ಲಿ ಒಣಗಿ ಕಪ್ಪಾಗಬ್ಯಾಡಿ ಕಣ್ರವ್ವ. ವರ ಸಿಗೋದು ಕಷ್ಟ ಆಯ್ತದೆ' ಅಂತ ರಾಜ್ಯದ ಹಿರೀಕನಾಗಿ ಹೇಳೋ ಮಾತು ಹೇಳಿದರು.

ಅಲ್ಲ ಅವರು ಹೇಳಿರೋದರಲ್ಲಿ ಏನು ತಪ್ಪದೆ ಅಂತೀನಿ. ಮಹಿಳೆಯರ ಬಗ್ಗೆ ಅವರಿಗಿರುವ ಕಳಕಳಿಯನ್ನು ಅರ್ಥ ಮಾಡಿಕೊಳ್ಳದೆ ಏನೋ ಹೇಳಬಾರದ್ದು ಹೇಳವ್ರೆ ಅಂತ ಪ್ರತಿಭಟನೆ ಮಾಡೋದ್ನೆ ಕಸುಬು ಮಾಡಿಕೊಂಡಿರೋವ್ರು ಒದರ್ತಾ ಬಿದ್ದವೆ. ನವಿಲು ನೋಡಿ ಕೆಂಭೂತ ಪುಕ್ಕ ತಕ್ಕಂತಲ್ಲ ಹಂಗೇ ಅವನೋಡಿ ಬೇರೆ ಪಸಿ ಜನಾನೂ ಹಾರಾಡ್ತಾ ಅವ್ರೆ. ಇಂತಹವರ ಬಾಯಿ ಬಂದ್ ಮಾಡೋಕೆ ಭಾಜಪ ಸಂಸದ ಗಿರಿರಾಜಸಿಂಗ್ ಅಂತೋರೆ ಸರಿ. ಅವರು ಇತ್ತೀಚೆಗೆ ಸೋನಿಯಾ ಗಾಂಧಿ ಹೆಂಗೆ ಗೌರವ ಸ್ಥಾನ ಪಡೆದರು ಅನ್ನೋದನ್ನ ಬಯಲು ಮಾಡವ್ರೆ. ಅವರ ಥಿಯರಿ ಏನಪ್ಪ ಅಂದ್ರೆ ಸೋನಿಯಾ ಇಟಾಲಿಯನ್ ಬಣ್ಣಕ್ಕೆ ರಾಜೀವ್ ಗಾಂಧಿ ಫಿದಾ ಆದ್ರು. ರಾಜೀವ್ ಮರಣದ ನಂತರ ಏನಾಯ್ತು? ಸೋನಿಯಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದರು. ಯಾಕೆ? ಅವರ ಮೈಬಣ್ಣ ಹಂಗಿತ್ತು! ಈ ಥಿಯರಿ ಒಪ್ಪದ ಕಾಂಗ್ರೆಸಿನೋವ್ರು 'ಇದೆಲ್ಲ ಸುಳ್ಳು. ಆಕೆ ಮುತ್ಸದ್ದಿತನವ ನಾವು ಮೆಚ್ಚಿ ಅಧ್ಯಕ್ಷೆ ಮಾಡಿಕ್ಕೊಂಡೊ ಅಂತ ಗಿರಿರಾಜಸಿಂಗ್‌ಗೆ ತಿಳೀದಾ....' ಅದ್ಕೇ ಅವ್ರು 'ರಾಜೀವ್‌ಗಾಂಧಿ ಇಟಲಿಯಮ್ಮನ್ನ ಮದುವೆ ಆಗುವುದರ ಬದಲು ನೈಜೀರಿಯಾ ಹೆಣ್ಣು ಮದುವೆ ಆಗಿದ್ದರೆ ಆಕೆಗೆ ಇಂತಹ ಸ್ಥಾನಮಾನ ದೊರೆಯುತ್ತಿತ್ತಾ' ಅಂತ ಸರಿಯಾಗೆ ಜಾಡಿಸವ್ರೆ.


ಗಿರಿರಾಜಸಿಂಗ್ ಹೇಳಿರುವುದು ನ್ಯಾಯವೇ ಅಲ್ಲವೇನ್ರಿ. ಕಪ್ಪಗಿರೋ ಹೆಂಗಸರಿಗೆ ಮರ್ಯಾದೆ ಕೊಡೋಕೆ ಅವರೇನು ಕಾಲದಿಂದ ನಮ್ಮ ಆಳಿದ್ದರಾ. ಇದನ್ನ ಅರ್ಥಮಾಡಿಕೊಳ್ಳದೆ ನೈಜೀರಿಯಾದವು 'ನಮಗೆ ಅವಮಾನ ಆಯ್ತೋ' ಅಂತ ಬೊಂಬ್ಡ ಬಜಾಯಿಸುತ್ತಾ ಕುಂತವಂತೆ. ರೀ ನೈಜೀರಿಯಾದವ್ರೆ ಭಾರತೀಯ ಜನಸಮೂಹದ ನಡುವೆ ಯಾವಾಗಲಾದರೂ ಓಡಾಡಿದೀರ್ರೇನ್ರೀ? ನಿಮ್ಮತ್ತ ತಿರಸ್ಕಾರ ನೋಟ, ಬಿಳಿ ಚರ್ಮದವರತ್ತ ಅಭಿಮಾನ ನೋಟ ಬೀರುವುದಿಲ್ಲವೇನ್ರಿ ಭಾರತೀಯರು?

'ಬೇಟಿ ಬಚಾವ್ರೊ, ಬೇಟಿ ಪಢಾವ್ರೋ' ಅನ್ನೋ ಘೋಷಣೆ ಕೊಟ್ಟ ಪ್ರಧಾನಿ ಕೇವಲ ಬಣ್ಣದಿಂದ ಹೆಣ್ಣಿನ ಸಾಮರ್ಥ್ಯ ಅಳೆಯುವುದು ಅಸಂಭವ ಅಂತೀರಾ. ಅವ್ರು ಹೇಳಿರೋದು 'ಕಾಲಾ'ಬೇಟಿಗಳಿಗೆ ಅನ್ವಯಿಸುವುದಿಲ್ಲ 'ಗೋರಾ' ಬೇಟಿಗಳಿಗೆ ಅನ್ವಯಿಸುತ್ತೆ. 'ಹಂಗೇನೂ ಹೇಳಿಲ್ಲ ಅವ್ರು, ಎಲ್ಲ ನಿಮ್ಮದೇ ಕಿತಾಪತಿ' ಅಂತೀರಾ. 'ಕಪ್ಪು ಸುಂದರ' ಘೋಷಣೆ ಕೇಳಿದ್ದೀರೇನ್ರಿ ಅಂತ ದಬಾಯಿಸುತ್ತೀರಾ. ದಬಾಯಿಸಿ ಸ್ವಾಮಿ ಏನು ಬೇಕಾದರೂ ಘೋಷಣೆ ಮಾಡ್ಕಳ್ಳಿ. ಆದ್ರೇನು ಕಾಸು ಕೊಡಬೇಕಾ, ಕಪ್ಪು ಮಗಳಿಗೆ ಕೊಡಬೇಕಾ. ಭಾರತೀಯರಾದ ನಮಗೆ ಮಾತ್ರ ಕಪ್ಪು ಕನಿಷ್ಠ, ಬಿಳಿ ಶ್ರೇಷ್ಠ!



■ ಎಚ್ಚೆಲ್ಕೆ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 22-04-2015



ಕನ್ನಡಕ್ಕೆ ಸಿಂಬು

ಕಾಲಿವುಡ್‌ನ ಜನಪ್ರಿಯ ನಟ ಸಿಂಬು 'ಟೇಕಿಲಾ' ಎನ್ನುವ ಕನ್ನಡದ ಸಸ್ಪೆನ್ಸ್ ಚಿತ್ರದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ.ವೇಣುಗೋಪಾಲ್ ಎಂಬುವವರು ನಿರ್ದೇಶನ ಮಾಡಲಿರುವ ಈ ಚಿತ್ರವು ಮೂರು ಭಾಷೆಗಳಲ್ಲಿ ತೆರೆಗೆ ಬರಲಿದೆ. ತಮಿಳು ಚಿತ್ರರಂಗದಲ್ಲಿ ಬಿಜಿಯಾಗಿರುವ ಸಿಂಬು ಕನ್ನಡದಲ್ಲಿ ಯಾವ ರೀತಿ ಮೋಡಿ ಮಾಡುತ್ತಾರೊ ಕಾದು ನೋಡಬೇಕು.



ವಿಮರ್ಶಕರ ವಿರುದ್ಧ ಜಗ್ಗೇಶ್ ಗರಂ

ಯೋಗರಾಜ್ ಭಟ್ ಸಿನಿಮಾ ಎಂದರೆ ಅದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಂತೂ ಭರಪೂರ ಚರ್ಚೆ ನಡೆದೇ ನಡೆಯುತ್ತದೆ. ಕಳೆದ ವಾರ ತೆರೆಕಂಡ ಅವರ 'ವಾಸ್ತು ಪ್ರಕಾರ' ಸಿನಿಮಾದ ಬಗ್ಗೆಯೂ ಈಗ ಭರಪೂರ ಚರ್ಚೆ ನಡೆಯುತ್ತಿದೆ. "ಸಿನಿಮಾ ಚೆನ್ನಾಗಿಲ್ಲ" ಎಂದು ಹಲವರು ಖಾರವಾಗಿಯೇ ಕಾಮೆಂಟ್ ಮಾಡಿದ್ದಾರೆ, ಹಾಗೆಯೇ "ಸೂಪರ್ ಸಿನಿಮಾ" ಎಂದದ್ದಕ್ಕೂ ವಿರೋಧ ವ್ಯಕ್ತವಾಗಿವೆ.

ಸಾಮಾಜಿಕ ತಾಣದಲ್ಲಿನ ಇಂತಹ ಟೀಕೆಗೆ ಮತ್ತು ಸಿನಿಮಾ ವಿಮರ್ಶಕರ ಮಾತಿಗೆ 'ನವರಸ ನಾಯಕ' ಜಗ್ಗೇಶ್ ಬೇಸರ ವ್ಯಕ್ತಪಡಿಸಿದ್ದಾರೆ.

ಟಿವಿ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ ಜಗ್ಗೇಶ್ ಅವರು "ಕನ್ನಡ ಟೈಪಿಂಗ್ ಮಾಡಲು ಬರುತ್ತೇಂತ ಎಲ್ಲರೂ ಕನ್ನಡ ಸಿನಿಮಾ ವಿಮರ್ಶಕರಾಗಿದ್ದಾರೆ. ಚಿಕ್ಕ ಚಿಕ್ಕ ವಯಸ್ಸಿನವರು ಬೇಕಾಬಿಟ್ಟಿ ವಿಮರ್ಶೆ ಮಾಡಿ ಸಾಮಾಜಿಕ ತಾಣದಲ್ಲಿ ನಮ್ಮ ಚಿತ್ರದ ಬಗ್ಗೆ ಕೆಟ್ಟದಾಗಿ ಬರೆಯುತ್ತಿದ್ದಾರೆ. ಇವರಿಗೆಲ್ಲಾ ಅಧಿಕಾರ ಕೊಟ್ಟವರು ಯಾರು? ನಿರ್ಮಾಪಕರ ಕಷ್ಟ ಇವರಿಗೆ ಗೊತ್ತಾ? ಇಂತಹ ಚಿಲ್ರೆ ಬುದ್ಧಿಯವರಿಗೆ ನಮ್ಮ ನಿರ್ಮಾಪಕರ ಕಷ್ಟ ಅರಿವಾಗುತ್ತಾ? ಮನೆ, ಮಠ ಮಾರಿಕೊಂಡು, ಬಡ್ಡಿ ದುಡ್ಡು ಸುರಿದು ಚಿತ್ರ ನಿರ್ಮಿಸುತ್ತಾರೆ. ಚಿತ್ರ ನಿರ್ಮಾಣದ ಹಿಂದಿನ ನೋವು ಇವರಿಗೆ ಅರ್ಥವಾಗುತ್ತಾ? ಈ ನೋವು ಗೊತ್ತಿದ್ದರೆ ಸಾಮಾಜಿಕ ತಾಣದಲ್ಲಿ ನನ್ನ ಬಗ್ಗೆಯಾಗಲಿ, 'ವಾಸ್ತು ಪ್ರಕಾರ' ಚಿತ್ರದ ಬಗ್ಗೆ ಕೆಟ್ಟದಾಗಿ ಕಾಮೆಂಟ್ ಮಾಡುತ್ತಿರಲಿಲ್ಲ, ಇದು ನಿಲ್ಲಬೇಕು. ಚಿತ್ರ ಶುರುವಾದ ಕೂಡಲೇ ಹುಡುಗರು ಮೊಬೈಲ್‌ನಲ್ಲಿ 'ಚಿತ್ರ ಸರಿಯಿಲ್ಲ, ನೋಡಬೇಡಿ' ಎಂದೆಲ್ಲಾ ಮೆಸೇಜ್ ಮಾಡಲು ಶುರುಮಾಡುತ್ತಾರೆ. ಇಂಥವರ ಮಾತಿಂದ ಚಿತ್ರಕ್ಕೆ ರಾಂಗ್ ಪಬ್ಲಿಸಿಟಿ ಆಗಲ್ವಾ? ಚಿತ್ರ ನೋಡಬೇಡಿ ಅನ್ನೋದಕ್ಕೆ ಇವರು ಯಾರು?" ಎಂದು ಹರಿಹಾಯ್ದಿದ್ದಾರೆ.

ಜೊತೆಗೆ "ನಾನು ಚಿತ್ರದಲ್ಲಿ ದಪ್ಪ ಕಾಣುತ್ತೇನೆ, ಮುಖ ದಪ್ಪವಾಗಿದೆ ಎಂದೆಲ್ಲಾ ಕಾಮೆಂಟ್ ಪಾಸ್ ಮಾಡಿದ್ದಾರೆ. ಹೌದು, ನನಗೆ ಮೈಗ್ರೇನ್ ಸಮಸ್ಯೆಯಿದೆ. ಮಾತ್ರೆ ತೆಗೆದುಕೊಳ್ಳುತ್ತಿದ್ದೇನೆ. ಬೇರೆ ಭಾಷೆಯವರು ವಯಸ್ಸಾದರೂ, ದಪ್ಪಗಿದ್ದರೂ ಪರವಾಗಿಲ್ಲ ನಿಮ್ಮ ಜಗ್ಗೇಶ್‌ನನ್ನು ನೋಡೋಕಾಗಲ್ವಾ?" ಎಂದೆಲ್ಲ ಹುಚ್ಚಾ ವೆಂಕಟ್ ಶೈಲಿಯಲ್ಲಿ ಪ್ರಶ್ನಿಸಿದ್ದಾರೆ.

'ವಾಸ್ತು ಪ್ರಕಾರ' ಚಿತ್ರದ ನಿರ್ದೇಶಕ ಯೋಗರಾಜ್ ಭಟ್ಟರ ಬಗ್ಗೆ ಮಾತನಾಡುತ್ತಾ "ಭಟ್ಟರ ಚಿತ್ರವೆಂದು ಜನ ಥಿಯೇಟರ್‌ಗೆ ಬರುತ್ತಾರೆ. ಅದನ್ನು ಬಹಳಷ್ಟು ಬಾರಿ ಅವರು ಪ್ರೂವ್ ಮಾಡಿದ್ದಾರೆ. ಈ ಚಿತ್ರವೂ ಹಾಗೆ. ನನ್ನ ಚಿತ್ರವೆಂದು ಜನ ಥಿಯೇಟರಿಗೆ ಬರುತ್ತಿಲ್ಲ ಅದು ಭಟ್ರ ಚಿತ್ರಕ್ಕಿರುವ ತಾಕತ್ತು" ಎಂದೂ ಪ್ರಶಂಸಿಸಿದ್ದಾರೆ.

ಆದರೆ ಪ್ರೇಕ್ಷಕರ ಪ್ರಕಾರ ದುಡ್ಡು ಕೊಟ್ಟು ಸಿನಿಮಾ ನೋಡಿದ ಮೇಲೆ ಅದನ್ನು ವಿಮರ್ಶಿಸುವ ಹಕ್ಕು ಅವರಿಗಿದೆ. ತಾವು ವಿಮರ್ಶಿಸಬಾರದು ಎಂದೆಲ್ಲ ಟೀಕಿಸುವ ಹಕ್ಕು ಯಾರಿಗೂ ಇಲ್ಲ ಎಂಬುದು ಪ್ರೇಕ್ಷಕರ ನಿಲುವು.

'ಪ್ರೇಕ್ಷಕ ವಿಮರ್ಶಕ'ರ ಪ್ರಕಾರ ಭಟ್ಟರ ಸಿನಿಮಾಗಳಲ್ಲಿ ಮುಖ್ಯವಾಗಿ ಕತೆ ಇರುವುದಿಲ್ಲ, ಅವರ ಎಲ್ಲಾ ಸಿನಿಮಾಗಳಲ್ಲೂ ನಾಯಕಿಯನ್ನು ಪೆದ್ದುಪೆದ್ದಾಗಿ (ಅವರ ಪ್ರಕಾರ ಮುದ್ದಾಗಿ), ಕೀರಲು ಧ್ವನಿಯಲ್ಲಿ, ಅರ್ಥವಿಲ್ಲದೆ ನಗುತ್ತ, ಹೀರೋಗಳನ್ನು ಸುಮ್‌ಸುಮ್ನೆ ಹೊಡೆಯುತ್ತ/ ಬೈಯ್ಯುತ್ತ ತುಂಡಾದ ಚೆಡ್ಡಿ ಧರಿಸಿ, ಏನೇನೂ ಕೆಲಸ ಮಾಡದೆ, ಅತ್ತಲಿಂದ ಇತ್ತ ಇತ್ತಲಿಂದ ಅತ್ತ ಓಡಾಡಿಕೊಂಡು, ಎಡಬಿಡಂಗಿಗಳಂತೆ ಕನ್ನಡವನ್ನು ಇಂಗ್ಲಿಷ್ ತರಹ ಮಾತಾನಾಡುತ್ತಾ ಇರುತ್ತಾರೆ. ಅದೆಲ್ಲವೂ 'ವಾಸ್ತು ಪ್ರಕಾರ'ದಲ್ಲೂ ಪುನರಾವತಾರ ತಾಳಿದೆ.

ಇದೆಲ್ಲವನ್ನು ಗಂಭೀರವಾಗಿ ಪರಿಗಣಿಸಿ ಇನ್ನು ಮುಂದಾದರೂ ಭಟ್ಟರು ಪ್ರೇಕ್ಷಕರ ನಿರೀಕ್ಷೆಯನ್ನು ಪರಿಗಣಿಸಿದರೆ ಅವರಿಗೇ ಒಳ್ಳೆಯದು. ಇದೆಲ್ಲಾ ಗೊತ್ತಿದ್ದೂ ಇಷ್ಟೇ ಸಾಕು ಎನ್ನುವುದಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದಿಟ್ಟರೆ ಪ್ರೇಕ್ಷಕ ಕುಣಿದು ಕುಪ್ಪಳಿಸಿಯಾನು. ಯೋಗರಾಜ್ ಭಟ್ ಆ ಕೆಲಸ ಮಾಡಲಿ, ಮುಂದಿನ ಸಿನಿಮಾಗಳಲ್ಲಿ ನಿರೀಕ್ಷೆ ಉಳಿಸಿಕೊಳ್ಳಲಿ ಎಂಬುದು ಎಲ್ಲರ ಆಶಯ.



ಸಿನಿಮಾ ಸುದ್ದಿ
ಕಾರ್ತಿಕ್

'ಸಿಂಹಿಣಿಯ' ಸೆಕೆಂಡ್ ಇನ್ನಿಂಗ್ಸ್

ಒಂದು ಕಾಲದಲ್ಲಿ ಕಾಲಿವುಡ್ ಮತ್ತು ಟಾಲಿವುಡ್ ಚಿತ್ರರಂಗವನ್ನು ಆಳಿದ್ದ ಚೆಲುವೆ ಇದೀಗ ಸ್ಯಾಂಡಲ್‌ವುಡ್ ಕಡೆ ಮತ್ತೆ ಮುಖ ಮಾಡಿ ತನ್ನ ಸೆಕೆಂಡ್ ಇನ್ನಿಂಗ್ಸ್ ಶುರು ಮಾಡಿದ್ದಾರೆ. ಯಾರು ಈ ಚೆಲುವೆ? ಈ ಹಿಂದೆ ಶಿವರಾಜ್‌ಕುಮಾರ್ ಅವರ ಜೊತೆ 'ಸಿಂಹದಮರಿ' ಸಿನಿಮಾದಲ್ಲಿ ನಾಯಕಿಯಾಗಿ ಅಭಿನಯಿಸಿದ್ದ ಸಿಮ್ರಾನ್.

ಈಗ ಕನ್ನಡ, ತಮಿಳು ಹಾಗೂ ಹಿಂದಿ ಭಾಷೆಯಲ್ಲಿ ತಯಾರಾಗುತ್ತಿರುವ, ಜಿಕೆ ಎಂಬುವವರ ನಿರ್ದೇಶನದ 'ಅಲೋನ್' ಮೂಲಕ ಸೂಪರ್ ಕಾಪ್ ಆಗಿ ಮತ್ತೆ ಕನ್ನಡದಲ್ಲಿ ಅಭಿನಯಿಸುತ್ತಿದ್ದಾರೆ. ಸಿಮ್ರಾನ್ ಹಿಂದಿ, ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿ ಸುಪ್ರಸಿದ್ಧ ನಟರುಗಳ ಜೊತೆ ನಟಿಸಿದ್ದ ಖ್ಯಾತಿ ಹೊಂದಿದ್ದಾರೆ.

'ಅಲೋನ್' ಕ್ಲೈಮ್ಯಾಕ್ಸ್ ಚಿತ್ರೀಕರಣ ಏಪ್ರಿಲ್ 15ರಿಂದ ಒಂದು ವಾರ ಚೆನ್ನೈನ ಬಿನ್ನಿ ಮಿಲ್ ಆವರಣದಲ್ಲಿ ನಡೆಯಲಿದೆ ಎಂದು ನಿರ್ದೇಶಕ ಜಿಕೆ ಅವರು ತಿಳಿಸಿದ್ದಾರೆ. ನಿಕೀಶ ಪಟೇಲ್ 'ಅಲೋನ್' ಚಿತ್ರದ ನಾಯಕಿ. ಮಂಗಳೂರಿನ ಬೀಚಲ್ಲಿ ನಿರ್ಮಿಸಿರುವ ಒಂದು ವಿಶೇಷ ಮನೆಯಲ್ಲಿ ಚಿತ್ರದ ಬಹುತೇಕ ಭಾಗವನ್ನು ಚಿತ್ರೀಕರಿಸಲಾಗಿದೆ.

ಈ ಕುತೂಹಲಕಾರಿ ಸಿನಿಮಾದ ತಾರಾಗಣದಲ್ಲಿ ಇನಿಯ, ಮನಿಷ್ಯ ಗಣೇಶ್, ಸಾಧು ಕೋಕಿಲ, ತಬಲಾ ನಾಣಿ, ದಿಲೀಪ್, ಅವಿನಾಶ್, ಮಂಗಳೂರು ಸುರೇಶ್, ಶಾಂತಮ್ಮ ಹಾಗೂ ಇತರರು ಇದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com